ಬೋಧನಾ ಶಾಸ್ತ್ರದ ಶಿಸ್ತು ಮತ್ತು ತಿಳುವಳಿಕೆ: ಭಾಷೆ ಕನ್ನಡ

(ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಎರಡು ವರ್ಷದ ಬಿ.ಈಡಿ ನೂತನ ಪ್ರಶಿಕ್ಷಣಾರ್ಥಿಗಳಿಗೆ ಹಾಗೂ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗೆ ನೂತನ ಪಠ್ಯಕ್ರಮದನುಸಾರವಾಗಿ ರಚಿಸಲಾಗಿದೆ.)

ಲೇಖಕರು:

ಎನ್. ಡಿ. ಚಿನ್ನಪ್ಪಗೌಡರ

ಎಮ್.ಎ ಕನ್ನಡ ಕೆ–ಸೆಟ್, ಎಮ್.ಈಡಿ ಕೆ–ಸೆಟ್, ಪಿ.ಜಿ.ಡಿ.ಸಿ.ಇ (ಪಿಹೆಚ್.ಡಿ)

ಸಹಾಯಕ ಪ್ರಾಧ್ಯಾಪಕರು

ಕೆ.ಆರ್.ಸಿ.ಇ ಸಂಸ್ಥೆಯ

ಎ.ಬಿ.ಪಾಟೀಲ ಶಿಕ್ಷಣ ಮಹಾವಿದ್ಯಾಲಯ, ಬೈಲಹೊಂಗಲ

ಅರ್ಪಣೆ...

ಶಿಕ್ಷಕ ವೃತ್ತಿಯನ್ನೇ ಉಸಿರಾಗಿಸಿಕೊಂಡು ಸದಾ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ, ವೃತ್ತಿ ಬದುಕಿಗೂ ಹಾಗೂ ವೈಯಕ್ತಿಕ ಬದುಕಿಗೂ ಸದಾ ಮಾರ್ಗದರ್ಶನ ಮಾಡುವ, ಸದಾ ಕಾಲ ನನ್ನನ್ನು ಹರಸಿ ಹಾರೈಸಿ ಆಶೀರ್ವದಿಸುತ್ತಿರುವ ನನ್ನ ಜನುಮದಾತರಿಗೆ...

ಶ್ರೀ ದುಂಡಪ್ಪಗೌಡ. ಬ. ಚಿನ್ನಪ್ಪಗೌಡರ. ನಿವೃತ್ತ ಪ್ರಧಾನ ಗುರುಗಳು

ಶ್ರೀಮತಿ ಗಂಗವ್ವ. ದುಂಡಪ್ಪಗೌಡ. ಚಿನ್ನಪ್ಪಗೌಡರ (ಜಿ. ಆರ್. ಪಾಟೀಲ) ನಿವೃತ್ತ ಪ್ರಧಾನ ಗುರುಮಾತೆಯರು

ಸಂಸ್ಥೆಯ ಕ್ರಿಯಾಶೀಲ ಶಕ್ತಿ, ಸಹೃದಯೀ ಹಾಗೂ ಶಿಕ್ಷಣ ಪ್ರೇಮಿಯಾದ ಡಾ. ವ್ಹಿ. ಆಯ್. ಪಾಟೀಲ ಅವರಿಗೆ ಹೃದಯಪೂರ್ವಕ ಧನ್ಯವಾದಗಳು.

ಚೇರ್‌ಮನ್‌ರು
ಕಿತ್ತೂರ ರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆ, ಬೈಲಹೊಂಗಲ.

ಮುನ್ನುಡಿ

ಕನ್ನಡ ಭಾಷೆಯು ಭಾರತದ ಕೆಲವೇ ಕೆಲವು ಭಾಷೆಗಳಲ್ಲಿ ಶಾಸ್ತ್ರೀಯ ಭಾಷೆಯಾಗಿ, ಆಡಳಿತ ಭಾಷೆಯಾಗಿ ಮತ್ತು ಶಿಕ್ಷಣ ಮಾಧ್ಯಮವಾಗಿ ನಿರೂಪಿಸಲ್ಪಟ್ಟಿದೆ. ಕನ್ನಡದ ಬಳಕೆ ನಾಡಿನ ಎಲ್ಲಾ ಕ್ಷೇತ್ರಗಳಲ್ಲಿ ಸುಸೂತ್ರವಾಗಿ ನಡೆಯಲು ರಾಜ್ಯ ಸರಕಾರವು ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿರುವುದು ಶ್ಲಾಘನೀಯ. ಕನ್ನಡ ವಿಷಯದ ಕಲಿಕೆಯು ಶಿಸ್ತು ಬದ್ಧವಾಗಿ, ಶಾಸ್ತ್ರೀಯವಾಗಿ ಸಾಗಿದಲ್ಲಿ ಕನ್ನಡದ ಕಂಪು ಜನ ಮಾನಸದಲ್ಲಿ ಮೂಡುವುದಕ್ಕೆ ಸಹಾಯಕಾರಿಯಾಗುತ್ತದೆ.

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬಿ.ಈಡಿ ಹೊಸ ಪಠ್ಯಕ್ರಮಕ್ಕನುಸಾರವಾಗಿ ಪ್ರಸ್ತುತ ಪ್ರಥಮ ಸೆಮಿಸ್ಟರ್‌ನ ಕನ್ನಡ ಭಾಷಾ ಬೋಧನಾ ಶಾಸ್ತ್ರದ ಶಿಸ್ತು ಮತ್ತು ತಿಳುವಳಿಕೆ ಎಂಬ ಪುಸ್ತಕ ಪ್ರಕಟಗೊಳ್ಳುತ್ತಿರುವುದು ತುಂಬಾ ಸಂತಸದ ವಿಷಯವಾಗಿದೆ. ಈ ಪುಸ್ತಕವನ್ನು ಹೊರತರುತ್ತಿರುವ ಆತ್ಮೀಯರಾದ ಶ್ರೀ ಎನ್. ಡಿ. ಚಿನ್ನಪ್ಪಗೌಡರ ಅವರ ಕನ್ನಡ ಸಾಹಿತ್ಯದ ಅಧ್ಯಯನ ಮತ್ತು ಅಧ್ಯಾಪನದ ಪ್ರತಿಬಿಂಬವೇ ಈ ಕೃತಿಯಾಗಿದೆ.

ಸದರಿ ಪುಸ್ತಕವು ನಾಲ್ಕು ಅಧ್ಯಾಯಗಳಿಂದ ಕೂಡಿದ್ದು, ಕ್ರಮವಾಗಿ ಭಾಷೆಯ ಪರಿಚಯ, ಭಾಷೆ ಮತ್ತು ಶಿಕ್ಷಣ, ವ್ಯಾಕರಣ ಮತ್ತು ಭಾಷಾ ಕೌಶಲ್ಯಗಳ ಪರಿಚಯ ಹಾಗೂ ಭಾಷಾ ಬೋಧನೆಗೆ ಸಿದ್ಧತೆ ಇವು ಪ್ರಶಿಕ್ಷಣಾರ್ಥಿಗಳ ಅಧ್ಯಯನಕ್ಕೆ ತುಂಬಾ ಸಹಾಯಕಾರಿಯಾಗಿವೆ. ಇಂತಹ ಇನ್ನೂ ಅನೇಕ ಪುಸ್ತಕಗಳು ಲೇಖಕರಿಂದ ಹೊರಬರಲೆಂದು ತೆರೆದ ಮನಸ್ಸಿನಿಂದ ಶುಭ ಹಾರೈಸುತ್ತೇನೆ.

ಶ್ರೀ ಬಿ. ಎನ್. ಮುದೆಣ್ಣವರ
ಸಹಾಯಕ ಪ್ರಾಧ್ಯಾಪಕರು
ಕಿ. ರಾ. ಚ. ಶಿ. ಸಂ. ಎ.ಬಿ.ಪಾಟೀಲ
ಶಿಕ್ಷಣ ಮಹಾವಿದ್ಯಾಲಯ ನೈಲಹೊಂಗಲ.

ಶುಭ ನುಡಿ

ಮಾತೃಭಾಷೆಯು ಮಕ್ಕಳ ಶಿಕ್ಷಣದಲ್ಲಿ ಅತ್ಯಂತ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಶಿಕ್ಷಣಗಳು ಅಂತರ ಸಂಬಂಧಿ ಪರಿಕಲ್ಪನೆಗಳು. ಬೋಧನೆ ಒಂದು ಸಂಕೀರ್ಣ ಕಾರ್ಯ. ಮಾತೃಭಾಷಾ ಬೋಧನೆ ಎಷ್ಟು ಸರಳ ಎನಿಸಿದರೂ ಒಳ ಹೊಕ್ಕು ಬೋಧನೆ ಕ್ರಿಯೆಗೆ ತೊಡಗುವಾಗ ಎದುರಾಗುವ ತೊಂದರೆಗಳು ಬೋಧಕರಿಗಷ್ಟೇ ಗೊತ್ತು. ಮಾತೃಭಾಷೆಯು ಭಾವನೆಗಳನ್ನು ಅಭಿವ್ಯಕ್ತಿಸುವ, ವ್ಯವಹರಿಸುವ ಅತೀ ಹತ್ತಿರದ ಮಾಧ್ಯಮ.

ಮಗುವಿಗೆ ಮಾತೃಭಾಷೆಯಲ್ಲಿ ಶಿಕ್ಷಣ ದೊರೆಯಬೇಕೆಂದು ಈ ನಾಡಿನ ಜನಮನದ ಆಶಯ. ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಅವಕಾಶ ಮಕ್ಕಳಿಗೆ ಈಗ ದೊರೆಯುತ್ತಿದೆಯಾದರೂ ಮಾತೃಭಾಷೆಯಲ್ಲಿ ಪೂರಕ ಸಾಹಿತ್ಯ ದೊರೆಯುವುದು ಕಷ್ಟವಾಗುವ ಈ ಸಂದರ್ಭದಲ್ಲಿ ಮಾತೃಭಾಷೆಯನ್ನು ಕಲಿಸುವ ಶಿಕ್ಷಕರಿಗೆ ಭಾಷೆಯನ್ನು ವೈಜ್ಞಾನಿಕವಾಗಿ ತಿಳಿಹೇಳುವ ಗ್ರಂಥಭಂಡಾರಗಳ ಕೊರತೆಯಿದೆ. ಈ ಕೊರತೆಯನ್ನು ನೀಗಿಸುವ ಪ್ರಯತ್ನದಲ್ಲಿ ಎನ್. ಡಿ. ಚಿನ್ನಪ್ಪಗೌಡರ ಅವರ ಬೋಧನಾ ಶಾಸ್ತ್ರದ ಶಿಸ್ತು ಮತ್ತು ತಿಳುವಳಿಕೆ; ಭಾಷೆ ಕನ್ನಡ ಎಂಬ ಗ್ರಂಥ ಈ ದಿಸೆಯಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುವುದು ಸರಿಯಾಗಿದೆ.

ಮಾತೃಭಾಷೆಯ ಕಲಿಕೆ ಕೌಶಲ್ಯಗಳ ಸಮಂಜಸ ಅಧ್ಯಯನ, ಭಾಷೆಯಲ್ಲಿನ ಸ್ಪಷ್ಟತೆ, ನಿಖರತೆ, ಪಾಠ ಕಲಿಸುವ ವಿಧಾನ, ಶಿಕ್ಷಕರಿಗೆ ಇರಬೇಕಾದ ಅರ್ಹತೆಗಳು, ಇನ್ನೂ ಅನೇಕ ವೈಜ್ಞಾನಿಕ ಅಂಶಗಳು ಶಿಕ್ಷಣ ಪದ್ಧತಿಯಲ್ಲಿ ರೂಢಿಯಾಗಬೇಕಾದ ವಿಚಾರಗಳನ್ನು ಈ ಗ್ರಂಥದಲ್ಲಿ ತಿಳಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

ಈ ಗ್ರಂಥವು ಭಾಷೆಯ ಪರಿಚಯ, ಪರಿಕಲ್ಪನೆ, ಸ್ವರೂಪ, ಭಾಷಾ ಉಗಮದ ವಿಕಾಸದ ಸಿದ್ಧಾಂತಗಳು, ಭಾಷೆಯ ಲಕ್ಷಣಗಳು ಮತ್ತು ಕಾರ್ಯಗಳು, ಮಾನವ ಭಾಷಾ ವೈಶಿಷ್ಟ್ಯಗಳು ಹಾಗೂ ಭಾಷಾ ಅಧ್ಯಯನದ ಅವಶ್ಯಕತೆ ಒಳಗೊಂಡಂತೆ ಅಧ್ಯಾಯ ಒಂದರಲ್ಲಿ ಭಾಷೆಯ ಪರಿಚಯದ ಪರಿಕಲ್ಪನೆಯನ್ನು ನೀಡಿರುತ್ತಾರೆ. ಅಧ್ಯಾಯ ಎರಡರಲ್ಲಿ ಭಾಷೆ ಮತ್ತು ಶಿಕ್ಷಣದ ಹಿನ್ನೆಲೆಯಲ್ಲಿ ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳು, ಪ್ರಥಮ ಭಾಷೆಯಾಗಿ ಕನ್ನಡ, ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ ಹಾಗೂ ಮಾತೃ ಭಾಷಾ ಶಿಕ್ಷಣ ಮಾಧ್ಯಮದ ಪ್ರಾಮುಖ್ಯತೆಗಳ ಬಗ್ಗೆ ಭಾಷಾ ಮಹತ್ವತೆಯ ಮಾಹಿತಿಯನ್ನು ತಿಳಿಸಲಾಗಿದೆ. ಅಧ್ಯಾಯ ಮೂರರಲ್ಲಿ ವ್ಯಾಕರಣ ಮತ್ತು ಭಾಷಾ ಕೌಶಲ್ಯಗಳ ಪರಿಚಯ, ಕನ್ನಡ ವ್ಯಾಕರಣ, ಅಕ್ಷರಗಳು, ವಾಕ್ಯರಚನೆ ಮತ್ತು ಪ್ರಕಾರಗಳು ಹಾಗೂ ಭಾಷಾ ಕೌಶಲ್ಯಗಳು ಇವುಗಳ ಪ್ರಾಮುಖ್ಯತೆ, ಲಕ್ಷಣಗಳು ಪರಿಹಾರಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಭಾಷಾ ಬೋಧನೆಯ ಸಿದ್ಧತೆಯ, ಭಾಷೆಯ ಪಾಠ ಯೋಜನೆ ಹಾಗೂ ಅದರ ರೂಪುರೇಷೆಗಳು, ಮತ್ತು 5ಇ ಮಾದರಿಯ ಹಂತಗಳು, ಭಾಷಾ ಬೋಧನೆಯ ಉದ್ದೇಶಗಳು, ಘಟಕ

ಯೋಜನೆ, ಪ್ರಾಮುಖ್ಯತೆ, ಹಂತಗಳು, ಸಂಪನ್ಮೂಲ ಘಟಕ ಯೋಜನೆ, ಪ್ರಾಮುಖ್ಯತೆ ಬಗ್ಗೆ ವಿವರವಾಗಿ ತಿಳಿಸಲಾಗಿದೆ.

ಭಾಷೆಯ ಸಮರ್ಥ ಜ್ಞಾನ, ಕಲಿಕೆ ಉಳಿದೆಲ್ಲ ಕಲಿಕೆಯ ತಳಹದಿ. ಓದುವ, ಬರೆಯುವ ಮತ್ತು ಮಾತನಾಡುವ ಎಲ್ಲ ಕೌಶಲ್ಯಗಳು ವ್ಯಕ್ತಿಗೆ ಸರಿಯಾಗಿ ಹೀರುವುದಾದರೆ ತನ್ನ ಭಾಷೆ ಕಲಿಕೆಯಿಂದಲೇ. ಮನಸ್ಸಿನ ಒಳಗೊಳಗೆ ಸುತ್ತಾಡುವ ಜ್ಞಾನ ಅನುಭವಗಳನ್ನು ಒಟ್ಟು ಸೇರಿಸಿ ಸಾಕಾರಗೊಳ್ಳುವುದೇ ಈ ಭಾಷೆಯ ಪ್ರಮುಖ ಅಂಶ. ಭಾಷೆಯಲ್ಲಿನ ಸ್ಪಷ್ಟತೆ, ನಿಖರತೆ ವ್ಯಕ್ತಿಯಲ್ಲಿನ ವೈಚಾರಿಕ ಸ್ಪಷ್ಟತೆ ಕೂಡ ಹೌದು. ಭಾಷೆಯ ಕಲಿಕೆಗಳನ್ನು ಕಾಲ ಕಾಲಕ್ಕೆ ಪುನರ್ ವಿಮರ್ಶಿಸಬೇಕಾಗಿದೆ. ಭಾಷೆಯ ಬೋಧನೆ ಕೂಡ. ಭಾಷೆಯನ್ನು ವೈಜ್ಞಾನಿಕವಾಗಿ ನೋಡುವ ಮನಸ್ಸನ್ನು ಬೆಳೆಸುವ ಪ್ರಯತ್ನ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆಗಬೇಕಾಗಿದೆ.

ಕನ್ನಡ ಭಾಷೆಯ ಪ್ರಯೋಗಾಲಯಗಳನ್ನು ಬೆಳೆಸುವಷ್ಟು ಸಿದ್ಧಿ ಭಾಷೆಗೆ ಸಿಕ್ಕಿಲ್ಲ. ಭಾಷೆಯಲ್ಲಿ ಆವಿಷ್ಕಾರಗಳು ಆಗಬೇಕು. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಭಾಷೆಯನ್ನು ಮರೆಯಬಾರದು. ಭಾಷಾ ಬೋಧನೆಯ ಕೆಲಸವು ಸಾಹಿತ್ಯ ಮತ್ತು ಸಾಂಸ್ಕೃತಿಕ ಒಡನಾಟಗಳೊಂದಿಗೆ ಅಂತರ ಶಿಸ್ತೀಯ ಕ್ರಮದಿಂದ ಸಾಗಬೇಕು. ಸಂವಹನ, ಸಂಸ್ಕೃತಿ, ಕಲೆ, ಸಾಹಿತ್ಯ, ಜನಪದ ಹಾಗೂ ಸಮೂಹ ಮಾಧ್ಯಮಗಳು ಭಾಷಾ ಬೋಧನೆಯ ಸಾಧನಗಳಾಗಬೇಕು. ಕನ್ನಡ ಭಾಷಾ ಉಪಾಧ್ಯಾಯರು ಹಾಗೂ ತರಬೇತಿ ಶಿಕ್ಷಕರಲ್ಲಿ ಭಾಷಾ ಬೋಧನೆಯ ಬಗ್ಗೆ ಚಿಂತಿಸಲು ಈ ಗ್ರಂಥ ಪ್ರೇರಣೆ ನೀಡಿದರೆ ಲೇಖಕರ ಪ್ರಯತ್ನ ಸಾರ್ಥಕಗೊಳ್ಳುವುದು ಎಂಬುದು ನನ್ನ ಆಶಯವಾಗಿದೆ. ಭಾಷಾ ಬೋಧನೆಯ ಪ್ರಮುಖವಾದ ಉದ್ದೇಶ, ಕಲಿಯುವವರಲ್ಲಿ ಭಾಷಾ ಕೌಶಲ್ಯಗಳನ್ನು ಬೆಳೆಸುವುದು, ಕೌಶಲ್ಯಗಳನ್ನು ಕಲಿಸುವಾಗ ಜ್ಞಾನ, ಗ್ರಹಿಕೆ, ಅನ್ವಯ, ಕಲಿಕೆಗಳ ಮೂಲಕ ಸಾಗಿ ಕೌಶಲ್ಯವಾಗಿ ಹೊಹೊಮ್ಮಬೇಕಾಗಿದೆ.

ಭಾಷಾ ಕೌಶಲ್ಯಗಳು, ಸಂವಹನ ಕೌಶಲ್ಯಗಳು, ಅವುಗಳ ಪ್ರಾಮುಖ್ಯತೆ ಮತ್ತು ಅವುಗಳನ್ನು ಬೆಳೆಸಿಕೊಳ್ಳುವ ವಿಧಾನಗಳನ್ನು ವಿವರಿಸಿದ್ದಾರೆ. ಕನ್ನಡ ಭಾಷಾ ಬೋಧನೆಯ ಆಯಾಮಗಳಾದ ಗಧ್ಯ, ಪಧ್ಯ ಮತ್ತು ವ್ಯಾಕರಣ ಬೋಧನೆಗಳ ಹಂತಗಳನ್ನು ವಿವರಿಸಿದ್ದಾರೆ. ಬಿ. ಈಡಿ ಪದವಿಯ ವಿದ್ಯಾರ್ಥಿಗಳಿಗೆ ಈ ಕನ್ನಡ ಭಾಷೆಯ ಬೋಧನಾ ಶಾಸ್ತ್ರದ ಶಿಸ್ತು ಮತ್ತು ತಿಳುವಳಿಕೆ ಗ್ರಂಥ ಭಾಷಾ ಬೋಧಕರಿಗೂ, ಶಿಕ್ಷಣದ ವಿದ್ಯಾರ್ಥಿಗಳಿಗೂ ಹಾಗೂ ಭಾಷಾ ಬೋಧನೆಯ ವಿವಿಧ ಆಯಾಮಗಳ ಬಗ್ಗೆ ಚಿಂತಿಸಿ ಅನುಸಂಧಾನ ಮಾಡಿಕೊಳ್ಳಲು ಇಚ್ಚಿಸುವ ಭಾಷಾ ಪ್ರೇಮಿಗಳಿಗೆ ಈ ಗ್ರಂಥ ಕನ್ನಡ ಭಾಷಾ ಬೋಧನೆಯ ಬೆಳವಣಿಗೆಗೆ ಒಂದು ಪೂರಕ ಸಾಮಗ್ರಿ ಎಂದು ಹೇಳಬಹುದು.

ಡಾ. ಎಂ. ಸಿ. ಯರ್ರಿಸ್ವಾಮಿ
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಶಿಕ್ಷಣ ವಿಭಾಗ
ಶಿಕ್ಷಣ ನಿಖಾಯರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.

ಲೇಖಕರ ನುಡಿ

"ಕನ್ನಡ ಭಾಷಾ ಬೋಧಕ: ಕನ್ನಡ ಭಾಷೆ, ಕನ್ನಡ ಸಾಹಿತ್ಯ ಮತ್ತು ಕನ್ನಡ ಸಂಸ್ಕೃತಿಯ ನಿಜವಾದ ರಾಯಭಾರಿ." ಎಂಬ ಮಾತಿನಂತೆ ಭಾಷೆಯ ಮೂಲಕ ಶಿಕ್ಷಕ ಭಾಷೆಯನ್ನು, ಆ ಭಾಷೆಯಲ್ಲಿನ ಸಾಹಿತ್ಯವನ್ನು ಮತ್ತು ನೆಲದ ಸಂಸ್ಕೃತಿಯನ್ನು ಬೋಧನೆಯ ಮೂಲಕ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆ ಮಾಡುವ ಬಹು ದೊಡ್ಡ ಜವಾಬ್ದಾರಿಯನ್ನು ಹೊಂದಿದ್ದಾನೆ. ಕೇವಲ ಜ್ಞಾನಾರ್ಜನೆಗಾಗಿ ಮಾತ್ರ ಭಾಷೆ ಅಲ್ಲ, ಒಂದು ನೆಲದ ಬಹುಶಿಸ್ತೀಯ ಸಾಂಸ್ಕೃತಿಕ ವೈವಿದ್ಯತೆಯನ್ನು ಹೊಂದಿದ ಪರಂಪರೆಯನ್ನು ಅತ್ಯಂತ ಎಚ್ಚರಿಕೆಯಿಂದ, ಜವಾಬ್ಧಾರಿಯಿಂದ ವಿಧ್ಯಾರ್ಥಿಗಳಿಗೆ ಮನಮುಟ್ಟುವಂತೆ ಬೋಧನೆ ಮಾಡುವ ಪವಿತ್ರ ಕಾಯಕ ಶಿಕ್ಷಕ ವೃತ್ತಿ. ಅದರಲ್ಲೂ ಭಾಷಾ ಶಿಕ್ಷಕನದು ಎಂದರೆ ತಪ್ಪಾಗಲಾರದು. ಭಾಷೆಯಲ್ಲಿನ ಅ ಆ ಇ ಈ ಯಿಂದ ಹಿಡಿದು ಅಲಂಕಾರ, ಛಂದಸ್ಸು, ಪ್ರಾಚೀನ ಸಾಹಿತ್ಯ, ಹೊಸಗನ್ನಡ ಸಾಹಿತ್ಯ, ಪೂರ್ವದ ಹಳಗನ್ನಡದಿಂದ ಇಂದಿನ ಕನ್ನಡದವರೆಗೆ ಆದ ಅನ್ವೇಷಣೆಗಳು, ಬದಲಾವಣೆಗಳು ಮತ್ತು ಬೆಳವಣಿಗೆಗಳನ್ನು ಅರಿತಿರಬೇಕಾಗುತ್ತದೆ. ಈಜವಾಬ್ದಾರಿಯನ್ನು ಪ್ರಜ್ಞಾಪೂರ್ವಕವಾಗಿ ಅರಿತು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವ ಎಲ್ಲ ಪ್ರಶಿಕ್ಷಣಾರ್ಥಿಗಳಿಗೆ ಅನುಕೂಲ ಮತ್ತು ಮಾರ್ಗದರ್ಶನವಾಗಲಿ ಎಂಬ ಬಹುದೊಡ್ಡ ಮಹತ್ವಾಕಾಂಕ್ಷೆಯನ್ನು ಹೊತ್ತು ಈ ಕೃತಿಯನ್ನು ರಚಿಸಲಾಗಿದೆ.

ಈ ಕೃತಿಯು ಪ್ರಶಿಕ್ಷಣಾರ್ಥಿಗಳಿಗೆ ಭಾಷೆಯ ಪರಿಚಯ, ಭಾಷೆ ಮತ್ತು ಶಿಕ್ಷಣ, ವ್ಯಾಕರಣ, ಭಾಷಾ ಕೌಶಲ್ಯಗಳು ಹಾಗೂ ಭಾಷಾ ಬೋಧನೆಗೆ ಸಿದ್ದತೆಯನ್ನು ಒಳಗೊಂಡಿದ್ದು ಬೋಧನಾ–ಕಲಿಕಾ ಪ್ರಕ್ರಿಯೆ, ವರ್ಗಕೋಣೆಯ ಸನ್ನಿವೇಶ ಮತ್ತು ನಿಯಂತ್ರಣ, ಕೌಶಲ್ಯಗಳೊಂದಿಗೆ ಬೋಧನೆಯ ವಿಧಾನಗಳು, ಭಾಷಾ ನೀತಿಗಳು, ಮೂಲ ವ್ಯಾಕರಣದ ಪರಿಚಯ ಮುಂತಾದ ಬಹುಮುಖ್ಯವಾದ ಅಂಶಗಳನ್ನು ಒಳಗೊಂಡಿದ್ದು ಪ್ರಶಿಕ್ಷಣಾರ್ಥಿಗಳಿಗೆ ಬಿ.ಈಡಿ ಕಲಿಕೆಯಲ್ಲಿ ಅಷ್ಟೇ ಅಲ್ಲದೆ ಭಾವೀ ಶಿಕ್ಷಕ ವೃತ್ತಿಯಲ್ಲೂ ಅನುಕೂಲವಾಗುವಂತೆ ರಚಿಸಲಾಗಿದೆ. ನಾಡಿನ ಹಲವಾರು ಅನುಭವಿ ಭಾಷಾ ತಜ್ಞರ, ಲೇಖಕರ ಕೃತಿಗಳನ್ನು ಹಾಗೂ ಲೇಖನಗಳನ್ನು ಆಧಾರವಾಗಿ ಬಳಸಿಕೊಂಡು ಈ ಕೃತಿಯನ್ನು ರಚಿಸಲಾಗಿದೆ. ಅದರಲ್ಲಿ ಪ್ರಮುಖರೆಂದರೆ ಅನಸೂಯ ಪರಗಿ, ಎಲ್. ಬಿ. ಪಟ್ಟೇದ, ಡಾ. ಆರ್. ಓಬಳೇಶಘಟ್ಟಿ, ಡಾ. ಎನ್. ಬಿ. ಕೊಂಗವಾಡ, ಡಾ. ಪ್ರೀತಿ ಭಂಡಾರಕರ ಇನ್ನು ಹತ್ತು ಹಲವಾರು ತಜ್ಞರ ಗ್ರಂಥಗಳನ್ನು ಬಳಸಿಕೊಂಡಿದ್ದೇನೆ. ಗದಗಿನ ಕುಮಾರವ್ಯಾಸ ಹೇಳುವಂತೆ 'ಅವನು ಕೃತಿಕಾರ ನಾನು ಲಿಪಿಕಾರ ಮಾತ್ರ' ಎಂಬಂತೆ ಒಂದರ್ಥದಲ್ಲಿ ಇವರೇ ಈ ಕೃತಿಯ ಕೃತಿಕಾರರು ನಾನು ಲಿಪಿಕಾರ ಮಾತ್ರ. ಇವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ಬದುಕಿನ ಎಲ್ಲ ಹಂತಗಳಲ್ಲೂ ಮತ್ತು ವೃತ್ತಿ ಬದುಕಿನಲ್ಲೂ ಮಾರ್ಗದರ್ಶನ ಮಾಡುತ್ತ ಸದಾ ನನ್ನನ್ನು ಚಿಂತನಶೀಲನನ್ನಾಗಿಸಿ ಚಟುವಟಿಕೆಯಿಂದಿರುವಂತೆ ಮಾಡಿರುವ ನನ್ನ ಪೂಜ್ಯ ತಂದೆ–ತಾಯಿಯವರಾದ ಶ್ರೀ ದುಂಡಪ್ಪಗೌಡ. ಬ. ಚಿನ್ನಪ್ಪಗೌಡರ ನಿವೃತ್ತ ಪ್ರಧಾನ ಗುರುಗಳು ಹಾಗೂ ಶ್ರೀಮತಿ ಗಂಗವ್ವ ದುಂ. ಚಿನ್ನಪ್ಪಗೌಡರ (ಜಿ. ಆರ್. ಪಾಟೀಲ) ನಿವೃತ್ತ ಪ್ರಧಾನ ಗುರುಮಾತೆಯರು,

ಚಿಕ್ಕಪ್ಪನವರಾದ ಶ್ರೀ ಉಮೇಶ ಬ ಚಿನ್ನಪ್ಪಗೌಡರ ಉಪನ್ಯಾಸಕರು ಕೆ. ಎಸ್. ಎಸ್ ಟ್ರೇನಿಂಗ್ ಕಾಲೇಜು (ಡಿ.ಈಡಿ) ಬೆಳಗಾವಿ, ಮಾವನವರಾದ ಶ್ರೀ ರಮೇಶ ಈ ಗೋಣಿ ಶಿಕ್ಷಕರು, ಶ್ರೀ ಜಯರಾಜ ಮತ್ತಿಕೊಪ್ಪ ಉಪನ್ಯಾಸಕರು ಬೆಳಗಾವಿ, ಶ್ರೀ ಶಿವಪ್ಪಗೌಡ (ರಾಜು). ರು ಪಾಟೀಲ ಒಕ್ಕುಂದ ಇವರುಗಳಿಗೂ ನಮನಗಳು. ವೈಯಕ್ತಿಕ ಬದುಕಿಗೂ ಮತ್ತು ವೃತ್ತಿ ಬದುಕಿಗೂ ಸದಾ ಬೆನ್ನೆಲುಬಾಗಿರುವ ನನ್ನ ಸಹೋದರ ಶ್ರೀ ಗಿರೀಶ ದುಂ ಚಿನ್ನಪ್ಪಗೌಡರ ಹಾಗೂ ಧರ್ಮಪತ್ನಿ ಶ್ರೀಮತಿ ದೀಪಾ ನಾ ಚಿನ್ನಪ್ಪಗೌಡರ ಮತ್ತು ಮಗ ಭರತನಿಗೂ ವಂದನೆಗಳು.

ಈ ಕೃತಿ ರಚನೆಗೆ ಮೂಲ ಪ್ರೇರಣೆ ನನ್ನ ಸಂಶೋಧನಾ ಸನ್ಮಿತ್ರರಾದ ಶ್ರೀ ಗುರುಸ್ವಾಮಿ ಹಿರೇಮಠ ಹಾಗೂ ನನ್ನೆಲ್ಲ ಪ್ರಶಿಕ್ಷಣಾರ್ಥಿ ಮಿತ್ರರುಗಳಿಗೆ ಮತ್ತು ಶ್ರೀ ಮಹಾಂತೇಶ ಹಿರೇಮಠ, ಶ್ರೀ ನಾಗಪ್ಪ ಬ ಕೋಟಿ ಇವರುಗಳಿಗೆ ವಂದನೆಗಳು. ನನ್ನ ವಿದ್ಯಾಗುರುಗಳಾದ ಶ್ರೀ ಎಫ್. ಬಿ. ಭೋವಿ, ಶ್ರೀಮತಿ ಗುರುಶಾಂತವ್ವ ಹಡಪದ, ಸನ್ಮಿತ್ರರಾದ ಶ್ರೀ ಅಮಿತ ಅಬ್ಬಾರ ಮತ್ತು ನನ್ನ ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶಕರಾದ ಡಾ. ಭಾರತಿ ವಾಯ್ ಖಾಸನೀಸ್ ಮತ್ತು ಡಾ. ಜ್ಯೋತಿ ಪಟ್ಟಣಶೆಟ್ಟಿ ಅವರಿಗೂ ಅನಂತ ನಮನಗಳು. ಈ ಕೃತಿಗೆ ಶುಭನುಡಿ ಬರೆದು ಹಾರೈಸಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಚೇರ್‌ಮನ್‌ರು/ ಡೀನರು ಆದ ಪ್ರೊ. ಎಂ. ಸಿ. ಯರ್ರಿಸ್ವಾಮಿ ಅವರಿಗೆ ಹೃದಯಪೂರ್ವಕ ನಮನಗಳು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ನನಗೆ ಸದಾ ಕಾಲ ಮಾರ್ಗದರ್ಶನ ಮಾಡುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಸುಷ್ಮಾ ಆರ್ ಹಾಗೂ ಡಾ. ಕನಕಪ್ಪ ಪೂಜಾರ ಸರ್ ಅವರಿಗೂ ನನ್ನ ಹೃದಯಪೂರ್ವಕ ನಮನಗಳು.

ನಾನು ಸಹಾಯಕ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿರುವ ಬೈಲಹೊಂಗಲದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಕೆ. ಆರ್. ಸಿ. ಇ ಸಂಸ್ಥೆಯ ಚೇರ್‌ಮನ್‌ರಾದ ಡಾ. ವಿಶ್ವನಾಥ ಆಯ್ ಪಾಟೀಲ, ಕಾರ್ಯದರ್ಶಿಯವರಾದ ಶ್ರೀ ಮಹಾಂತೇಶ ಎಸ್ ಕೌಜಲಗಿ ಹಾಗೂ ಉಪಸಮಿತಿ ಚೇರ್ಮನ್‌ರಾದ ಶ್ರೀ ಎನ್. ಎಸ್. ಪಾಟೀಲ ಅವರಿಗೂ ಹಾಗೂ ಎಲ್ಲ ನಿರ್ದೇಶಕರುಗಳಿಗೂ ಹೃದಯಪೂರ್ವಕ ನಮನಗಳು. ಸದಾ ಕಾಲ ಪ್ರೋತ್ಸಾಹ ನೀಡಿ ನನ್ನಲ್ಲಿ ಕಾರ್ಯತತ್ಪರತೆಯನ್ನು, ಕಾರ್ಯದಕ್ಷತೆಯನ್ನು ತುಂಬುತ್ತಿರುವ ಪ್ರಾಚಾರ್ಯರಾದ ಡಾ. ಎಮ್.ಬಿ. ತಲ್ಲೂರ ಹಾಗೂ ಶ್ರೀ ಪಿ. ಎಮ್. ಅಯಾಚಿತ, ಶ್ರೀ ಪಿ. ಬಿ. ಹೂಲಿ, ಡಾ. ಎಮ್. ಎಸ್. ಗಡೆಣ್ಣವರ, ಡಾ. ಎಸ್. ಬಿ. ಕರಡಿಗುಡ್ಡಿ, ಡಾ. ಬಿ. ಎಮ್. ಕಾಡೇಶನವರ, ವಿಶ್ರಾಂತ ದೈಹಿಕ ನಿರ್ದೇಶಕರಾದ ಶ್ರೀ ಬಿ. ಸಿ. ಹರ್ಲಾಪುರ, ಶ್ರೀ ಎಸ್, ಎನ್. ತೋಟಗಿ, ಶ್ರೀ ಎನ್. ಸಿ. ಹೊಳಿ ಹಾಗೂ ಈ ಕೃತಿಗೆ ಅಚ್ಚುಕಟ್ಟಾಗಿ ಮುನ್ನುಡಿ ಬರೆದ ಶ್ರೀ ಬಿ. ಎನ್. ಮುದೆಣ್ಣವರ ಎಲ್ಲ ಸಹಾಯಕ ಪ್ರಾಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿಯವರಿಗೆ ಅನಂತ ನಮನಗಳು.

ಈ ಕೃತಿಯು ನನ್ನ ಮೊದಲ ಪ್ರಕಟಣೆಯಾಗಿದ್ದು ಏನಾದರೂ ತಪ್ಪುಗಳು ಕಂಡುಬಂದಲ್ಲಿ ಶಿಕ್ಷಕರುಗಳು, ಪ್ರಶಿಕ್ಷಣಾರ್ಥಿಗಳು ಮುಕ್ತ ಮನಸ್ಸಿನಿಂದ ನನಗೆ ತಿಳಿಸಿದರೆ ಮುಂದಿನ ಪ್ರಕಟಣೆಗಳಲ್ಲಿ ಬದಲಾವಣೆ ಮಾಡಿಕೊಳ್ಳಲು, ತಿದ್ದಿಕೊಳ್ಳಲು ಸಹಾಯವಾಗುತ್ತದೆ. ನಿಮ್ಮ ಸಲಹೆ, ಸೂಚನೆ,

ಮಾರ್ಗದರ್ಶನಗಳನ್ನು ಮುಕ್ತಮನಸ್ಸಿನಿಂದ ಸ್ವೀಕರಿಸುವೆ ಎಂದು ಹೇಳುತ್ತಾ ಎಲ್ಲರಿಗೂ ಅನಂತ ಧನ್ಯವಾದಗಳು.

–ಎನ್. ಡಿ. ಚಿನ್ನಪ್ಪಗೌಡರ.
ಎಮ್.ಎ ಕನ್ನಡ ಕೆ–ಸೆಟ್,
ಎಮ್.ಈಡಿ ಕೆ–ಸೆಟ್,
ಪಿ.ಜಿ.ಡಿ.ಸಿ.ಇ (ಪಿಹೆಚ್.ಡಿ)
ಸಹಾಯಕ ಪ್ರಾಧ್ಯಾಪಕರು
ಕೆ.ಆರ್.ಸಿ.ಇ ಸಂಸ್ಥೆಯ
ಎ.ಬಿ.ಪಾಟೀಲ ಶಿಕ್ಷಣ ಮಹಾವಿದ್ಯಾಲಯ, ಬೈಲಹೊಂಗಲ

ಗೌರವ ಪೂರ್ವಕ ನಮಗಳು: ಡಾ. ಬಿ. ಬಿ. ಪೋಲೀಸಪಾಟೀಲ ಪ್ರಾಚಾರ್ಯರು ಕೆ. ಎಲ್. ಇ ಶಿಕ್ಷಣ ಮಹಾವಿದ್ಯಾಲಯ ನಿಪ್ಪಾಣಿ, ಡಾ. ಎ. ಎಸ್. ಅಮೋಘಿಮಠ ಪ್ರಾಚಾರ್ಯರು ಬಿ. ಎಫ್. ಯಲಿಗಾರ ಶಿಕ್ಷಣ ಮಹಾವಿದ್ಯಾಲಯ ಮುನವಳ್ಳಿ, ಡಾ. ಬಿ. ಜಿ. ಧಾರವಾಡ ಪ್ರಾಚಾರ್ಯರು ಕೆ. ಎಸ್. ಆರ್. ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಡಾ. ನಿರ್ಮಲಾ ಬಟ್ಟಲ ಪ್ರಾಚಾರ್ಯರು ಎಮ್. ಎನ್. ಆರ್. ಎಸ್ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಡಾ. ಆರ್. ಎಂ. ಬಂಟನೂರ ಪ್ರಾಚಾರ್ಯರು ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ ತಾಳಿಕೋಟಿ, ಡಾ. ವ್ಹಿ. ಪಿ. ಕುರಿ ಪ್ರಾಚಾರ್ಯರು ಕೆ. ಎಲ್. ಇ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಡಾ. ಎನ್. ಎಲ್. ಕಳ್ಳಿ ಪ್ರಾಚಾರ್ಯರು ಎಸ್. ಕೆ. ಶಿಕ್ಷಣ ಮಹಾವಿದ್ಯಾಲಯ ಸವದತ್ತಿ, ಡಾ. ಎಮ್. ಬಿ. ಕೋರಿ ಸಹ ಪ್ರಾಧ್ಯಾಪಕರು ಜೆ. ಎಸ್. ಎಸ್ ಶಿಕ್ಷಣ ಮಹಾವಿದ್ಯಾಲಯ ವಿಜಯಪುರ, ಡಾ. ಎ. ಬಿ. ಪಾಟೀಲ ಪ್ರಾಚಾರ್ಯರು ಶ್ರೀ ಲಕ್ಷ್ಮಣರಾವ್ ಜಾರಕಿಹೊಳಿ ಶಿಕ್ಷಣ ಮಹಾವಿದ್ಯಾಲಯ ಗೋಕಾಕ, ಡಾ. ಮಹಾಂತೇಶ. ನರಸಣ್ಣವರ ಸಹಾಯಕ ಪ್ರಾಧ್ಯಾಪಕರು ಸಾಗರ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಡಾ. ಎಸ್. ವ್ಹಿ. ವಾಲಿಶೆಟ್ಟಿ ಸಹಾಯಕ ಪ್ರಾಧ್ಯಾಪಕರು ಎಮ್. ಎನ್. ಆರ್. ಎಸ್ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಡಾ. ಸಂಜೀವ ತಳವಾರ ಸಹಾಯಕ ಪ್ರಾಧ್ಯಾಪಕರು ಕೆ. ಎಲ್. ಇ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಶ್ರೀ ಮಹಾಂತೇಶ ಮಟ್ಟಿ ಪ್ರಾಚಾರ್ಯರು ಶಿವಯೋಗೀಶ್ವರ ಪದವಿ ಮಹಾವಿದ್ಯಾಲಯ ಇಂಚಲ.

ನಾಡಗೀತೆ

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ!
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ !
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ,
ಭಾರತ ಜನನಿಯ ತನುಜಾತೆ !

ಜಯ ಹೇ ಕರ್ನಾಟಕ ಮಾತೆ!
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ,
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ

ನಾನಕ ರಾಮಾ ನಂದ ಕಬೀರರ
ಜಯ ಹೇ ಕರ್ನಾಟಕ ಮಾತೆ!

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೇ,
ಡಂಕಣ ಜಕಣರ ನೆಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗಾ
ಚೈತನ್ಯ ಪರಮಹಂಸ ವಿವೇಕರ,
ಭಾರತ ಜನನಿಯ ತನುಜಾತೆ !

ಜಯ ಹೇ ಕರ್ನಾಟಕ ಮಾತೆ!
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ,
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ

ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ!

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಪರಿವಿಡಿ

ಅಧ್ಯಾಯ 1: ಭಾಷೆಯ ಪರಿಚಯ

1.1 ಭಾಷೆಯ ಪರಿಕಲ್ಪನೆ – ವ್ಯಾಖ್ಯೆಗಳು, ಸ್ವರೂಪ

1.2 ಭಾಷಾ ಉಗಮದ ವಿಕಾಸದ ಸಿದ್ಧಾಂತಗಳು

1.3 ಭಾಷೆಯ ಲಕ್ಷಣಗಳು ಮತ್ತು ಕಾರ್ಯಗಳು

1.4 ಮಾನವ ಭಾಷಾ ವೈಶಿಷ್ಟ್ಯಗಳು ಮತ್ತು ಭಾಷಾ ಅಧ್ಯಯನದ ಅವಶ್ಯಕತೆ

ಅಧ್ಯಾಯ 2: ಭಾಷೆ ಮತ್ತು ಶಿಕ್ಷಣ

2.1 ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳು

2.2 ಪ್ರಥಮ ಭಾಷೆಯಾಗಿ ಕನ್ನಡ / ಪ್ರಥಮ ಭಾಷೆಯಾಗಿ ನೆಲೆಗೊಳಿಸುವ ಕಾರ್ಯಕ್ರಮಗಳು

ಅ) ಸಾಮಾಜಿಕ ಮತ್ತು ಆಡಳಿತ ಮಾಧ್ಯಮವಾಗಿ ಕನ್ನಡ

ಆ) ಶಿಕ್ಷಣದಲ್ಲಿ ಭಾಷಾ ನೀತಿಗಳು – ತ್ರಿಭಾಷಾ ಸೂತ್ರ, ಗೋಕಾಕ್ ವರದಿ, ಬರಗೂರು ರಾಮಚಂದ್ರಪ್ಪ ವರದಿ.

2.3 ಶಿಕ್ಷಣ ಮಾಧ್ಯಮವಾಗಿ ಮಾತೃ ಭಾಷೆ, ತಜ್ಞರ ಅಭಿಪ್ರಾಯಗಳು.

2.4 ಮಾತೃ ಭಾಷಾ ಶಿಕ್ಷಣ ಮಾಧ್ಯಮದ ಪ್ರಾಮುಖ್ಯತೆ / ಅನುಕೂಲಗಳು.

ಅದ್ಯಾಯ 3: ವ್ಯಾಕರಣ ಮತ್ತು ಭಾಷಾ ಕೌಶಲ್ಯಗಳ ಪರಿಚಯ

3.1 ಕನ್ನಡ ವ್ಯಾಕರಣ ಪರಿಚಯ – ವ್ಯಾಕರಣದ ಹಿನ್ನೆಲೆ.

1. ಕನ್ನಡ ಅಕ್ಷರಗಳು – ಮೂಲಾಕ್ಷರಗಳು, ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳು;

ಪದಗಳು– ನಾಮಪದ, ಕ್ರಿಯಾ ಪದ ಮತ್ತು ಅವ್ಯಯ ಪದಗಳು;

ವಿಭಕ್ತಿ ಪ್ರತ್ಯಯಗಳು;

ಸಂಧಿಗಳು,

ಸಮಾಸಗಳು;

ವಾಕ್ಯ ರಚನೆ ಮತ್ತು ಪ್ರಕಾರಗಳು

3.2 ಭಾಷಾ ಕೌಶಲ್ಯಗಳು: ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರಹ – ಅರ್ಥ, ಸ್ವರೂಪ, ಪ್ರಾಮುಖ್ಯತೆ, ಲಕ್ಷಣಗಳು, ದೋಷಗಳು ಮತ್ತು ಪರಿಹಾರಗಳು

ಅಧ್ಯಾಯ 4: ಭಾಷಾ ಬೋಧನೆಗೆ ಸಿದ್ಧತೆ

4.1 ಭಾಷಾ ಪಾಠ ಯೋಜನೆ: ಅರ್ಥ, ಪ್ರಾಮುಖ್ಯತೆ, ರೂಪುರೇಷೆಗಳು, ಗಮನಿಸಬೇಕಾದ ಅಂಶಗಳು ಹಾಗೂ 5ಇ ಮಾದರಿ ಹಂತಗಳು

4.2 ಭಾಷಾ ಬೋಧನೆಯ ಉದ್ದೇಶಗಳು– ಅರ್ಥ ಮತ್ತು ವಿಧಗಳು; ಸಾಮಾನ್ಯ ಉದ್ದೇಶಗಳು ಮತ್ತು ನಿರ್ಧಿಷ್ಟ ಉದ್ದೇಶಗಳು (ವರ್ತನಾ ರೂಪದಲ್ಲಿ ನಿರ್ಧಿಷ್ಟ ಉದ್ದೇಶಗಳನ್ನು ಬರೆಯುವಿಕೆ)

4.3 ಘಟಕ ಯೋಜನೆ, ಘಟಕ ಪರೀಕ್ಷೆ – ಅರ್ಥ, ಪ್ರಾಮುಖ್ಯತೆ ಹಾಗೂ ಹಂತಗಳು

4.4 ಸಂಪನ್ಮೂಲ ಘಟಕ ಯೋಜನೆ – ಅರ್ಥ, ಪ್ರಾಮುಖ್ಯತೆ ಹಾಗೂ ಹಂತಗಳು

ಅಧ್ಯಾಯ 1: ಭಾಷೆಯ ಪರಿಚಯ

1.1 ಭಾಷೆಯ ಪರಿಕಲ್ಪನೆ –ವ್ಯಾಖ್ಯೆಗಳು, ಸ್ವರೂಪ

1.2 ಭಾಷಾ ಉಗಮದ ವಿಕಾಸದ ಸಿದ್ಧಾಂತಗಳು

1.3 ಭಾಷೆಯ ಲಕ್ಷಣಗಳು ಮತ್ತು ಕಾರ್ಯಗಳು

1.4 ಮಾನವ ಭಾಷಾ ವೈಶಿಷ್ಟ್ಯಗಳು ಮತ್ತು ಭಾಷಾ ಅಧ್ಯಯನದ ಅವಶ್ಯಕತೆ

ನಮ್ಮ ದೇಶದಲ್ಲಿ ಭಾಷೆಗಳನ್ನು ಕಲಿಸುವ ಮೂರು ಪ್ರಮುಖ ಅಂಶಗಳನ್ನು ನಾವು ಪರಿಗಣಿಸಬೇಕು.ಅಂದರೆ, ಮೊದಲನೆಯದಾಗಿ ನಮ್ಮ ದೇಶವು ಬಹು–ಸಾಂಸ್ಕೃತಿಕ ಮತ್ತು ಬಹುಭಾಷಿತವಾಗಿದ್ದು, ಶಾಲೆಗಳಲ್ಲಿ ಭಾಷಾ ಬೋಧನೆ ಸವಾಲಿನ ಕೆಲಸವಾಗಿದೆ.ನಾವು ಒಂದು ಕಡೆ ಭಾಷೆಯ ಸೂತ್ರವನ್ನು ಒಪ್ಪುತ್ತೇವೆ ಮತ್ತು ಮಾತೃ ಭಾಷೆ ಅಪ್ಪುತ್ತೇವೆ. ಮತ್ತೊಂದೆಡೆ ನಮ್ಮ ಸಂಸ್ಕೃತಿ ಮತ್ತು ಸಂವಿಧಾನವು ಒಂದೇ ಸೂರಿನಡಿಯಲ್ಲಿ ಎಲ್ಲಾ ಭಾಷೆಗಳ ಕಲಿಯಲು ಅವಕಾಶ ಕಲ್ಪಿಸಿದೆ.

ಎರಡನೆಯದಾಗಿ ಭಾರತದಲ್ಲಿ ಇಂಗ್ಲೀಷ ಬಳಕೆಯ ವ್ಯಾಪಕತೆ ಮತ್ತು ಮಾಲೀಕತ್ವವನ್ನು ಪ್ರತಿನಿಧಿಸುತ್ತದೆ: ಪರಿಣಾಮವಾಗಿ, ಇಂಗ್ಲೀಷ ಕಲಿಸುವ ಸಂದರ್ಭಗಳು ಎರಡನೇ ಭಾಷೆಯಾಗಿ ಮತ್ತು ಕೆಲವು ವೇಳೆ ಮೊದಲ ಭಾಷೆಯಾಗಿ ಶ್ರೇಣಿಯನ್ನು ಮತ್ತು ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತವೆ, ಮತ್ತು ಶಿಕ್ಷಕನ ಭಾಷಾ ಪರಿಣತಿ ಮತ್ತು ವೃತ್ತಿಪರ ಸಾಮರ್ಥ್ಯದ ಪರಿಣಾಮಗಳನ್ನು ಹೊಂದಿವೆ. ಆದ್ದರಿಂದ ಕನ್ನಡ ಕಲಿಕೆ ಪ್ರಶ್ನೆಯಾಗಿದೆ.

ಮೂರನೆಯದಾಗಿ ಭಾಷೆಯನ್ನು ಸಂವಹನ ಮಾಧ್ಯಮವಾಗಿ, ಮಾಹಿತಿ ಸಂಗ್ರಹಣ ಮಾಧ್ಯಮವಾಗಿ, ವ್ಯವಹಾರಿಕ ಮಾಧ್ಯಮವಾಗಿ, ಸಂರಚನಾತ್ಮಕ ಮಾಧ್ಯಮವಾಗಿ, ಸಾಹಿತ್ಯಿಕ ಮಾಧ್ಯಮವಾಗಿ, ಸಾಮಾಜಿಕ ಮಾಧ್ಯಮವಾಗಿ, ಸಾಂಸ್ಕೃತಿಕ ಮಾಧ್ಯಮವಾಗಿ, ಮನೋವೈಜ್ಞಾನಿಕ ಮಾಧ್ಯಮವಾಗಿ, ವಿಶೇಷವಾಗಿ ಬೋಧನಾ ಮಾಧ್ಯಮವಾಗಿ ಕಲಿಯಲು ಅವಕಾಶ ಕಲ್ಪಿಸಿದೆ.

ಆದ್ದರಿಂದ, ಶಿಕ್ಷಕ ಮತ್ತು ಶಿಕ್ಷಣ– ಶಿಕ್ಷಕರಾಗಿ, ಪ್ರತಿ ಪಾಠ ಮತ್ತು ಪಠ್ಯಕ್ರಮವು ವಿಶಿಷ್ಟವಾದುದಾಗಿದೆ ಎಂದು ಮತ್ತು ಪ್ರತಿಯೊಂದು ತರಬೇತಿ ಪಠ್ಯಕ್ರಮವು ಹೊಸತನದ ಸಾಮರ್ಥ್ಯವನ್ನು ಹೊಂದಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಪ್ರತಿ ಪಾಠವು ಹಿಂದಿನ ಜ್ಞಾನವನ್ನು ನಿರ್ಮಿಸುತ್ತದೆ ಮತ್ತು ಹೊಸತನ್ನು ಪರಿಚಯಿಸುತ್ತದೆ. ಈ ನಿಟ್ಟಿನಲ್ಲಿ, ಶಿಕ್ಷಕ–ಶಿಕ್ಷಣವು ಪೂರ್ವಸಿದ್ಧತೆಯಿಂದ ಕೂಡಿರಬೇಕು ಎಂದು ನಾನು ಭಾವಿಸುತ್ತಿದ್ದೇನೆ. ಆದ್ದರಿಂದ ಶಿಕ್ಷಕನು ಆಗಾಗ್ಗೆ ಒಂದು ಮಾದರಿ, ವಿಷಯ ಪ್ರಾವಿಣ್ಯತೆ ಮತ್ತು ವೃತ್ತಿಪರ ಅರಿವು ಸಮಾನವಾಗಿ ಉತ್ತೇಜಿಸಲ್ಪಡಬೇಕು. ಶಿಕ್ಷಕನ ಸ್ವಂತ ಭಾಷೆಗಳ ಮೂಲಕ ಅಲ್ಲಿ ಅಗತ್ಯವನ್ನು ನೀಡಬೇಕು ಎಂದು ಒತ್ತಿಹೇಳಲು ಭಾಷೆಯ ಕುಶಲತೆ ಅಥವಾ ಭಾಷೆಯೊಂದಿಗೆ ನಿಕಟತೆಯ ಮೇಲೆ ಒತ್ತು ನೀಡಬೇಕು.– ಹೆಚ್ ಜಿ ದೇವಿಕ

‘ಮಾತೃಭಾಷಾ ಬೋಧನಾಶಾಸ್ತ್ರ ಕನ್ನಡ’–ಲೇಖಕರು ಬಿ ಆರ್ ರಾಮಚಂದ್ರಯ್ಯ ಮತ್ತು ಡಾ. ಬಸವರಾಜು ಪಿ

ಮಾತೃಭಾಷೆಯು ಮಕ್ಕಳ ಶಿಕ್ಷಣದಲ್ಲಿ ಅತ್ಯಂತ ಪರಿಣಾಮಕಾರಿ ಪಾತ್ರ ವಹಿಸುತ್ತದೆ.ಬರೀ ಜ್ಞಾನಾರ್ಜನೆಯಷ್ಟೇ ಅಲ್ಲದೆ ಮಕ್ಕಳ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸದ ಸಾಧನವಾಗಿ ನೆರವಾಗುತ್ತದೆ.ಭಾಷೆಯ ಕೌಶಲ್ಯಗಳಲ್ಲಿ ಸಾಮರ್ಥ್ಯ ಗಳಿಸಿಕೊಳ್ಳದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆ ಸಮರ್ಪಕವಾಗಿ ಸಾಗಲಾರದು.ಭಾಷಾ ಬೋಧನೆಯು ಕೇವಲ ಭಾಷಾ ಕೌಶಲ್ಯಗಳ ಕಲಿಕೆಗೆ ಮಾತ್ರ ಸೀಮಿತವಾಗಿಲ್ಲ. ಸಾಮಾಜಿಕ, ಭಾವನಾತ್ಮಕ, ಸೃಜನಶೀಲ, ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನಿಂದ ಭಾಷಾ ಬೋಧನೆ ಮೂಡಿಬರಬೇಕು.ಸ್ವತಂತ್ರ ಚಿಂತನೆ, ಸೃಜನಶೀಲತೆ, ಕಲೆ, ಸಾಹಿತ್ಯ, ಸಂಸ್ಕೃತಿ, ಬುದ್ಧಿ ಮತ್ತು ಭಾವಗಳ ವಿಕಾಸ ಭಾಷೆಯಿಂದಷ್ಟೇ ಅಲ್ಲ, ಭಾಷಾ ಬೋಧನೆಯಿಂದಾಗಬೇಕು.ಈ ನಿಟ್ಟಿನಲ್ಲಿ ಭಾಷಾ ಶಿಕ್ಷಕರ ಜವಾಬ್ದಾರಿ ಏನೆಂಬುದಾಗಿದೆ ಮತ್ತು ಹೇಗೆ ಎಂಬುದನ್ನು ಅರಿತಿರಬೇಕು.ತರಗತಿಯ ಕಿಟಕಿ – ಬಾಗಿಲು, ಶಾಲೆಯ ಗ್ರಂಥಾಲಯ – ಮೈದಾನಗಳಿಂದಾಚೆಗೆ ಭಾಷಾ ಬೋಧನೆ ಮತ್ತು ಕಲಿಕಾ ಪ್ರಕ್ರಿಯೆ ನಿರಂತರವಾಗಿ ಪ್ರಯೋಗಾತ್ಮಕವಾಗಿ ನಡೆಯುತ್ತಿರಬೇಕು, ನಡೆಯುತ್ತಿರಲೇಬೇಕು.

1.1 ಭಾಷೆಯ ಪರಿಕಲ್ಪನೆ –ವ್ಯಾಖ್ಯೆಗಳು, ಸ್ವರೂಪ

ಭಾಷೆಯ ಅರ್ಥ: ಭಾಷೆ ಮಾನವನ ಅನನ್ಯ ಸೃಷ್ಟಿಗಳಲ್ಲಿ ಒಂದಾಗಿದೆ. ಭಾಷೆ ಇಲ್ಲದಿದ್ದರೆ ಜಗತ್ತೇ ಶೂನ್ಯವಾಗಿರುತ್ತಿತ್ತು.ಮಾತು ಮತ್ತು ಆಲೋಚನೆಯನ್ನು ಕಲಿತ ಮಾನವ ಪ್ರಾಣಿಗಳಿಗಿಂತ ಭಿನ್ನವಾಗಿ ಬೆಳೆದ.ಮಾನವ ತನ್ನ ಬುದ್ಧಿವಂತಿಕೆಯಿಂದ ಭಾಷೆಯನ್ನು ಸೃಷ್ಟಿಸಿಕೊಂಡನು.ನಂತರ ಭಾಷೆಯನ್ನು ತನ್ನ ವಿಚಾರವಂತಿಕೆ ಹಾಗೂ ವಿಕಾಸದ ಸಾಧನವಾಗಿ ಬಳಸಿಕೊಂಡನು.ಮಾನವ ಸಂಘ ಜೀವಿಯಾಗಲು ಭಾಷೆ ಮುಖ್ಯ ಸಾಧನವಾಯಿತು.ಭಾಷೆಯ ಮೂಲಕ ಮಾನವ ಕೊಡುಕೊಳ್ಳುವಿಕೆ, ವಿಚಾರಗಳ ವಿನಿಮಯ, ಭಾವನಾತ್ಮಕ ಮತ್ತು ಸಾಮಾಜಿಕ ಸಂಬಂಧಗಳು ಬೆಳೆದವು.ಭಾಷೆಯ ಮೂಲಕ ಮಾಹಿತಿ, ಜ್ಞಾನ, ವಿಜ್ಞಾನ ಮತ್ತು ಸಂಶೋಧನೆಗಳು ಬೆಳೆದುಬಂದವು.ಭಾಷೆಯ ಅರಿವಿನಿಂದಾಗಿ ನಾಗರಿಕತೆಗಳು ಬೆಳೆದುಬಂದವು.ಮಾನವನ ಭಾವನೆ, ಆಲೋಚನೆ, ಕನಸು, ಕಲ್ಪನೆಗಳು, ಪರಿಕಲ್ಪನೆಗಳು ಜೀವ ತುಂಬಿಕೊಂಡಿರುವುದು.

“ಭಾಷೆಯೆಂಬ ಜ್ಯೋತಿಯು ಜಗತ್ತನ್ನು ಬೆಳಗದಿದ್ದರೆ ಮೂರು ಲೋಕವೆಲ್ಲ ಕತ್ತಲಿಂದ ಕೂಡಿರುತ್ತಿತ್ತು.”ಎಂಬ ದಂಡಿಯ ಮಾತು ಸಾರ್ವಕಾಲಿಕವಾಗಿ ಆಚಂದ್ರಾರ್ಕವಾಗಿ ಸತ್ಯದ ಮಾತಾಗಿದೆ.

ಜಗತ್ತಿನಲ್ಲಿ ಸಾವಿರಾರು ಭಾಷೆಗಳಿವೆ. ಭಾಷೆ ವ್ಯಕ್ತಿಯ ವ್ಯಕ್ತಿತ್ವದೊಂದಿಗೆ ಬೆರೆತುಹೋಗಿದೆ. ಭಾಷೆಯು ವ್ಯಕ್ತಿಯ ಜೀವನದಲ್ಲಿ ಸಾಮಾನ್ಯದಿಂದ ವೈವಿಧ್ಯಮಯ ನೆಲೆಗಳಲ್ಲಿ ಬಳಕೆಯಾಗುತ್ತಿರುತ್ತದೆ. ಮಾತು ಬಲ್ಲವಣಿಗೆ ಜಗಳವಿಲ್ಲ ಎಂಬಂತೆ ವ್ಯಕ್ತಿ–ವ್ಯಕ್ತಿಗಳ ನಡುವೆಯಿರುವ ಸಾಮಾಜಿಕ ಸಂಬಂಧದ ಸ್ವರೂಪ, ಒಂದು ಸಾಮಾಜಿಕ ಸಂದರ್ಭಗಳಲ್ಲಿ ಭಾಗಿಯಾಗುವ ವ್ಯಕ್ತಿಯ ಪಾತ್ರ ಇವೆಲ್ಲವುಗಳೂ ವ್ಯಕ್ತಿಯ ಭಾಷೆಯ ಮೇಲೆ ಪ್ರಭಾವ ಬೀರುತ್ತವೆ. ಅಲ್ಲದೇ ವ್ಯಕ್ತಿಯ ಹಲವಾರು ಚಹರೆಗಳಿಂದ ದೈಹಿಕ

ವಿವರಗಳು, ಮನಸ್ಸಿನ ವಿವಿಧ ಅವಸ್ಥೆಗಳು, ವ್ಯಕ್ತಿಯು ವಾಸಿಸುವ ಪ್ರದೇಶ, ಆ ವ್ಯಕ್ತಿ ಜೀವಿಸುತ್ತಿರುವ ಸಮಾಜ, ರಾಷ್ಟ್ರದೊಂದಿಗೆ ಅವನ ಅಸ್ಮಿತೆ, ವ್ಯಕ್ತಿ ವ್ಯವಹರಿಸುವ ಸಂದರ್ಭ ಇವೆಲ್ಲವೂ ಭಾಷೆಯ ಪ್ರಭಾವಕ್ಕೆ ಒಳಗಾಗಿರುತ್ತವೆ. ಹೀಗೆ ಭಾಷೆ ಮಾನವನ ಒಂದು ಅದ್ಭುತ ಆವಿಷ್ಕಾರವಾಗಿದೆ.

ಭಾಷೆಯ ಪರಿಕಲ್ಪನೆ: ಸಾವಿರಾರು ವರ್ಷಗಳ ಹಿಂದೆ ಧೀಮಂತನಾದ ಮಾನವನು ತನ್ನ ಸಾಮಾಜಿಕ ಸಂಪರ್ಕಕ್ಕಾಗಿ 'ಭಾಷೆ'ಯೆಂಬ ಅಮೂಲ್ಯ ಸಂಪತ್ತನ್ನು ಕಂಡುಕೊಂಡನು. ಇದು ಮಾನವನ ಜೀವನದ ಜೀವನಾಡಿಯಾಗಿ ಜನಜೀವನದಲ್ಲಿ ಪ್ರವಹಿಸುತ್ತಾ ಬಂದಿತು.ಇದರಿಂದ ಭಾಷೆಯೆಂಬ ಅತ್ಯಮೂಲ್ಯ ಉಜ್ವಲ ಬೆಳಕು ಮಾನವನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸಿ ಅವನನ್ನು ಅವನಿಗೆ ಬುದ್ಧಿಜೀವಿಯ ಸ್ಥಾನಮಾನಕ್ಕೇರಿಸಿದೆ, ಅಲ್ಲದೇ ಮಾನವನ ಮುಂದಿನ ಎಲ್ಲಾ ಅದ್ಭುತ ಸಾಧನೆಗಳಿಗೆ ಮೂಲಾಧಾರವಾಗಿದೆ.ಮಾನವನ ಭಾವನಾ ಪೋಷಣೆಗೆ, ಭಾವನಾ ವರ್ಗಾವಣೆಗೆ ಮಾಧ್ಯಮವಾಗಿರುವ ಭಾಷೆ ಮಾನವ ಜಗತ್ತಿನ ಪ್ರಗತಿಯ ಮೂಲಾಧಾರವಾಗಿದೆ.ಮಾನವ ಜೀವನದ ಬೆಳಕಾಗಿದೆ.

ಇದಮಂಧತಮಃ ಕೃತ್ಸ್ನಂ ಜಾಯೇತ ಭುವನತ್ರಯಂ।

ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೆ॥ – ದಂಡಿ.ಪ್ರಾಚೀನ ಸಂಸ್ಕೃತ ಕವಿ.

"ಭಾಷೆಯೆಂಬ ಬೆಳಕು ಇಲ್ಲದಿದ್ದರೆ ಇಡೀ ಜಗತ್ತೇ ಕತ್ತಲೆಯಲ್ಲಿ ಮುಳುಗಿ ಹೋಗುತ್ತಿತ್ತು."

ಧರಣಿಯ ಮೇಲೆ ವಾಸಿಸುವ ಕೋಟ್ಯಾನುಕೋಟಿ ಜೀವರಾಶಿಗಳಲ್ಲಿ ಮಾನವ ಜೀವಿಗೆ ಮಹತ್ವವಾದ ಮಾನ್ಯತೆ ಇದೆ. ಕಾರಣ ಮನುಷ್ಯನಿಗೆ ಪ್ರಕಾಶತೆಯ ಕಳಶವನ್ನು ಇಟ್ಟು ತನ್ನ ಸುತ್ತಡೆಗೂ ಬೆಳಗುವಂತೆ ಮಾಡಿದ ಮಾಧ್ಯಮವೆಂದರೆ 'ಭಾಷೆ'.ಅಂದರೆ ಪೃಥ್ವಿಯ ಮೇಲೆ ಮನುಷ್ಯನ ಎಲ್ಲ ಸಾಹಸ ಸಿದ್ಧಿಯನ್ನು ಸಾರುವ ಸಂಪರ್ಕ ವಿಜಯ ವೈಜಯಂತಿಯೇ 'ಭಾಷೆ' ಎಂದು ಹೇಳಬಹುದು.

'ಭಾಷೆ' ಎಂಬ ಶಬ್ದವು ಸಂಸ್ಕೃತದ 'ಭಾಸ್' ಎಂಬ ಧಾತುವಿನಿಂದ ಬಂದಿದೆ. 'ಭಾಸ್' ಎಂದರೆ ಹೊಳೆಯುವುದು/ಪ್ರಕಾಶಿಸುವುದು ಎಂದರ್ಥ.ಅಂದರೆ ನಮ್ಮ ಭಾವನೆಗಳನ್ನು, ಅನಿಸಿಕೆಗಳನ್ನು ಮತ್ತು ಆಲೋಚನೆಗಳನ್ನು ಇನ್ನೊಬ್ಬರಿಗೆ ತಾಮಸವಾಗದೆ ತಿಳಿಯಾಗಿ (ಪ್ರಕಾಶಮಾನವಾಗಿ) ಹೇಳುವುದೇ ಭಾಷೆ.

ಇಂಗ್ಲೀಷಿನ 'Language' ಎಂಬ ಪದವು ಲ್ಯಾಟಿನ್ ಭಾಷೆಯ 'Lingva' ಎಂಬ ಧಾತುವಿನಿಂದ ಬಂದಿದೆ. 'Lingva'(ಲಿಂಗ್ವ) ಎಂದರೆ 'tongue' ಎಂದರೆ 'ನಾಲಿಗೆ'.ಅಂದರೆ ನಾಲಿಗೆಯಿಂದ ಹೊರಬರುವಂತಹುದೇ ಭಾಷೆ. ಮನಸ್ಸಿನ ಭಾವನೆಗಳು, ಆಲೋಚನೆಗಳು ನಾಲಿಗೆಯ ಮೇಲೆ ಉಚ್ಚರಿಸಲ್ಪಟ್ಟು ಮಾತಾಗಿ ಹೊರಬಂದಾಗ ಭಾಷೆಯಾಗುತ್ತದೆ.

ಭಾಷೆಯು ಎರಡು ರೂಪಗಳನ್ನು ಹೊಂದಿದೆ.ಒಂದು ಮೂರ್ತ ರೂಪದ ಬರವಣಿಗೆ, ಮತ್ತೊಂದು ಅಮೂರ್ತ ರೂಪದ ಮಾತುಗಾರಿಕೆ.ಇವೆರಡೂ ಮಾನವನ ಜೀವನವನ್ನು ಬೆಳಗುವ ಜ್ಯೋತಿಗಳಾಗಿವೆ.

ವ್ಯಾಖ್ಯೆಗಳು:

ಸಾಮಾನ್ಯವಾಗಿ ಭಾಷೆಯ ಕುರಿತಾಗಿ ಜನರು ಆಡುವ ಮಾತನ್ನು, ಬರೆಯುವ ಬರಹವನ್ನು ಭಾಷೆಯೆಂದು ಕರೆಯುತ್ತೇವೆ. ಭಾಷೆಯ ಬಗೆಗೆ ವೈಜ್ಞಾನಿಕವಾಗಿ, ಖಚಿತವಾಗಿ, ನಿರ್ಧಿಷ್ಟ ವ್ಯಾಖ್ಯಾನ ನೀಡುವುದು ಸುಲಭದ ಮಾತಲ್ಲ. ಈ ಬಗೆಗೆ ಪ್ರಾಚೀನ ಕಾಲದಿಂದಲೂ ಹಲವಾರು ಭಾಷಾ ವಿಜ್ಞಾನಿಗಳು ಅಧ್ಯಯನ ಮಾಡುತ್ತಲೇ ಬಂದಿದ್ದು ತಮ್ಮ ಆಲೋಚನೆಗೆ ಹೊಳೆದ ರೀತಿಯಲ್ಲಿ ಅರ್ಥೈಸುತ್ತಾ ಬಂದಿದ್ದಾರೆ. ಭಾಷೆಯನ್ನು ಕುರಿತು ಮೊದಲು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ ದಾರ್ಶನಿಕ ಪ್ಲೇಟೋ ಹೇಳಿರುವಂತೆ...

- **ಪ್ಲೇಟೋ**–"ಧ್ವನಿ ಸಂಕೇತಗಳ ಮೂಲಕ ಮನುಷ್ಯ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಮಹತ್ ಸಾಧನವೇ ಭಾಷೆ."

- **ಐಸ್ಲರ್**–"ಆತ್ಮ ಅಥವಾ ಮನಸ್ಸಿರುವ ಯಾವುದೇ ಪ್ರಾಣಿಯ ಅನುಭವಗಳ ಅಭಿವ್ಯಕ್ತಿಯೇ ಭಾಷೆ."

- **ಎಬ್ಬಿಂಗ್‌ಹಾಸ್**–"ಬೇಕಾದಾಗಲೆಲ್ಲ ಸ್ವಯಂ ಪ್ರೇರಿತವಾಗಿ ಉಚ್ಚರಿಸಬಹುದಾದ ಸಾಂಪ್ರದಾಯಿಕ ಸಂಕೇತಗಳ ವ್ಯವಸ್ಥೆಯೇ ಭಷೆ."

- **ಮಾರ್ಟೀ**–"ಒಂದು ಚಿತ್ತ ಸ್ಥಿತಿಯನ್ನು ವ್ಯಕ್ತಪಡಿಸಲು ಮಾಡುವ ಉದ್ದೇಶಪೂರ್ವಕ ಧ್ವನಿಗಳ ಉಚ್ಚಾರಣೆಯೇ ಭಾಷೆ."

- **ಫರ್ಡಿನಾಂಡ್ ಡಿ. ಸಸೂರ್**–"ಮನುಷ್ಯನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ."

- **ಬ್ಲಾಕ್ ಮತ್ತು ಟ್ರೇಗರ್**–"ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ."

- **ಎಡ್ವರ್ಡ್**–"ಭಾಷೆ ಮಾನವನಿಗೆ ಸಹಜ ಪ್ರವೃತ್ತಿ. ಆದರೆ ಅದು ವಿಶಿಷ್ಟ ಸಂಪ್ರದಾಯಗಳ ಕಡೆಗೆ ಅವನನ್ನು ಕೊಂಡೊಯ್ಯುವ ಸಾಧನ ಮತ್ತು ಅದು ಸಾಮಾಜಿಕ ಸನ್ನಿವೇಶ ಹಾಗೂ ಅವನ ಬೆಳವಣಿಗೆ ಅವಲಂಬಿಸಿದೆ."

- **ವ್ಹಿಟ್ನಿ**–"ಮನುಷ್ಯ ತನ್ನ ಆಲೋಚನೆಗಳನ್ನು ಇತರರಿಗೆ ತಿಳಿಯಪಡಿಸುವ ಸಲುವಾಗಿ ಪ್ರಜ್ಞಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ಬಳಸಿಕೊಂಡ ಸಂಪರ್ಕ ಸಾಧನವೇ ಭಾಷೆ."

- **ರಿವೇಜ್**–"ಭಾಷೆಯೆಂಬುದು ಸಂಪರ್ಕದ ಫಲ–ಮೊದಲು ಕ್ರಿಯೆ ಅನಂತರ ಸಂಜ್ಞೆ, ಇನ್ನೊಬ್ಬರೊಡನೆ ಸಂಪರ್ಕ ಬೆಳೆಸಬೇಕೆಂಬ ಮಾನವನ ತೀವ್ರತರವಾದ ಅಭಿಲಾಷೆಯ ಫಲಿತಾಂಶವೇ ಭಾಷೆ."

- **ಬಿ ಆರ್ ರಾಮಚಂದ್ರಯ್ಯ**–"ಭಾಷೆಯು ಮಾನವನು ತನ್ನ ನೋವು ನಲಿವುಗಳ ಭಾವನೆಗಳು, ನಂಬಿಕೆ ಮತ್ತು ಅಭಿಪ್ರಾಯಗಳ ಆಲೋಚನೆಗಳು, ಮಾಹಿತಿ ಮತ್ತು ವಿಷಯಗಳ ಆವಿಷ್ಕಾರಗಳು, ಜ್ಞಾನ ಮತ್ತು ಕೌಶಲ್ಯಗಳ ಅನುಭವಗಳನ್ನು ಇತರರೊಂದಿಗೆ ವ್ಯಕ್ತಪಡಿಸುವ ಸಂವಹನ ಮಾಧ್ಯಮವಾಗಿದೆ."

• **ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು**–"ಬರಹ ಅಥವಾ ಮಾತಿನ ಸಂಕೇತಗಳ ಮೂಲಕ ಭಾವನೆ, ಸುದ್ದಿ, ಮನೋಭಾವಾದಿಗಳನ್ನು ತಿಳಿಸಲು ಅಥವಾ ಸಂಕೇತಗಳ ಪದ್ಧತಿಯೇ ಭಾಷೆ."

ಒಟ್ಟಾರೆಯಾಗಿ ಭಾಷೆಯು ಅನುವಂಶಿಕವಾದುದಲ್ಲ, ಮಾನವ ನಿರ್ಮಿತವಾದುದು.ಮಾನವ ತನ್ನ ಅವಶ್ಯಕತೆಗಳಿಗೆ ಅನುಗುಣವಾಗಿ ಪ್ರಯತ್ನಪೂರ್ವಕವಾಗಿ ಸೃಷ್ಟಿಸಿಕೊಂಡು ಅಭ್ಯಾಸದಿಂದ ಬೆಳೆಸಿಕೊಂಡಂತಹ ಸಂಕೇತಗಳ ವ್ಯವಸ್ಥೆಯಾಗಿದೆ.

ಭಾಷೆಯ ಸ್ವರೂಪ:

• **ಭಾಷೆಯು ಧ್ವನಿ ಸಂಕೇತಗಳ ಯಾದೃಚ್ಚಿಕ ವ್ಯವಸ್ಥೆ:** ಪ್ರತಿ ಭಾಷೆ ಸಂಕೇತಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಒಂದು ಸಮಾಜವು ಸಾಂಪ್ರದಾಯಿಕವಾಗಿ ಅಂಗೀಕರಿಸಿದ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯನ್ನು ಭಾಷೆ ಎನ್ನುವುದು. ಧ್ವನಿ ಸಂಕೇತಗಳು ಯಾದೃಚ್ಛಿಕವಾಗಿರುವುದರಿಂದ ಒಂದೇ ವಸ್ತುವಿಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಪದಗಳು ಬಳಕೆಯಲ್ಲಿವೆ. ಉದಾಹರಣೆಗೆ ಕನ್ನಡದ ಮರ, ತೆಲುಗಿನಲ್ಲಿ ಮಾನು ಎಂತಲೂ, ಇಂಗ್ಲೀಷಿನಲ್ಲಿ ಟ್ರೀ ಎಂದೂ ಅಂಗೀಕೃತವಾಗಿದೆ. ಭಾಷೆಯಲ್ಲಿ ಕಾಣಿಸುವ ಧ್ವನಿ, ಮಾತು, ಪದಗಳೆಲ್ಲವೂ ವಿವಿಧ ಭಾವನೆ ಮತ್ತು ಅಭಿಪ್ರಾಯಗಳನ್ನು ಸೂಚಿಸುವ ಸಂಕೇತಗಳು. ಸಂಚಾರಿ ಫಲಕಗಳು, ಗಣಿತದ ಚಿಹ್ನೆಗಳು, ಗಂಟೆ ಬಾರಿಸುವುದು, ರೈಲು ಹೊರಡುವಾಗ ಕೆಂಪು, ಹಸಿರು ಬಟ್ಟೆ ತೋರಿವುದು ಇವುಗಳು ಸಹ ಧ್ವನಿ ಸಂಕೇತಗಳಾಗಿವೆ.

• **ಭಾಷೆಯು ಒಂದು ಕೌಶಲವಾಗಿದೆ:** ಭಾಷಾ ಕಲಿಕೆ ಒಂದು ಕೌಶಲವಾಗಿದೆ. ಭಾಷೆಯನ್ನು ನಿರಂತರ ಅಭ್ಯಾಸದಿಂದ ಮಾತ್ರ ನಾವು ಕಲಿಯಬಹುದು. ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತು, ಓದು ಮತ್ತು ಬರಹಗಳು ಪ್ರಧಾನ ಕೌಶಲ್ಯಗಳಾಗಿದ್ದು, ಪ್ರತಿಯೊಂದು ಕೌಶಲ್ಯಗಳಲ್ಲೂ ಹತ್ತು ಹಲವು ಉಪ ಕೌಶಲ್ಯಗಳು ಸಮನ್ವಯಗೊಂಡಿವೆ. ಭಾಷೆಯ ಹಲವು ಕೌಶಲ್ಯಗಳು ಒಂದರೊಳಗೊಂದು ಸಮನ್ವಗೊಳ್ಳುತ್ತಾ ಅದು ಅರ್ಥಪೂರ್ಣವಾಗಿ ಸಾಗುತ್ತದೆ. ಇದೇ ರೀತಿ ಒಂದು ಕೌಶಲದ ಕಲಿಕೆ ಮತ್ತೊಂದು ಕೌಶಲದ ಕಲಿಕೆಯನ್ನು, ಪ್ರಯೋಗವನ್ನು ಬೆಂಬಲಿಸುತ್ತದೆ. ಅನುಕರಣೆಯಿಂದ ಹಾಗೂ ಅಭ್ಯಾಸದಿಂದ (ಪುನರಾವರ್ತನೆ) ಭಾಷಾ ಕೌಶಲಗಳು ರೂಪುಗೊಂಡು ಪ್ರಯೋಗಕ್ಕೆ ಬರುತ್ತವೆ. ಭಾಷೆಯ ಕೌಶಲಗಳನ್ನು ಅವುಗಳ ಪ್ರಯೋಗ, ಅಭ್ಯಾಸದಿಂದಲೇ ಕಲಿಯಲು ಸಾಧ್ಯ. ಆಲಿಸುತ್ತಾ ಆಲಿಸುವಿಕೆ, ಮಾತಿನ ಮೂಲಕ ಮಾತು, ಓದಿನ ಮೂಲಕ ಓದು, ಬರಹದ ಮೂಲಕ ಬರವನ್ನು ಕಲಿಯುವುದು.

• **ಭಾಷೆಯು ಧ್ವನಿಸಂಕೇತಗಳ ಅರ್ಥಬದ್ಧ ವ್ಯವಸ್ಥೆ:** ಸಮಾಜ ಅಂಗೀಕೃತ ಧ್ವನಿಸಂಕೇತಗಳ ವ್ಯವಸ್ಥಿತ ರಚನೆ ಮತ್ತು ಅಭಿವ್ಯಕ್ತಿಯೇ ಭಾಷೆ. ಧ್ವನಿ ಸಂಕೇತಗಳು ಪ್ರಕಟವಾದಾಗ ಶಬ್ದ ಹೊರಹೊಮ್ಮುತ್ತದೆಯಾದರೂ ನಾವು ಹೊರಡಿಸುವ ಶಬ್ಧ, ಧ್ವನಿಗಳೆಲ್ಲಾ ಮಾತುಗಳಾಗುವುದಿಲ್ಲ. ವ್ಯವಸ್ಥಿತವಲ್ಲದ ಧ್ವನಿಸಂಕೇತಗಳಿಂದ ಹೊರಡುವ ಧ್ವನಿಗಳು, ಶಬ್ಧಗಳು ಅರ್ಥಪೂರ್ಣವಾಗುವುದಿಲ್ಲ. ಆದ್ದರಿಂದ ಧ್ವನಿಸಂಕೇತಗಳ ವ್ಯವಸ್ಥಿತವಾದ ಜೋಡಣೆ, ಕ್ರಮಬದ್ಧವಾದ ಧ್ವನಿ ಪ್ರಕಟನೆ ಮಾತ್ರ ಭಾಷೆಯಾಗುತ್ತದೆ.

• **ಭಾಷೆಯು ದೈವದತ್ತವಾದುದಲ್ಲ; ಮಾನವ ನಿರ್ಮಿತವಾದುದು:** ಭಾಷೆಯು ಮಾನವ ನಿರ್ಮಿತವಾದುದಾಗಿದೆ. ಮಾನವನ ಬುದ್ಧಿವಂತಿಕೆ ಹಾಗೂ ಪ್ರಯತ್ನದ ಫಲವಾಗಿ ರೂಪಗೊಂಡ ಮಾಧ್ಯಮ ಇದಾಗಿದ್ದು ಪ್ರಾಚೀನ ಕಾಲದಲ್ಲಿನ ದೈವದತ್ತವಾದ ನಂಬಿಕೆ ಸುಳ್ಳಾಗಿದೆ. ಮಾನವ ತನ್ನ ಅವಶ್ಯಕತೆಗಳ ಪೂರೈಕೆಗಾಗಿ ಭಾಷೆಯನ್ನು ಸೃಷ್ಟಿಸಿಕೊಂಡನು. ವಿವಿಧ ಧ್ವನ್ಯಂಗಗಳ ಸಹಾಯದಿಂದ ಮಾನವ ಭಾಷೆಯನ್ನು ಕಂಡುಕೊಂಡಿದ್ದಾನೆ. ಭಾಷೆ ದೈವದತ್ತವೂ ಅಲ್ಲ, ಅನುವಂಶಿಕವೂ ಅಲ್ಲ. ಅದು ಕಲಿಯುವಂತಹದ್ದು ಹಾಗೂ ಕಲಿಯುವುದರ ಮೂಲಕ ಬೆಳೆಸಿಕೊಳ್ಳುವಂತಹದ್ದು.

• **ಭಾಷೆ ಅನುಕರಣೆಯಿಂದ ಮೂಡಿ ಬರುತ್ತದೆ:** ಭಾಷೆಯನ್ನು ಅನುಕರಣೆಯಿಂದ ಕಲಿಕೆಯಲು ಸಾಧ್ಯ. ಆರಂಭದಲ್ಲಿ ಮಗು ಕುಟುಂದ ಸದಸ್ಯರ ಮಾತುಗಳನ್ನು ಆಲಿಸುತ್ತಾ, ಗಮನಿಸುತ್ತಾ ಅನುಕರಣೆ ಮಾಡುತ್ತಾ ಒಂದೊಂದೆ ಪದ, ಶಬ್ಧಗಳನ್ನು ಕಲಿಯುತ್ತಾ ಭಾಷಾ ಪಕ್ವತೆಯನ್ನು ಹೊಂದುತ್ತದೆ. ಮಕ್ಕಳಲ್ಲಿ ತನಗೆ ತಾನೇ ಕೆಲವು ಶಬ್ಧಗಳು ಮೂಡಿ ಬರುತ್ತವೆ. ಆದರೆ ಎಲ್ಲಾ ಶಬ್ಧಗಳೂ ಈ ರೀತಿಯಾಗಿ ಸ್ವಯಂಸಿದ್ಧವಾಗಿ ಬರಲಾರವು. ಉತ್ತಮವಾದ ಭಾಷೆಯನ್ನು ಅನುಕರಿಸುವುದರಿಂದ ಉತ್ತಮ ಭಾಷೆಯನ್ನು ಕಲಿಯಲು ಸಾಧ್ಯ.

• **ಅಭ್ಯಾಸದಿಂದ ಭಾಷೆಯು ಸ್ಪಷ್ಟವಾಗುತ್ತದೆ ಮತ್ತು ಬೆಳೆಯುತ್ತದೆ:** ಒಂದು ಭಾಷೆಯ ಅಸ್ತಿತ್ವ ಅರಿವಾಗುವುದು ಅದರ ಬಳಕೆಯಿಂದ ಮಾತ್ರ. ಒಂದು ಭಾಷೆಯನ್ನು ಅಭ್ಯಾಸ ಮಾಡಿದಂತೆ, ಬಳಸಿದಂತೆ ಆ ಭಾಷೆಯು ಸಂಸ್ಕರಣಗೊಳ್ಳುತ್ತಾ ಸಂಸ್ಕಾರಗೊಳ್ಳುತ್ತದೆ. ಆ ಭಾಷೆಯ ಭಾಷೆಯಲ್ಲಿ ಸೃಜನಶೀಲತೆ ಹೆಚ್ಚಾಗುತ್ತದೆ. ಆ ಭಾಷೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬಳಸಬೇಕು. ಭಾಷೆಯ ಅಭ್ಯಾಸ ಅಂದರೆ ಬಳಕೆ ಕಡಿಮೆಯಾದರೆ ಕ್ರಮೇಣ ಆ ಭಾಷೆಯ ಕೌಶಲಗಳು ಕಣ್ಮರೆಯಾಗುತ್ತವೆ. ಆದ್ದರಿಂದ ನಿರಂತರ ಮತ್ತು ಕ್ರಮಬದ್ಧ ಅಭ್ಯಾಸಗಳಿಂದ ಭಾಷಾ ಕೌಶಗಳು ಗಟ್ಟಿಗೊಳ್ಳುತ್ತವೆ, ಅರ್ಥಬದ್ಧವಾಗುತ್ತವೆ. ಇದರಿಂದ ಭಾಷೆಯು ಬೆಳೆಯುತ್ತದೆ.

• **ಭಾಷೆಯು ಅಭಿವ್ಯಕ್ತಿಯ ಸಾಧನ ಹಾಗೂ ವಿಕಾಸದ ಸಾಧನ:** ಪ್ರಾಥಮಿಕವಾಗಿ ಭಾಷೆಯು ಅಭಿವ್ಯಕ್ತಿಯ ಸಾಧನ. ಮಾನವನು ತನ್ನ ಭಾವನೆ, ಆಲೋಚನೆ, ಕಲ್ಪನೆ, ಅನಿಸಿಕೆ, ಅನುಭವಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಕಂಡುಕೊಂಡನು. ಮಾನವ ತನ್ನ ಪರಿಶ್ರಮದಿಂದಾಗಿ ಭಾಷೆಯನ್ನು ಸೂಕ್ಷ್ಮಗೊಳಿಸಿ ತನ್ನ ಭಾವನೆ, ಆಲೋಚನೆಗಳನ್ನು ಅಭಿವ್ಯಕ್ತಗೊಳಿಸುವ ಮಟ್ಟಕ್ಕೆ ತನ್ನ ಭಾಷೆಯನ್ನು ಸಂಸ್ಕರಿಸಿಕೊಂಡಿದ್ದಾನೆ. ಭಾಷೆಯು ಕೇವಲ ಅಭಿವ್ಯಕ್ತಿಯು ಸಾಧನವಷ್ಟೇ ಅಲ್ಲ, ವಿಕಾಸದ ಸಾಧನವೂ ಕೂಡ. ಭಾಷೆಯ ಮೂಲಕ ವಿಚಾರವಂತನಾದ ಮಾನವನು ಜ್ಞಾನ ಮತ್ತು ಸಂಸ್ಕೃತಿಯನ್ನು ತನ್ನದಾಗಿಸಿಕೊಂಡು ಪ್ರಬುದ್ಧತೆಯನ್ನು ಗಳಿಸಿಕೊಂಡಿದ್ದಾನೆ. ಒಬ್ಬ ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಭಾವನಾತ್ಮಕ, ಸಂವಹನ ಅಷ್ಟೇ ಅಲ್ಲದೆ ಹತ್ತು ಹಲವು ಆಯಾಮಗಳ ವಿಕಾಸಕ್ಕೆ ಅವನ ಭಾಷೆಯೇ ಒಂದು ವಿಶಿಷ್ಟ ಸಾಧನ.

• **ಭಾಷೆ ನಿತ್ಯ ಪರಿವರ್ತನಶೀಲವಾದುದು:** ನಿಂತ ನೀರು ಕಲಕಾಗುತ್ತದೆ, ಸದಾ ಹರಿವ ನೀರು ಪರಿಶುದ್ಧವಾಗಿರುತ್ತದೆ ಎಂಬ ಮಾತಿನಂತೆ ಯಾವ ಭಾಷೆಯು ಬದಲಾವಣೆಗೆ ತನ್ನನ್ನು ತಾನು ತೆರೆದಿಡುತ್ತದೆಯೋ ಅದು ಜೀವಂತ ಭಾಷೆಯಾಗಿರುತ್ತದೆ. ಭಾಷೆ ಸಮಾಜದ ಜೀವಂತ ಸನ್ನಿವೇಶದಲ್ಲಿ

ಹುಟ್ಟಿ ಬೆಳೆದಿರುವುದರಿಂದ ಆ ಸಮಾಜದ ಬದಲಾವಣೆಗೆ ಅನುಗುಣವಾಗಿ ಭಾಷೆಯೂ ಬದಲಾವಣೆಯಾಗುತ್ತದೆ. ಸಾಮಾಜಿಕ ಸಂದರ್ಭಗಳು, ಸನ್ನಿವೇಶಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಮಾನವ ತನ್ನ ಭಾಷೆಯನ್ನು ರೂಪಾಂತರಗೊಳಿಸುತ್ತಾ ಬಳಸಿದ್ದಾನೆ ಮತ್ತು ಬೆಳೆಸಿಕೊಂಡಿದ್ದಾನೆ. ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ, ಕಾಲದಿಂದ ಕಾಲಕ್ಕೆ, ಆಯಾ ಸಮಾಜದ ಧರ್ಮ, ಜಾತಿ, ವೃತ್ತಿ, ರೀತಿನೀತಿಗಳಿಗೆ ಅನುಗುಣವಾಗಿ ಭಾಷೆಯು ಬದಲಾವಣೆಯಾಗುತ್ತದೆ. ಭೌಗೋಳಿಕವಾಗಿ ಪ್ರತಿ 40–45 ಕಿ.ಮೀ.ಗಳಿಗೆ ಒಂದೇ ಭಾಷೆಯಲ್ಲಿ ಸೂಕ್ಷ್ಮವಾದ ಬದಲಾವಣೆಗಳು ಅಥವಾ ವ್ಯತ್ಯಾಸಗಳು ಕಂಡುಬರುತ್ತವೆ. ಈ ರೀತಿ ಭಾಷೆ ಪ್ರತಿದಿನ ಹುಟ್ಟುತ್ತಾ, ಪ್ರತಿದಿನ ಸೂಕ್ಷ್ಮವಾಗಿ ಸ್ವಲ್ಪಮಟ್ಟಿಗೆ ಬದಲಾಗುತ್ತಾ, ಬೆಳೆಯುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾ ನಿತ್ಯ ಪರಿವರ್ತನಶೀಲವಾಗಿ ಜೀವಂತವಾಗಿರುತ್ತದೆ.

• **ಭಾಷೆಯು ಪ್ರಧಾನವಾಗಿ ಒಂದು ಸಾಮಾಜಿಕ ಕ್ರಿಯೆ:** ಭಾಷೆ ಒಂದು ಸಾಮಾಜಿಕ ಕ್ರಿಯೆ. ಸಾಮಾಜೀಕರಣವು ಸಹ ಭಾಷೆಯಿಂದಲೇ ಆರಂಭವಾಗುತ್ತದೆ ಎಂದರೆ ತಪ್ಪಾಗಲಾರದು. ಒಂದು ಭಾಷೆ ಹುಟ್ಟಿ ಬೆಳೆದು ವಿಕಾಸವಾಗಿ ಜೀವಂತವಾಗಿರಲು ಸಾಮಾಜಿಕ ಸಂಸರ್ಗ ಅತೀ ಅವಶ್ಯ. ಭಾಷೆಯೇ ಇಲ್ಲದ ಸಮಾಜವನ್ನು ಊಹಿಸಲೂ ಕಷ್ಟಸಾಧ್ಯ. ಸಮಾಜದಲ್ಲಿ ಮಾನವ ಸಂಘ ಜೀವಿಯಾಗಿರುವುದು ಭಾಷೆಯಿಂದಲೇ ಎಂದರೆ ತಪ್ಪಾಗಲಾರದು. ಆಯಾ ಸಮಾಜದ ಭಾಷೆಯು ಅಲ್ಲಿನ ಜನರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಭಾಷೆಯ ಮೂಲಕ ಸಾಮಾಜಿಕ ಅಂತರಸಂಬಂಧಗಳು ಮೂಡಿಬರುತ್ತವೆ. ಸಮಾಜದ ಜನರ ಪರಸ್ಪರ ವ್ಯವಹಾರಕ್ಕಾಗಿ ಬಳಸಲು ಮತ್ತು ಪರಸ್ಪರ ತಮ್ಮ ಭಾವನೆಗಳನ್ನು ಪ್ರಕಟಿಸಲು ಭಾಷೆಯನ್ನು ಬಳಸುತ್ತಾರೆ. ಹೀಗಾಗಿ ಭಾಷೆ ಪ್ರಧಾನವಾಗಿ ಸಾಮಾಜಿಕ ಕ್ರಿಯೆಯಾಗಿದೆ.

• **ಭಾಷೆಯು ಸಾಮಾಜಿಕ ಸಂಪರ್ಕ ಸಾಧನವಾಗಿದೆ:** ಸಮಾಜದ ಸದಸ್ಯರ ಎಲ್ಲ ವ್ಯವಹಾರಗಳನ್ನೂ ಭಾಷೆಯು ಜೀವಂತವಾಗಿಡುವುದರಿಂದ ಸಾಮಾಜಿಕ ಸಂಪರ್ಕ ಸಾಧನವಾಗಿದೆ. ಮಾನವನು ತನ್ನ ಆಲೋಚನೆಗಳನ್ನು, ವಿಚಾರಗಳನ್ನು, ಭಾವನೆಗಳನ್ನು, ಅಭಿಪ್ರಾಯಗಳನ್ನು ಭಾಷೆಯ ಮೂಲಕ ವ್ಯಕ್ತಪಡಿಸುತ್ತಾನೆ. ಭಾಷೆಯು ವ್ಯಕ್ತಿ–ವ್ಯಕ್ತಿ, ವ್ಯಕ್ತಿ–ಸಮಾಜ, ಸಮಾಜ–ಸಮಾಜ, ಸಾಮಾಜಿಕ ಸಂಸ್ಥೆಗಳು; ಈ ರೀತಿಯಾಗಿ ಇಡೀ ಜಗತ್ತನ್ನು ಯಶಸ್ವಿಯಾಗಿ ಸಂಪರ್ಕಿಸುತ್ತದೆ. ಒಂದು ಸಮಾಜದ ಆಗುಹೋಗುಗಳು, ಏಳು ಬೀಳುಗಳು, ಸಂಪ್ರದಾಯ, ಆಚಾರ–ವಿಚಾರ, ನಂಬಿಕೆಗಳು ಇನ್ನೊಂದು ಸಮಾಜಕ್ಕೆ ಪರಿಚಯವಾಗಲು ಭಾಷೆ ಅವಶ್ಯಕ ಸಂಪರ್ಕ ಸಾಧನವಾಗಿದೆ. ಅಲ್ಲದೆ ವ್ಯಕ್ತಿ ಹುಟ್ಟಿನಿಂದ ಸಾಯುವವರೆಗೆ ಆತನ ವ್ಯಕ್ತಿತ್ವ ವಿಕಾಸದ ಎಲ್ಲ ಹಂತಗಳಲ್ಲೂ ಭಾಷೆ ಬೇಕೇಬೇಕು.

• **ಭಾಷೆಯು ಸಂಸ್ಕೃತಿವಾಹಕ:** ಭಾಷೆ ಸಂಪರ್ಕ ಸಾಧನವಾಗಿರುವಂತೆ ಸಂಸ್ಕೃತಿವಾಹಕವೂ ಹೌದು. ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳು ಒಂದಕ್ಕೊಂದು ಪರಸ್ಪರ ಪೂರಕ ಹಾಗೂ ಪೋಷಕವಾಗಿವೆ. ಒಂದು ಜನಾಂಗದ ಸಂಸ್ಕೃತಿಯಲ್ಲಿನ ಭಾಷೆ, ಸಾಹಿತ್ಯ, ಶಿಕ್ಷಣ, ಹಬ್ಬಹರಿದಿನಗಳು, ಜಾತ್ರೆ ಸಂಪ್ರದಾಯಗಳು, ನಂಬಿಕೆಗಳು, ಆಚರಣೆಗಳು, ಮೇಲಾಗಿ ಜನಪದ ಇವೆಲ್ಲವುಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ತಲುಪಿಸುವ ಬಹುದೊಡ್ಡ ಜವಾಬ್ದಾರಿಯನ್ನು ಭಾಷೆ

ನಿರ್ವಹಿಸುತ್ತದೆ. ಅಷ್ಟೇ ಅಲ್ಲ ಭಾಷೆ ಒಂದು ಸಂಸ್ಕೃತಿಗೆ ಜೀವ ಕಳೆ ತಂದು ಕೊಡುತ್ತದೆ. ಭಾಷೆಯ ಮೂಲಕ ಸಂಸ್ಕೃತಿಯು ಬೆಳೆಯುತ್ತದೆ ಮತ್ತು ಸಂಸ್ಕೃತಿಯಲ್ಲಿ ಭಾಷೆ ವಿಕಾಸವಾಗುತ್ತದೆ. ಭಾಷೆಯು ಒಂದು ಸಂಸ್ಕೃತಿಯನ್ನು ಕಾಲದಿಂದ ಕಾಲಕ್ಕೆ, ಸಮಾಜದಿಂದ ಸಮಾಜಕ್ಕೆ ಪ್ರಸಾರ ಮಾಡುತ್ತದೆ. ಭಾಷೆ ಮತ್ತು ಸಂಸ್ಕೃತಿಗಳೆರಡನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಒಂದು ಮತ್ತೊಂದರಲ್ಲಿ ಬೆಸೆದುಕೊಂಡಿವೆ.

• **ಭಾಷೆಗೆ ಒಂದು ಭೌಗೋಳಿಕ ಎಲ್ಲೆ ಇರುತ್ತದೆ:** ಪ್ರತಿಯೊಂದು ಭಾಷೆಯು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಒಂದು ಭಾಷೆ ಅಸ್ತಿತ್ವದಲ್ಲಿರುವ ಪ್ರದೇಶವನ್ನು ಆ ಭಾಷೆಯ ಭಾಷಾ ಕ್ಷೇತ್ರ ಎನ್ನುತ್ತಾರೆ. ಕರ್ನಾಟಕ ರಾಜ್ಯದ ಎಲ್ಲೆಯು ಕನ್ನಡ ಭಾಷಾಕ್ಷೇತ್ರವಾಗಿದೆ. ಒಂದು ಭಾಷಾ ಕ್ಷೇತ್ರ ವಿಶಾಲವಾಗಿದ್ದರೆ ಭೌಗೋಳಿಕ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಒಂದೇ ಭಾಷೆಯು ರೂಪಾಂತರ ಹೊಂದುತ್ತದೆ ಮತ್ತು ಭಾಷೆಯು ಅಸ್ತಿತ್ವದಲ್ಲಿರುತ್ತದೆ. ಉಪಭಾಷೆಗಳು ಮೂಡುತ್ತವೆ. ಒಂದು ಭೌಗೋಳಿಕ ಕ್ಷೇತ್ರದ ಜೀವನ ಮಾರ್ಗ, ವೃತ್ತಿ, ಸಂಸ್ಕೃತಿ ಹಾಗೂ ಮಣ್ಣಿನ ಗುಣ ಆ ಪ್ರದೇಶದ ಭಾಷೆಯಲ್ಲಿ ಕಾಣಸಿಗುತ್ತದೆ.

• **ಭಾಷೆಯು ಸಂಕೀರ್ಣತೆಯಿಂದ ಸರಳತೆಯೆಡೆಗೆ ಬೆಳೆಯುತ್ತದೆ:** ಹುಟ್ಟುತ್ತಾ ಯಾವ ಭಾಷೆಯೂ ಶಿಷ್ಟವಾಗಿ, ಪರಿಪೂರ್ಣವಾಗಿ ಹುಟ್ಟಿರುವುದಿಲ್ಲ. ಪ್ರಾರಂಭದಲ್ಲಿ ಭಾಷೆಯ ಧ್ವನಿಗಳು, ಪದಗಳು ಮತ್ತು ವ್ಯಾಕರಣ ಸಂಕೀರ್ಣವಾಗಿದ್ದು, ಕ್ರಮೇಣ ಮನುಷ್ಯನು ವೈಜ್ಞಾನಿಕ ಪ್ರಯೋಗಗಳಿಂದ ಭಾಷೆಯನ್ನು ಅರ್ಥಪೂರ್ಣವಾಗಿ, ಅತಿ ಸೂಕ್ಷ್ಮವಾಗಿ ಪಳಗಿಸಿಕೊಂಡಿದ್ದಾನೆ. ಹರಕು ಮುರಕಾಗಿ ಅಪೂರ್ಣವಾಗಿ ಹುಟ್ಟಿದ ಭಾಷೆಗಳು ಕ್ರಮೇಣವಾಗಿ ಸಂಸ್ಕರಣಗೊಳ್ಳುತ್ತಾ, ಸಂಸ್ಕಾರಗೊಳ್ಳುತ್ತಾ ಧ್ವನಿ, ಪದಗಳು ಮತ್ತು ವ್ಯಾಕರಣಗಳಲ್ಲಿ ಸೂಕ್ಷ್ಮತೆಯನ್ನು, ಸರಳತೆಯನ್ನು ಪಡೆದುಕೊಂಡಿರುವುದನ್ನು ಗುರುತಿಸಬಹುದು. ಈ ರೀತಿಯಾಗಿ ಭಾಷೆಗಳು ಪ್ರಾರಂಭದಲ್ಲಿ ಸಂಕೀರ್ಣವಾಗಿದ್ದು ವಿವಿಧ ಪ್ರಯೋಗಗಳು ಮತ್ತು ಅಭ್ಯಾಸಗಳ ಮೂಲಕ ಸರಳ ಮತ್ತು ಸೂಕ್ಷ್ಮವಾಗಿ ಬೆಳೆದು ಬಂದಿವೆ.

• **ಭಾಷೆಯು ಕ್ರಮಬದ್ಧವಾಗಿ, ಅರ್ಥಪೂರ್ಣವಾಗಿರುತ್ತದೆ:** ಧ್ವನಿ ಸಂಕೇತಗಳು ಕ್ರಮವಾಗಿ, ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ಜೋಡಿಸಲ್ಪಟ್ಟು ಪ್ರಕಟವಾದಾಗ ಮಾತ್ರ ಭಾಷೆಯಾಗುತ್ತದೆ. ಭಾಷೆಯ ಪ್ರತಿಯೊಂದು ಧ್ವನಿ, ಶಬ್ದಗಳಲ್ಲಿ ವಿಶಿಷ್ಟ ರೀತಿಯ ಅರ್ಥ ಇರುತ್ತದೆ. ಆಯಾ ಭಾಷೆಯ ಜಾಯಮಾನಕ್ಕನುಗುಣವಾಗಿ ಅಳವಡಿಸಿಕೊಂಡು ಪ್ರಯೋಗಿಸಿದಾಗ ಮಾತ್ರ ಆ ಭಾಷೆ ಅರ್ಥಪೂರ್ಣವಾಗಿರುತ್ತದೆ. ಅರ್ಥರಹಿತ ಶಬ್ಧಗಳು, ಅವ್ಯವಸ್ಥಿತ ಸಂಯೋಜನೆ ಭಾಷೆಯಾಗುವುದಿಲ್ಲ. ಭಾಷೆ ಕ್ರಮಬದ್ಧವಾಗಿರುತ್ತದೆ ಮತ್ತು ಅರ್ಥಪೂರ್ಣವಾಗಿರುತ್ತದೆ. ಆದ್ದರಿಂದಲೇ ಭಾಷೆಯನ್ನು ಧ್ವನಿಸಂಕೇತಗಳ ವ್ಯವಸ್ಥಿತ ಸಂಯೋಜನೆ ಎಂದು ಕರೆಯಲಾಗಿದೆ.

• **ಭಾಷೆ ಭಾವನಾ ರೂಪಕ ಮತ್ತು ಭಾವನಾ ವಾಹಕ:** ಭಾಷೆಯು ಮಾನವನ ಅಂತರಂಗದ ಆಲೋಚನೆಗಳನ್ನು, ಭಾವನೆಗಳನ್ನು ವ್ಯವಸ್ಥಿತವಾಗಿ ರೂಪಿಸುತ್ತದೆ. ಯಾವುದೇ ವಸ್ತು, ವಿಷಯದ ಬಗ್ಗೆ ತನಗೆ ತಾನೇ ಅಥವಾ ಅನುಕರಣೆಯಿಂದ ಮನಸ್ಸಿನಲ್ಲಿ ಮೂಡಿಬರುವ ಆಲೋಚನೆಗಳು ಮನಸ್ಸಿನಲ್ಲಿ ಭಾವನೆಗಳಾಗುತ್ತವೆ. ಈ ಅವ್ಯವಸ್ಥಿತ ಭಾವನೆಗಳು ಧ್ವನಿಸಂಕೇತಗಳ ರೀತಿ ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ರೂಪಿಸಲ್ಪಡುತ್ತವೆ. ಈ ರೀತಿ ಭಾಷೆ ಭಾವನೆಗಳನ್ನು ರೂಪಿಸುತ್ತದೆ. ಭಾವನೆಗಳು ಧ್ವನಿ

ಸಂಕೇತಗಳ ಮೂಲಕ ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಹೊರಹೊಮ್ಮಿದಾಗ ಮಾತು ಆಗುತ್ತದೆ. ಮನಸ್ಸಿನಲ್ಲಿ ರೂಪಿಸಿದ ಭಾವನೆಗಳು ಮಾತಿನ ಮೂಲಕ ಹೊರಹೊಮ್ಮುತ್ತವೆ. ಭಾಷೆ ಮತ್ತು ಭಾವನೆಗೆ ಅವಿನಾಭಾವ ಸಂಬಂಧವಿದೆ. ಮನಸ್ಸಿನಲ್ಲಿ ಯೋಚನೆಗಳು, ಭಾವನೆಗಳು ಇಲ್ಲದೆ ಭಾಷೆ ಮೂಡಿಬರಲಾರದು. ಭಾವನೆ ಮತ್ತು ಆಲೋಚನೆಗಳಿಂದ ಭಾಷೆಯ ಕ್ರಿಯೆ ಸಾಧ್ಯವಾಗುತ್ತದೆ.

• **ಭಾಷೆ ಅನನ್ಯವಾಗಿದೆ:** ಪ್ರತಿಯೊಂದು ಭಾಷೆ ವಿಶಿಷ್ಟವಾಗಿದೆ. ಏಕೆಂದರೆ ಅದು ತನ್ನ ಸ್ವಂತ ಕಾರ್ಯ ಶೈಲಿಯನ್ನು ಹೊಂದಿದೆ. ಪ್ರತಿಯೊಂದು ಭಾಷೆಯು ವೈಯಕ್ತಿಕವಾಗಿ ತನ್ನದೇ ಆದ ಶಬ್ದಗಳು, ಶಬ್ದಕೋಶಗಳು ಮತ್ತು ರಚನೆಗಳು ವಿಶೇಷತೆಯನ್ನು, ಹಿರಿಮೆ ಗರಿಮೆಯನ್ನು, ಶ್ರೀಮಂತಿಕೆಯನ್ನು, ಪ್ರಾಚೀನತೆಯನ್ನು ಹೊಂದಿವೆ.

• **ಭಾಷೆ ಮೌಖಿಕವೂ ಹೌದು ಮತ್ತು ಬರಹವೂ ಹೌದು:** ಭಾಷೆ ಎರಡು ರೀತಿಯಲ್ಲಿ ಸಾಗುವಂತಹದ್ದು, ಅದು ಮಾತಿನ ಮೂಲಕವೂ ಇರುತ್ತದೆ ಮತ್ತು ಬರವಣಿಗೆಯನ್ನು ಸಹ ಹೊಂದಿರುತ್ತದೆ. ಅದೇ ರೀತಿಯಾಗಿ ಭಾಷೆಯು ಶಾಬ್ಧಿಕ ಮತ್ತು ಅಶಾಬ್ಧಿಕ ಅಥವಾ ಎರಡೂ ಇರಬಹುದು.

ಒಟ್ಟಾರೆಯಾಗಿ ಭಾಷೆಯ ಸ್ವರೂಪವನ್ನು ಗಮನಿಸುವುದಾದರೆ, ಭಾಷೆಯೆಂಬುದು ಮಾನವ ನಿರ್ಮಿತವಾದುದು, ಇದಕ್ಕೆ ಅನುಕರಣೆಯೇ ಮೂಲ.ಇದು ನಿತ್ಯ ಪರಿವರ್ತನಶೀಲವಾದುದಾಗಿದೆ.ಭಾಷೆಗೊಂದು ಸಾಮಾಜಿಕ ಮಾನ್ಯತೆ ಇದ್ದು ಅದು ಯಾರದೇ ಪಿತ್ರಾರ್ಜಿತ ಆಸ್ತಿಯಲ್ಲ. ಪ್ರತಿಯೊಂದು ಭಾಷೆಗೂ ತನ್ನದೇ ಆದ ಇತಿಹಾಸವಿದೆ.ಭಾಷೆಗೊಂದು ಅಂತಿಮ ಸ್ವರೂಪವಿರುವುದಿಲ್ಲ. ಅದು ಸದಾ ಹೊಸತನ್ನು ಸೃಜಿಸುತ್ತದೆ.ಇದು ಸಾಮಾಜಿಕ ಕ್ರಿಯೆಯಾಗಿದ್ದು ಪ್ರಾಣಿಭಾಷೆಗಿಂತ ಭಿನ್ನವಾಗಿದೆ, ಅಂತೆಯೇ ಪ್ರತಿಯೊಂದು ಭಾಷೆಗೂ ತನ್ನದೇ ಆದ ಭೌಗೋಳಿಕ ಗಡಿವ್ಯಾಪ್ತಿ ಇದೆ.

1.2 ಭಾಷಾ ಉಗಮದ ವಿಕಾಸದ ಸಿದ್ಧಾಂತಗಳು:

ಭಾಷೆ ಹೇಗೆ ಉಗಮವಾಯಿತು?ಭಾಷೆಗಳಲ್ಲಿ ಅತ್ಯಂತ ಪ್ರಾಚೀನ ಭಾಷೆ ಯಾವುದು?ಜಗತ್ತಿನ ಎಲ್ಲ ಭಾಷೆಗಳೂ ಯಾವುದರೊಂದು ಭಾಷೆಯಿಂದ ರೂಪು ತಳೆದಿವೆಯೇ? ಜಗತ್ತಿನ ಎಲ್ಲ ಭಾಷೆಗಳಿಗೂ ಮೂಲ ಭಾಷೆ ಇದೆಯೇ? ಹಾಗಿದ್ದರೆ ಯಾವುದು? ಇದು ಹೇಗೆ ಉಗಮವಾಯಿತು?ಈ ಎಲ್ಲ ಪ್ರಶ್ನೆಗಳಿಗೂ ಬಹಳ ಹಿಂದಿನಿಂದಲೂ ವಿದ್ವಾಂಸರನ್ನು ಕಾಡಿವೆ.

ಹೀಗೆ ಭಾಷೆಯ ಉಗಮದ ಕುರಿತು ಚಿಂತಿಸಲು ತೊಡಗಿದ ಜನಮನ ಅನೇಕ ದಂತಕಥೆಗಳನ್ನು, ಪುರಾಣಗಳನ್ನು, ಹುಟ್ಟು ಹಾಕಿದೆ.ಪ್ರಾರಂಭದಲ್ಲಿ ಭಾಷೆ ದೈವದತ್ತವಾದುದು, ಭಾಷೆ ಮನುಷ್ಯನಿಗೆ ದೇವರು ನೀಡಿದ ಒಂದು ವರ ಎನ್ನುವ ನಂಬಿಕೆ ಜಗತ್ತಿನಾದ್ಯಂತವಿತ್ತು.ಈಗಲೂ ಇದನ್ನು ಒಪ್ಪುವವರಿದ್ದಾರೆ.ಇಡೀ ಸೃಷ್ಟಿಯ ನಿರ್ಮಾಣಕ್ಕೆ ಕಾರಣನಾದ ಭಗವಂತನೇ ಭಾಷೆ ನಿರ್ಮಾಣಕ್ಕೂ ಕಾರಣನಾಗಿದ್ದಾನೆ. ಆದ್ದರಿಂದ ಭಾಷೆ ದೇವರ ಸೃಷ್ಟಿಯೇ ಎನ್ನುವುದು ಇವರ ವಾದ.ಈ ಕುರಿತು ಪ್ರಾಚೀನ ಭಾರತೀಯ ವಿದ್ವಾಂಸರು ಮಂಡಿಸಿದ್ದಿದೆ.ಕ್ರೈಸ್ತರ ಪ್ರಕಾರ ಶಬ್ದವೆಂಬುದು ದೇವರಿಂದಲೇ

ಹೊರಬಂದು ಅದೇ ಭಾಷೆಯಾಗಿ ರೂಪುಗೊಂಡಿದೆ.ಈ ದೈವಬಲದಿಂದಲೇ ಜನರು ಮಾತನಾಡಲು ಪ್ರಾರಂಭಿಸಿದರು, ಎನ್ನುವ ನಂಬಿಕೆ ಇರುವುದು ಅನೇಕ ಮೂಲಗಳಿಂದ ತಿಳಿದುಬರುತ್ತದೆ.ಈಜಿಪ್ಟ್ ದೇಶದ ಜನರಲ್ಲಿ ಒಂದು ನಂಬಿಕೆ ಇರುವುದರ ಕುರಿತು ಉಲ್ಲೇಖ ದೊರಕುತ್ತದೆ."ಥಾಥ್" ಎಂಬ ದೇವತೆ ಜನರಿಗೆ ಭಾಷೆಯನ್ನು ವರದಾನ ನೀಡಿದೆಯಂತೆ. ಚೀನಾ ದೇಶದಲ್ಲಿಯೂ ದೇವರಿಂದಲೇ ಮನುಷ್ಯನಿಗೆ ಭಾಷೆ ದೈವದತ್ತವಾಗಿ ಬಂದಿದೆ ಎಂಬ ನಂಬಿಕೆ ಇದೆ. ಒಟ್ಟಾರೆ ಎಲ್ಲ ದೇಶದ ಜನರಲ್ಲಿ ಭಾಷೆಯ ಉಗಮದ ಕುರಿತು ಒಂದಲ್ಲ ಒಂದು ದಂತಕಥೆಗಳಿರುವುದು ಕಂಡುಬರುತ್ತದೆ.ಈ ವಾದವೇ ಮುಂದೆ 'ದೈವಿಕ ಸಿದ್ಧಾಂತ' ಅಥವಾ ದೈವಮೂಲ ಸಿದ್ಧಾಂತವೆನಿಸಿಕೊಂಡಿದೆ.

ಈ ಸಿದ್ದಾಂತ ಒಂದೆಡೆಯಾದರೆ ಭಾಷೆ ಮಾನವನ ಪ್ರಯತ್ನದ ಫಲ ಎಂಬುದು ಇನ್ನೊಂದು ವಾದ. ಈ ವಾದದ ತಳಹದಿಯ ಮೇಲೆ ಅನೇಕ ಸಿದ್ಧಾಂತಗಳು ರೂಪು ಕಳೆದಿವೆ. ಹೀಗೆ ಚರ್ಚಿಸುತ್ತಾ ಹೋದಂತೆ ಭಾಷೆಯ ಇತಿಹಾಸ ಬಹಳ ಹಿಂದಕ್ಕೆ ಹೋಗುತ್ತದೆ. ಹರ್ಡರ್ ಎಂಬ ವಿದ್ವಾಂಸರು ಬರ್ಲಿನ್ ಅಕಾಡೆಮಿಯಲ್ಲಿ ಭಾಷೆಯ ಉಗಮದ ಬಗ್ಗೆ ಪ್ರಥಮ ಬಾರಿಗೆ ಒಂದು ಪ್ರಬಂಧ ಮಂಡಿಸಿದರು. ಇವರೇ ಪ್ರಥಮ ಬಾರಿಗೆ ಭಾಷೆ ದೈವದತ್ತವಾದುದಲ್ಲ ಎಂಬುದನ್ನು ಮಂಡಿಸಿದರು.ಭಾಷೆ ಮಾನವ ನಿರ್ಮಿತ ಎಂಬುದನ್ನು ಹೇಳಿದರು.ಇದು ಅನೇಕರ ಮನ್ನಣೆಗೆ ಪಾತ್ರವಾಯಿತು ಎಂದು ಹೇಳಬಹುದಾಗಿದೆ.ಮುಂದೆ ಅನೇಕ ಭಾಷಾ ವಿದ್ವಾಂಸರು ಭಾಷೆಯ ಉಗಮ ಕುರಿತು ಬೇರೆ ಬೇರೆ ಸಿದ್ಧಾಂತಗಳನ್ನು ಮಂಡಿಸಿದರು. 'ಭಾಷೆ ಪ್ರಕೃತಿದತ್ತವಾದುದು' ಎಂಬುದಾಗಿ 18ನೆಯ ಶತಮಾನದ ವಿದ್ವಾಂಸರು ಹೇಳಿದರು.ರೂಸ್ಸೋ ಎಂಬ ವಿದ್ವಾಂಸ 'ಭಾಷೆ ಒಂದು ಸಾಮಾಜಿಕ ಒಪ್ಪಂದ' ಎಂದು ಕರೆದನು. ಇದನ್ನು ಕಾಂಡಿಲಾಕ್ ಎಂಬ ವಿದ್ವಾಂಸ 'ಪ್ರಕೃತಿಯಲ್ಲಿ ಬಂದ ಮೊದಲ ಪುರುಷ ಮತ್ತು ಸ್ತ್ರೀ ಇವರಿಬ್ಬರು ಭಾಷೆಯಂತೆ ಇರುವ ಮತ್ತೊಂದು ಬಗೆಯ ಸಾಧನವನ್ನು ನಿರ್ಮಿಸಿಕೊಂಡಿರಬಹುದು.ಅಂದರೆ ಈ ಇಬ್ಬರ ಸ್ವಭಾವದಲ್ಲಿರುವ ಭಾವಾವೇಶದ ಫಲವಾಗಿ ಬಂದ ಉಚ್ಚಾರಗಳು, ಶಬ್ಧಗಳು, ಉತ್ಕಟ ಭಾವನೆಗಳ ಫಲವಾಗಿ ಹೊರಬಿದ್ಧ ಉದ್ಗಾರಗಳು ಇವೆಲ್ಲವುಗಳ ಫಲವಾಗಿ ಕ್ರಮೇಣ ಇ ಉದ್ಗಾರಗಳೇ ಶಬ್ಧ ಸಂಕೇತಗಳಾಗಿ ಇವು ಮುಂದೆ ಭಾಷೆಯಾಗಿ ರೂಪಗೊಂಡಿರಬಹುದು ಎಂದು ಹೇಳಿದ್ದಾನೆ'.

ಹೀಗೆ ಒಂದರ ಹಿಂದೊಂದು ಭಾಷಾ ಉಗಮದ ಸಿದ್ಧಾಂತಗಳು ಹೊರಟಿವೆ. ಜಿ. ರಿವೇಜರ 'ಸಂಪರ್ಕ ಸಿದ್ಧಾಂತ'; ಮ್ಯಾಕ್ಸಮುಲ್ಲರನ 'ಅನುರಣನ ಸಿದ್ದಾಂತ್'; ನೋರಿಯ 'ಯೋ ಹೋ ಸಿದ್ಧಾಂತ'; ವುಂಡ್ತನ 'ಸಂಜ್ಞಾ ಸಿದ್ಧಾಂತ'; ಲಿಬ್ನಿಜ್‌ನ 'ಅನುಕರಣ ಸಿದ್ಧಾಂತ'; ತೊದಲ್ನುಡಿ ಸಿದ್ದಾಂತ; ವಂಶವೃಕ್ಷ ಸಿದ್ದಾಂತ; ತರಂಗ ಸಿದ್ಧಾಂತ ಈ ರೀತಿಯಲ್ಲಿ ಹಲವಾರು ಸಿದ್ಧಾಂತಗಳು ಭಾಷಾ ಉಗಮದ ಕುರಿತು ವಿದ್ವಾಂಸರಿಂದ ಮಡಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವುಗಳು ಎಂದರೆ...

1. **ದೈವ ಮೂಲ ಸಿದ್ಧಾಂತ:** ಈ ಸಿದ್ಧಾಂತವನ್ನು ದೈವಿಕ ಸಿದ್ಧಾಂತವೆಂದೂ ಕರೆಯುತ್ತಾರೆ. ಭಾಷೆಯು ಮನುಷ್ಯನಿಗೆ ದೈವದತ್ತವಾಗಿ ಬಂದಿದೆ. ಮನುಷ್ಯನನ್ನು ಸೃಷ್ಟಿಸಿದ ದೇವರು ಆತನ ಅನುಕೂಲಕ್ಕಾಗಿ ಭಾಷೆಯನ್ನು ಸೃಷ್ಟಿಸಿದ್ಧಾನೆ ಎಂಬುದೇ ಈ ಸಿದ್ದಾಂತ. ಸೃಷ್ಟಿ, ಸ್ಥಿತಿ, ಲಯ ಕರ್ತನಾದ ದೇವರು ಪ್ರಕೃತಿಯ ಸಮಸ್ತವನ್ನು ಸೃಷ್ಟಿಸಿದಂತೆ ಭಾಷೆಯನ್ನು ಸೃಷ್ಟಿಸಿದ್ದಾನೆ ಎಂದು ಪ್ರಾಚೀನರು

ನಂಬಿದ್ದರು. ಪ್ರಾಚೀನ ಭಾರತೀಯರು ಸಂಸ್ಕೃತವನ್ನು ದೇವಭಾಷೆ ಎಂದು ಕರೆದರು, ಅಲ್ಲದೆ ಭಾಷೆಯನ್ನು 'ವಾಗ್ದೇವಿ', 'ಸಾಕಾರಮೂರ್ತಿ' ಎಂದು ದೇವರ ರೂಪ ಕೊಟ್ಟಿದ್ದಾರೆ. ಪ್ರಸಿದ್ಧ ಲಾಕ್ಷಣಿಕ ಭಟ್ಟಾಕಳಂಕನು– "ಸರ್ವಭಾಷಾಮಯೀ ಭಾಷಾ ಪ್ರವೃತಾ ಯನ್ಮುಖಾಂಬುಜಾತ್" (ಭಾಷೆಗಳೆಲ್ಲವೂ ಭಗವಂತನಿಂದಲೇ ಸೃಷ್ಟಿಯಾಗಿವೆ) ಎಂದು ಅಭಿಪ್ರಾಯ ಪಟ್ಟಿದ್ದಾನೆ. ವೈದಿಕರು ಸಂಸ್ಕೃತವು ದೇವಭಾಷೆ ಅದೇ ಎಲ್ಲ ಭಾಷೆಗಳಿಗೂ ಮೂಲಭಾಷೆ ಎಂದು ಹೇಳಿದರು. ಬೌದ್ಧರು 'ಪಾಲಿ' ಭಾಷೆಯನ್ನು, ಜೈನರು 'ಅರ್ಧ ಮಾಗದಿ'ಯನ್ನು, ಯಹೂದಿಗಳು 'ಹಿಬ್ರು' ಭಾಷೆಯನ್ನು ದೇವಭಾಷೆಯೆಂದು ವಾದಿಸಿ ಎಲ್ಲ ಭಾಷೆಗಳಿಗೂ ತಳಪಾಯವಾದ ಭಾಷೆಯೆಂದು ವಾದಿಸಿದರು. ಈಜಿಪ್ತಿಯನ್ನರೂ ತಮ್ಮ 'ಥಥ್' ಭಾಷೆ ದೇವತೆಯಿಂದ ಕರುಣಿಸಲ್ಪಟ್ಟಿದ್ದು ಎಂದು ನಂಬಿದ್ದರು. ಪ್ರಸಿದ್ಧ ಗ್ರೀಕ್ ತತ್ವಜ್ಞಾನಿ ಪ್ಲೇಟೋನ ಪ್ರಕಾರ "ಭಾಷೆ ಪ್ರಕೃತಿದತ್ತ–ವಾದದ್ದು". ಹೀಗೆ ಇವರೆಲ್ಲರ ವಾದಗಳು 'ಭಾಷೆ ದೈವದತ್ತವಾದದ್ದು' ಎಂಬ ವಾದವನ್ನು ಪುಷ್ಟೀಕರಿಸುತ್ತವೆ.

ಆದರೆ ಆಧುನಿಕ ವಿದ್ವಾಂಸರು ಭಾಷೆಯು ದೈವನಿರ್ಮಿತ ಎಂಬುದನ್ನು ಒಪ್ಪುವುದಿಲ್ಲ. ಇವರ ಪ್ರಕಾರ ಭಾಷೆಯು ಮನುಷ್ಯನ ಸ್ವಪ್ರಯತ್ನದ ಫಲ.ಇದು ಮಾನವನ ಸಹಜ ಪ್ರವೃತ್ತಿ.ತನ್ನ ಅನುಕೂಲಕ್ಕಾಗಿ ಮಾನವನೇ ರೂಪಿಸಿಕೊಂಡಿರುವ ಒಂದು ವ್ಯವಸ್ಥೆ. 'ಭಾಷೆಯು ಯಾವುದೇ ದೈವ ಸಂಭೂತದಿಂದ ಬಂದದ್ದಲ್ಲ. ಮನುಷ್ಯನು ನಿತ್ಯ ನಿರಂತರ ಪರಿಶ್ರಮದಿಂದ ಕಲಿತ ಕ್ರಿಯೆ' ಎಂಬುದಾಗಿ ನಿರ್ಣಯಕ್ಕೆ ಬಂದ ಆಧುನಿಕ ಭಾಷಾ ಶಾಸ್ತ್ರಜ್ಞರು ದೈವಮೂಲ ಸಿದ್ಧಾಂತವನ್ನು ತಿರಸ್ಕರಿಸಿದರು.

2. ಅನುಕರಣಾ ಸಿದ್ಧಾಂತ: ಅನುಕರಣೆ ಮಾನವನ ಸಹಜ ಪ್ರವೃತ್ತಿ. ಅನುಕರಣೆಯಿಂದ ಮಾನವ ಏನನ್ನು ಬೇಕಾದರೂ ಕಲಿಯಬಲ್ಲ. ಮಗು ಸಹಜವಾಗಿ ಕುಟುಂಬದವರ ನೆರೆಹೊರೆಯವರ ಅನುಕರಣೆಯಿಂದ ಕಲಿಯುತ್ತದೆ. ತನ್ನ ಪರಿಸರದಲ್ಲಿರುವ ಪ್ರಾಣಿ ಪಕ್ಷಿಗಳ ಚಲನವನ ಮತ್ತು ಮಾತನ್ನು ಸ್ವಾಭಾವಿಕವಾಗಿ ಅನುಕರಣೆ ಮಾಡುತ್ತದೆ. ಇದೇ ರೀತಿ ಆದಿಮಾನವನು ತನ್ನುದ್‌ಪರಿಸರದಲ್ಲಿ ಕೇಳಿಬರುತ್ತಿದ್ದ ಪ್ರಾಣಿಪಕ್ಷಿಗಳ ಕೂಗುಗಳನ್ನು ಮತ್ತು ವಸ್ತುಗಳ ಕಂಪನದಿಂದ ಹೊರಹೊಮ್ಮುತ್ತಿದ್ದ ಶಬ್ಧಗಳನ್ನು ಅನುಕರಿಸುತ್ತಾ ಹೋದುದರ ಫಲವೇ ಭಾಷೆ ಎಂದು ಈ ವಾದ ಹೇಳುತ್ತದೆ. ಈ ವಾದವನ್ನು ಪ್ರತಿಪಾದಿಸಿದವರು ಮೊದಲಿಗೆ ಲಿಬ್ನಿಜ್ ಎಂಬ ಭಾಷಾ ವಿಜ್ಞಾನಿ. ನಂತರ ಇ ಬಿ ಟೇಲರ್, ರೆನಿನ್, ಮುಜುಂದಾರ್ ಮುಂತಾದವರು ಈ ವಾದವನ್ನು ಒಪ್ಪಿದ್ದಾರೆ.ಇವರ ಪ್ರಕಾರ "ಮಾನವನು ವಸ್ತುಗಳು ಮತ್ತು ಪ್ರಾಣಿ ಪಕ್ಷಿಗಳ ಶಬ್ಧಗಳನ್ನು ಅನುಕರಿಸಲು ಮಾಡಿದ ಪ್ರಯತ್ನವೇ ಭಾಷೆ." ಉದಾಹರಣೆಗೆ ಕಾ ಕಾ, ಗೂ ಗೂ, ಚುಂ ಚುಂ, ಢಣ್ ಢಣ್, ಅಂಬಾ ಅಂಬಾ ಇತ್ಯಾದಿ ಶಬ್ಧಗಳನ್ನು ಮಾನವನು ಅನುಕರಿಸುತ್ತಾ ಹೊರಟಾಗ ಹೊಸಶಬ್ಧಗಳು ರೂಪಿಸಲ್ಪಟ್ಟಿವೆ. ಈ ಶಬ್ಧಗಳೇ ಕ್ರಮೇಣ ಭಾಷೆಯಾಗಿದೆ.

ಕೇವಲ ಪರಿಸರದಲ್ಲಿನ ಪ್ರಾಣಿಪಕ್ಷಿಗಳ ಕೂಗುಗಳು ಅನುಕರಣೆಯಿಂದಲೇ ಭಾಷೆಯಂತಹ ಸಂಕೀರ್ಣ ವ್ಯವಸ್ಥೆ ಮೂಡಿಬರಲಾರದು. ಅನುಕರಣಾ ಶಬ್ಧಗಳು ಭಾಷೆಯಲ್ಲಿ ಕಂಡುಬರುತ್ತವೆಯಾದರೂ ಅವೇ ಭಾಷೆಯಾಗಲಾರವು ಎಂದು ಮ್ಯಾಕ್ಸಮುಲ್ಲರ್ ಆಕ್ಷೇಪಿಸಿ ಅನುಕರಣಾ

ಸಿದ್ಧಾಂತವನ್ನು ಬೌ ಬೌ ವಾದ ಎಂದು ಕರೆದಿದ್ದಾನೆ. ಆದರೂ ಭಾಷೆಯ ಉಗಮದಲ್ಲಿ ಅನುಕರಣೆಯ ಪಾತ್ರ ಪ್ರಧಾನವಾಗಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ.

3. **ಅನುರಣನ ಸಿದ್ಧಾಂತ:** ಅನುರಣನ ಎಂದರೆ ನಮಗೆ ಕೇಳಿ ಬರುವ ಶಬ್ಧ ಅಥವಾ ನಾದ ಎಂದರ್ಥ. ನಾದದ ಆಧಾರದ ಮೇಲಿರುವ ಈ ಸಿದ್ಧಾಂತಕ್ಕೆ 'ನಾದಸಿದ್ಧಾಂತ' ಎಂಬ ಹೆಸರೂ ಇದೆ. ಭಾಷೆಗೆ 'ಅರ್ಥೋಪಯೋಗಿ ಲಕ್ಷಣವಿರುವುದು ನಿಮಗೆಲ್ಲಾ ತಿಳಿದಿದೆ. ಭಾಷೆಗೆ ನಾದೋಪಯೋಗಿ ಲಕ್ಷಣವೂ ಇದೆ' ಎಂಬುದು ಭಾಷಾ ವಿದ್ವಾಂಸರ ಅಭಿಪ್ರಾಯವಾಗಿದೆ. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತು, ಪ್ರಾಣಿಗೂ ಒಂದು ವಿಶಿಷ್ಟ ಶಬ್ಧ ಅಥವಾ ನಾದವಿರುತ್ತದೆ. ಈ ನಾದದ ಆಧಾರದ ಮೇಲೆ ಭಾಷೆ ಹುಟ್ಟಿದೆಯೆಂಬುದಾಗಿ ಮ್ಯಾಕ್ಸಮುಲ್ಲರ ಪ್ರತಿಪಾದಿಸಿದನು. ಪ್ರಕ್ರಿತಿಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ನಾದ ಹೊರಹೊಮ್ಮುತ್ತಲೇ ಇರುತ್ತದೆ. ಈ ನಾದವನ್ನು ಯಾವಾಗಲೂ ಆಲಿಸುತ್ತಿರುವ ಮಾನವ ಈ ನಾದಕ್ಕೆ ಪ್ರತಿಕ್ರಿಯಿಸುತ್ತಾ ಈ ನಾದವನ್ನು ಅನುಕರಿಸುವ ಪ್ರಯತ್ನ ಮಾಡಿದ್ದಾನೆ. ಈ ರೀತಿ ಮಾನವನ ಈ ನಾದದ ಅನುಕರಣೆಯ ಫಲವೇ ಭಾಷೆಯ ಉಗಮಕ್ಕೆ ಕಾರಣವಾಯಿತು. ನಾದಕ್ಕೆ ಅಥವಾ ಶಬ್ಧಕ್ಕೆ ಸಂಬಂಧಪಟ್ಟ ಈ ವಾದವನ್ನು ಭಾಷಾ ಶಾಸ್ತ್ರಜ್ಞರು ಡಿಂಗ್-ಡಾಂಗ್ ವಾದ ಎಂದು ಕರೆದಿದ್ದಾರೆ.

ಆದರೆ ಈ ಸಿದ್ಧಾಂತ ಟೀಕೆಗೆ ಗುರಿಯಾಗಿದೆ.ಭಾಷೆಯಲ್ಲಿರುವ ಪದಗಳೆಲ್ಲ ಈ ನಾದ ಶಬ್ಧಗಳ ಆಧಾರದ ಮೇಲೆಯೇ ಇವೆಯೇ?ಒಂದು ವೇಳೆ ಕೆಲವೊಂದು ಇದ್ದರೂ ಅವು ಭಾಷೆಯ ಉಗಮಕ್ಕೆ ಕಾರಣವಾಗಿದೆ ಎಂಬುದನ್ನು ವಾದಿಸಲು ಸಾಧ್ಯವೇ?ಆದುದರಿಂದ ಈ ವಾದ ಹುರುಳಿಲ್ಲದ್ದು ಎಂಬುದಾಗಿ ಕೆಲ ಭಾಷಾ ತಜ್ಞರು ಇದನ್ನು ಕಟುವಾಗಿ ಟೀಕಿಸಿದ್ದಾರೆ.ಇದನ್ನು ಮ್ಯಾಕ್ಸಮುಲ್ಲರ ಪ್ರಾರಂಭಿಸಿದರೂ ಕೊನೆಗೆ ಇದು ಹುರುಳಿಲ್ಲದ್ದು ಎಂಬುದಾಗಿ ಆತನೇ ಕೈಬಿಡಬೇಕಾಯಿತು.

4. **ಉದ್ಗಾರ ವಾಚಕ ತತ್ವ:** ಆದಿಮಾನವನು ಭಾವಾವೇಶಗಳಿಗೆ ಒಳಗಾದಾಗ ಸಹಜವಾಗಿಯೇ ವಿಶಿಷ್ಟ ರೀತಿಯ ಉದ್ಗಾರ, ಭಾವನೆಗಳನ್ನು ಹೊರಹೊಮ್ಮಿಸುತ್ತಿದ್ದನು. ವಿಶೇಷ ಸಂದರ್ಭಗಳಲ್ಲಿ ತನಗರಿವಿಲ್ಲದೆಯೇ ಅಪ್ರಯತ್ನಪೂರ್ವಕವಾಗಿ ಹೊರಹೊಮ್ಮುತ್ತಿದ್ದ ಈ ಶಬ್ಧಗಳು, ಉದ್ಗಾರಗಳು ಆದಿಮಾನವನ ಭಾವಭಿವ್ಯಕ್ತಿಯನ್ನು ಸಹಜವಾಗಿಯೇ ಮೂಡಿಸುತ್ತಿದ್ದವು. ಈ ರೀತಿ ಪ್ರಕಟವಾಗುತ್ತಿದ್ದ ಭಾವಭಿವ್ಯಕ್ತಿಯು ಉದ್ದೇಶಪೂರ್ವಕ ಅಥವಾ ಅಪ್ರಯತ್ನಪೂರ್ವಕವಾಗಿ ಇರಬಹುದು. ಇಂದಹ ಉದ್ಗಾರಗಳು ಕ್ರಮೇಣ ಪ್ರಯತ್ನಪೂರ್ವಕವಾಗುತ್ತಾ ಬಂದು, ಪರಿಷ್ಕಾರಗೊಂಡು ಭಾಷೆಯಾಗಿ ರೂಪಿಸಲ್ಪಟ್ಟಿದೆ ಎಂಬುದೇ ಈ ವಾದದ ತಿರುಳು. ಈ ವಾದವನ್ನು ಹಿಲ್ಮರ್, ಪೇಜೆಟ್, ಪಿಂಕರ್ ಮೊದಲಾದವರು ಮಂಡಿಸಿದರೆ ಮ್ಯಾಕ್ಸಮುಲ್ಲರ ಮತ್ತು ಹರ್ಡ ವಿರೋಧಿಸಿದರು. ಮ್ಯಾಕ್ಸಮುಲ್ಲರ ಇದನ್ನು ಪೂಹ್ ಪೂಹ್ ವಾದ ಎಂದು ಕರೆದಿದ್ದಾನೆ.

5. **ಶ್ರಮ ಪರಿಹಾರ ತತ್ವ:** ಆದಿ ಮಾನವನು ಶ್ರಮಪೂರ್ಣ ಕೆಲಸ ಮಾಡುವಾಗ ತನ್ನ ಶ್ರಮ ಪರಿಹಾರಾರ್ಥವಾಗಿ ಹೊರಡಿಸುವ ನಿಟ್ಟುಸಿರು ವಿಭಿನ್ನ ರೀತಿಯ ಒತ್ತಡಗಳಿಂದ ಬಾಯಿಯ ಮೂಲಕ ಹೊರಬರುತ್ತಿತ್ತು. ಈ ರೀತಿ ಹೊರಟ ಉಸಿರು ಬೇರೆ ಬೇರೆ ರೀತಿಯಾಗಿ ಧ್ವನಿಗಳಾಗಿ, ಶಬ್ಧಗಳಾಗಿ

ಭಾಷೆಯಾಗಿ ರೂಪಿಸಲ್ಪಟ್ಟಿದೆ ಎಂಬುದೇ ಈ ವಾದದ ತಿರುಳು. ಈ ತತ್ವವನ್ನು ಪ್ರತಿಪಾದಿಸಿದ ನಾಯಿರಿಯು ಯೋ–ಹೇ–ಹೋ ವಾದ ಎಂದು ಕರೆದಿದ್ದಾನೆ. ಸಾಮಾನ್ಯವಾಗಿ ಜನರು ಶ್ರಮದಾಯಕ ಕೆಲಸ ಮಾಡುವಾಗ; ಉದಾಹರಣೆಯಾಗಿ ಬಂಡೆಯನ್ನು ಹೊಡೆಯುವರು, ಬಟ್ಟೆ ಒಗೆಯುವರು, ಮರ ಕಡಿಯುವರು ತಮ್ಮ ಶ್ರಮ ಪರಿಹಾರಾರ್ಥವಾಗಿ ವಿವಿಧ ರೀತಿಯ ಶಬ್ಧಗಳನ್ನು ಹೊರ ಹೊಮ್ಮಿಸುತ್ತಾರೆ. ಈ ಶಬ್ದಗಳು ಪರಿಷ್ಕಾರಗೊಂಡು ಕ್ರಮೇಣ ಭಾಷೆಯಾಗಿದೆ ಎಂಬುದನ್ನು ತಿಳಿಯಬಹುದು.

6. **ಸಂಜ್ಞಾ ಭಾಷಾವಾದ:** ಭಾಷೆ ಬಳಕೆಗೆ ಬರುವುದಕ್ಕೂ ಮೊದಲು ಸಂಜ್ಞೆಗಳು ಬಳಕೆಯಲ್ಲಿದ್ದು ಮಾನವನು ಕೈ, ಬಾಯಿ, ಮುಖ ಮತ್ತು ಕಣ್ಣು ಸಂಜ್ಞೆಗಳಿಂದಲೇ ತನ್ನ ಭಾವನೆಗಳನ್ನು ಇತರರಿಗೆ ತಿಳಿಸುತ್ತಿದ್ದನು. ಇದೇ ರೀತಿ ಇತರರ ಭಾವನೆಗಳನ್ನು ಸಂಜ್ಞೆಗಳ ಮೂಲಕವೇ ಅರ್ಥ ಮಾಡಿಕೊಳ್ಳುತ್ತಿದ್ದನು ಎಂಬುದನ್ನು ಅನೇಕ ಭಾಷಾ ವಿಜ್ಞಾನಿಗಳು ಗುರುತಿಸಿದ್ದಾರೆ. ಈ ವಾದವನ್ನು ಪ್ರತಿಪಾದಿಸಿದವನು ವೂಂಟ್. ಈತನ ಪ್ರಕಾರ ಮಾನವನ ಚಿತ್ತಸ್ಥಿತಿಯು ಮೊದಲು ಆತನ ಬಾಹ್ಯ ಸಂಜ್ಞೆಗಳ ಮೂಲಕ ವ್ಯಕ್ತವಾಗುತ್ತಿದ್ದು, ಕ್ರಮೇಣ ಈ ಸಂಜ್ಞೆಗಳ ಜೊತೆಯಲ್ಲಿ ಬರುತ್ತಿದ್ದ ಧ್ವನಿಗಳು ಶಬ್ಧಗಳಾಗಿ ಪರಿಷ್ಕರಣೆಗೊಂಡು ಭಾಷೆ ಮೂಡಿ ಬಂತು ಎಂದಿದ್ದಾನೆ.

7. **ತೊದಲ್ನುಡಿ ವಾದ:** ಈ ವಾದವನ್ನು ಪ್ರತಿಪಾದಿಸಿದವರು ಎಸ್ಪರಸನ್. ಮಗು ಜನಿಸಿದ ನಾಲ್ಕಾರು ತಿಂಗಳುಗಳ ನಂತರ ತನೆ ಕೇಳುವ, ಕಾಣುವ ಕ್ರಿಯೆ, ಮಾತನ್ನು ಅನುಕರಣೆ ಮಾಡುತ್ತದೆ. ತಾಯಿ ಹಾಗೂ ಇತರರ ಮಾತುಗಳನ್ನು ಆಲಿಸುತ್ತಾ ಅನುಕರಿಸುವ ಮಗು ಅಸ್ಪಷ್ಟವಾಗಿ ತೊದಲುತ್ತಾ ಕ್ರಮೇಣ ನಿರ್ಧಿಷ್ಟ, ಸ್ಪಷ್ಟ, ಶುದ್ಧ ಹಾಗೂ ಭಾವಪೂರ್ಣ ಮಾತುಗಳಾಗುತ್ತವೆ ಎಂಬುದೇ ಈ ವಾದ.

8. **ವಂಶವೃಕ್ಷ ಸಿದ್ಧಾಂತ:** ಈ ವಾದದ ಪ್ರತಿಪಾದಕರು ಪ್ಲೀಷರ್. ಜಗತ್ತಿನಲ್ಲಿ ಸುಮಾರು 3000 ಭಾಷೆಗಳಿವೆ. ಅವು ಯಾವಯೂ ಪರಿಪೂರ್ಣವೂ ಅಲ್ಲ, ಸ್ವತಂತ್ರವೂ ಅಲ್ಲ. ಈ ವಿಶ್ವದ ಭಾಷೆಗಳಲ್ಲಿ ಧ್ವನಿ, ಉಚ್ಚಾರ ಕ್ರಮ, ರೇಖಾ ವಿನ್ಯಾಸ, ಸಂಕೇತಗಳ ಅರ್ಥದಲ್ಲಿ ಸಾಮ್ಯತೆ ಇರುವುದನ್ನು ಗುರುತಿಸುವುದು. ಆದ್ದರಿಂದ ಇವೆಲ್ಲ ಒಂದೇ ಭಾಷೆಯಿಂದ ಕವಲೊಡೆದು ವಿಕಾಸವಾಗಿವೆ ಎಂಬುದು ವಂಶವೃಕ್ಷ ಸಿದ್ಧಾಂತದ ವಾದ. ಜಗತ್ತಿನ ವಿವಿಧ ಭಾಷೆಗಳು, ಉಪಭಾಷೆಗಳು ಮೂಲದಲ್ಲಿ ಒಂದೇ ಭಾಷೆಯಿಂದ ಟಿಸಿಲೊಡೆದು ವಿಕಾಸವಾಗಿವೆ. ಭಾಷಾ ಪ್ರಪಂಚವನ್ನು ಒಂದು ಮಹಾ ವೃಕ್ಷಕ್ಕೆ ಹೋಲಿಸಿದರೆ ಮರ ಪುಟ್ಟದಾಗಿ ಹುಟ್ಟಿ ಬೆಳೆಯುತ್ತಾ ಸಾವಿರಾರು ರೆಂಬೆಗಳಾಗಿ ಕವಲೊಡೆದು ಹೆಮ್ಮರವಾಗಿರುವಂತೆ ಆರಂಭದಲ್ಲಿ ಒಂದೇ ಭಾಷೆಯಿದ್ದು ಕ್ರಮೇಣ ಮಾನವ ಸಮಾಜ ವಿಕಾಸವಾದಂತೆ ಈ ಭಾಷೆಯು ವಿವಿಧ ಭಾಷೆಗಳಾಗಿ ಕವಲೊಡೆದು ವಿಕಾಸವಾಗಿದೆ ಎಂಬುದೇ ವಂಶವೃಕ್ಷ ಸಿದ್ಧಾಂತ.

9. **ತರಂಗ ಸಿದ್ಧಾಂತ:** ವಂಶ್ವವೃಕ್ಷ ಸಿದ್ಧಾಂತದಂತೆಯೇ ತರಂಗ ಸಿದ್ಧಾಂತವೂ ಆದಿಯಲ್ಲಿ ಒಂದೇ ಭಾಷೆಯಿಂದ ಇಂದಿನ ಎಲ್ಲ ಭಾಷೆಗಳೂ ಮೂಡಿಬಂದಿವೆ ಎಂಬುದನ್ನು ಪ್ರತಿಪಾದಿಸುತ್ತದೆ. ಶಾಂತವಾಗಿರುವ ಒಂದು ಕೊಳದ ನೀರಿಗೆ ಕಲ್ಲನ್ನು ಎಸೆದಾಗ ನಿರಂತರವಾಗಿ ಸಾವಿರಾರು ತರಂಗಗಳು

ಮೂಡುವಂತೆ ಒಂದೇ ಭಾಷೆಯು ಅನೇಕ ಭಾಷೆ ಮತ್ತು ಉಪಭಾಷೆಗಳಾಗಿ ವಿಕಾಸಗೊಂಡಿದೆ ಎಂಬುದೇ ತರಂಗ ಸಿದ್ಧಾಂತ.

10. ಸಂಗೀತ ಸಿದ್ಧಾಂತ : ಆದಿಮಾನವರು ಭಾವಪರವಶವಾಗಿ ತಮಗೆ ತಾವೇ ಅವ್ಯವಸ್ಥಿತವಾಗಿ ಕೂಗುವುದು, ಕೇಕೆ ಹಾಕುವುದು ಮತ್ತು ಉದ್ಗಾರಗಳನ್ನು ಎಳೆಯುತ್ತಿದ್ದರು. ಕಾಲಕ್ರಮೇಣ ಈ ಕೂಗುಗಳು, ಹಾಡುಗಳು, ಅಭ್ಯಾಸವಾಗಿ ನಿರ್ಧಿಷ್ಟ, ಅರ್ಥಪೂರ್ಣ ಭಾಷೆಯಾಗಿದೆ ಎಂಬುದೇ ಸಂಗೀತ ಸಿದ್ಧಾಂತ. ಈ ಸಿದ್ಧಾಂತವನ್ನು ಪೂರ್ಣವಾಗಿ ನಂಬಲಿಕ್ಕಾಗುವುದಿಲ್ಲ.

11. ಇಂಗಿತ ಸಿದ್ಧಾಂತ: ಅಂತರಂಗದ ಅನುಭಗಳು ಇಂಗಿತಗಳನ್ನು ಹೇಳುವಾಗ ಹುಟ್ಟಿಕೊಂಡ ವಾದವಾಗಿದೆ. ಈ ವಾದವನ್ನು ಫಾಲಸೇಷಿಯನ್ ಭಾಷಾ ವಿದ್ವಾಂಸ ರಾಯ್ ಇದನ್ನು ಮಂಡಿಸಿದರು. 1930 ರಲ್ಲಿ ರಿಚರ್ಡ ಎಂಬುವರು ಡಾರ್ವಿನ್‌ನ ವಿಕಾಸವಾದವನ್ನು ಅನುಸರಿಸಿ 'ಹ್ಯೂಮನ್ ಸ್ಪೀಚ್' ಗ್ರಂಥದಲ್ಲಿ ಭಯ, ಭೀತಿ, ಹಸಿವು, ಅಭಿವ್ಯಕ್ತಪಡಿಸುವಾಗ ಧ್ವನಿ ಮಾಧ್ಯಮವಾಯಿತು ಎಂದಿದ್ದಾರೆ.

12. ಸಂಪರ್ಕ ಸಿದ್ಧಾಂತ: ಮಾನವನು ತನ್ನ ಸಾಮಾಜಿಕ ಸಂಪರ್ಕಕ್ಕಾಗಿಯೇ ಭಾಷೆಯನ್ನು ರೂಪಿಸಿಕೊಂಡನೆಂಬುದನ್ನು ಸಂಪರ್ಕ ಸಿದ್ಧಾಂತ ಪ್ರತಿಪಾದಿಸುತ್ತದೆ. ಮಾನವನ ಸಾಮಾಜಿಕ, ಭಾವನಾತ್ಮಕ ಸಂಪರ್ಕಗಳೇ ಭಾಷೆಯ ಉಗಮಕ್ಕೆ ಮೂಲ. ಭಾಷೆಯೆಂಬುದು ಸಂಪರ್ಕದ ಫಲ. ಆದಿಮಾನವನು ತನ್ನ ಆಲೋಚನೆ ಮತ್ತು ಅಗತ್ಯಗಳನ್ನು ಇನ್ನೊಬ್ಬರಿಗೆ ತಿಳಿಸಲು; ಇನ್ನೊಬ್ಬರ ಅನಿಸಿಕೆಗಳನ್ನು ತಾನು ತಿಳಿಯಲು ಮೊದಮೊದಲು ಸಂಜ್ಞೆಗಳು ಮತ್ತು ಶಬ್ದಗಳನ್ನೇ ಬಳಸುತ್ತಿದ್ದು ಕಾಲಕ್ರಮೇಣ ಈ ಶಬ್ಧಗಳು ಪದಗಳಾಗಿ, ಪದಗಳು ಅರ್ಥಪೂರ್ಣ ವಾಕ್ಯಗಳಾಗಿ ಭಾಷೆ ಮೂಡಿಬಂದಿದೆ ಎಂಬುದು ಈ ಸಿದ್ಧಾಂತದ ಪ್ರತಿಪಾದನೆ.

ಒಟ್ಟಾರೆಯಾಗಿ ಈ ಮೇಲಿನ ಯಾವುದೇ ತತ್ವಗಳು ಭಾಷೆಯ ಉಗಮದ ಬಗ್ಗೆ ಕರಾರುವಕ್ಕಾದ ನಿಲುವು ತಾಳಿಲ್ಲವಾದರೂ ಭಾಷೆಯ ಉಗಮ ಮತ್ತು ವಿಕಾಸದಲ್ಲಿ ಈ ತತ್ವಗಳು ಪ್ರತಿಪಾದಿಸಿರುವ ಅಂಶಗಳನ್ನು ಕಡೆಗಣಿಸಲಾಗುವುದಿಲ್ಲ. ಭಾಷೆಯಂತಹ ಒಂದು ಸಂಕೀರ್ಣ ವ್ಯವಸ್ಥೆ ಇದ್ದಕ್ಕಿದ್ದಂತೆ ಸ್ಪಷ್ಟವಾಗಿ, ಪರಿಪೂರ್ಣವಾಗಿ ಮೂಡಿ ಬಂದಿರಲು ಸಾಧ್ಯವಿಲ್ಲ. ಈ ಮೇಲಿನ ಎಲ್ಲ ಸಿದ್ಧಾಂತಗಳ ಪ್ರಯತ್ನಗಳಿಂದಲೂ ಭಾಷೆ ಹುಟ್ಟಿ ಬೆಳೆದಿರಬಹುದು. ಆದುದರಿಂದ ಭಾಷೆಯ ಉಗಮದ ಬಗ್ಗೆ ಅಸ್ತಿತ್ವದಲ್ಲಿರುವ ಈ ಎಲ್ಲಾ ತತ್ವಗಳ ವಿಶ್ವಾಸನೀಯ ಅಂಶಗಳನ್ನು ಪರಿಗಣಿಸಿ ಭಾಷೆಯ ಉಗಮ ಮತ್ತು ವಿಕಾಸವನ್ನು ತಿಳಿಯಬೇಕು.

ಈ ರೀತಿ ಅಸ್ಪಷ್ಟವಾಗಿ ಮೂಡಿಬಂದ ಭಾಷೆ ಮನುಷ್ಯನ ವಿಚಾರಶಕ್ತಿ ಬೆಳೆದಂತೆಲ್ಲಾ, ಭಾಷೆಯ ಬಳಕೆ ಹೆಚ್ಚಿದಂತೆಲ್ಲಾ ಹೆಚ್ಚು ಅರ್ಥಪೂರ್ಣವಾಗಿದೆ. ಹುಟ್ಟುತ್ತಾ ಯಾವ ಭಾಷೆಯು ಪ್ರೌಢವಾಗಿ, ಶಾಸ್ತ್ರೀಯವಾಗಿ ಮೂಡಿಬರಲಾರದು.ಮೊದಲು ಅನುಕರಣೆ, ಸಂಜ್ಞೆಗಳು, ಮಾತು, ಲಿಪಿ, ಗ್ರಂಥ ನಿರ್ಮಾಣ, ಸಾಹಿತ್ಯ ಸೃಷ್ಟಿ ಈ ರೀತಿ ಕಾಲಕ್ಕನುಗುಣವಾಗಿ ತನ್ನ ಜಾಯಮಾನಕ್ಕೆ ತಕ್ಕಂತೆ ರೂಪಾಂತರ

ಹೊಂದುತ್ತಾ ಲಿಪಿಬದ್ಧ, ವ್ಯಾಕರಣ ಶುದ್ಧವಾಗಿ ಸಫಲತೆ ಪಡೆದಿದೆ. ಭಾಷೆಯು ನಿಂತ ನೀರಲ್ಲ, ಮಾನವನ ಬುದ್ಧಿವಂತಿಕೆ ಬೆಳೆದಂತೆ, ಆತನ ಆಲೋಚನೆ, ಆಕಾಂಕ್ಷೆ, ಭಾವನೆ, ಅಗತ್ಯಗಳು ವಿಸ್ತಾರವಾದಂತೆ ಭಾಷೆಯೂ ವಿಸ್ತಾರವಾಗಿ ಬೆಳೆಯುತ್ತಿದೆ.

1.3 ಭಾಷೆಯ ಲಕ್ಷಣಗಳು ಮತ್ತು ಕಾರ್ಯಗಳು:

- ಭಾಷೆ ಸಂವಹನ ಮಾಧ್ಯಮವಾಗಿದೆ.
- ಭಾಷೆ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ಮಾಹಿತಿ ರವಾನೆಯ ಒಂದು ಅರ್ಥ.
- ಭಾಷೆ ಅನಿಯಂತ್ರಿತವಾಗಿದೆ.
- ಭಾಷೆ ತಮಾಷೆಯಾಗಿದೆ.
- ಭಾಷೆಯು ಪ್ರತಿ ರಚನೆಯಲ್ಲಿದೆ.
- ಭಾಷೆ ಯಾರ ಸ್ವತ್ತು ಅಲ್ಲ.
- ಭಾಷೆ ಧ್ವನಿ ಪ್ರಪಂಚ.
- ಭಾಷೆ ನಿರಂತರ ಪರಿವರ್ತನಶೀಲ ಅಂದರೆ ನಿರಂತರ ಬದಲಾವಣೆ ಹೊಂದುವುದು.
- ಭಾಷೆ ಅನುಕರಣೀಯವಾದದ್ದು.
- ಭಾಷೆ ನಮ್ಮ ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರುತ್ತದೆ.
- ಭಾಷೆ ನಮ್ಮ ಗುರುತನ್ನು ಅವ್ಯಕ್ತಗೊಳಿಸುತ್ತದೆ.
- ಭಾಷಾ ಶಕ್ತಿಯುತ ಮತ್ತು ಕ್ರಿಯಾಶೀಲವಾಗಿದೆ.
- ಭಾಷೆಯು ನಿಯಂತ್ರಣ ಮತ್ತು ಅಭಿವ್ಯಕ್ತಿಯ ಅರ್ಥವಾಗಿದೆ.
- ಭಾಷೆ ವ್ಯವಸ್ಥೆಗಳ ವ್ಯವಸ್ಥೆಯಾಗಿದೆ.
- ಭಾಷೆ ಅಮೂರ್ತದಲ್ಲಿ ಪರಿಗಣಿಸಲಾದ ಭಾಷಾ ಚಿಹ್ನೆಗಳು ಅಥವಾ ಸಂಕೇತಗಳ ವ್ಯವಸ್ಥೆ.
- ಭಾಷೆ ಔಪಚಾರಿಕ ಚಿಹ್ನೆಗಳು, ಶಬ್ಧಗಳು, ಸನ್ನೆಗಳ ವ್ಯವಸ್ಥೆ, ಸಂವಹನ ಚಿಂತನೆಯ ಸಾಧನವಾಗಿ ರೂಪುಗೊಂಡಿದೆ.
- ಭಾಷೆ ಪ್ರಾಥಮಿಕವಾಗಿ ಧ್ವನಿ ವ್ಯವಸ್ಥೆಯಾಗಿದೆ.
- ಭಾಷೆ ಹಲವಾರು ರೀತಿಯಲ್ಲಿ ಪ್ರಾಣಿ ಸಂವಹನದಿಂದ ಭಿನ್ನವಾಗಿದೆ.
- ಭಾಷೆ ಸಾಮಾಜಿಕ ನಡವಳಿಕೆ.
- ಭಾಷೆಯು ಶಬ್ಧಗಳ ಸಂಯೋಜನೆಯಾಗಿದೆ.
- ಭಾಷೆಯು ಅರ್ಥಗಳುಳ್ಳ ಪದಗಳನ್ನು ಹೊಂದಿದೆ.

- ಭಾಶೆಯು ವ್ಯಾಕರಣ ರಚನೆಯನ್ನು ಅನುಸರಿಸುತ್ತದೆ.
- ಭಾಷೆಯು ಮೌಖಿಕ ಮತ್ತು ಶ್ರುತ ವ್ಯವಸ್ಥೆಯನ್ನು ಹೊಂದಿದೆ.
- ಭಾಷೆಯು ಉತ್ಪಾದಕತೆ ಮತ್ತು ಬದಲಾವಣೆ ಹೊಂದುವ ಗುಣ ಹೊಂದಿದೆ.
- ಭಾಷೆಯು ಸಮಾಜದಲ್ಲಿನ ಮಾನವ ಜೀವನದ ಪ್ರತಿಯೊಂದು ಅಂಶದ ಮೇಲೂ ಪರಸ್ಪರ ಪ್ರಭಾವ ಬೀರುತ್ತದೆ.
- ಭಾಷೆ ಶಾಬ್ಧಿಕ ಮತ್ತು ಅಶಾಬ್ಧಿಕ ಅಥವಾ ಎರಡೂ ಇರಬಹುದು.

ಕಾರ್ಯಗಳು:

ಭಾಷೆ ತನ್ನದೇ ಆದ ವಿಶಿಷ್ಟ ವ್ಯವಸ್ಥೆಯನ್ನು ಹೊಂದಿದೆ, ಹೇಗಾದರೂ ಆಡುವುದೆಲ್ಲಾ ಭಾಷೆಯಾಗಲಾರದು. ಹರಿಶ್ಚಂದ್ರ ಕಾವ್ಯದ 'ಕುಲವನುಡಿವುದುನಾಲಿಗೆ' ಎಂಬಮಾತಿನಂತೆ ಭಾಷೆ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯುವ ಸಾಧನವಾಗಿದೆ. ವ್ಯಕ್ತಿಯ ಮಾತಿನಿಂದ ಅವನ ಮನಸ್ಸು ಅಳೆಯಲಾಗುತ್ತದೆ.ಮಾತು ಎನ್ನುವುದು ಮನೋಭಾಷಿಕ ಪ್ರಕ್ರಿಯೆ.ಈ ಪ್ರಕ್ರಿಯೆಯೊಂದಿಗೆ ವ್ಯಕ್ತಿ ಸಾಮಾಜೀಕರಣಗೊಳ್ಳುವಲ್ಲಿ ಭಾಷೆಯೇ ಮಾಧ್ಯಮ.ಒಂದು ಸಮಾಜದ ಸಂಸ್ಕೃತಿಯನ್ನು ಭಾಷೆ ಅಳೆಯುತ್ತದೆ. ಭಾಷೆ ಪ್ರಮುಖವಾಗಿ ಸಂವಹನ ಮಾಧ್ಯಮ, ವಿಚಾರ ವಿನಿಮಯದ ಸಾಧನ, ಸಂಸ್ಕೃತಿ ವಾಹಕ, ಭಾವನಾ ವಾಹಕ ಹೀಗೆ ಪಟ್ಟಿ ಮಾಡುತ್ತ ಹೋದರೆ ಭಾಷೆಯ ಕಾರ್ಯಗಳು ಒಂದೇ ಎರಡೇ, ಮಾನವನ ಜೀವನದ ಅವಿಭಾಜ್ಯ ಅಂಗವಾದ ಭಾಷೆ ಅವನ ಜೀವನದಲ್ಲಿ ಅವನಿಗೆ ಅರಿವಿಲ್ಲದೇ ಅನೇಕ ಕಾರ್ಯಗಳನ್ನು ಮಾಡುತ್ತದೆ. ಈ ಭಾಷೆಯ ಕಾರ್ಯಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ಐದು ಪ್ರಕಾರಗಳಲ್ಲಿ ವಿಂಗಡಣೆ ಮಾಡಬಹುದು.

i) ಸಂವಹನ ಮಾಧ್ಯಮವಾಗಿ

ii) ಮಾಹಿತಿ ಸಂಗ್ರಹಣ ಸಾಧನವಾಗಿ ಭಾಷೆ

iii) ಸಾಮಾಜೀಕರಣ ಮತ್ತು ಸಾಂಸ್ಕೃತೀಕರಣದ ಸಾಧನವಾಗಿ ಭಾಷೆ

iv) ವ್ಯಾವಹಾರಿಕ ಮತ್ತು ಆಡಳಿತ ಸಾಧನವಾಗಿ ಭಾಷೆ

v) ಬೋಧನಾ ಮಾಧ್ಯಮವಾಗಿ ಭಾಷೆ– ಇವುಗಳನ್ನು ಈಗ ಒಂದೊಂದಾಗಿ ವಿಶ್ಲೇಷಿಸೋಣ...

i) ಸಂವಹನ ಮಾಧ್ಯಮವಾಗಿ:

ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟಿನ ಪ್ರಕಾರ– "ಬರಹ ಅಥವಾಮಾತಿನಸಂಕೇತಗಳ ಮೂಲಕ ಭಾವನೆ, ಸುದ್ಧಿ, ಮನೋಭಾವಾದಿಗಳನ್ನು ತಿಳಿಸಲು ಅಥವಾ ಅರಿತುಕೊಳ್ಳಲು ಬಳಸುವ ಸಾಧನ ಅಥವಾ ಸಂಕೇತಗಳ ಪದ್ಧತಿಯೇ ಭಾಷೆ."

ಸ್ಟುರ್ಟವಾಂಟ್ ರವರ ಪ್ರಕಾರ– "ಒಂದುಸಮಾಜದಸದಸ್ಯರುಪರಸ್ಪರಸಂವಹನಕ್ಕಾಗಿ (ಕ್ರಿಯೆ–ಪ್ರತಿಕ್ರಿಯೆ) ಬಳಸುವ ಧ್ವನಿಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ."

ಈ ರೀತಿಯಾಗಿ ಭಾಷೆ ಒಂದು ಪರಿಣಾಮಕಾರಿಯಾದ ಸಂವಹನ ಮಾಧ್ಯಮ ಎಂಬುದು ಭಾಷಾ ತಜ್ಞರ ಅಭಿಪ್ರಾಯವಾಗಿದೆ.ಭಾಷೆಯು ಪ್ರಧಾನವಾಗಿ ಮನಸ್ಸಿನ ಭಾವನೆ, ಆಲೋಚನೆ, ಸ್ಥಿತಿಗಳನ್ನು ಪ್ರಕಟಪಡಿಸುವ ಒಂದು ಶಾಬ್ಧಿಕ ಕ್ರಿಯೆಯಾಗಿದೆ.

ಮನುಷ್ಯರು ಒಂದೆಡೆ ಸೇರಿ ಬದುಕುವಾಗ ಸಹಜವಾಗಿಯೇ ಸಾಮಾಜಿಕ, ಭಾನಾತ್ಮಕ ಸಂಪರ್ಕಗಳು, ವಿಚಾರ ವಿನಿಮಯಗಳು ಏರ್ಪಡುತ್ತವೆ. ಭಾಷೆ ಇಲ್ಲದಿದ್ದಲ್ಲಿ ಭಾವನಾತ್ಮಕವಾಗಿ, ಸಾಮಾಜಿಕವಾಗಿ ಪರಸ್ಪರ ಬೆರೆಯಲು ಸಾಧ್ಯವಾಗುತ್ತಿರಲಿಲ್ಲ. ಮಾನವ ಪರಸ್ಪರ ವಿಚಾರ ವಿನಿಮಯಕ್ಕಾಗಿ ಪ್ರಾಂಭದಲ್ಲಿ ಬರೀ ಶಬ್ಧ, ಸಂಜ್ಞೆಗಳನ್ನು ಬಳಸಿ ಈ ಶಬ್ಧಗಳೇ ಅರ್ಥಪೂರ್ಣವಾಗಿ ಮುಂದೆ ಇವು ಅರ್ಥಪೂರ್ಣ ವಾಕ್ಯಗಳಾಗಿ ಭಾಷೆ ಮೂಡಿ ಬಂದು ಈ ಭಾಷೆ ಪರಸ್ಪರ ಸಂವಹನದ ಅತ್ಯಂತ ಪ್ರಭಾವಶಾಲೀ ಮಾಧ್ಯಮವಾಗಿ ರೂಪುಗೊಂಡಿದೆ.

ಭಾಷೆ ಇಲ್ಲದಿದ್ದಲ್ಲಿ ಭಾವನೆಗಳನ್ನು ವ್ಯವಸ್ಥಿತವಾಗಿ ರೂಪಿಸಿ ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ. ಭಾಷೆಯ ಮೂಲಕ ಭಾವನೆಗಳು ವ್ಯವಸ್ಥಿತವಾಗಿ ಹೊರಹೊಮ್ಮಿದಾಗ ಮಾತ್ರ ಪರಸ್ಪರ ಸೂಕ್ತ ಸಂವಹನ ಸಾಧ್ಯವಾಗುತ್ತದೆ. ಭಾಷೆ ಬಲ್ಲವರೆಲ್ಲರೂ ಉತ್ತಮವಾಗಿ ಸಂವಹಿಸುತ್ತಾರೆಂದು ಹೇಳಲಾಗದು. ಇದನ್ನು ಸಂದರ್ಭೋಚಿತವಾಗಿ, ಸೂಕ್ತವಾಗಿ ಬಳಕೆ ಮಾಡುವುದು ಮುಖ್ಯ. ಸರ್ವಜ್ಞನ 'ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಹತಿಯು..', ಶರಣರ 'ನುಡಿದರೆ ಮುತ್ತಿನ ಹಾರದಂತಿರಬೇಕು', 'ಮಾತೆಂಬುದು ಜ್ಯೋತಿರ್ಲಿಂಗ' ಎಂಬಂತೆ ಸಂಪರ್ಕವಾಗಿದ್ದಲ್ಲಿ ಸಂತೋಷವನ್ನು ತರಬಲ್ಲದು.

ಸಂವಹನ ಮಾಧ್ಯಮವಾಗಿ ಭಾಷೆ ಇಡೀ ಸಮಾಜ, ಸಂಸ್ಕೃತಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. ಸಂವಹನ ಮಾಧ್ಯಮವಾಗಿರುವ 'ಭಾಷೆ' ಎಂಬ ಸಾಧನವಿರದಿದ್ದರೆ ಈ ಸಮಾಜವೇ ಇರುತ್ತಿರಲಿಲ್ಲ. ಮಾನವ ಜಗತ್ತು ಮತ್ತು ಪ್ರಾಣಿಜಗತ್ತಿಗೆ ವ್ಯತ್ಯಾಸವೇ ಇರುತ್ತಿರಲಿಲ್ಲ. ಜಗತ್ತೇ ಒಂದು ಕಾಡಾಗಿರುತ್ತಿತ್ತು.ಸಮಾಜದಿಂದ ಸಮಾಜಕ್ಕೆ ಭಾಷೆಗಳು ಬೇರೆ ಬೇರೆಯಾಗಿರಬಹುದು. ಆದರೆ ಈ ಭಾಷೆಯೆಂಬ ಮಾಧ್ಯಮದ ಮೂಲಕ ಆಯಾ ಸಮಾಜದ ವ್ಯವಹಾರಗಳು ಸಾಗುತ್ತವೆ, ಸಮಾಜ ಮುಂದುವರೆಯುತ್ತವೆ. ಸಂಸ್ಕೃತಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿ ಜಗತ್ತು ಮುನ್ನಡೆಯುತ್ತದೆ. ಈ ರೀತಿಯಾಗಿ ಪರಸ್ಪರ ಸಂವಹನಕ್ಕಾಗಿ ಮಾನವ ರೂಪಿಸಿದ 'ಭಾಷೆ' ಇಂದು ಅವನ ಸರ್ವತೋಮುಖ ಪ್ರಗತಿಗೆ, ಜಗತ್ತಿನ ಮುನ್ನಡೆಗೆ ಸಾಧನವಾಗಿದೆ.

ii) ಮಾಹಿತಿ ಸಂಗ್ರಹಣ ಸಾಧನವಾಗಿ ಭಾಷೆ:

ಭಾಷೆ ಹೇಗೆ ಸಾಮಾಜೀಕರಣದ ಮತ್ತು ಸಂಸ್ಕೃತೀಕರಣ ಹಾಗೂ ಸಂವಹನ ಮಾಧ್ಯಮವೋ ಹಾಗೆ ಮಾಹಿತಿ ಸಂಗ್ರಹಣ ಸಾಧನವೂ ಹೌದು. ಮಾಹಿತಿ ಸಂಗ್ರಹಣವು ಸಾಮಾಜಿಕ ಮುನ್ನಡೆಯಲ್ಲಿ, ಸಾಂಸ್ಕೃತಿಕ ಬದಲಾವಣೆಯ ಪ್ರಗತಿಯಲ್ಲಿ, ಹೊಸ ಹೊಸ ಆವಿಷ್ಕಾರಗಳಲ್ಲಿ, ಹಿಂದಿನ ಇತಿಹಾಸ ತಿಳಿಯುವಲ್ಲಿ, ಹಿಂದಿನ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಅರಿಯುವಲ್ಲಿ ಸಮಾಜಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲೂ ಭಾಷೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ.

ಒಂದು ಕಾಲದ ಸಂಸ್ಕೃತಿ, ನಾಗರಿಕತೆ, ಸಾಮಾಜಿಕ ಸ್ಥಿತಿಗತಿಗಳು, ಆಯಾ ಕಾಲದ ಜ್ಞಾನದ ರಾಶಿ, ಐತಿಹಾಸಿಕ ಗ್ರಂಥಗಳು, ದಾಖಲೆಗಳು, ಸಂಶೋಧನೆಗಳು, ಆವಿಷ್ಕಾರಗಳು, ರಾಜಕೀಯ–ಆರ್ಥಿಕ ಪರಿಸ್ಥಿತಿ, ಇತಿಹಾಸದ ಶ್ರೀಮಂತ ಪರಂಪರೆಯ ಎಲ್ಲ ಮಾಹಿತಿಯನ್ನು ಸಂಗ್ರಹಿಸಿ, ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ, ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿಸುವ ಬಹುದೊಡ್ಡ ಕಾರ್ಯವನ್ನು ಭಾಷೆ ಮಾಡುತ್ತದೆ.

ಮಾಹಿತಿ ಸಂಗ್ರಹಣೆಗೆ/ಯ ಸಾಧನವೆಂದರೆ ಭಾಷೆ. ಭಾಷಾ ಮಾಧ್ಯಮದ ಮೂಲಕ ಮಾಹಿತಿ ಸಂಗ್ರಹಣೆ ಮಾಡಿ ವ್ಯಕ್ತಿಯು ಬೌದ್ಧಿಕವಾಗಿ ತುಂಬಾ ಎತ್ತರಕ್ಕೆ ಬೆಳೆಯಬಹುದು.ವ್ಯಕ್ತಿಯ ಮಾನಸಿಕ ವಿಕಾಸಕ್ಕೂ ಇದು ಸಹಾಯಕ. ವಿಷಯ ಸಂಗ್ರಹಣೆಗೆ ಸಾಧನವಾದ ಭಾಷೆಯ ಮೂಲಕ ವಿಷಯಾಭ್ಯಾಸಗಳಿಗೆ, ಜ್ಞಾನಾರ್ಜನೆಗೆ, ಸೃಜನಶೀಲ ಅಭ್ಯಾಸಗಳಿಗೆ ಅನುಕೂಲವಾಗಿದೆ. ವಿಷಯ ಸಂಗ್ರಹಣೆಗೆ ಮಾಧ್ಯಮವಾಗಿ ಭಾಷೆ ಇರದಿದ್ದರೆ ಸಾಹಿತ್ಯ ಕ್ಷೇತ್ರವೆಂಬುದೇ ಇರುತ್ತಿರಲಿಲ್ಲ. ಸಾಹಿತ್ಯ ಕ್ಷೇತ್ರದ ಹುಟ್ಟು ಬೆಳವಣಿಗೆಗೆ ಭಾಷೆಯೇ ಮೂಲ ಸಾಧನವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಮಾನವನ ಎಲ್ಲ ಕ್ಷೇತ್ರಗಳ ಎಲ್ಲ ವ್ಯವಹಾರದಲ್ಲೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮಾಹಿತಿ ಸಂಗ್ರಹಣಕ್ಕೆ 'ಭಾಷೆಯೇ ಮೂಲಭೂತ ಸಾಧನವಾಗಿದೆ.'

iii) ಸಾಮಾಜೀಕರಣ ಮತ್ತು ಸಾಂಸ್ಕೃತೀಕರಣದ ಸಾಧನವಾಗಿ ಭಾಷೆ:

ಭಾಷೆ ಮಾನವನ ಜೀವನದ ಅವಿಭಾಜ್ಯ ಅಂಗವಾಗಿದೆ.ನಮ್ಮ ಅನಿಸಿಕೆಗಳನ್ನು, ಭಾವನೆಗಳನ್ನು ಭಾಷೆಯಲ್ಲಿ ವ್ಯಕ್ತಪಡಿಸುವಷ್ಟು ಸರಾಗವಾಗಿ ಮತ್ತು ಪರಿಣಾಮಕಾರಿಯಾಗಿ ಬೇರೆ ಯಾವ ಮಾಧ್ಯಮದಿಂದಲೂ ವ್ಯಕ್ತಪಡಿಸಲು ಸಾಧ್ಯವಿಲ್ಲ. ಭಾಷೆ ಒಂದು ಭೋರ್ಗರೆಯುವ ಸಾಗರವಿದ್ದಂತೆ. ಮಿತವಾದ ಧ್ವನಿ ಮತ್ತು ಪದಗಳನ್ನು ಇಟ್ಟುಕೊಂಡು ಮಾನವ ಅದೆಷ್ಟು ರೀತಿಯ ವಾಕ್ಯಗಳನ್ನು ರಚಿಸಿ ಮಾತನಾಡಬಲ್ಲ! ಮಾನವನ ಇಂದಿನ ಎಲ್ಲ ರೀತಿಯ ಪ್ರಗತಿಗೂ ಅವನ ಭಾಷೆಯೇ ಪ್ರಧಾನವಾದದ್ದು. ಭಾಷೆಯಿಂದಲೇ ನಾಗರಿಕತೆ ಬೆಳೆದು ಸಮಾಜ ನಿರ್ಮಾಣವಾಗಿದೆ. ಈ ಸಮಾಜದಲ್ಲಿ ಮಾನವ ಮಾನವನಾಗಿ, ಸಮಾಜ ಜೀವಿಯಾಗಿ ಇತರರೊಡನೆ ಬಾಳಿ ಬದುಕಲು ಸಾಧ್ಯವಾಗಿ, ಮಾನವ ಜೀವನ ಸುವ್ಯವಸ್ಥಿತವಾಗಿ ಸಾಗಿರುವುದೇ ಭಾಷೆಯ ಮೂಲಕ.

ಬ್ಲಾಕ್ ಮತ್ತು ಟ್ರೇಗರ್ ರವರು– 'ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ' ಎಂಬ ಮಾತನ್ನು ಇಲ್ಲಿ ಸ್ಮರಿಸಬಹುದು. ಭಾಷೆಯು ಸಮಾಜವೇ ಸೃಷ್ಟಿಸಿದ ಒಂದು ಸಾಮಾಜಿಕ ಪ್ರಕ್ರಿಯೆ. ಭಾಷೆಯು ಸಾಮಾಜಿಕ ವಾತಾವರಣದಲ್ಲಿ ಮಾತ್ರ ಅಸ್ಥಿತ್ವದಲ್ಲಿರುತ್ತದೆ. ಒಂದು ಭಾಷೆ ಹುಟ್ಟಿ ಬೆಳೆದು ವಿಕಾಸವಾಗಿ ಜೀವಂತವಾಗಿರಲು ಸಾಮಾಜಿಕ ಸಂಸರ್ಗ ಅತ್ಯಗತ್ಯ.ಭಾಷೆಯಿಂದಲೇ ಸಮಾಜ ಜೀವಂತವಾಗಿರುತ್ತದೆ. ಒಂದು ಸಮಾಜದಲ್ಲಿ ಸಂಘಜೀವನ ಪ್ರಾರಂಭವಾಗುವುದು ಭಾಷೆಯಿಂದಲೇ. ಆಯಾ ಸಮಾಜದ ಭಾಷೆಯು ಅಲ್ಲಿನ ಜನರನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಒಗ್ಗೂಡಿಸುತ್ತದೆ.

ಡ್ರೀವರ್ ಎಂಬ ಸಮಾಜಶಾಸ್ತ್ರಜ್ಞರ ಪ್ರಕಾರ– **"**ವ್ಯಕ್ತಿಯನ್ನುತನ್ನ ಸಾಮಾಜಿಕ ಪರಿಸರಕ್ಕೆ ಹೊಂದಿಕೊಂಡು ಒಬ್ಬ ದಕ್ಷ, ಸಹಕಾರಿ ಮತ್ತು ಮಾನ್ಯತೆ ಪಡೆದ ಸದಸ್ಯನನ್ನಾಗಿ ಮಾಡುವ ಪ್ರಕ್ರಿಯೆಯೇ ಸಾಮಾಜೀಕರಣ."

ರಾಸ್ ಅವರ ಪ್ರಕಾರ– "ಸಮಾಜದ ಸದಸ್ಯರಲ್ಲಿ ನಾವು ಒಂದು ಎಂಬ ಭಾವನೆಯು ಮೂಡಿ ನಾವೆಲ್ಲ ಕೂಡಿಯೇ ಕೆಲಸ ಮಾಡಬೇಕೆಂಬ ಇಚ್ಚೆಯನ್ನು ತಿಳಿಸುವುದೇ ಸಾಮಾಜೀಕರಣ."

ಅಂದ ಮೇಲೆ 'ಭಾಷೆ' ಎಂಬ ಮಾಧ್ಯಮವಿಲ್ಲದಿದ್ದಿದ್ದರೆ ಈ ಸಾಮಾಜೀಕರಣವೆಂಬ ಪ್ರಕ್ರಿಯೆ ನಡೆಯುತ್ತರಲೇ ಇಲ್ಲ ಅಲ್ಲವೇ?

ಸಾಂಸ್ಕೃತೀಕರಣದ ಸಾಧನವಾಗಿ ಭಾಷೆ– ಸಾಮಾಜೀಕರಣದ ಸಾಧನವಾದ ಸಾಧನಾವಾದ ಭಾಷೆಯು ಸಾಂಸ್ಕೃತೀಕರಣದ ಸಾಧನವೂ ಹೌದು.ಸಮಾಜ–ಸಂಸ್ಕೃತಿ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆಯಾ ಸಮಾಜದ ಸಂಸ್ಕೃತಿಯಿಂದಲೇ ಆ ಸಮಾಜವನ್ನು ಅಳೆಯಲಾಗುತ್ತದೆ. ನಾವು ಭಾಷೆಯ ಸ್ವರೂಪವನ್ನು ನೋಡುವಾಗ 'ಭಾಷೆಯು ಭಾವನಾ ವಾಹಕ, ಭಾವನಾ ರೂಪಕ ಹೇಗೋ ಹಾಗೆಯೇ ಸಂಸ್ಕೃತಿ ವಾಹಕವೂ ಆಗಿದೆ.'ಎಂಬುದನ್ನು ನೋಡಿದ್ದೇವೆ.

ಇ, ಬಿ.ಟೈಲರ್ ಪ್ರಕಾರ– "ಜ್ಞಾನ, ನಂಬಿಕೆ, ಕಲೆ, ನೀತಿ, ನಿಯಮ, ಸಂಪ್ರದಾಯಗಳು ಮತ್ತು ಮನುಷ್ಯನು ಸಮಾಜದ ಒಬ್ಬ ಸದಸ್ಯನಾಗಿ ಪಡೆದ ಎಲ್ಲ ಸಾಮರ್ಥ್ಯ ಮತ್ತು ಹವ್ಯಾಸಗಳನ್ನೊಳಗೊಂಡ ಒಟ್ಟು ವ್ಯವಸ್ಥೆಯೇ ಸಂಸ್ಕೃತಿ."

ಆರ್. ಲಿಂಟನ್ ಪ್ರಕಾರ– "ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸುಲಭವಾಗಿ ಸಾಗಿ ಬರುವ ಸಾಮಾಜಿಕ ಪರಂಪರೆಯೇ ಸಂಸ್ಕೃತಿ."

ಒಂದು ಜನಾಂಗದ ಸಂಸ್ಕೃತಿಯಲ್ಲಿ ಅಲ್ಲಿನ ಜನರ ಜೀವನ, ಭಾಷೆ, ರೀತಿ–ನೀತಿ, ಆಚಾರ–ವಿಚಾರ, ನಡುವಳಿಗಳು, ಸಾಹಿತ್ಯ, ಶಿಕ್ಷಣ ಈ ಮುಂತಾದವುಗಳು ಮಹತ್ವದ ಪಾತ್ರ ವಹಿಸುತ್ತವೆ, ಮತ್ತು ಇವುಗಳಲ್ಲಿ ಭಾಷೆ ಪ್ರಧಾನ ಪಾತ್ರ ವಹಿಸುತ್ತದೆ. ಒಂದು ಸಂಸ್ಕೃತಿ ಬೆಳೆದು ವಿಕಾಸವಾಗುವಲ್ಲಿ ಭಾಷೆಯು ವಿಶೇಷ ಪಾತ್ರ ವಹಿಸುತ್ತದೆ. ಒಂದು ಸಂಸ್ಕೃತಿಯ ಜೀವಕಳೆಗೆ ಭಾಷೆಯೇ ಮೂಲ. ಭಾಷೆಯ ಮೂಲಕ ಸಂಸ್ಕೃತಿ ಬೆಳೆಯುತ್ತದೆ, ಮತ್ತು ಸಂಸ್ಕೃತಿಯಲ್ಲಿಯೇ ಭಾಷೆ ವಿಕಾಸವಾಗುತ್ತ ಸಾಗುತ್ತದೆ. ಭಾಷೆಯು ಒಂದು ಸಂಸ್ಕೃತಿಯನ್ನು ಕಾಲದಿಂದ ಕಾಲಕ್ಕೆ, ಪೀಳಿಗೆಯಿಂದ ಪೀಳಿಗೆಗೆ, ಸಮಾಜದಿಂದ ಸಮಾಜಕ್ಕೆ ಪ್ರಸರಣ ಮಾಡುತ್ತಾ ಸಾಗುತ್ತದೆ. ಭಾಷೆ ಮತ್ತು ಸಂಸ್ಕೃತಿಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ ಇವೆರಡೂ ಪೂರಕ ಮತ್ತು ಪೋಷಕ.

ಈಗಾಗಲೇ ಹೇಳಿದಂತೆ ಸಾಮಾಜಿಕ ಪರಂಪರೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹರಿದು ಬರಬೇಕಾದರೆ ಈ ಪ್ರಕ್ರಿಯೆ ಭಾಷೆಯಿಂದ ಮಾತ್ರ ನಡೆಯಲು ಸಾಧ್ಯ. ಮಾನವನನ್ನು ಪರಿಪೂರ್ಣತೆಯತ್ತ ಕೊಂಡೊಯ್ಯಲು ಸಹಕರಿಸುವ ಮಾಧ್ಯಮ ಭಾಷೆ. ಭಾಷೆ ಮತ್ತು ಮಾನವನ ಸಂಸ್ಕೃತಿಯನ್ನು ಬೇರ್ಪಡಿಸಲು ಸಾಧವೇ ಇಲ್ಲ. ಆಯಾ ಸಮಾಜದ ಭಾಷೆಯು ಅಲ್ಲಿನ

ಜನರನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಭಾವಪೂರ್ಣವಾಗಿ ಒಗ್ಗೂಡಿಸುವ ಪರಿಣಾಮಕಾರಿ ಮಾಧ್ಯಮವಾಗಿದೆ.

iv) ವ್ಯಾವಹಾರಿಕ ಮತ್ತು ಆಡಳಿತ ಸಾಧನವಾಗಿ ಭಾಷೆ:

ಭಾಷೆಯು ಅಭಿವ್ಯಕ್ತಿಯ ಸಾಧನವಾಗಿರುವಂತೆ ಸಮಾಜದ ಸಂಪರ್ಕ ಸಾಧನವೂ ಆಗಿದೆ. ಸಾಮಾಜದ ಸದಸ್ಯರ ಎಲ್ಲ ವ್ಯವಹಾರಗಳೂ ಭಾಷೆಯ ಮೂಲಕ ಜೀವಂತವಾಗಿ ಸಂವಹನಗೊಳ್ಳುತ್ತಿರುತ್ತವೆ. ಸಮಾಜಜೀವಿಯಾದ ಮಾನವನು ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು, ಸಾಮಾಜಿಕ ಸಂಸ್ಥೆಗಳ ಜೊತೆಯಲ್ಲಿ ಸಕ್ರೀಯವಾಗಿ ವ್ಯವಹರಿಸಲು, ದೈನಂದಿನ ವ್ಯವಹಾರ ಮಾಡಲು, ಅಭಿಪ್ರಾಯ ಪ್ರಕಟಿಸಲು ಭಾಷೆ ಅತ್ಯಂತ ಪರಿಣಾಮಕಾರಿಯಾದ ಸಾಧನವಾಗಿದೆ. ಭಾಷೆ ಇಲ್ಲದೆ ಮಾನವ ಜೀವನದ ವ್ಯವಹಾರದ ಒಂದು ಕಡ್ಡಿಯೂ ಅಲುಗಾಡಲಾರದು.ಭಾಷೆಯು ವ್ಯಕ್ತಿ ಮತ್ತು ವ್ಯಕ್ತಿ, ವ್ಯಕ್ತಿ ಮತ್ತು ಸಮಾಜ, ಸಮಾಜ ಮತ್ತು ಸಮಾಜ, ಸಮಾಜ ಮತ್ತು ರಾಷ್ಟ್ರ ಈ ರೀತಿಯಾಗಿ ಇಡೀ ಜಗತ್ತನ್ನು ಯಶಸ್ವಿಯಾಗಿ ಸಂಪರ್ಕಿಸಿ ವ್ಯವಹರಿಸುವ ಮಾಧ್ಯಮವಾಗಿದೆ.

ಅತಿ ಸಾಮಾನ್ಯ ಮನುಷ್ಯನ ಸಾಮಾನ್ಯ ಕೆಲಸ ಕಾರ್ಯಗಳಿಂದ, ವ್ಯವಹಾರಗಳಿಂದ ಹಿಡಿದು ಉದ್ದಾಮ ಪಂಡಿತರ ಉನ್ನತ ಮಟ್ಟದ ವ್ಯವಹಾರಗಳಿಗೂ ಭಾಷೆಯೇ ಆಧಾರವಾಗಿದೆ.ಹೀಗಾಗಿ ಭಾಷೆಯು ಕಾಲ ದೂರಗಳನ್ನು ಗೆದ್ದು ಇಡೀ ಮಾನವ ಜನಾಂಗವನ್ನು ಸಂಪರ್ಕಿಸುವ ಸಾಧನವಾಗಿದೆ.ಭಾಷೆಯಿಲ್ಲದಿದ್ದರೆ ವ್ಯವಹಾರಗಳೂ ಇಲ್ಲ, ಜನಜೀವನವೂ ಇಲ್ಲ ಎಂಬಂತಾಗುವುದು ನಿಶ್ಚಿತ.

ಆಡಳಿತ ಮಾಧ್ಯಮದ ಸಾಧನವಾಗಿ ಭಾಷೆಯ ಪಾತ್ರವನ್ನು ನೋಡುವುದಾದರೆ, ಸಾಮಾನ್ಯವಾಗಿ ಒಂದು ಪ್ರದೇಶದ ಬಹು ಸಂಖ್ಯಾತರ ಆಡು ಭಾಷೆಯೇ ಆ ಪ್ರದೇಶದ ಆಡಳಿತ ಭಾಷೆಯಾಗಿ ಆಯ್ಕೆ ಮಾಡಿರುತ್ತಾರೆ. ಇದು ಸರಕಾರದ ಬಹುದೊಡ್ಡ ಜವಾಬ್ದಾರಿಯಾಗಿದೆ. ಆ ಪ್ರದೇಶದಲ್ಲಿ ಎಷ್ಟೇ ಉಪಭಾಷೆಗಳಿದ್ದರೂ ಬಹುಸಂಖ್ಯಾತರ ಭಾಷೆಯೇ ಆಡಳಿತ ಭಾಷೆಯೆನಿಸಲು ಕಾರಣವೆಂದರೆ ಆ ಭಾಷೆಯು ಆ ಪ್ರದೇಶದಲ್ಲಿ ಎಲ್ಲ ಉಪಭಾಷೆಯವರನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಭಾವನಾತ್ಮಕವಾಗಿ ಬೆಸೆದಿರುತ್ತದೆ. ಆ ಪ್ರದೇಶದ ಜನಾಂಗದ ಜೀವವಾಹಿನಿಯಾಗಿ ಎಲ್ಲ ಜನರನ್ನು ಅದು ಸಂಪರ್ಕಿಸುತ್ತದೆ. ಆ ಸಮಾಜದ ಸಾಮಾಜಿಕ, ಶೈಕ್ಷಣಿಕ ಮತ್ತು ಆಡಳಿತ ಕ್ಷೇತ್ರದಲ್ಲಿ ಆ ಭಾಷೆ ಬಹುಮುಖ್ಯ ಪಾತ್ರವಹಿಸುತ್ತದೆ.

ಮೇಲೆ ಹೇಳಿದಂತೆ ಎಲ್ಲ ವ್ಯವಹಾರಗಳಿಗೂ ಹಾಗೂ ಆಡಳಿತಕ್ಕೂ ಮೂಲ ಸಾಧನವಾಗಿರುವುದು ಭಾಷೆ. ಈ ಭಾಷೆಯಿಂದಲೇ ಎಲ್ಲ ಆಡಳಿತ ವ್ಯವಹಾರಗಳು ಸಾಗುತ್ತವೆ. ಲಿಖಿತ ನೀತಿ–ನಿಯಮ, ಕಾನೂನು–ಕಟ್ಟಳೆಗಳು, ಆಡಳಿತ ಮಾರ್ಗದರ್ಶಿಯಾಗಿರುತ್ತವೆ. ಉದಾ:ಸಂವಿಧಾನವಿದ್ದಂತೆ. ಪ್ರಜಾಪ್ರಭುತ್ವದ ಆಡಳಿತ ಸುಗಮವಾಗಿ ಸಾಗಲು ಭಾಷೆಯು ಲಿಖಿತವಾಗಿ ಮತ್ತು ಅಲಿಖಿತವಾಗಿ ಅವಶ್ಯಕವಾಗಿ ಬೇಕೇ ಬೇಕು.

v) ಬೋಧನಾ ಮಾಧ್ಯಮವಾಗಿ ಭಾಷೆ:

ಶಿಕ್ಷಕ ಒಂದು ವಿಷಯವನ್ನು ತನ್ನ ಶಿಷ್ಯಕೋಟಿಗೆ ಪ್ರಸರಣ ಮಾಡುವುದು ಶಿಕ್ಷಣ. ಶಿಕ್ಷಣದ ಪ್ರಕ್ರಿಯೆಯಲ್ಲಿ ಬೋಧನೆ ಮತ್ತು ಕಲಿಕೆ ನಡೆಯುವುದು. ಈ ಬೋಧನೆ–ಕಲಿಕೆ ಪ್ರಕ್ರಿಯೆಯು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ನಡೆಯಲು ಒಂದು ಭಾಷೆ ಅತೀ ಅವಶ್ಯಕ. ಭಾಷೆಯಿಲ್ಲದೆ ಶಿಕ್ಷಣವೇ ಇಲ್ಲ ಅಂದಮೇಲೆ ಬೋಧನೆ ಇನ್ನೆಲ್ಲಿಂದ. ಭಾಷೆ ಬೋಧನಾ ಮಾಧ್ಯಮವಾಗಿ ಬಹುಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಭಾಷೆ ಎಂಬ ಮಾಧ್ಯಮವಿರದಿದ್ದರೆ ಬೋಧನೆ, ಶಿಕ್ಷಣ ಎಂಬ ಪದಗಳ ನಿರ್ಮಾಣವೇ ಆಗುತ್ತಿರಲಿಲ್ಲ.

ಶಿಕ್ಷಣವೆಂಬುದು ಒಂದು ಪ್ರಕ್ರಿಯೆ. ಇದು ಕ್ರಿಯೆ–ಪ್ರತಿಕ್ರಿಯೆಗಳನ್ನು ಒಳಗೊಂಡಿದೆ. ಈ ಕ್ರಿಯೆ–ಪ್ರತಿಕ್ರಿಯೆಗಳಿಗೆ ಪರಿಣಾಮಕಾರೀ ಸಾಧನ ಭಾಷೆಯಾಗಿದೆ. ಹಿಂದೆ ಪ್ರಾಚೀನ ಕಾಲದಲ್ಲಿ ಒಂದು ಚಿಕ್ಕ ಭಾಷಾ ದೋಷವೂ ಸರಸ್ವತಿ ದ್ರೋಹವೆಂದು ಪರಿಗಣಿಸಲಾಗುತ್ತಿತ್ತು. ಉಚ್ಚಾರ ಸ್ಪಷ್ಟತೆ, ಅಭಿವ್ಯಕ್ತಿಗೆ ತುಂಬಾ ಮಹತ್ವವಿತ್ತು. ಭಾಷೆಯನ್ನು ಸರಸ್ವತಿಯ ರೂಪ, ದೇವಿ, ವಾಗ್ದೇವಿ ಎಂದು ಭಾವಿಸಲಾಗಿತ್ತು. ಈಗಲೂ ಈ ಭಾವನೆ ಇದೆ.

ಋಗ್ವೇದದ ಪ್ರಕಾರ– "ಮನುಷ್ಯನನ್ನು ಸ್ವಾವಲಂಬಿ ಮತ್ತು ನಿಸ್ವಾರ್ಥನನ್ನಾಗಿ ಮಾಡುವುದೇ ಶಿಕ್ಷಣ."

ಪಾಣಿನಿಯ ಪ್ರಕಾರ– "ನಿಸರ್ಗದಿಂದ ನಾವು ಪಡೆಯುವ ತರಬೇತಿಯೇ ಶಿಕ್ಷಣ."

ಗಾಂಧೀಜಿ ಪ್ರಕಾರ– "ಮಗು ಮತ್ತು ಮನುಷ್ಯನಲ್ಲಿ ಶರೀರ, ಮನಸ್ಸು, ಮತ್ತು ಆತ್ಮದಲ್ಲಿ ಹುದುಗಿರುವ ಅತ್ಯುತ್ತಮವಾದುದನ್ನು ಹೊರತೆಗೆಯುದೇ ಶಿಕ್ಷಣ."

ಈ ಮೇಲಿನ ಎಲ್ಲ ರೀತಿಯ ಪ್ರಕ್ರಿಯೆಗೂ ಭಾಷೆಯೇ ಮಾಧ್ಯಮ. ಭಾಷೆಯೆಂಬ ಮಾಧ್ಯಮವಿಲ್ಲದಿದ್ದಲ್ಲಿ ಗುರುವಿನ ಅಭಿವ್ಯಕ್ತಿಯಾಗಲೀ, ಶಿಷ್ಯರ ಪ್ರತಿಕ್ರಿಯೆಯಾಗಲೀ, ದ್ವಿಮುಖ ಸಂವಹನವಾಗಲೀ ಸಾಧ್ಯವಿಲ್ಲ. ಒಟ್ಟಾರೆಯಾಗಿ ಬೋಧನಾ ಪ್ರಕ್ರಿಯೆಯೇ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ, ದೈಹಿಕ–ಮಾನಸಿಕ, ಭಾವನಾತ್ಮಕ ವಿಕಾಸಕ್ಕೆ ಶಿಕ್ಷಣವು ಪರಿಣಾಮಕಾರೀ ಸಾಧನವಾಗಿದೆ. ಈ ಪರಿಣಾಮಕಾರೀ ಮಾಧ್ಯಮ ಭಾಷೆಯಾಗಿದೆ.

ಹೀಗೆ ಒಂದು ಮಾಧ್ಯಮವಾಗಿ 'ಭಾಷೆ' ವ್ಯಕ್ತಿಯ ವಿವಿಧ ವ್ಯವಹಾರಗಳಲ್ಲಿ ಒಟ್ಟಾರೆ ಅವನ ಸರ್ವತೋಮುಖ ಪ್ರಗತಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

1.4 ಮಾನವ ಭಾಷಾ ವೈಶಿಷ್ಟ್ಯಗಳು ಮತ್ತು ಭಾಷಾ ಅಧ್ಯಯನದ ಅವಶ್ಯಕತೆ:

ಭಾಷಾ ಶಾಸ್ತ್ರಜ್ಞ ಪಾಂಡುರಂಗ ಹೆಗಡೆ ಅವರ ಲೇಖನದಿಂದ: ಭಾಷೆಗಳ ವೈವಿಧ್ಯತೆಯ ಪರಂಪರೆಯನ್ನು ಹೊಂದಿರುವ ವಿಶ್ವದ ವಿಶಿಷ್ಟ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಭಾರತದ ಸಂವಿಧಾನವು 22 ಅಧಿಕೃತ ಭಾಷೆಗಳನ್ನು ಗುರುತಿಸಿದೆ. ಬಹುಭಾಷಾವಾದವು ಭಾರತದಲ್ಲಿನ ಜೀವನ ವಿಧಾನವಾಗಿದೆ, ಏಕೆಂದರೆ ದೇಶದ ವಿವಿಧ ಭಾಗಗಳ ಜನರು ತಮ್ಮ ಜೀವಿತಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ಕಲಿಯುತ್ತಾರೆ. ಅಧಿಕೃತವಾಗಿ 122 ಭಾಷೆಗಲಿದ್ದರೂ,

ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾವು 780 ಭಾಷೆಗಳನ್ನು ಗುರುತಿಸಿದೆ. ಅವುಗಳಲ್ಲಿ 50 ಭಾಷೆಗಳು ಕಳೆದ 5 ದಶಕಗಳಲ್ಲಿ ಅಳಿದುಹೋಗಿವೆ.

ಸಂವಿಧಾನದಿಂದ ಗುರುತಿಸಲ್ಪಟ್ಟ 22 ಭಾಷೆಗಳೆಂದರೆ– ಅಸ್ಸಾಮಿ, ಬಂಗಾಳಿ, ಬೋಡೋ, ಡೋಗ್ರಿ, ಗುಜರಾತಿ, ಹಿಂದಿ, ಕಾಶ್ಮೀರಿ, ಕನ್ನಡ, ಕೊಂಕಣಿ, ಮೈಥಿಲಿ, ಮಲಯಾಳಂ, ಮಣಿಪುರಿ, ಮರಾಠಿ, ನೇಪಾಳಿ, ಓರಿಯಾ, ಪಂಜಾಬಿ, ಸಂಸ್ಕೃತ, ಸಂತಾಲಿ, ಸಿಂಧಿ, ತಮಿಳು, ತೆಲಗು, ಮತ್ತು ಉರ್ದುವನ್ನು ಸಂವಿಧಾನದ 8ನೆಯ ಅನುಸೂಚಿಯಲ್ಲಿ ಸೇರಿಸಲಾಗಿದೆ.

ಸಂಸ್ಕೃತ, ತಮಿಳು, ಕನ್ನಡ ಮತ್ತು ತೆಲಗು ಭಾಷೆಗಳು ಭಾರತ ಸರಕಾರದಿಂದ ವಿಶೇಷ ಸ್ಥಾನಮಾನ ಮತ್ತು ಮಾನ್ಯತೆಯೊಂದಿಗೆ ಶಾಸ್ತ್ರೀಯ ಭಾಷೆಯಾಗಿ ಗುರುತಿಲ್ಪಟ್ಟಿವೆ. ಶಾಸ್ತ್ರೀಯ ಭಾಷೆಗಳು 1000 ವರ್ಷಗಳಿಗಿಂತಲೂ ಹೆಚ್ಚಿನ ಲಿಖಿತ ಮತ್ತು ಮೌಖಿಕ ಇತಿಹಾಸವನ್ನು ಹೊಂದಿವೆ.

ಒಂದು ಭಾಷೆ ಉತ್ತಮವೆಂದು ಗುರುತಿಸಿಕೊಳ್ಳಬೇಕಾದರೆ, ಆ ಭಾಷೆಯಲ್ಲಿ ಉತ್ತಮಾಂಶಗಳು ಇರಬೇಕು. ಭಾಷಾ ಶಾಸ್ತ್ರಜ್ಞ ಹಾಕೆಟ್ ಅವರು ಈ ಕೆಳಗಿನಂತೆ ಭಾಷೆಯ ವೈಶಿಷ್ಟ್ಯಗಳನ್ನು ಗುರುತಿಸಿದ್ದಾರೆ.

- **ದ್ವಿವಿಧತೆ (Duality):** ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳು ಎರಡು ಅಂಶಗಳನ್ನು ಹೊಂದಿರುತ್ತವೆ. ಒಂದು ಧ್ವನಿ ಮತ್ತೊಂದು ಅರ್ಥ. ಇವು ಶಬ್ಧಕ್ಕೆ ಒಂದು ಆಂತರಿಕ ರೂಪವನ್ನು ಮತ್ತೊಂದು ಬಾಹ್ಯ ರೂಪವನ್ನು ನೀಡುತ್ತವೆ. ಇವುಗಳನ್ನೇ ಅಭಿವ್ಯಕ್ತಿ (expression) ಮತ್ತು ಆಶಯ (ವಿಷಯ ವಸ್ತು) (content) ಎನ್ನುತ್ತಾರೆ. ಭಾಷೆ ಹೀಗೆ ಎರಡು ಅಂಶಗಳನ್ನು ಪಡೆದುಕೊಂಡಿರುವುದಕ್ಕೆ ದ್ವಿವಿಧತೆ ಎನ್ನುತ್ತಾರೆ. ಇದು ಭಾಷಾ ವೈಶಿಷ್ಟ್ಯತೆಯ ಪ್ರಥಮ ಲಕ್ಷಣವಾಗಿದೆ. ಉದಾ; 'ಕೋಲು' ಎಂಬ ಶಬ್ಧದಲ್ಲಿ ಕ್,ಓ,ಲ್,ಉ ಎಂಬ ನಾಲ್ಕು ಧ್ವನಿಗಳಿದ್ದು ಇವು ಶಬ್ಧದ ಧ್ವನಿ ರೂಪವನ್ನು ನಿರ್ಮಿಸಿವೆ. ಈ ಧ್ವನಿ ರೂಪ ಒಂದು ವಸ್ತುವನ್ನು ಸೂಚಿಸುತ್ತದೆ. ಈ ಅರ್ಥವೇ ಅದರ ಅಂತಃರೂಪ ಅಥವಾ ಆಂತರಿಕ ರೂಪವನ್ನು ನಿರ್ಮಿಸಿದೆ. ಹೀಗೆ ಶಬ್ಧ ಒಂದು ಮುಖವಾದರೆ ಅದರ ಮತ್ತೊಂದು ಮುಖ ಅರ್ಥ. ಹೀಗೆ ಪ್ರತಿಯೊಂದು ಭಾಷೆಯ ಪದಗಳು ತನ್ನದೇ ಆದ ಧ್ವನಿ ಮತ್ತು ಅರ್ಥಗಳೆಂಬ ಎರಡು ಅರ್ಥಗಳನ್ನು ಹೊಂದಿರುವುದೇ ಭಾಷೆಯ ದ್ವಿವಿಧತೆ ಎನಿಸುತ್ತದೆ.

- **ಉತ್ಪಾದಕತೆ (Productivity):** ಭಾಷಾ ವೈಶಿಷ್ಟ್ಯಗಳಲ್ಲಿ ಉತ್ಪದಕತೆಯು ಒಂದು ಪ್ರಮುಖವಾದುದಾಗಿದೆ. ಯಾವುದೇ ಸಮಾಜದಲ್ಲಿ ಹೊಸ ಹೊಸ ಆವಿಷ್ಕಾರಗಳು ಆದಂತೆಲ್ಲ ಅವುಗಳನ್ನು ಗುರುತಿಸಲು ಹೊಸ ಹೊಸ ಶಬ್ದಗಳು ಆ ಜನರ ಭಾಷೆಯಲ್ಲಿ ಸೃಷ್ಟಿಯಾಗುತ್ತಿರುತ್ತವೆ. ಒಂದು ವೇಳೆ ಪರಭಾಷೆಯಲ್ಲಿ ಈಗಾಗಲೇ ಈ ಕುರಿತು ಶಬ್ಧಗಳಿದ್ದರೆ ಅಂತಹ ಭಾಷೆಯಿಂದ ನೇರವಾಗಿಯೋ ಅಥವಾ ಭಾಷಾಂತರಿಸಿಯೋ ಅವುಗಳನ್ನು ಸ್ವೀಕರಿಸುತ್ತಾರೆ (ಭಾಷಾ ಸ್ವೀಕರಣ). ಮತ್ತೆ ಕೆಲವೊಮ್ಮೆ ಹಳೆಯ ರೂಪಗಳು ಹೊಸ ಅರ್ಥ ಪಡೆದು ಬಳಕೆಯಾಗುವುದೂ ಇದೆ. ಹೀಗೆ ವಸ್ತು, ವಿಷಯ, ವಿಚಾರಗಳನ್ನು ನಿರ್ದೇಶಿಸಲು ಹೊಸ ಹೊಸ ಭಾಷಾ ಪ್ರಯೋಗಗಳು ಆಗುವವು. ಹೊಸ ಶಬ್ಧಗಳು ನಿರ್ಮಾಣವಾಗುವುದರ ಜೊತೆಗೆ ಕೆಲವೊಮ್ಮೆ ಹೊಸ ಧ್ವನಿಗಳೂ ಭಾಷೆಗೆ ಸೇರ್ಪಡೆಯಾಗುತ್ತವೆ. ಇದು ಜೀವಂತ ಭಾಷೆಯ ಗುಣವಾಗಿದೆ. ಭಾಷೆ ಹೀಗೆ ಶಬ್ಧ ನಿರ್ಮಿಸಲು

ಪಡೆದಿರುವ ಶಕ್ತಿಯನ್ನೇ ಅದರ ಉತ್ಪಾದಕ ಗುಣ ಎಂದು ಗುರುತಿಸುತ್ತಾರೆ.ಕನ್ನಡದಲ್ಲಿ ಇತ್ತೀಚೆಗೆ ಟೆಲಿವಿಜನ್ ಗೆ ದೂರದರ್ಶನ, ಕಂಪ್ಯೂಟರ್ ಗೆ ಗಣಕಯಂತ್ರ, ಇಂಟರ್ನೆಟ್ ಗೆ ಅಂತರಜಾಲ, ಮೊಬೈಲ್ ಗೆ ಜಂಗಮವಾಣಿ ಮುಂತಾದ ಶಬ್ಧಗಳು ಸೃಷ್ಟಿಅಯಾಗಿವೆ. ಹೀಗೆ ಅಗತ್ಯ ಬಿದ್ದಾಗಲೆಲ್ಲ ಹೊಸ ಶಬ್ಧಗಲನ್ನು ಸೃಷ್ಟಿಸುವ ಭಾಷೆಯ ಶಕ್ತಿಯೇ ಉತ್ಪಾದಕತೆ.

- **ಯಾದೃಚ್ಚಿಕತೆ (Arbitrariness)**: ಭಾಷಾ ವೈಶಿಷ್ಟ್ಯಗಳಲ್ಲಿ ಯಾದೃಚ್ಚಿಕತೆಯು ಒಂದಾಗಿದೆ. ಭಾಷೆಯಲ್ಲಿ ಶಬ್ಧಗಳಿಗೆ ಅರ್ಥ ರೂಢಿಗತವಾಗಿ ಬಂದಿರುತ್ತದೆ. ಸಮಾಜದಲ್ಲಿ ಜನರು ಒಪ್ಪಿಕೊಂಡ ಅರ್ಥಗಳಿಂದಲೇ ಶಬ್ಧಗಳ ಬಳಕೆಯಾಗುತ್ತದೆ. ವಸ್ತುಗಳನ್ನು, ಶಾಬ್ಧಿಕವಾಗಿ ಗುರುತಿಸುವುದು ಮತ್ತು ಅದನ್ನು ಬಳಸಿಕೊಂಡು ಬರುವುದು ಆಯಾ ಜನ ಸಮುದಾಯಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಉದಾಹರಣೆಗೆ ಕನ್ನಡದಲ್ಲಿ ಬಳಕೆಯಾಗುವ 'ಕಲ್ಲು' ಎಂಬ ಪದಕ್ಕೆ ಇಂಗ್ಲೀಷನಲ್ಲಿ 'ಸ್ಟೋನ್', ಹಿಂದಿಯಲ್ಲಿ 'ಪಥ್ಥರ್', ಮರಾಠಿಯಲ್ಲಿ 'ದಗಡ್', ಸಂಸ್ಕೃತದಲ್ಲಿ 'ಶಿಲಾ' ಮುಂತಾದ ಶಬ್ದಗಳಿವೆ. ಹೀಗೆ ಒಂದೇ ವಸ್ತುವಿಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಪದಗಳು ಬಳಕೆಯಾಗಲು ಕಾರಣ ಭಾಷೆ ಯಾದೃಚ್ಚಿಕವಾಗಿರುವುದೇ ಆಗಿದೆ. ಆದ್ದರಿಂದಲೇ ವಿಶ್ವದಾದ್ಯಂತ ಸಾರ್ವತ್ರಿಕವಾಗಿ ವಸ್ತು ಒಂದೇ ಇದ್ದರೂ ಅದರ ರಚನೆ ಒಂದೇ ತೆರನಾಗಿದ್ದರೂ ಅದನ್ನು ಗುರುತಿಸುವ ಪದಗಳು ಭಾಷೆಯಿಂದ ಭಾಷೆಗೆ ಬೇರೆಯಾಗಿರುತ್ತವೆ. ಇದಕ್ಕೆ ಕಾರಣ ಪ್ರತಿಯೊಂದು ಭಾಷಿಕ ಗುಂಪು ತನಗೆ ತಾನೇ ಅನುಕೂಲವಾಗುವಂತೆ ವಸ್ತುವನ್ನೋ ವಿಷಯವನ್ನೋ ಗುರುತಿಸುವುದಾಗಿದೆ. ಇದನ್ನೇ ಯಾದೃಚ್ಚಿಕತೆ ಎಂದು ಕರೆಯುವರು.

- **ವಿಶೇಷಪ್ರಾವಿಣ್ಯತೆ (Specialization)**: ಪ್ರತಿಯೊಂದು ಭಾಷೆಯು ನಿರ್ಧಿಷ್ಟವಾದ, ನಿಖರವಾದ ರಚನಾ ವಿನ್ಯಾಸವನ್ನು ಹೊಂದಿರುತ್ತದೆ. ಅದರ ಪ್ರತಿಯೊಂದು ಘಟಕವೂ ರಚನೆಯ ನಿಯಮಕ್ಕನುಗುಣವಾಗಿ ಹೊಂದಿ ನಿರ್ಮಾಣಗೊಂಡಿರುತ್ತವೆ. ಇಂಥಹ ಭಾಷೆಯನ್ನು ಸ್ವ–ಭಾಷೆಯಾಗಿ ಹೊಂದಿದವರು ಅದನ್ನು ಲೀಲಾಜಾಲವಾಗಿ ಬಳಸುತ್ತಿರುತ್ತಾರೆ. ಅಂದರೆ ಮಾತನಾಡುವವನಾಗಿ, ಕೇಳುಗನಾಗಿ ಆತ ತನ್ನ ಭಾಷೆಯನ್ನು ಬಳಸುವ ವಿಶಿಷ್ಟ ಜ್ಞಾನ ಹೊಂದಿರುತ್ತಾನೆ ಮತ್ತು ಪ್ರಾವಿಣ್ಯತೆ ಗಳಿಸಿರುತ್ತಾನೆ. ಓದಲು ಬರೆಯಲು ಬಾರದ ಅನಕ್ಷರಸ್ಥನೂ ಸಹ ತನ್ನ ಭಾಷಾ ಬಳಕೆಯ ಜ್ಞಾನ ಹೊಂದಿರುತ್ತಾನೆ. ಇದನ್ನೇ ವಿಷಿಷ್ಟ ಪ್ರಾವಿಣ್ಯತೆ ಎಂದು ಗುರುತಿಸುತ್ತಾರೆ.

- **ವಿನಿಮಯ ಗುಣ (Inter changeability)**: ಭಾಷಾ ವೈಶಿಷ್ಟ್ಯಗಳಲ್ಲಿ ವಿನಿಮಯ ಗುಣ ಒಂದು. ಸಮಾಜದಲ್ಲಿ ವ್ಯಕ್ತಿಗಳ ನಡುವೆ ಅನಿಸಿಕೆಗಳ ಅಥವಾ ವಿಚಾರಗಳ ಪರಸ್ಪರ ವಿನಿಮಯ ಭಾಷೆಯಿಂದ ಮಾತ್ರ ಸಾಧ್ಯ. ಭಾಷಿಗನೋರ್ವ ಮಾತನಾಡುವವನಾಗಿ, ಕೇಳುಗನಾಗಿ ತನ್ನ ಭಾಷೆಯನ್ನು ಬಳಸುತ್ತಿರುತ್ತಾನೆ. ಆ ಭಾಷೆಯನ್ನು ಬಲ್ಲ ಮತ್ತೋರ್ವ ಅದನ್ನು ತಿಳಿಯವಲ್ಲ ಹಾಗೂ ಅದಕ್ಕೆ ಪ್ರತಿಕ್ರಿಯಿಸಬಲ್ಲ. ಹೀಗೆ ಪರಸ್ಪರ ವಿನಿಮಯ ಶಕ್ತಿ ಭಾಷೆಗಿದೆ. ಮಾನವ ಭಾಷೆಯಲ್ಲಿ ಕಂಡುಬರುವ ಈ ಗುಣ ಕೆಲವು ಮಾನವೇತರ ಸಂವಹನಗಳಲ್ಲೂ ಇದೆ ಎಂದು ಸಿ.ಎಫ್.ಹಾಕೆಟ್ ಗುರುತಿಸಿದ್ದಾರೆ. ಗಿಬ್ಬಗನ (ಒಂದು ಜಾತಿಯ ಕೋತಿ) ಕೂಗಿನಲ್ಲಿ, ದುಂಬಿಗಳ ಕುಣಿತದಲ್ಲಿ ಈ ಲಕ್ಷಣ ಇದೆ ಎಂದು ಆತ ಹೇಳುತ್ತಾನೆ.

• **ಸ್ಥಾನಪಲ್ಲಟ (Displacement):** ಭಾಷಾ ವೈಶಿಷ್ಟ್ಯಗಳಲ್ಲಿ ಸ್ಥಾನಪಲ್ಲಟವೂ ಒಂದು. ಭಾಷೆ ವ್ಯವಹಾರದ ನೇರಸಂದರ್ಭದಲ್ಲಿ ಮಾತ್ರ ಬಳಕೆಯಾಗುವುದಿಲ್ಲ. ಆ ಸಂದರ್ಭ ಅಥವಾ ವಸ್ತು ಕಣ್ಣೆದುರು ಇಲ್ಲದಿದ್ದಾಗ್ಯೂ ನಾವು ಅದನ್ನು ಭಾಷೆಯ ಮೂಲಕ ಅಭಿವ್ಯಕ್ತಿಸಬಲ್ಲೆವು ಮತ್ತು ಅಭಿವ್ಯಕ್ತಿಸಿದ್ದನ್ನು ಅರ್ಥ ಮಾಡಿಕೊಳ್ಳಬಲ್ಲೆವು. ಹೀಗೆ ಒಂದು ಕಾಲಘಟ್ಟದಿಂದ ಅಥವಾ ಪ್ರದೇಶದಿಂದ ಅಥವಾ ಸಂದರ್ಭದಿಂದ ಅನುಭವಗಳನ್ನು ಪ್ರತ್ಯೇಕಿಸಿ ಹೇಳುವುದು ಹಾಗೂ ಗ್ರಹಿಸುವುದು ಸ್ಥಾನಪಲ್ಲಟತೆ ಎನಿಸಿಕೊಳ್ಳುತ್ತದೆ. ಎಷ್ಟೋ ಸಲ ವಸ್ತುವನ್ನು, ಸ್ಥಳವನ್ನು ನೋಡಿರದೇ ಇದ್ದರೂ ಕಲ್ಪನೆ ಮಾಡಿಕೊಳ್ಳುತ್ತೇವೆ. ಉದಾ; ಪುಷ್ಪಕ ವಿಮಾನ, ಸಂಜೀವಿನಿ ಕಡ್ಡಿ, ಸ್ವರ್ಗ, ನರಕ, ಭಕ್ತಿ, ವಾತ್ಸಲ್ಯ ಇವು ಅಮೂರ್ತವಾದವು. ಆದರೂ ಇವುಗಳ ಕಲ್ಪನೆ ಮಾಡಿಕೊಳ್ಳಲು ನಾವು ಶಕ್ತರಾಗಿದ್ದೇವೆ. ಭಾಷೆಯಿಂದ ಇದು ಸಾಧ್ಯವಾಗಿದೆ. ಹೀಗೆ ಎದುರಿಗಿರದ ಹಾಗೂ ಅಮೂರ್ತವಾಗಿರುವುದನ್ನು ಮೂರ್ತವೆಂಬಂತೆ ಮನಸ್ಸಿಗೆ ತಿಳುವಳಿಕೆ ಮಾಡಿಕೊಡುವ ಭಾಷೆಯ ಲಕ್ಷಣ ಸ್ಥಾನಪಲ್ಲಟತೆ ಎನಿಸಿಕೊಳ್ಳುತ್ತದೆ.

• **ಸಂಸ್ಕೃತಿ ವಾಹಕತೆ (Cultural transmission):** ಮಾನವ ಭಾಷಾ ವೈಶಿಷ್ಟ್ಯಗಳಲ್ಲಿ ಸಂಸ್ಕೃತಿ ವಾಹಕತೆ ವಿಶೇಷ ಸ್ಥಾನ ಹೊಂದಿದೆ. ನಮ್ಮ ಜ್ಞಾನ, ತಿಳುವಳಿಕೆ ನಮ್ಮ ಮುಂದಿನ ಜನಾಂಗಕ್ಕೆ ಸಾಗುವುದು ಭಾಷೆಯ ಮೂಲಕ. ಭಾಷೆ ಕೇವಲ ಪದಗಳನ್ನಷ್ಟೇ ಒಳಗೊಂಡಿರದೇ ಆ ಪದಗಳ ಹಿಂದಿನ, ಆ ಭಾಷೆಯನ್ನಾಡುವ ಜನರ ಬದುಕು ಹಾಗೂ ಜೀವನ ಕ್ರಮದ ಅನೇಕ ಅಂಶಗಳನ್ನು ಹೊಂದಿರುತ್ತದೆ. ಹೀಗೆ ಒಂದು ಜನಾಂಗದ ಸಾಂಸ್ಕೃತಿಕ ಅಂಶಗಳನ್ನು ಭಾಷೆ ತನ್ನಲ್ಲಿ ಹಿಡಿದಿಟ್ಟುಕೊಂಡಿರುತ್ತದೆ. ಮೇಲ್ನೋಟಕ್ಕೆ ಪದಗಳು ಸ್ವತಂತ್ರ ಎನಿಸಿದರೂ ಅದರಲ್ಲಿ ಒಂದು ಜನಾಂಗದ ಸಂಸ್ಕೃತಿ ದಾಖಲಾಗಿರುತ್ತದೆ. ಈ ಸಾಂಸ್ಕೃತಿಕ ಅಂಶಗಳು ಒಂದು ತಲೆಮಾರಿನಿಂದ ಅದರ ಮುಂದಿನ ತಲೆಮಾರಿಗೆ ಭಾಷೆಯ ಮೂಲಕ ಸಾಗುತ್ತದೆ. ಅದು ನುಡಿಯಾಗಿರಬಹುದು ಅಥವಾ ಲಿಪಿಯಾಗಿರಬಹುದು. ಇತಿಹಾಸ, ಚರಿತ್ರೆಗಳು, ಪ್ರಾಚೀನ ಸಾಹಿತ್ಯಗಳು ಬದುಕಿನ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿಗೂ ನಮಗೆ ನೀಡುತ್ತಿವೆ. ಭಾಷೆಯಿಂದಾಗಿ ಇದು ಸಾಧ್ಯವಾಗಿದೆ. ಹೀಗೆ ಅನಾದಿಕಾಲದಿಂದಲೂ ಭಾಷೆ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತಾ ಸಂಸ್ಕೃತಿ ವಾಹಕವಾಗಿ ಕಾರ್ಯನಿರ್ವಹಿಸುತ್ತಿದೆ. ಹೀಗೆ ಒಂದು ಸಂಸ್ಕೃತಿಯ ಅಂಗವಾಗಿರುವ ಭಾಷೆ; ಸಮಗ್ರ ಸಂಸ್ಕೃತಿಯ ವಾಹಕವಾಗಿಯೂ ಕೆಲಸ ಮಾಡುತ್ತದೆ. ಭಾಷೆಯ ಈ ಗುಣವನ್ನು ಸಂಸ್ಕೃತಿ ವಾಹಕತೆ ಎನ್ನುತ್ತಾರೆ.

ಇವುಗಳಷ್ಟೆ ಅಲ್ಲದೆ ಭಾಷಾವೈಶಿಷ್ಟ್ಯಗಳಲ್ಲಿ ಸಾರ್ವತ್ರಿಕತೆ, ಪದಕೋಶ, ಸಂಕಥನ (ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತನಾಡುವ ರೀತಿ), ಉಪಭಾಷೆಗಳು, ರಚನೆಗಳು, ಸಾಪೇಕ್ಷತೆ, ಶೈಲಿ ಮುಂತಾದವುಗಳನ್ನು ಸಹ ಮಾನವ ಭಾಷಾ ವೈಶಿಷ್ಟ್ಯತೆಗಳಲ್ಲಿ ಕಂಡುಬರುತ್ತವೆ.

ಭಾಷಾ ಅಧ್ಯಯನದ ಅವಶ್ಯಕತೆ:

- ಒಂದು ಭಾಷೆಯನ್ನು ಆ ಭಾಷೆಯ ಮೂಲಕವೇ ಅಧ್ಯಯನಿಸಬೇಕಾಗಿರುವುದರಿಂದ.
- ಭಾಷೆಯ ಆಳ ಮತ್ತು ವಿಸ್ತಾರವನ್ನು ತಿಳಿದುಕೊಳ್ಳಲು.

- ಭಾಷೆಯ ಪ್ರಾಚೀನತೆಯನ್ನು ಹಾಗೂ ಅದರ ವ್ಯಾಕರಣವನ್ನು ತಿಳಿದುಕೊಳ್ಳಲು.
- ವ್ಯವಹಾರ ಬೆಳವಣಿಗೆ ಹೊಂದಲು.
- ವೃತ್ತಿಯಲ್ಲಿ ಅಥವಾ ಯಾವುದೇ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಲು.
- ಜಗತ್ತಿನ ಜನರೊಂದಿಗೆ ಆರೋಗ್ಯಕರ ಸಂಪರ್ಕಹೊಂದಿ, ಪರಿಣಾಮಕಾರಿ ಸಂವಹನ ನಡೆಸಲು.
- ಒಂದು ಭಾಷೆ ಇನ್ನೊಂದು ಭಾಷೆಯಿಂದ ಹೇಗೆ ವಿಭಿನ್ನತೆಯನ್ನು ಹಾಗೂ ವೈವಿಧ್ಯತೆಯನ್ನು ಹೊಂದಿದೆ ಎಂದು ಅರಿತುಕೊಳ್ಳಲು.
- ಭಾಷೆಯೊಂದು ಜೀವಂತ ಕ್ರಿಯೆ, ಇದರ ಬಳಕೆಯಿಂದಲೇ ಮಾನವ .ಜೀವಂತವಾಗಿರಲು ಸಾಧ್ಯ ಎಂಬದನ್ನು ತಿಳಿದುಕೊಳ್ಳಲು.
- ಜ್ಞಾನದ ಎಲ್ಲ ಶಾಖೆಗಳ ಜ್ಞಾನವನ್ನು ಪಡೆಯಲು.
- ಜೀವಂತ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಸಾಗಿಸಲು.
- ಇಡೀ ಜಗತ್ತನ್ನು ಒಂದೇ ವೇದಿಕೆಯ ಮೇಲೆ ಅಥವಾ ಒಂದೇ ಸೂರಿನಡಿಯಲ್ಲಿ ವೀಕ್ಷಿಸಲು.
- ಭಾಷಾ ಸೌಹಾರ್ಧ ಭಾವನೆಯನ್ನು ಬೆಳೆಸಲು.

ಗೌರವಿಸು ಜೀವನವ, ಗೌರವಿಸು ಚೇತನವ।
ಆರದೋ ಜಗವೆಂದು ಭೇದವೆಣಿಸದಿರು॥
ಹೋರುವುದೆ ಜೀವನಸಮೃದ್ಧಿಗೋಸುಗ ನಿನಗೆ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ॥

ಅಧ್ಯಾಯ 2: ಭಾಷೆ ಮತ್ತು ಶಿಕ್ಷಣ

2.1 ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳು

2.2 ಪ್ರಥಮ ಭಾಷೆಯಾಗಿ ಕನ್ನಡ / ಪ್ರಥಮ ಭಾಷೆಯಾಗಿ ನೆಲೆಗೊಳಿಸುವ ಕಾರ್ಯಕ್ರಮಗಳು

ಅ) ಸಾಮಾಜಿಕ ಮತ್ತು ಆಡಳಿತ ಮಾಧ್ಯಮವಾಗಿ ಕನ್ನಡ

ಆ) ಶಿಕ್ಷಣದಲ್ಲಿ ಭಾಷಾ ನೀತಿಗಳು – ತ್ರಿಭಾಷಾಸೂತ್ರ, ಗೋಕಾಕ್ ವರದಿ, ಬರಗೂರು ರಾಮಚಂದ್ರಪ್ಪ ವರದಿ.

2.3 ಶಿಕ್ಷಣ ಮಾಧ್ಯಮವಾಗಿ ಮಾತೃ ಭಾಷೆ, ತಜ್ಞರ ಅಭಿಪ್ರಾಯಗಳು.

2.4 ಮಾತೃ ಭಾಷಾ ಶಿಕ್ಷಣ ಮಾಧ್ಯಮದ ಪ್ರಾಮುಖ್ಯತೆ / ಅನುಕೂಲಗಳು.

2.1 ಭಾಷಾ ಕಲಿಕೆ ಮತ್ತು ಬೋಧನೆಯ ಮನೋವೈಜ್ಞಾನಿಕ ನಿಯಮಗಳು:

ಭಾಷಾ ಕಲಿಕೆ ಮತ್ತು ಬೋಧನೆಯು ಮಗುವಿನ ಮಾನಸಿಕ ಸಿದ್ಧತೆ, ಸ್ಥಿತಿ, ಮಾನಸಿಕ ಪರಿಸರವನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದರೆ ಶಾಲೆಗಳಲ್ಲಿ ಭಾಷಾ ಕಲಿಕೆ–ಬೋಧನೆಯು ಒಂದು ಅಧಿಕೃತ ಕಾರ್ಯವಾಗಿದೆ. ಭಾಷಾ ಕೌಶಗಳನ್ನು, ಸಾಮರ್ಥ್ಯಗಳನ್ನು ಪ್ರಾಥಮಿಕ ಹಂತದದಲ್ಲಿ ಕಲಿಸುವಾಗ ಶಾಸ್ತ್ರೀಯಬದ್ಧವಾಗಿ ಮನೋವೈಜ್ಞಾನಿಕವಾಗಿ ಯೋಚಿಸಬೇಕು. ಯಾರು ಬೇಕಾದರೂ ಹೇಗೆ ಬೇಕಾದರೂ ಕಲಿಸಬಹುದು ಎಂಬುದು ಒಳ್ಳೆಯದಲ್ಲ ಹಾಗೂ ದಡ್ಡತನದ ಪರಾಮಾವಧಿಯಾಗುತ್ತದೆ. ಭಾಷಾ ಕಲಿಕೆಯಲ್ಲಿ ಒಳಗೊಳ್ಳುವ ಮನೋವೈಜ್ಞಾನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು, ಹಿನ್ನೆಲೆಗಳನ್ನು ಪರಿಗಣಿಸುವುದು ಭಾಷಾ ಶಿಕ್ಷಕರ ಬಹುಮುಖ್ಯ ಜವಾಬ್ದಾರಿಯಾಗಿದೆ.

ಈ ಉದ್ದೇಶದಿಂದ ಮಕ್ಕಳು ಭಾಷಾ ಕೌಶಲಗಳ ರಚನೆ ಹಾಗೂ ಪ್ರಯೋಗ ಸಾಮರ್ಥ್ಯ, ಕಲಿಯಬಹುದಾದ ಸಂದರ್ಭಗಳನ್ನು, ತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕು. ಭಾಷಾ ಬೋಧಕರು ಭಾಷಾ ಕಲಿಕೆ ಹಾಗೂ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದಾದ ನಿಯಮಗಳನ್ನು, ತಂತ್ರಗಳನ್ನು ತಿಳಿದುಕೊಂಡಿರುವುದು ಅತೀ ಅವಶ್ಯಕ.

1. **ಸಿದ್ಧತಾ ನಿಯಮ:** ಇ. ಎಲ್. ಥಾರ್ನ್‌ಡೈಕ್ ಅವರ 'ಪ್ರಯತ್ನ ಮತ್ತು ಪ್ರಮಾದದ ಕಲಿಕೆ' ಸಿದ್ಧಾಂತದ ಪ್ರಕಾರ ಮಗು ಕಲಿಯಲು ಮೊದಲು ಸಿದ್ಧತೆ ಬೇಕು. ವಿವಿಧ ವಯೋಮಾನದ ಮಕ್ಕಳು ವಿವಿಧ ಮಟ್ಟದಲ್ಲಿ, ವಿವಿಧ ಭಾಷಾ ಕೌಶಲಗಳನ್ನು ಕಲಿಯಲು ಮಾನಸಿಕ, ದೈಹಿಕ ಮತ್ತು ಧ್ವನ್ಯಂಗಗಳ ಸಿದ್ಧತೆ ಬೇಕು. ಆಲಿಸುವಿಕೆ, ಮಾತು, ಓದು, ಬರಹ ಇತ್ಯಾದಿ ಭಾಷಾ ಕೌಶಲಗಳನ್ನು ಸಿದ್ಧತೆಯಿಲ್ಲದೆ ಕಲಿಸಲಾಗುವುದಿಲ್ಲ. ಭಾಷಾ ಕೌಶಗಳನ್ನು ಕಲಿಸುವ ಪ್ರಾರಂಭದಲ್ಲಿ ಮಕ್ಕಳಲ್ಲಿ ಆಸಕ್ತಿ ಮೂಡಿಸಬೇಕು. ವಿವಿಧ ರೀತಿಯ ಚಿತ್ರಪಟಗಳು, ಚಾರ್ಟುಗಳು, ಸಚಿತ್ರ ವಾಕ್ಯಫಲಕಗಳು ಇತ್ಯಾದಿಗಳನ್ನು ಬಳಸುತ್ತಾ

ಅಭಿಪ್ರೇರಣೆಗೊಳಿಸುತ್ತಾ ಭಾಷಾ ಕಲಿಕೆಗೆ ಮಕ್ಕಳನ್ನು ಪ್ರಚೋದಿಸಬೇಕು. ಆಸಕ್ತಿಯನ್ನು ಕೆರಳಿಸಬೇಕು.ಮಾನಸಿಕವಾಗಿ ಶಬ್ದಗಳನ್ನು ಗ್ರಹಿಸುವುದು, ಧ್ವನಿ ವ್ಯತ್ಯಾಸಗಳನ್ನು ಗುರುತಿಸುವುದು, ಪ್ರತಿಕ್ರಿಯೆ ವ್ಯಕ್ತಪಡಿಸುವುದು ಇತ್ಯಾದಿಗಳ ಬಗ್ಗೆ ಸಿದ್ಧಗೊಳಿಸಬೇಕು. ಶಾರೀರಿಕವಾಗಿ ಕಣ್ಣಿನ ದೃಷ್ಟಿ, ಚಾಲನೆ, ಧ್ವನ್ಯಂಗಗಳ ಸಿದ್ಧತೆ ಆಗಬೇಕು. ಈ ರೀತಿ ಮಕ್ಕಳು ಶಾರೀರಿಕವಾಗಿ ಸಿದ್ಧವಾದ ಮೇಲೆ ಮಾನಸಿಕವಾಗಿ ಸಿದ್ಧಗೊಳಿಸಿ ಅಭ್ಯಾಸಗಳ ಮೂಲಕ ಅವರಲ್ಲಿ ಭಾಷಾ ಕಲಿಕೆಯ ಬಗ್ಗೆ ಕುತೂಹಲ ಆಸಕ್ತಿ ಮೂಡಿಸಿ ಭಾಷೆಯ ಬೋಧನೆ ಮತ್ತು ಕಲಿಕೆಯನ್ನು ಪ್ರಾರಂಭಿಸಬೇಕು.

2. **ಅನುಕರಣೆಯ ನಿಯಮ:** ಅನುಕರಣೆ ಮಕ್ಕಳ ಸಹಜ ಗುಣ. ಮಕ್ಕಳು ಬಾಲ್ಯಾವಸ್ಥೆಯಲ್ಲಿ ಸ್ವಭಾತಃ ಅನುಕರಣೆಯ ಮೂಲಕವೇ ಕಲಿಯುತ್ತಾರೆ. ಕಲಿಕೆ ಅಥವಾ ಭಾಷಾ ಕಲಿಕೆ ಅನುಕರಣೆಯ ಮೂಲಕವೇ ಪ್ರಾರಂಭವಾಗುತ್ತದೆ. ಜನಿಸಿದ ಮಗುವು ತಾಯಿಯನ್ನು ಅನುಕರಿಸಿ ಮಾತೃ ಭಾಷೆಯನ್ನು ಕಲಿಯುತ್ತದೆ. ಧ್ವನಿಗಳ ಉಚ್ಚಾರಕ್ರಮ, ಮಾತನಾಡುವುದು, ಓದುವುದು, ಬರೆಯುವುದು ಎಲ್ಲ ಕೌಶಲಗಳನ್ನು ಪ್ರಾರಂಭದಲ್ಲಿ ಮಕ್ಕಳು ಅನುಕರಣೆಯ ಮೂಲಕವೇ ಕಲಿಯುತ್ತಾರೆ. ಅನುಕರಣೆಯೇ ಕಲಿಕೆಯ ಮೂಲ ಎಂದರೆ ತಪ್ಪಾಗಲಾರದು. ಶಾಲೆಗೆ ಬಂದ ಮಗು ಶಿಕ್ಷಕರನ್ನು ಅನುಕರಿಸುತ್ತಾ ವಿವಿಧ ಕೌಶಲ್ಯಗಳನ್ನು ಕಲಿಯುತ್ತದೆ. ಇದರಿಂದಾಗಿ ಶಿಕ್ಷಕರ ಮಾತು, ಓದು, ಬರಹದ ಕೌಶಲಗಳು ಮಾದರಿಯಾಗಿದ್ದು ಮಕ್ಕಳು ಶಿಕ್ಷಕರನ್ನು ಅನುಕರಿಸುತ್ತಾ ಉತ್ತಮವಾಗಿ ಭಾಷೆಯನ್ನು ಕಲಿಯುವಂತೆ ಶಾಲೆ ಮತ್ತು ಮನೆಯ ವಾತಾವರಣವನ್ನು ಸೃಷ್ಟಿಸಬೇಕು.

3. **ಅಭ್ಯಾಸ ನಿಯಮ:** ಮಕ್ಕಳ ಕಲಿಕೆ ಅನುಕರಣೆಯಿಂದ ಆರಂಭವಾದರೂ ಅದು ಯಾಂತ್ರಿಕವಾಗಿ ಮುಂದುವರೆಯಬಾರದು. ಮಾತು, ಓದು, ಬರಹ ಕೌಶಲಗಳನ್ನು ಅನುಕರಣೆಯಿಂದ ಕಲಿತರೂ ಅಭ್ಯಾಸದಿಂದ ಸ್ಥಿರಗೊಳ್ಳುವಂತೆ ನೋಡಿಕೊಳ್ಳಬೇಕು. ಅಭ್ಯಾಸದ ಮೂಲಕ ಗಟ್ಟಿಗೊಳಿಸಬೇಕು. ಹಾಗೂ ಪರಿಣಾಮಕಾರಿಯಾಗಿ ಪ್ರಯೋಗಿಸಲ್ಪಡಬೇಕು. ಅಭ್ಯಾಸ ಎಂದರೆ ಇಲ್ಲಿ ಕಲಿಕೆಯ ಪುನರಾವರ್ತನೆ. ನಿರಂತರ ಮತ್ತು ಕ್ರಮಬದ್ಧ ಅಭ್ಯಾಸಗಳಿಂದ ಭಾಷಾ ಕೌಶಲಗಳು ಗಟ್ಟಿಗೊಳ್ಳುತ್ತವೆ. ಆದುದರಿಂದ ಭಾಷಾ ಶಿಕ್ಷಕರು ಮಕ್ಕಳಿಗೆ ಕೌಶಲಗಳನ್ನು ಕಲಿಯಲು ಸೂಕ್ತ ಅಭ್ಯಾಸಗಳ ಮೂಲಕ ವಿವಿಧ ರೀತಿಯ ಕ್ರಮಬದ್ಧ ಭಾಷಾ ಚಟುವಟಿಕೆಗಳನ್ನು ಒದಗಿಸಿಕೊಡಬೇಕು.

4. **ಪುನರ್ಬಲನ ನಿಯಮ:** ಪುನರ್ಬಲನವು ಕಲಿಕೆಯನ್ನು ಸ್ಥಿರಗೊಳಿಸುತ್ತದೆ ಎಂದು ಮನೋವಿಜ್ಞಾನಿ ಬಿ. ಎಫ್. ಸ್ಕಿನ್ನರ್ ಹೇಳಿದ್ದಾರೆ. ಮಕ್ಕಳು ಭಾಷೆಯನ್ನು ಕಲಿತು ಪ್ರಯೋಗಿಸುವಾಗ ಕಂಡುಬರುವ ಸರಿ, ತಪ್ಪುಗಳನ್ನು ಗುರುತಿಸಿ ಅವಶ್ಯಕ ಹಾಗೂ ಸೂಕ್ತ ಪುನರ್ಬಲನದೊಂದಿಗೆ ಕಲಿಕೆಯನ್ನು ಕ್ರಮಬದ್ಧಗೊಳಿಸಬೇಕು. ಭಾಷಾ ಕಲಿಕೆಯ ಸೂಕ್ಷ್ಮತೆಯನ್ನು ಶಿಕ್ಷಕರು ಮತ್ತು ಪಾಲಕರು ಗಮನಿಸಿ ಸೂಕ್ತ ಪುನರ್ಬಲನ ನೀಡಬೇಕು. ಭಾಷಾ ಕಲಿಕೆಯಲ್ಲಿನ ದೋಷಗಳನ್ನು ಗುರುತಿಸಿ, ತಿದ್ದಿ, ಅರ್ಥಬದ್ಧ ಚಟುವಟಿಕೆಗಳನ್ನು ನೀಡಿ ಪುನರ್ಬಲನಗೊಳಿಸಬೇಕು. ಉತ್ತಮ ಕಲಿಕೆಯನ್ನು ಗುರುತಿಸಿ ಪ್ರಶಂಸಿಸುತ್ತ ಕ್ರಮಬದ್ಧ ಕಲಿಕೆ ಮಾರ್ಗದರ್ಶನ ನೀಡಬೇಕು.

5. **ಭಾಷೆಯನ್ನು ಸ್ವಾಭಾವಿಕ ಕ್ರಮದಲ್ಲಿ ಕಲಿಸಬೇಕು:** ಭಾಷಾ ಕೌಶಲಗಳ ಕಲಿಕೆ ಮೊದಲು ಸರಳತೆಯಿಂದ ಆರಂಭವಾಗಿ ನಂತರ ಸಂಕೀರ್ಣತೆಯೆಡೆಗೆ ಸಾಗಬೇಕು. ಮೊದಲು ಆಲಿಸುವಿಕೆ, ನಂತರ ಮಾತು, ಓದು, ಬರಹಗಳನ್ನು ಕಲಿಸಬೇಕು. ಈ ರೀತಿಯಾಗಿ ಸ್ವಾಭಾವಿಕ ಕ್ರಮದಲ್ಲಿ ಕಲಿಸಿದಾಗ

ಭಾಷಾ ಕಲಿಕೆ ಕ್ರಮಬದ್ಧವಾಗುತ್ತದೆ. ಮಾತಿನ ಕೌಶಲಗಳು ಓದುಗಾರಿಕೆಗೂ, ಓದುಗಾರಿಕೆಯಲ್ಲಿ ಗಳಿಸುವ ಕೌಶಗಳು ಬರಹದಲ್ಲೂ ಸಮನ್ವಯಗೊಳ್ಳುತ್ತವೆ. ಆದುದರಿಂದ ಭಾಷಾ ಕೌಶಗಳನ್ನು ಅವುಗಳ ಸ್ವಾಭಾವಿಕ ಕ್ರಮದಲ್ಲಿಯೇ ಕಲಿಸಬೇಕು. ಸರಳವಾಗಿ ಬಿಡಿ ಬಿಡಿಯಾಗಿ ಆರಂಭಿಸಿ ನಂತರ ಇಡಿಯಾಗಿ ಕೌಶಲ್ಯಗಳನ್ನು ಸಮನ್ವಯಗೊಳಿಸಿ ಕಲಿಸಬೇಕು.

6. **ಜೀವಂತ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ ಕಲಿಸಬೇಕು:** ಭಾಷೆಯನ್ನು ಸ್ವಾಭಾವಿಕ ಸನ್ನಿವೇಶದಲ್ಲಿ ಸಾಂದರ್ಭಿಕವಾಗಿ ಪ್ರಾಯೋಗಿಕವಾಗಿ ಕಲಿಸಬೇಕು. ಒಂದು ಹೊಸ ಪದ, ವ್ಯಾಕ್ಯ ಅಥವಾ ಪರಿಕಲ್ಪನೆಯನ್ನು ಸ್ವಾಭಾವಿಕ ಸನ್ನಿವೇಶಗಳಲ್ಲಿ ಜೀವಂತ ವಾತಾವರಣದಲ್ಲಿ ಪರಿಚಯಿಸುತ್ತಾ ಪ್ರಾಯೋಗಿಕವಾಗಿ ಕಲಿಸಬೇಕು. ಒಂದು ಪದಕ್ಕೆ ಪರ್ಯಾಯ ಅರ್ಥಗಳನ್ನು, ಪರಿಕಲ್ಪನೆಗಳನ್ನು ಸೂಕ್ತ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ ತಿಳಿಸುತ್ತಾ ಪರಿಕಲ್ಪನೆ ಮೂಡಿಸಿದಾಗ ಮಾತ್ರ ಕಲಿಕೆ ಸ್ಥಿರವಾಗುತ್ತದೆ.

7. **ಭಾಷೆಯನ್ನು ಅರ್ಥಪೂರ್ಣ ವಾಕ್ಯಗಳ ಮೂಲಕ ಕಲಿಸಬೇಕು:** ಗೆಸ್ಟಲ್ಟ್ ಪಂಥದ ಮನೋವಿಜ್ಞಾನಿಗಳ ಪ್ರಕಾರ ಯಾವುದೇ ವಿಷಯವನ್ನು ಸಮಗ್ರವಾಗಿ, ಪೂರ್ಣದೃಷ್ಟಿಯಲ್ಲಿ ಕಲಿಸಬೇಕು. ಬಿಡಿಬಿಡಿಯಾಗಿ ಕಲಿಸಿದರೆ ಕಲಿಕೆ ಅರ್ಥಪೂರ್ಣವಾಗುವುದಿಲ್ಲ. ಒಳನೋಟ ಕಲಿಕೆಯ ಈ ತತ್ವ ಭಾಷಾ ಕಲಿಕೆ ಮತ್ತು ಬೋಧನೆಗೆ ಸೂಕ್ತವೆನಿಸುತ್ತದೆ. ಬಿಡಿಬಿಡಿ ಅಕ್ಷರಗಳನ್ನು, ಪದಗಳನ್ನು ವಾಕ್ಯಗಳನ್ನು ಮತ್ತು ವ್ಯಾಕರಣದ ನಿಯಮಗಳನ್ನು ಪ್ರತ್ಯೇಕವಾಗಿ ಕಲಿಸ ಹೊರಟರೆ ಭಾಷೆ ಸಾಯುತ್ತದೆ, ಅರ್ಥಹೀನವಾಗುತ್ತದೆ. ಆದ್ದರಿಂದ ಮಕ್ಕಳ ಮಾತು ಮತ್ತು ಓದುಗಾರಿಕೆಯನ್ನು ಪೂರ್ಣ ದೃಷ್ಟಿಯಿಂದ, ಅರ್ಥಬದ್ಧ ವ್ಯಾಕಗಳ ಮೂಲಕ ಪ್ರಾರಂಭಿಸಿ, ನಂತರ ಪದಗಳು, ಅಕ್ಷರಗಳ ಜ್ಞಾನವನ್ನು ಕೊಡಬೇಕು.

8. **ಭಾಷೆಯನ್ನು ಸಂವಹನದ ಮೂಲಕ ಕಲಿಸಬೇಕು:** ಮಾತಿನ ಮೂಲಕ ಮಾತು, ಓದಿನ ಮೂಲಕ ಓದು, ಬರಹದ ಮೂಲಕ ಬರಹ ಎಂಬಂತೆ ಭಾಷೆಯನ್ನು ಭಾಷೆಯ ಮೂಲಕ ಭಾಷೆಯಿಂದಲೇ ಭಾಷೆಯನ್ನು ಬಳಸುತ್ತ ಕಲಿಸಬೇಕು. ಬಿಡಿಬಿಡಿಯಾಗಿ ಕೌಶಲ್ಯಗಳನ್ನು ಕಲಿಸದೇ ಭಾಷೆಯನ್ನು ಸಂವಹನ ಮಾಡುತ್ತಾ ಕಲಿಸಬೇಕು. ಕತೆ, ಸಂಭಾಷಣೆ, ಚರ್ಚೆ, ಪ್ರಶ್ನೋತ್ತರಗಳ ಮೂಲಕ ಭಾಷೆಯ ವಿವಿಧ ಕೌಶಲಗಳನ್ನು ಗಟ್ಟಿಗೊಳಿಸಬೇಕು. ಭಾಷಾ ಕೌಶಲಗಳ ಕಲಿಕೆಗೆ ಸಂವಹನ ಅತ್ಯಂತ ಸೂಕ್ತ ಮಾಧ್ಯಮವಾಗಿದೆ.

9. **ಭಾಷೆಯನ್ನು ಅನುಕ್ರಮಣಿಕೆಯಲ್ಲಿ ಕಲಿಸಬೇಕು:** ವಿವಿಧ ಕೌಶಲಗಳು ಅನುಕ್ರಮವಾಗಿ, ವ್ಯವಸ್ಥಿತವಾಗಿ ಪ್ರಯೋಗವಾದಾಗ ಮಾತ್ರ ಭಾಷೆ ಅರ್ಥಪೂರ್ಣವಾಗುತ್ತದೆ. ವಿವಿಧ ರಿತಿಯ ಧ್ವನಿಗಳು ಮತ್ತು ವಾಕ್ಯಗಳನ್ನು ಅವುಗಳ ಸ್ವಾಭಾವಿಕ ಕ್ರಮಕ್ಕನುಗುಣವಾಗಿ ಹಂತ ಹಂತವಾಗಿ ಕಲಿಸಬೇಕು. ಈ ರೀತಿ ಕಲಿಸಿದಾಗ ವಿವಿಧ ರೀತಿಯ ಕೌಶಲಗಳು, ಧ್ವನಿಗಳು, ಪದಗಳು ಪರಸ್ಪರ ಸಮನ್ವಯಗೊಂಡು ಉತ್ತಮವಾಗಿ ಭಾಷೆ ಕಲಿಯಲು ಸಾಧ್ಯವಾಗುತ್ತದೆ. ಕಲಿಕೆಯ ಸಾಮಾನ್ಯ ಸೂತ್ರಗಳನ್ನು ಆಧರಿಸಿ ಭಾಷೆಯನ್ನು ಕಲಿಸಬೇಕು.

- ಸರಳ ಪದಗಳಿಂದ ಸಂಯುಕ್ತ ಪದಗಳನ್ನು ಕಲಿಸಬೇಕು.
- ಸಂಬಂಧ ಇರುವ ಪದ, ವಾಕ್ಯಗಳನ್ನು ಮೊದಲು ಕಲಿಸಬೇಕು.
- ಪರಿಚಿತ ಪದಗಳಿಂದ ಅಪರಿಚಿತ ಪದಗಳ ಕಡೆಗೆ ಕಲಿಸಬೇಕು.

- ಜೀವಂತ ಸನ್ನಿವೇಶಗಳನ್ನು ಸೃಷ್ಟಿಸಿ ಕಲಿಸಬೇಕು.
- ವ್ಯಾಕರಣಾಂಶಗಳನ್ನು ಪ್ರಾಯೋಗಿಕವಾಗಿ ಕಲಿಸಬೇಕು.
- ಮಾತು ಕಲಿತ ನಂತರ ಓದುವುದನ್ನು ಕಲಿಸಬೇಕು.
- ಸಂಭಾಷಣೆ ಮೂಲಕ ಮಾತುಗಾರಿಕೆಯನ್ನು ಕಲಿಸಬೇಕು.
- ಬಾಯ್ದೆರೆ ವಾಚನದ ನಂತರ ಮೌನ ಓದುನ್ನು ಕಲಿಸಬೇಕು.

10. ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಕಲಿಸಬೇಕು: ಮಕ್ಕಳಲ್ಲಿ ಸ್ವಯಂ ಆಸಕ್ತಿ ಮೂಡುವಂತೆ ಮಾಡಿ ಸೂಕ್ತ ಪ್ರಚೋದನೆಗಳನ್ನು ನೀಡುತ್ತಾ ಸ್ವಾಭಾವಿಕ ಹಾಗೂ ಮಕ್ತ ವಾತಾವರಣದಲ್ಲಿ ಕಲಿಸಬೇಕು. ಅಕ್ಷರಗಳ ಮಾದರಿಗಳು, ಸಚಿತ್ರ ವಾಕ್ಯ ಪಟಗಳು, ಭಾಷಾ ಆಟಗಳು, ಗುಂಪಿನ ಆಟಗಳು, ಶಿಶುಗೀತೆಗಳು, ಕಥೆ, ಕವನಗಳು ಮುಂತಾದವುಗಳಿಂದ ಮಕ್ಕಳಲ್ಲಿ ಆಸಕ್ತಿಯುಂಟಾಗುವಂತೆ ಮಾಡಬೇಕು. ವಯೋಮಾನಕ್ಕನುಗುಣವಾಗಿ ಭಾಷೆಯನ್ನು ಕಲಿಯಲು ಸಹಾಯಕವಾಗುವಂತಹ ಆಕರ್ಷಕ ಕಲಿಕಾ ಸಾಮಗ್ರಿಗಳನ್ನು, ರೇಡಿಯೋ, ಧ್ವನಿಮುದ್ರಣ, ದೂರದರ್ಶನ, ದೃಕ್–ಶ್ರವಣೋಪಕರಗಳನ್ನು ಅಗತ್ಯವಿದ್ದಲ್ಲಿ ಬಳಸಿ ಕಲಿಕಾ ಆಸಕ್ತಿವುಂಟಾಗುವಂತೆ ಮಾಡಬೇಕು. ಒಟ್ಟಾರೆಯಾಗಿ ಮಕ್ಕಳಿಗೆ ಕಲಿಕೆ ಹೊರೆಯಾಗದಂತೆ ಅವರೇ ಸ್ವಯಂ ಆಸಕ್ತಿಯಿಂದ ಭಾಷಾ ಕಲಿಕೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

11. ಮೊದಲು ಮಾತೃಭಾಷೆಯನ್ನು ಕಲಿಸಬೇಕು: ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೇ ಮೊದಲು ಗುರು ಎಂಬಂತೆ ಮಗುವಿಗೆ ಮೊದಲು ಮನೆಯ ಭಾಷೆ ಅಂದರೆ ಮಾತೃಭಾಷೆಯನ್ನು ಕಲಿಸಬೇಕು. ಮಾತೃಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದ ಮಗು ವಿಷಯಗಳಲ್ಲೂ ಪ್ರಭುತ್ವವನ್ನು ಸಾಧಿಸುತ್ತದೆ. ಮಾತೃಭಾಷೆಯಲ್ಲಿ ಸಾಮರ್ಥ್ಯಗಳಿಸಿದ ಮೇಲೆ ಅವಶ್ಯಕತೆ ಇದ್ದರೆ ಬೇರೆ ಭಾಷೆಯನ್ನು ಕಲಿಸಬೇಕು. ಮಾತೃಭಾಷೆಯನ್ನು ಕಲಿಸುವ ಮುನ್ನ ಬೇರೆ ಭಾಷೆಯನ್ನು ಕಲಿಸುವುದು ಮಕ್ಕಳ ವಿಕಾಸದ ಮೇಲೆ ಕಲ್ಲು ಎಳೆದಂತಾಗುತ್ತದೆ. ಇದು ಅವೈಜ್ಞಾನಿಕ.

ಒಟ್ಟಾರೆಯಾಗಿ ಭಾಷೆಯನ್ನು ಕಲಿಸುವಾಗ ಈ ಮೇಲಿನ ಮನೋವೈಜ್ಞಾನಿಕ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳು ಭಾಷಾ ಪ್ರಾವೀಣ್ಯತೆಯನ್ನು ಸಾಧಿಸುವಂತೆ ಕಲಿಸಬೇಕು ಮತ್ತು ಕಲಿಯುವಂತೆ ನೋಡಿಕೊಳ್ಳಬೇಕು.ಭಾಷೆಯ ಸ್ವರೂಪ, ಭಾಷೆಯ ಜಾಯಮಾನ, ಶೈಲಿ, ಅರ್ಥಗ್ರಹಿಕೆ, ಅಭಿವ್ಯಕ್ತಿ, ಸೃಜಶೀಲತೆ, ಭಾಷಾ ಪ್ರಯೋಗ, ಮಕ್ಕಳ ವಯಸ್ಸು ಮತ್ತು ಸಹಜ ಪ್ರವೃತ್ತಿ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯನ್ನು ತಿಳಿದು ಉಪಯುಕ್ತತೆಯ ದೃಷ್ಟಿಯಿಂದ ಕಲಿಸಬೇಕು.ಭಾಷೆ ಬರೀ ಭಾಷೆಗಾಗಿ ಅಲ್ಲ; ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಭಾಷೆಯನ್ನು ಕಲಿಸಬೇಕು.ಭಾಷೆಯ ಮೂಲಕ ಮಕ್ಕಳು ಬೆಳೆಯಬೇಕು.ಭಾಷೆ ವಿಷಯ ಸಂಗ್ರಹದ ಸಾಧನವಷ್ಟೇ ಆಗದೇ, ಮಕ್ಕಳ ವಿಕಾಸದ ಮಾಧ್ಯಮವಾಗಬೇಕು.

2.2 ಪ್ರಥಮ ಭಾಷೆಯಾಗಿ ಕನ್ನಡ / ಪ್ರಥಮ ಭಾಷೆಯಾಗಿ ನೆಲೆಗೊಳಿಸುವ ಕಾರ್ಯಕ್ರಮಗಳು:

ಪ್ರಥಮ ಭಾಷೆಯಾಗಿ ಕನ್ನಡ:

ಕನ್ನಡವು ಕನ್ನಡಿಗರೆಲ್ಲರ ಮಾತೃಭಾಷೆ. ಇದೇ ರೀತಿ ಕರ್ನಾಟಕದಲ್ಲಿ ನೆಲೆಯೂರಿರುವ ಇತರರ ಸಾಮಾಜಿಕ ಜೀವನದಲ್ಲಿ ಸಮಾಜ ಭಾಷೆಯಾಗಿದೆ.ಕನ್ನಡ ಭಾಷೆಯು ನಮ್ಮೆಲ್ಲರ ಜೀವವಾಹಿನಿ. ಸಾವಿರಾರು ವರ್ಷಗಳಿಂದ ಕನ್ನಡಿಗರಲ್ಲಿ ರಕ್ತಗತವಾಗಿರುವ ಮಾತೃಭಾಷೆ ಕನ್ನಡವು ತಾಯಿಯಷ್ಟೇ ಆಧ್ಯತೆ ಪಡೆದಿದೆ. ಸುಮಾರು ಎರಡು ಸಾವಿರ ಶ್ರೀಮಂತ ಸಾಹಿತ್ಯ, ಇತಿಹಾಸವಿರುವ ಕನ್ನಡ ಭಾಷೆಯು ಜಗತ್ತಿನಲ್ಲಿರುವ 6000 ಭಾಷೆಗಳಲ್ಲಿ ಸಂಖ್ಯಾಮಾನದಿಂದ 27ನೆಯ ಸ್ಥಾನದಲ್ಲಿದೆ. ಜಗತಿಕ ಮಟ್ಟದಲ್ಲಿ ಗಟ್ಟಿಯಾಗಿ ನಿಲ್ಲುವಂತಹ ಸಾಹಿತ್ಯ ಈ ಭಾಷೆಯಿಂದ ಮೂಡಿಬಂದಿದೆ. ಈವರೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಕನ್ನಡ ಸಾಹಿತ್ಯಕ್ಕೆ ಲಭ್ಯವಾಗಿವೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿದ್ದು ಇಂದು ಕನ್ನಡ ಸಾಹಿತ್ಯದೊಂದಿಗೆ ಕನ್ನಡ ಸಂಸ್ಕೃತಿಯು ವ್ಯಾಪಕವಾಗಿ ಬೆಳೆದಿದೆ.

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳವಣಿಗೆಯು ಉತ್ತಮವಾಗಿ ಆಗುತ್ತಿದೆಯಾದರೂ ಕೆಲ ವಿದ್ಯಾವಂತರಲ್ಲಿ ಇಂಗ್ಲೀಷ ಭಾಷೆಯು ಅಂತಸ್ತಿನ ಭಾಷ್ರೆಯಾಗಿದ್ದು ಕನ್ನಡವು ಜನಸಾಮಾನ್ಯರ ಭಾಷೆ ಮಾತ್ರ ಎಂದು ಭಾವಿಸುತ್ತಾರೆ. ಕರ್ನಾಟಕ ಏಕೀಕರಣವಾಗಿ ಐದು (1 ನವೆಂಬರ್ 1973) ದಶಕಗಳಾಗಿವೆ (ವಿಶಾಲ ಮೈಸೂರು ರಾಜ್ಯ 1 ನವೆಂಬರ್ 1956). ಕರ್ನಾಟಕದಲ್ಲಿ ಕನ್ನಡವನ್ನು ಆಡಲಿತ ಭಾಷೆ ಎಂದು ಘೋಷಿಸಿ 6 ದಶಕಗಳು (10/10/1963) ಆದರೂ ಆಡಳಿತದಲ್ಲಿ ಪೂರ್ಣ ಕನ್ನಡ ವಾತಾವರಣ ನಿರ್ಮಾಣವಾಗಿಲ್ಲ.

ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ನೀಡುವುದು ಸರಕಾರ, ಸಮಾಜ, ಅಧಿಕಾರಿಗಳು, ವಿದ್ಯಾವಂತರು, ಕನಡಿಗರೆಲ್ಲರ ಕರ್ತವ್ಯ. ಈ ಬಗ್ಗೆ ಸರಕಾರ ನೂರಾರು ಆದೇಶಗಳನ್ನು ಹೊರಡಿಸಿದೆ, ಹತ್ತಾರು ಸಮಿತಿಗಳನ್ನು ನೇಮಿಸಿದೆ. ಕನ್ನಡ ಕಾವಲು ಸಮಿತಿ, ಕನ್ನಡ ಶಕ್ತಿ ಕೇಂದ್ರ, ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಈ ರೀತಿ ಹಲವಾರು ಸಂಸ್ಥೆಗಳು ಮತ್ತು ಯೋಜನೆಗಳ ಮೂಲಕ ಕನ್ನಡದ ಅರ್ವಾಂಗೀಣ ವಿಕಾಸಕ್ಕೆ ಪ್ರಯತ್ನಗಳಾಗುತ್ತಿವೆ.

ಕನ್ನಡದ ಸರ್ವತೋಮುಖ ಅಭಿವೃದ್ಧಿಗಾಗಿ 1993–94ರ ವರ್ಷವನ್ನು "ಕನ್ನಡ ಜಾಗೃತಿ ವರ್ಷ" ಎಂದು ಆಚರಿಸಿ ಕನ್ನಡಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಕ್ಕೆ ತರಲಾಯಿತು. 2008 ಅಕ್ಟೋಬರ್ 31 ರಂದು ಕೇಂದ್ರ ಸರಕಾರವು ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು. 2023ರಲ್ಲಿ ಸುವರ್ಣ ಕರ್ನಾಟಕ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಆದರೂ ಕರ್ನಾಟಕದಲ್ಲಿ ಕನ್ನಡ ಪರಿಸರ ನಿರ್ಮಾಣವಾಗಿಲಿಲ್ಲ. ಕನ್ನಡ ಭಾಷೆಯು ಸರ್ವಮಾಧ್ಯಮವಾಗಲಿಲ್ಲ. ಇದಕ್ಕೆ ಹಲವಾರು ಸಾಮಾಜಿಕ, ವೈಜ್ಞಾನಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಕಾರಣಗಳನ್ನು ಗುರುತಿಸಬಹುದಾಗಿದೆ.

ಕನ್ನಡವನ್ನು ಪ್ರಥಮ ಭಾಷೆಯಾಗಿ ನೆಲೆಗೊಳಿಸುವ ಕಾರ್ಯಕ್ರಮಗಳು:

1. ಶಿಕ್ಷಣದ ಹಾಗೂ ಆಡಳಿತದ ಮಾಧ್ಯಮ ಕನ್ನಡವೇ ಆಗಬೇಕು: ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ, ಗ್ರಾಮ ಪಂಚಾಯತಿಯಿಂದ ವಿಧಾನಸೌಧದವರೆಗೆ ಕನ್ನಡ ಭಾಷೆಯ ಬಳಕೆ ಆಗಬೇಕು. ಮಾತೃಭಾಷೆಯ ಮೂಲಕ ಶಿಕ್ಷಣ ನೀಡಬೇಕು, ನಂತರ ಶಿಕ್ಷಣದ ಮೂಲಕ ಕನ್ನಡವನ್ನು ಅಭಿವೃದ್ಧಿಗೊಳಿಸಬೇಕು. ವಿಶ್ವವಿದ್ಯಾಲಯ ಹಂತದವರೆಗೂ ಬೋಧನೆ ಮತ್ತು ಪರೀಕ್ಷೆಗಳು ಕನ್ನಡದಲ್ಲಿಯೇ ಆಗಬೇಕು. ಉನ್ನತ ಶಿಕ್ಷಣದ ಎಲ್ಲ ಹಂತಗಳಲ್ಲಿ ಹಾಗೂ ಎಲ್ಲ ವಿಭಾಗಗಳಲ್ಲಿ ಉತ್ತಮ ಗುಣಮಟ್ಟದ ಪುಸ್ತಕಗಳನ್ನು, ಆಧಾರ ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಬೇಕು.

2. ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕು: ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುತ್ತಿರುವ ಹಾಗೂ ಮಾಡಿದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ನೀಡಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪ್ರಶಸ್ತಿ ಫಲಕ, ನಗದು ಪುರಸ್ಕಾರಗಳನ್ನು ನೀಡಿ ಪ್ರೋತ್ಸಾಹಿಸಬೇಕು. ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಮುಗಸಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸುವುದು ಸ್ತುತ್ಯಾರ್ಹ. ಕರ್ನಾಟಕ ಲೋಕ ಸೇವಾ ಆಯೋಗವು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳು ಕನ್ನಡ ಮಾಧ್ಯಮದಲ್ಲಿ ನಡೆಯಬೇಕು ಹಾಗೂ ಕೇಂದ್ರ ಲೋಕ ಸೇವಾ ಆಯೋಗವು ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಅವಕಾಶ ಕೊಡಬೇಕು.

3. ಪುಸ್ತಕ ಪ್ರಕಾಶನ ಮತ್ತು ಮಾರಾಟ ವ್ಯವಸ್ಥೆ: ಕನ್ನಡ ಪುಸ್ತಕಗಳ ಪ್ರಕಾಶನ, ಸಂಗ್ರಹ ಮತ್ತು ಮಾರಾಟ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕು. ಕನ್ನಡ ಬರಹಗಾರರಿಗೆ ಸೂಕ್ತ ತರಬೇತಿ, ಸಹಾಯಧನ ಮತ್ತು ಪ್ರೋತ್ಸಾಹಗಳನ್ನು ಹೆಚ್ಚಿಸಬೇಕು. ಉದಯೋನ್ಮುಖ ಬರಹಗಾರರಿಗೆ, ಮಹಿಳೆಯರಿಗೆ, ಆಸಕ್ತರಿಗೆ ಸಾಹಿತ್ಯ ರಚನೆಯ ಬಗ್ಗೆ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಕಮ್ಮಟಗಳನ್ನು ಅಕಾಡೆಮಿಗಳು ಹೆಚ್ಚು ಹೆಚ್ಚು ನಡೆಸಬೇಕು. ಕನ್ನಡ ಪುಸ್ತಕಗಳು ಸುಲಭವಾಗಿ ಓದುಗರ ಕೈಗೆ ಸೇರಬೇಕು. ಕನ್ನಡ ಭಾಷಾ ಶಿಕ್ಷಕರಿಗೆ ಶಾಲಾ ಹಂತದ ತರಬೇತಿ, ತಾಲೂಕು, ಜಿಲ್ಲಾ, ರಾಜ್ಯಮಟ್ಟದ ಕಾರ್ಯಾಗಾರಗಳನ್ನು ನಡೆಸಬೇಕು. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಕಾರ್ಯಕ್ರಮಗಳಿಗೆ ಆಧ್ಯತೆ ಕೊಡಬೇಕು. ಪ್ರತಿ ಗ್ರಾಮಗಳಲ್ಲಿ ವಾಚನಾಲಯಗಳನ್ನು ತೆರೆದು ಕನ್ನಡ ಪುಸ್ತಗಳು ಗ್ರಾಮದ ಜನರಿಗೆ ತಲುಪುವಂತೆ ಮಾಡಬೇಕು.

4. ಸಮೂಹ ಮಾಧ್ಯಮಗಳಲ್ಲಿ ಕನ್ನಡ ಕಾರ್ಯಕ್ರಮಗಳು: ಕನ್ನಡ ಭಾಷೆ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಬಹು ಹಿರಿದಾಗಿದೆ. ಪತ್ರಿಕೆಗಳು, ನಿಯತಕಾಲಿಕೆಗಳು, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಬರೀ ಪ್ರಚಾರದ ಹಾವಳಿಗಳನ್ನು ಅಥವಾ ಮೋಹಕ ಕಾರ್ಯಕ್ರಮಗಳನ್ನು ಪ್ರಚಾರ ಮಾಡದೆ ಕನ್ನಡ ನಾಡು-ನುಡಿ, ಕನ್ನಡ ಸಾಹಿತ್ಯ-ಸಂಸ್ಕೃತಿಯ ಕುರಿತಾಗಿರುವ ಕಾರ್ಯಕ್ರಮಗಳನ್ನು ಭಿತ್ತರಿಸಬೇಕು.

5. ಉತ್ತಮ ಕೃತಿಗಳ ರಚನೆ ಹಾಗೂ ಭಾಷಾಂತರ: ಒಂದು ಭಾಷೆಯನ್ನು ಬೆಳೆಸುವಲ್ಲಿ ಆ ಭಾಷೆಯಲ್ಲಿ ರಚನೆಗೊಂಡ ಕೃತಿಗಳ ಗುಣಮಟ್ಟವು ಕೂಡ ಪ್ರಮುಖ ಪಾತ್ರವಹಿಸುತ್ತದೆ. ಉತ್ತಮ ಶ್ರೇಷ್ಠ ಸಾಹಿತ್ಯ ಕೃತಿಗಳು, ಗ್ರಂಥಗಳು ಕೂಡ ಭಾಷೆಯನ್ನು ಬೆಳೆಸುತ್ತವೆ. ಬರೀ ಸಾಹಿತ್ಯ ಕೃತಿಗಳಿಂದ ಮಾತ್ರವಲ್ಲ

ವಿಜ್ಞಾನ, ಶಿಕ್ಷಣ, ಸಂಶೋಧನೆ, ಮುಂತಾದ ಎಲ್ಲ ಕ್ಷೇತ್ರಗಳಲ್ಲಿನ ವಿಷಯಗಳ ಕುರಿತು ಉತ್ತಮ ಕೃತಿಗಳ ರಚನೆಯಾಗಬೇಕು. ಅಲ್ಲದೆ ಬೇರೆ ಭಾಷೆಯ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವುದು ಕೂಡ ಸೂಕ್ತ ಕಾರ್ಯ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಸರಕಾರ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರಸಾರ ಮತ್ತು ಪ್ರಚಾರ ಮಾಡಬೇಕು.

6. ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಕನ್ನಡ ಅಳವಡಿಕೆ: ಆಡಳಿತ ಆಧುನೀಕರಣದಲ್ಲಿ ಬಳಸಲಾಗುವ ಎಲೆಕ್ಟ್ರಾನಿಕ್ ಉಪಕರಣಗಳು, ಕಂಪ್ಯೂಟರ್‌ಗಳು, ಬೆರಳಚ್ಚು ಯಂತ್ರಗಳು, ಟೆಲಿಪ್ರಿಂಟರ್‌ಗಳಲ್ಲಿ ಕನ್ನಡವನ್ನು ಅಳವಡಿಸುವ ಬಗ್ಗೆ ಪ್ರಯತ್ನಗಳಾಗಿವೆ. ಇವುಗಳು ಇನ್ನಷ್ಟು ಮತ್ತಷ್ಟು ಹೆಚ್ಚಾಗಬೇಕು.

7. ಭಾಷಾ ಬೋಧನೆಯಲ್ಲಿ ವೈಜ್ಞಾನಿಕ ಮಾರ್ಗಗಳನ್ನು ಅಳವಡಿಸುವುದು: ಕನ್ನಡ ಭಾಷಾ ಬೋಧನೆ ಮತ್ತು ಕಲಿಕೆಯನ್ನು ಹೆಚ್ಚು ವಸ್ತುನಿಷ್ಟಗೊಳಿಸುವಲ್ಲಿ ಸಂಶೋಧನೆಗಳನ್ನು ಕೈಗೊಳ್ಳಬೇಕು. ಮಕ್ಕಳ ಶಿಕ್ಷಣದಲ್ಲಿ ಆಲಿಸುವಿಕೆ, ಮಾತುಗಾರಿಕೆ, ಓದು, ಬರವಣಿಗೆ ಬಗ್ಗೆ ವೈಜ್ಞಾನಿಕ ವಿಧಾನಗಳನ್ನು, ಅಭ್ಯಾಸಗಳನ್ನು ಕುರಿತಂತೆ ಶಿಕ್ಷಕರಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಪ್ರಬಂಧ ರಚನೆ, ನಾಟಕ, ಕಥೆ, ಕವನ, ವಿಚಾರಸಾಹಿತ್ಯ, ಇತ್ಯಾದಿ ಬರಹಗಳ ಬಗೆಗೆ ಪ್ರೌಢ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳನ್ನು ನಡೆಸಿ, ನಾಡು ನುಡಿಯ ಬಗ್ಗೆ ಅಭಿಮಾನ ಮೂಡಿಸುವಂತಹ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರ ಹಮ್ಮಿಕೊಳ್ಳಬೇಕು.

8. ಕನ್ನಡಿಗರ ಸರ್ವಾಂಗೀಣ ಅಭಿವೃದ್ಧಿಗೆ ಕಾರ್ಯಕ್ರಮಗಳು: ಕನ್ನಡ ಕಾರ್ಯಕ್ರಮಗಳು ಕನ್ನಡ ಭಾಷೆಗೆ, ಸಾಹಿತ್ಯಕ್ಕಷ್ಟೇ ಸೀಮಿತವಾಗಬಾರದು. ಕರ್ನಾಟಕದ ಜನತೆಯ ಶಿಕ್ಷಣ, ಸಾಮಾಜಿಕ ಪ್ರಗತಿ, ಉದ್ಯೋಗ, ಆರೋಗ್ಯ, ವ್ಯವಸಾಯ, ಕೈಗಾರಿಕೆ ಅಭಿವೃದ್ಧಿಯಾಗಬೇಕು. ನಮ್ಮ ಕಲೆ, ಸಂಸ್ಕೃತಿಗಳು, ಜನಪದಗಳು ಬೆಳೆಯಬೇಕು. ಕೇಂದ್ರ ಮತ್ತು ರಾಜ್ಯ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಒದಗಿಸುವ ಸಂಬಂಧ ಡಾ. ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸಬೇಕು. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ವಿಸ್ತರಿಸಬೇಕು. ಗಡಿನಾಡಿನ ಕನ್ನಡಿಗರಿಗೆ ಶಿಕ್ಷಣ, ಹೊರನಾಡಿನ ಕನ್ನಡಗರ ಹಿತಾಸಕ್ತಿ ಕಾಯುವುದು, ಕನ್ನಡೇತರರಿಗೆ ಕನ್ನಡ ಕಲಿಸಲು ಅವರೊಂದಿಗೆ ಸೌಹಾರ್ದತೆ ಬೆಳೆಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಗ್ರಾಮೀಣ ಕನ್ನಡ ಶಾಲೆಗಳಿಗೆ ಸಾರಕಾರ ಅನುದಾನವನ್ನು ಹೆಚ್ಚು ಹೆಚ್ಚು ನೀಡಬೇಕು. ಈ ರೀತಿಯ ಸಮಗ್ರ ಅಭಿವೃದ್ಧಿಯೊಂದಿಗೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಗಟ್ಟಿಯಾಗಿ ಬೆಳೆಯಬೇಕು.

9. ಕನ್ನಡದಲ್ಲಿ ಪತ್ರ ವ್ಯವಹಾರ: ಸರಕಾರವು ಎಲ್ಲ ರೀತಿಯ ಪತ್ರ ವ್ಯವಹಾರ, ಆದೇಶಗಳನ್ನು ಕನ್ನಡದಲ್ಲಿಯೇ ಹೊರಡಿಸಬೇಕು. ಆಡಳಿತದಲ್ಲಿ ಉತ್ತಮವಾಗಿ ಕನ್ನಡವನ್ನು ಬಳಸುವ ಅಧಿಕಾರಿಗಳಿಗೆ ಪ್ರೋತ್ಸಾಹ ನೀಡಬೇಕು. ಕನ್ನಡ ಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ಸಹಾಯಧನ ನೀಡಬೇಕು. ಕನ್ನಡ ಪುಸ್ತಕಗಲ ಪ್ರಕಾಶನಕ್ಕೆ ರಿಯಾಯಿತಿ ಕೊಡಬೇಕು. ಎಲ್ಲ ಕಾರ್ಯಾಲಯಗಲಲ್ಲಿ, ಅಂಗಡಿಗಳಲ್ಲಿ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಹಾಕಬೇಕು. ಈ ರೀತಿಯಾಗಿ ಮಾಡಿದರೆ ಕನ್ನಡತನ, ಕನ್ನಡ ಪರಿಸರ ನಿರ್ಮಾಣವಾದಂತಾಗುವುದು.

ಈ ಮೇಲಿನ ಎಲ್ಲ ಕನ್ನಡಪರ ಕಾರ್ಯಕ್ರಮಗಳು ಈಗ ಕರ್ನಾಟಕ ಸರಕಾರದ ಪ್ರಣಾಳಿಕೆಯಲ್ಲಿವೆ. ಇವುಗಳನ್ನು ಸರಕಾರ, ಅಕಾಡೆಮಿಗಳು, ಸಮಿತಿಗಳು, ಒಗ್ಗಟ್ಟಿನಿಂದ

ಅನುಷ್ಠಾನಗೊಳಿಸುವತ್ತ ಕಾರ್ಯಪ್ರವೃತ್ತರಾಗಬೇಕು. ಅಧಿಕಾರಿಗಳು, ಸಿಬ್ಬಂದಿ ವರ್ಗ, ಶಿಕ್ಷಕರು, ಉನ್ನತ ಶಿಕ್ಷಣ ಪಡೆದವರು, ವಿದ್ಯಾವಂತ ಪೋಷಕರು ಎಲ್ಲರೂ ನಿಜವಾದ ಕನ್ನಡಿಗರಾಗಬೇಕು. ಕನ್ನಡತನವನ್ನು ತುಂಬಿಕೊಳ್ಳಬೇಕು. ಕನ್ನಡ ಬೆಳವಣಿಗೆಗೆ ಸಂಕಲ್ಪ ಮಾಡಬೇಕು. ಕನ್ನಡದಲ್ಲಿ ಸಹಿ ಮಾಡುವುದನ್ನು ರೂಢಿ ಮಾಡಿಕೊಳ್ಳಬೇಕು. ಬರೀ ನವೆಂಬರ್ ಒಂದರ ಕನ್ನಡಿಗರಾಗದೆ ನಂಬರ್ ಒನ್ ಕನ್ನಡಿಗರಾಗಬೇಕು. ಕನ್ನಡ ಉಳಿಸುವ, ಬೆಳೆಸುವ, ಕಟ್ಟುವ ಕೆಲಸ ಕೇವಲ ಕನ್ನಡ ಭಾಷಾ ಶಿಕ್ಷಕರದ್ದೆಂದು ಭಾವಿಸದೇ ಎಲ್ಲ ಕನಡಿಗರು ಕನ್ನಡತನದಿಂದ ಸರ್ವ ಕ್ಷೇತ್ರಗಳಲ್ಲೂ ಕನಡವನ್ನು ಬಳಸುತ್ತಾ ಗಟ್ಟಿಗೊಳಿಸಬೇಕು.

ಅ] ಸಾಮಾಜಿಕ ಮತ್ತು ಆಡಳಿತ ಮಾಧ್ಯಮವಾಗಿ ಕನ್ನಡ:

ಭಾಷೆಯು ಅಭಿವ್ಯಕ್ತಿ ಮಾಧ್ಯಮವಾಗಿರುವಂತೆ ಸಂಪರ್ಕ ಸಾಧನವೂ ಆಗಿದೆ.ಸಮಾಜದ ಚಲನಶೀಲತೆಗೆ ಭಾಷೆಯ ಕೊಡುಗೆ ಅಪಾರ. ಒಂದು ಪ್ರದೇಶದ ಮಾತೃಭಾಷೆಯು ಅಲ್ಲಿನ ಜನರನ್ನು ಸಾಮಾಜಿಕವಾಗಿ, ಭಾವನಾತ್ಮಕವಾಗಿ, ಆತ್ಮೀಯವಾಗಿ ಬೆಸೆಯುತ್ತದೆ. ಕರ್ನಾಟಕದಲ್ಲಿ ಎಲ್ಲ ವರ್ಗದ ಜನರು ತಮ್ಮ ಸಾಮಾಜಿಕ ಜೀವನದ ಸರ್ವ ಕ್ಷೇತ್ರಗಳಲ್ಲಿ ಕನ್ನಡವನ್ನು ಬಳಸುವುದರಿಂದ ಕನ್ನಡವು ಬೆಳೆಯುತ್ತದೆ.ಇದರಿಂದ ಸಾಮಾಜಿಕ ಸಂಪರ್ಕ ಉತ್ತಮವಾಗುತ್ತದೆ.ಸಾಮಾಜಿಕ ಬಾಂಧವ್ಯ ವೃದ್ಧಿಸುತ್ತದೆ.

ಸಮಾಜದ ವಿವಿಧ ವರ್ಗಗಳ ನಡುವೆ ವಿಚಾರ ವಿನಿಮಯವಾಗಿ ಸಾಮರಸ್ಯ ಮೂಡುತ್ತದೆ. ಇಡೀ ರಾಜ್ಯದ ಜನ ಸಾಮಾಜಿಕವಾಗಿ ಒಗ್ಗೂಡುವುದು ಸಾಧ್ಯವಾಗುತ್ತದೆ. ಸಾಮಾಜಿಕ ಸಂಸ್ಥೆಗಳು, ಸ್ಥಳೀಯ ಸರಕಾರ ಮತ್ತು ಸಂಘ ಸಂಸ್ಥೆಗಳು, ಕೈಗಾರಿರಿಕೆಗಳು, ಸರ್ಕಾರಿ ಅಧಿಕಾರಿಗಳು, ಸಿಬ್ಬಂಧಿ ವರ್ಗ ಇವರೆಲ್ಲ ತಮ್ಮ ಸಾಮಾಜಿಕ ವ್ಯವಹಾರಗಳಲ್ಲಿ ಕನಡವನ್ನು ಬಳಸಿದರೆ ಕನ್ನಡ ಸಮಾಜವೇ ನಿರ್ಮಾಣವಾಗುತ್ತದೆ.

ಇದೇ ರೀತಿ ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡವೇ ಬಳಕೆಯಾಗಬೇಕು. ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸುವುದರಿಂದ ಕನ್ನಡವು ಸುಲಭವಾಗಿ ಆಡಳಿತ ಮಾಧ್ಯಮ ಭಾಷೆಯಗುತ್ತದೆ. ಕರ್ನಾಟಕದಲ್ಲಿ ಅಧಿಕೃತ ವ್ಯವಹಾರಗಳಿಗೆ ಹಾಗೂ ದಾಖಲೆಗಳಿಗೆ ಸರಕಾರವು ಕನ್ನಡವನ್ನೇ ಕಡ್ಡಾಯವಾಗಿ ಬಳಸುವಂತಾಗಬೇಕು. 1963ರಲ್ಲಿಯೇ ಕರ್ನಾಟಕ ಸರಕಾರವು ಕನ್ನಡ ಭಾಷೆಯನ್ನು 'ಅಧಿಕೃತ ಆಡಳಿತ ಭಾಷೆ' ಎಂದು ಒಪ್ಪಿಕೊಂಡಿದೆ. ಅಂದಿನಿಂದ ಇಂದಿನವರೆಗೂ ಇನ್ನೂ ಎಲ್ಲಾ ಹಂತಗಳಲ್ಲಿ ಸಂಪೂರ್ಣವಾಗಿ ಆಡಳಿತ ಭಾಷೆಯಾಗಿಲ್ಲ. ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವುದರಿಂದ ಮತ್ತು ಅನುಸರಣೆ ಮಾಡುವುದರಿಂದ ಕನ್ನಡ ಭಾಷೆ ಆಡಳಿತ ಮಾಧ್ಯಮವಾಗುವುದರಲ್ಲಿ ಸಂದೇಹವಿಲ್ಲ.

ಆ) ಶಿಕ್ಷಣದಲ್ಲಿ ಭಾಷಾ ನೀತಿಗಳು – ತ್ರಿಭಾಷಾ ಸೂತ್ರ, ಗೋಕಾಕ್ ವರದಿ, ಬರಗೂರು ರಾಮಚಂದ್ರಪ್ಪ ವರದಿ.

ಆಡಳಿತ, ಶಿಕ್ಷಣ, ನ್ಯಾಯಾಂಗ, ಶಾಸಕಾಂಗ, ಸಾಮೂಹಿಕ ಸಂವಹನ ಇತ್ಯಾದಿಗಳಲ್ಲಿ ಭಾಷೆಯ ಬಳಕೆ ಬಗ್ಗೆ ಭಾರತದ ಭಾಷಾ ನೀತಿ ತನ್ನ ವ್ಯಾಪ್ತಿಯಲ್ಲಿ ಬಹುಮುಖಿಯಾಗಿದೆ. ಇದು ಭಾಷೆಯ ಅಭಿವೃದ್ಧಿ ಆಧಾರಿತ ಮತ್ತು ಭಾಷೆ ಬದುಕುಳಿಯುವಿಕೆಯ ಉದ್ಧೇಶವಾಗಿದೆ. ಕೆಲವು ನಿಶ್ಚಿತ ಕ್ರಮಗಳ ಮೂಲಕ, ಕೆಲವು ನಿರ್ಧಿಷ್ಟ ಹಂತಗಳಲ್ಲಿ ಮಾತೃಭಾಷೆಯನ್ನು ಬಳಸಲು ಜನರಿಗೆ ಈ ಭಾಷಾ ನೀತಿಗಳನ್ನು ಜಾರಿಗೆ ತರಲಾಗಿದೆ. ಆದರೆ ಇವುಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಇಂದು ಅತೀ ತುರ್ತಾಗಿದೆ ಎಂದರೆ ತಪ್ಪಗಲಾರದು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ತ್ರಿಭಾಷಾ ಸೂತ್ರ, ಗೋಕಾಕ್ ವರದಿ ಹಾಗೂ ರಾಮಚಂದ್ರಪ್ಪ ವರದಿ.

➢ **ತ್ರಿಭಾಷಾ ಸೂತ್ರ:** ಭಾರತದಲ್ಲಿ ಭಾಷಾ ಸಮಸ್ಯೆಯ ಗೊಂದಲವನ್ನು ಬಗೆಹರಿಸಲು, ವಿವಿಧ ರಾಜ್ಯಗಳ ವಿವಿಧ ಭಾಷೆಗಳ ಜನರ ಮಧ್ಯೆ ಭಾಷಾ ಸಾಮರಸ್ಯ ಬೆಳೆಸಲು, ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಆಯಾ ರಾಜ್ಯಗಳ ಶಿಕ್ಷಣ, ಆಡಳಿತವನ್ನು ಸುಧಾರಿಸುವ ಸದುದ್ಧೇಶದಿಂದ 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿ 15 ಭಾಷೆಗಳನ್ನು ಭಾರತದ ಅಧಿಕೃತ ಭಾಷೆಗಳನ್ನಾಗಿ ಮಾನ್ಯ ಮಾಡಲಾಯಿತು. ಇದೇ ಸಮಯದಲ್ಲಿ (1956) 'ಕೇಂದ್ರ ಶಿಕ್ಷಣ ಸಲಹಾ ಮಂಡಳಿ' ಭಾರತದಲ್ಲಿ ಭಾಷಾ ಸಮಸ್ಯೆಯ ಸಂಕೀರ್ಣತೆಯನ್ನು ಅಧ್ಯಯನ ಮಾಡಿ ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರವನ್ನು ಸೂಚಿಸಿತು. ಈ ಸೂಚನೆಯನ್ನು 1961ರ ಭಾರತದ ರಾಜ್ಯಗಳ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಅಧಿಕೃತವಾಗಿ ಒಪ್ಪಿಕೊಳ್ಳಲಾಯಿತು.

- **ಹಿಂದಿ ಮಾತನಾಡುವ ರಾಜ್ಯಗಳಲ್ಲಿ;** ಇಂಗ್ಲಿಷ, ಹಿಂದಿ ಮತ್ತು ಆಧುನಿಕ ಭಾರತೀಯ ಭಾಷೆ.
- **ಹಿಂದಿಯೇತರ ಮಾತನಾಡುವ ರಾಜ್ಯಗಳು;** ಇಂಗ್ಲಿಷ, ಹಿಂದಿ ಮತ್ತು ಒಂದು ಭಾರತೀಯ ಭಾಷೆ.

ತ್ರಿಭಾಷಾ ಸೂತ್ರದ ಪ್ರಕಾರ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕು.

1. ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ. (ಪ್ರಾಥಮಿಕ ಶಿಕ್ಷಣದಲ್ಲಿ ಈ ಭಾಷೆ ಕಡ್ಡಾಯ)

2. ಭಾರತ ಒಕ್ಕೂಟದ ಅಧಿಕೃತ ಭಾಷೆ ಹಿಂದಿ. ಮಾಧ್ಯಮಿಕ ಶಿಕ್ಷಣದಿಂದ ಈ ಭಾಷೆಯ ಕಲಿಕೆ ಪ್ರಾರಂಭವಾಗುತ್ತದೆ.

3. ಈ ಮೇಲೆ ಸೂಚಿಸದಿರುವ ಒಂದು ಆಧುನಿಕ ಭಾರತೀಯ ಭಾಷೆ ಅಥವಾ ಯುರೋಪಿಯನ್ ಭಾಷೆ. (ಇಂಗ್ಲೀಷ್)

ತ್ರಿಭಾಷಾ ಸೂತ್ರವು ಸರ್ವಸಮ್ಮತವಾಗಿ ಒಪ್ಪದೇ ನೆನೆಗುದಿಗೆ ಬಿದ್ದಿದೆ. ಸಂವಿಧನಾತ್ಮಕವಾಗಿ ಹಿಂದಿ ಭಾಷೆಗೆ ವಿಶೇಷ ಮಾನ್ಯತೆ ನೀಡಲಾಗಿದ್ದು ದಕ್ಷಿಣ ರಾಜ್ಯಗಳ ಮೇಲೆ ಹಿಂದಿಯನ್ನು ಹೇರುವ ಕ್ರಮವನ್ನು ದಕ್ಷಿಣ ರಾಜ್ಯಗಳು ವಿರೋಧಿಸಿವೆ. ತ್ರಿಭಾಷಾ ಸೂತ್ರದಲ್ಲಿ ಹಿಂದಿ ರಾಜ್ಯಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಹಿಂದಿಯೇತರ ರಾಜ್ಯಗಳ ವಿದ್ಯಾರ್ಥಿಗಳು ಮಾತ್ರ ಮೂರು ಭಾಷೆಯನ್ನು

ಕಲಿಯಬೇಕಾಗುತ್ತದೆ ಎಂಬ ಆರೋಪವಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಯ ಬಗೆಗೆ ಕಾಳಜಿ ವಹಿಸಿದೆ. ತ್ರಿಭಾಷಾ ಸೂತ್ರವನ್ನು ಜಾರಿಗೆ ತರುವಲ್ಲಿ ಹೆಚ್ಚಿನ ಪ್ರಯತ್ನಗಳಾಗಬೇಕೆಂದು ಅಭಿಪ್ರಾಯ ಪಟ್ಟಿರುವ ಶಿಕ್ಷಣ ನೀತಿಯು ವಿಶ್ವವಿದ್ಯಾಲಯ ಹಂತಗಳ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗಳೇ ಶಿಕ್ಷಣ ಮಾಧ್ಯಮವಾಗಬೇಕೆಂದು ಸಲಹೆ ಮಾಡಿದೆ.

ತ್ರಿಭಾಷಾ ಸೂತ್ರದ ಗುಣಗಳು:

- ಇದು ಬಹುಭಾಷಾ ಸಾಮರ್ಥ್ಯವನ್ನು ನೀಡುತ್ತದೆ.
- ರಾಷ್ಟ್ರೀಯ ಭಾಷೆಯ ಕಲಿಕೆಯನ್ನು ಸುಲಭಗೊಳಿಸುತ್ತದೆ.
- ಅಂತರರಾಷ್ಟ್ರೀಯ ಭಾಷಾ ಕಲಿಕೆಯನ್ನು ಸೌಲಭಗೊಳಿಸುತ್ತದೆ.
- ಇದು ರಾಷ್ಟ್ರೀಯ ಏಕೀಕರಣವನ್ನು ಉತ್ತೇಜಿಸುತ್ತದೆ.
- ಮಾತೃಭಾಷೆಯ ಕಲಿಕೆ ಸಾಂಸ್ಕೃತಿಕ ಸಂರಕ್ಷಣೆಯಲ್ಲಿ ಸಹಾಯ ಮಾಡುತ್ತದೆ.
- ಇಂಗ್ಲೀಷ ಕಲಿಯುವಿಕೆ ಜಾಗತಿಕ ಗುರುತನ್ನು ಒದಗಿಸುತ್ತದೆ.
- ಹಿಂದಿ ಕಲಿಕೆಗೆ ಅವಕಾಶಗಳನ್ನು ವಿಸ್ತರಿಸುತ್ತದೆ.
- ಮಾತೃ ಭಾಷೆಯ ಕಲಿಕೆ ವಿಚಾರಗಳ ಅಭಿವ್ಯಕ್ತಿಯನ್ನು ಸುಗಮಗೊಳಿಸುತ್ತದೆ.

ತ್ರಿಭಾಷಾ ಸೂತ್ರದ ಅವಗುಣಗಳು:

- ಇದು ಆಡಳಿತಾತ್ಮಕ ಗೊಂದಲವನ್ನು ಸೃಷ್ಟಿಸುತ್ತದೆ.
- ದಕ್ಷಿಣ ಭಾರತದ ಜನರು ತಮ್ಮ ಮೇಲೆ ಹಿಂದಿ ಭಾಷೆಯನ್ನು ಹೊರೆಯನ್ನಾಗಿಸುತ್ತರೆ ಎಂದು ಭಾವಿಸುತ್ತಾರೆ,
- ಮಾತೃಭಾಷೆಯಲ್ಲಿ ಪ್ರಾವಿಣ್ಯತೆ ಸಾಧಿಸದೆ ಮೂರು ಭಾಷೆಗಳನ್ನು ಒಟ್ಟಿಗೆವ್ ಕಲಿಯಲು ಹೊರೆ ಎಂದು ಭಾವಿಸುತ್ತಾರೆ.

➢ **ಗೋಕಾಕ್ ವರದಿ:** ಭಾಷಾ ನೀತಿಯಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆಯ ಹಕ್ಕಿಗಾಗಿ 1980ರ ದಶಕದಲ್ಲಿ ನಡೆದ ಒಂದು ಚಳುವಳಿ/ಆಂದೋಲನವೇ ಗೋಕಾಕ್ ಚಳುವಳಿ. ಇಂಗ್ಲೀಷಿನ ವ್ಯಾಮೋಹ ಒಂದು ಕಡೆ, ಕನ್ನಡಕ್ಕೆ ಬದಲಾಗಿ ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡು ಹೆಚ್ಚು ಅಂಕಗಳನ್ನು ಗಳಿಸುವ ಆಸೆ ಮತ್ತೊಂದು ಕಡೆ. ಹೀಗಾಗಿ ಎಪ್ಪತ್ತರ ದಶಕದಲ್ಲಿ ಪ್ರೌಢಾಶಾಲೆಗಳಲ್ಲಿ ಸಂಸ್ಕೃತವೇ ಮುಖ್ಯವಾಗಿ, ಕನ್ನಡ ಮೂರನೇ ಭಾಶೆಯಾಗಿ ಅಥವಾ ಕನ್ನಡವನ್ನು ಓದದೆಯೇ ಶಿಕ್ಷಣ ಪಡೆಯುವ ವಿಚಿತ್ರ ಪರಿಸ್ಥಿತಿ ಇತ್ತು. ಈ ಬಗ್ಗೆ ಇದ್ದ ಗೊಂದಲವನ್ನು ಸರಿಪಡಿಸಿ ಕರ್ನಾಟಕದ ಶಿಕ್ಷಣದಲ್ಲಿ ಒಂದು ನಿಶ್ಚಿತವಾದ ಭಾಷಾ ನೀತಿಯನ್ನು ಜಾರಿಗೆ ತರುವ ಉದ್ದೇಶದಿಂದ ಡಾ. ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಜಿ. ನಾರಾಯಣ, ಎಸ್.ಕೆ. ರಾಮಚಂದ್ರರಾವ್, ತ. ಸು. ಶಾಮರಾವ್, ಕೆ. ಕೃಷ್ಣಮೂರ್ತಿ, ಎಚ್. ಪಿ. ಮಲ್ಲೇದೇವರು ಈ

ಸಮಿತಿಯ ಸದಸ್ಯರುಗಳಾದರು. ಈ ಸಮಿತಿಯು ದಿನಾಂಕ 27/01/1981 ರಂದು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ತ್ರಿಭಾಷಾ ಸೂತ್ರದಡಿಯಲ್ಲಿ ಕರ್ನಾಟಕದ ಶಾಲೆಗಳಲ್ಲಿ ಕನ್ನಡವನ್ನು ಮುಖ್ಯಭಾಷೆಯನ್ನಾಗಿ ಪರಿಗಣಿಸಬೇಕೆಂಬ ಹಲವಾರು ಬೇಡಿಕೆಗಳನ್ನು ಒಳಗೊಂಡ ವರದಿ ಇದಾಗಿದೆ. ಇದು ಶಿಫಾರಸ್ಸು ಮಾಡಿರುವಂತೆ...

1. ಎಲ್ಲ ಮಕ್ಕಳಿಗೂ ಮೂರನೆಯ ತರಗತಿಯಿಂದ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು.

2. ಪ್ರೌಢ ಶಾಲೆಗಳಲ್ಲಿ8, 9 ಮತ್ತು 10ನೆಯ ತರಗತಿಗಳಲ್ಲಿ ಎಲ್ಲ ವಿದ್ಯಾರ್ಥಿಗಳೂ 150 ಅಂಕಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಓದಬೇಕು. ಇದು ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳಿಗೆ 1981–82 ರಿಂದಲೇ ಜಾರಿಗೆ ಬರತಕ್ಕದ್ದು. ಕನ್ನಡೇತರ ವಿದ್ಯಾರ್ಥಿಗಳಿಗೆ 1981–82ರಿಂದಲೇ ಕನ್ನಡವನ್ನು ಮೂರನೆಯ ತರಗತಿಯಿಂದ 1986–87ರಿಂದ 150 ಅಂಕಗಳ ಕನ್ನಡವನ್ನು ಮೊದಲ ಭಾಷೆಯನ್ನಾಗಿ ಕಲಿಸಬೇಕು.

3. ಕನ್ನಡ ಬಿಟ್ಟು ಉಳಿದ ಭಾಷೆಗಳಲ್ಲಿ (ಇಂಗ್ಲೀಷ, ಉರ್ದು, ತಮಿಳು, ತೆಲಗು, ಮರಾಠಿ, ಹಿಂದಿ, ಸಂಸ್ಕೃತ, ಮಲಯಾಳಂ) ಎರಡನ್ನು 100 ಮತ್ತು 50 ಅಂಕಗಳಿಗೆ ಕಲಿಯಬೇಕು.

ಈ ವರದಿಯು ಕನ್ನಡವನ್ನೇ ಏಕೈಕ ಪ್ರಥಮ ಭಾಷೆಯನ್ನಾಗಿ ಶಿಫಾರಸ್ಸು ಮಾಡಿತ್ತಾದರೂ ಸರಕಾರವು ಈ ನೀತಿಯನ್ನು ಪೂರ್ಣವಾಗಿ ಒಪ್ಪಲಿಲ್ಲ. ಭಾಷಾ ಅಲ್ಪಸಂಖ್ಯಾತರ ರಕ್ಷಣೆಗಾಗಿ ಇರುವ ಸಂವಿಧಾನದ 29, 30ನೆಯ ವಿಧಿಗಳು ಉಲ್ಲಂಘಣೆಯಾಗಬಾರದೆಂದು ಸರಕಾರವು ಕನ್ನಡವನ್ನು ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡುವಲ್ಲಿ ಒಪ್ಪಿಗೆ ನೀಡಲಿಲ್ಲ. ನಂತರ ಕರ್ನಾಟಕದ ಶ್ರೇಷ್ಟ ನ್ಯಾಯಾಲಯವು ಈ ಬಗ್ಗೆ 25/01/1989ರಂದು ಹೊರಡಿಸಿದ ಆದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಭಾಷಾ ಅಧ್ಯಯನದ ಬಗ್ಗೆ ತನ್ನ ನೀತಿಯನ್ನು ಈ ರೀತಿಯಾಗಿ ನಿರೂಪಿಸಿತು.

- 1 ರಿಂದ 4 ನೆಯ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುತ್ತದೆ.
- 3ನೆಯ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಜೊತೆ ಕನ್ನಡವನ್ನು ಐಚ್ಛಿಕವಾಗಿ ಕಲಿಸಲಾಗುತ್ತದೆ. ಆದರೆ ಕನ್ನಡವು ಪರೀಕ್ಷಾ ವಿಷಯವಾಗಿರುವುದಿಲ್ಲ.
- ಮಾತೃಭಾಷೆಯ ಜೊತೆ ಎರಡನೆಯ ಭಾಷೆಯನ್ನು 5ನೆಯ ತರಗತಿಯಿಂದ ಕಲಿಸುವ ವ್ಯವಸ್ಥೆ ಎಲ್ಲೆಡೆ ಇದೆ. ಅದರಂತೆ 5ನೆಯ ತರಗತಿಯಿಂದ ಕನ್ನಡದ ಮಗುವು ಕನ್ನಡೇತರ ಭಾಷೆಯೊಂದನ್ನು, ಕನ್ನಡೇತರ ಮಗುವು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು. ಅದು ಪರೀಕ್ಷಾ ವಿಷಯವೂ ಆಗಿರುತ್ತದೆ ಮತ್ತು ಅದೇ 5ನೆಯ ತರ್ಗತಿಯಿಂದ ಮಗುವಿಗೆ ಮೂರನೆಯ ಭಾಷೆಯನ್ನು ಕಲಿಸುವ ವ್ಯವಸ್ಥೆ ಇರುತ್ತದೆ. ಈ ವ್ಯವಸ್ಥೆ 7ನೆಯ ತರಗತಿಯವರೆಗೆ.
- ಪ್ರೌಢಶಾಲಾ ಹಂತದಲ್ಲಿ (8,9ಮತ್ತು10ನೆಯ ತರಗತಿ) ಮೂರು ಭಾಷೆಗಳ ಅಧ್ಯಯನ ಕಡ್ಡಾಯ (125+100+100). ಕನ್ನಡವನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳದೆ ಇರುವವರು ಉಳಿದ ಎರಡು ಭಾಷೆಗಳಲ್ಲಿ ಒಂದನ್ನು ಕಡ್ಡಾಯವಾಗಿ ಕನ್ನಡವನ್ನು ಆರಿಸಿಕೊಳ್ಳಬೇಕು. ಅಂದರೆ ಮೂರು ಭಾಷೆಗಳಲ್ಲಿ ಕನ್ನಡವು ಒಂದು ಭಾಷೆಯಾಗಿ ಕಡ್ಡಾಯ, ಕನ್ನಡೇತರ ಮಕ್ಕಳಿಗೆ ಕನ್ನಡದಲ್ಲಿ, ಕನ್ನಡ ಮಕ್ಕಳಿಗೆ ಹಿಂದಿಯಲ್ಲಿ 15 ಕೃಪಾಂಕಗಳಿರುತ್ತವೆ.

➢ **ಬರಗೂರು ರಾಮಚಂದ್ರಪ್ಪ ವರದಿ:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಪ್ರೊ. ಬರಗೂರು ರಾಮಚಂದ್ರಪ್ಪನವರು ತಮ್ಮ ವರದಿಯಲ್ಲಿ ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ಬೆಂಬಲವಾಗಿ ಮಹತ್ವದ ಶಿಫಾರಸುಗಳನ್ನು ಸರಕಾರಕ್ಕೆ ನೀಡಿದ್ದಾರೆ. ಶಿಕ್ಷಣ ಮತ್ತು ಶಿಕ್ಷಣದ ಮಾಧ್ಯಮ ಕುರಿತಂತೆ ನೀಡಿರುವ ನೀತಿ ನಿರೂಪಣಾ ವರದಿಯಲ್ಲಿ ಮಾಡಿರುವ ಶಿಫಾರಸುಗಳನ್ನು ಈ ಕೆಳಗಿನಂತೆ ಕಾಣಬಹುದು.

ಶಿಫಾರಸು–1:

ಕರ್ನಾಟಕ ಶಿಕ್ಷಣ ಅಧಿನಿಯಮ–1983 ಇದರಿಂದ ದತ್ತವಾದ ಅಧಿಕಾರವನ್ನು ಬಳಸಿಕೊಂಡು ಸರಕಾರವು ಅಂಗನವಾಡಿ ಮತ್ತು ಕಿಂಡರ್ ಗಾರ್ಟನ್ ಅಂದರೆ ನರ್ಸರಿ ಶಾಲೆಯ (ಎಲ್.ಕೆ.ಜಿ ಮತ್ತು ಯು.ಕೆ.ಜಿ) ಶಿಕ್ಷಣವನ್ನು ಒಟ್ಟುಗೂಡಿಸಿ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಏಕರೂಪತೆ ತರಬೇಕು.ಈ ಪೂರ್ವ ಪ್ರಾಥಮಿಕ ಶಿಕ್ಷಣದಿಂದಲೇ ಕನ್ನಡ ಮಾಧ್ಯಮ ಕಡ್ಡಾಯವಾಗಬೇಕು.

ಶಿಫಾರಸು–2:

ಅ] 1ನೆಯ ತರಗತಿಯಿಂದ 7ನೆಯ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ– ಎಂಬುದನ್ನು ಸರಕಾರದ ದಾಖಲೆಗಳೇ ಒಪ್ಪಿದ್ದು, ಈ ಪ್ರಾಥಮಿಕ ಶಿಕ್ಷಣವು – ಅಚಿದರೆ 1 ರಿಂದ 7ನೆಯ ತರಗತಿವರೆಗಿನ ಶಿಕ್ಷಣವು – ಸಂಪೂರ್ಣವಾಗಿ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದ ಶಿಕ್ಷಣವಾಗಬೇಕು. ಆಂಗ್ಲಭಾಷಾ ಮಾಧ್ಯಮದ ಪ್ರಾಥಮಿಕ ಶಾಲೆಗಳು ಕ್ರಮವಾಗಿ ಕನ್ನಡ ಮಾಧ್ಯಮದ ಶಾಲೆಗಳಾಗಿ ಪರಿವರ್ತನೆ ಹೊಂದಬೇಕು.

ಆ] ಆಂಗ್ಲ ಮಾಧ್ಯಮದ 1ರಿಂದ 4ನೆಯ ತರಗತಿಗಳು ಕನ್ನಡ ಮಾಧ್ಯಮವಾಗಿ ಪರಿವರ್ತನೆ ಹೊಂದಬೇಕೆನ್ನುವ ಸರ್ಕಾರಿ ಆದೇಶಕ್ಕೆ, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯವರು ತಂದಿರುವ ತಡೆಯಾಜ್ಞೆಯನ್ನು – ಸುಪ್ರೀಂ ಕೋರ್ಟಿನ ಮಾತೃಭಾಷಾ ಮಾಧ್ಯಮದ ಪರವಾದ ತೀರ್ಪಿನ ಹಿನ್ನೆಲೆಯಲ್ಲಿ – ಕೂಡಲೇ ತೆರವು ಮಾಡಿಸಬೇಕು.

ಶಿಫಾರಸು–3:

ಅ] 1 ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿವ್ಯಾಸಂಗ ಮಾಡಿದವರಿಗೆ ಎಲ್ಲ ರೀತಿಯ ವೃತ್ತಿ ಶಿಕ್ಷಣದಲ್ಲಿ (ಬಿ.ಇ; ಎಮ್.ಬಿ.ಬಿ.ಎಸ್; ಬಿ.ಈಡಿ; ಟಿ.ಸಿ.ಎಚ್; ಐ.ಟಿ.ಐ; ಪಾಲಿಟೆಕ್ನಿಕ್ ಮುಂತಾದ ಎಲ್ಲಾ ಕೋರ್ಸುಗಳು) ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಕೊಡಬೇಕು.

ಆ] 1ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಆಧ್ಯತೆಯ ಮೇಲೆ ಉದ್ಯೋಗ ನೀಡಲು ತೀರ್ಮಾನಿಸಿ ನಿರ್ಧಿಷ್ಟ ಪ್ರಮಾಣವನ್ನು ನಿಗದಿ ಮಾಡಬೇಕು.

ಇ] ಅ ಮತ್ತು ಆ ನಲ್ಲಿರುವ ಶಿಫಾರಸ್ಸುಗಳು ಗಡಿನಾಡು ಮತ್ತು ಹೊರನಾಡಿನ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ. ಇಲ್ಲಿ ಪ್ರದೇಶದ ನಿರ್ಭಂಧವಿಲ್ಲದೆ ಕನ್ನಡ ಮಾಧ್ಯಮದಲ್ಲಿ 1ರಿಂದ 10ನೆಯ ತರಗತಿಯವರೆಗೆ ವ್ಯಾಸಂಗ ಮಾಡಿರುವುದಷ್ಟೇ ಮಾನದಂಡವಾಗಬೇಕು.

ಶಿಫಾರಸು–4:

ಅ] ಪ್ರಾಥಮಿಕ ಶಿಕ್ಷಣದ 3ನೆಯ ತರಗತಿಯಿಂದ ದ್ವಿತೀಯ ಭಾಷೆಯ ಕಲಿಕೆಯನ್ನು ಪ್ರಾರಂಭಿಸಿ ಆಂಗ್ಲೋ ಇಂಡಿಯನ್ನರನ್ನೂ ಒಳಗೊಂಡಂತೆ ಕನ್ನಡೇತರ ಮಾಧ್ಯಮದ ವಿದ್ಯಾರ್ಥಿಗಳಿಗೆ 3ನೆಯ ತರಗತಿಯಿಂದ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗಬೇಕು. ಇದಕ್ಕೆ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:25/01/1989 ರಂದು ಕೊಟ್ಟಿರುವ ತೀರ್ಪಿನ ಸಹಮತಿ ಇರುವುದನ್ನು ಮನಗಾಣಬೇಕು.

ಆ] ಉರ್ದು ಶಾಲೆಗಳನ್ನು ಒಳಗೊಂಡಂತೆ ಅಲ್ಪಸಂಖ್ಯಾತರ ಶಾಲೆಗಳಿಗೆ ಕಡ್ಡಾಯವಾಗಿ ಪೂರ್ಣಾವಧಿ ಕನ್ನಡ ಅಧ್ಯಾಪಕರನ್ನು ನೇಮಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು.

ಶಿಫಾರಸು–5:

ಪ್ರಾಥಮಿಕ ಹಂತದ 3ನೆಯ ತರಗತಿಯಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸಲು ಪ್ರಾರಂಭಿಸಬೇಕು.ಕನ್ನಡ ಕಲಿಕೆಯ ವಿಧಾನವನ್ನೇ ಇಂಗ್ಲೀಷ ಕಲಿಕೆಗೂ ಅಳವಡಿಸದೆ, ಮಾತುಗಾರಿಕೆ, ಸಂವಾದ, ಸಂವಹನಾಶೀಲತೆಗಳನ್ನು ಬೆಳೆಸುವ ದಿಕ್ಕಿನಲ್ಲಿ ಪರಿಣತಿ ಕೊಡುವಂತೆ ಇಂಗ್ಲೀಷ ಕಲಿಕಾ ವಿಧಾನವನ್ನು ಬದಲಾಯಿಸಬೇಕು.

ಶಿಫಾರಸು–6:

ಕನ್ನಡೇತರ ಮಾತೃಭಾಷಾ ಮಾಧ್ಯಮದವರಿಗೆ ಒಂದು ಭಾಷೆಯಾಗಿ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸುವ ಮತ್ತು ಕನ್ನಡ ಹಾಗೂ ಕನ್ನಡೇತರರು ಪ್ರಾಥಮಿಕ ಶಿಕ್ಷಣದ 3ನೆಯ ತರಗತಿಯಿಂದಲೇ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯುವ ದೃಷ್ಟಿಯಿಂದ ಮೂರು ಭಾಷೆಗಳ ಕಲಿಕಾ ನೀತಿಯನ್ನು ಮುಂದುವರೆಸಿ, ಕಲಿಕೆ ಮತ್ತು ಪರೀಕ್ಷೆಗಳನ್ನು ಕಡ್ಡಾಯಗೊಳಿಸಬೇಕು. (ಈಗಿರುವಂತೆ ಕನ್ನಡವನ್ನು ಸ್ವಪ್ರೇರಣೆಯ ಕಲಿಕೆ, ಪರೀಕ್ಷೆ ಇಲ್ಲ–ಎಂದು ಹೇಳಬಾರದು. ಕನ್ನಡವನ್ನೂ ಒಳಗೊಂಡಂತೆ ಪೂರ್ಣ ಪಠ್ಯಕ್ರಮವು ಕಡ್ಡಾಯವಾಗಿರಬೇಕೆಂಬುದು ಈ ಶಿಫಾರಸಿನ ಆಶಯ) ಆದರೆ ಕನ್ನಡವನ್ನು ಬಿಡದೆ ಯಾವುದಾದರೂ 2 ಭಾಷೆಗಳಲ್ಲಿ ತೇರ್ಗಡೆ ಹೊಂದಿದರೂ ಸಾಕೆಂದು ನಿಯಮ ರೂಪಿಸಬೇಕು.

ಶಿಫಾರಸು–7:

ಕನ್ನಡ ಭಾಷಾ ಮಾಧ್ಯಮ ಮತ್ತು ಕನ್ನಡ ಐಚ್ಚಿಕ ವಿಷಯ ಬೋಧನೆಗೆ ಅವಕಾಶ ಕಲ್ಪಿಸುವ ಶಿಕ್ಷಣ ಸಂಸ್ಥೆಗಳಿಗೆ ವಿಶೇಷವೆಂದು ಪರಿಗಣಿಸಿ ಮುಕ್ತ ಅನುಮತಿ ನೀಡಬೇಕು.ಪದವಿ ಪೂರ್ವ ಮತ್ತು ಪದವಿ ಶಿಕ್ಷಣದಲ್ಲಿ ಕನ್ನಡವನ್ನು ಉಳಿದ ವಿಷಯಗಳೊಂದಿಗೆ ಐಚ್ಚಿಕವಾಗಿ ವ್ಯಾಸಂಗ ಮಾಡಲು ಇಚ್ಚಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಷರತ್ತುಗಳನ್ನು ಅಗತ್ಯ ಪ್ರಮಾಣದಲ್ಲಿ ಸಡಿಲಿಸಿ 'ವಿಶೇಷಾನುದಾನ' ಕಲ್ಪಿಸಬೇಕು.ಸಂಪೂರ್ಣ ಕನ್ನಡ ಮಾಧ್ಯಮದ ಶಾಲೆ ಕಾಲೇಜುಗಳಿಗೆ ವಿಶೇಷಾನುದಾನ ನೀತಿಯನ್ನು ರೂಪಿಸಬೇಕು.

ಶಿಫಾರಸು–8:

ಅ]ಬಿ.ಸಿ.ಎ., ಬಿ.ಬಿ.ಎಂ., ಬಿ.ಎಚ್.ಎಂ., ಮುಂತಾದ ಎಲ್ಲ ಪದವಿ ತರಗತಿಗಳಲ್ಲಿ ಉಳಿದ ಪದವಿ ತರಗತಿಗಳಂತೆಯೇ ಕನ್ನಡವೂ ಪಠ್ಯಕ್ರಮದ ಭಾಗವಾಗಬೇಕು.ಈ ಮೂಲಕ ಪದವಿ ತರಗತಿಗಳ ಪಠ್ಯಕ್ರಮದಲ್ಲಿ ಏಕರೂಪತೆಯನ್ನು ಸಾಧಿಸಬೇಕು.

ಆ] ಎಲ್.ಎಲ್.ಬಿ., ಐ.ಟಿ.ಐ., ನರ್ಸಿಂಗ್ ಶಾಲೆ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಸಬೇಕು. ಅಲ್ಲದೆ ಈ ಕೋರ್ಸುಗಳಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶ ಕಲ್ಪಿಸಬೇಕು.

ಇ] ಬಿ.ಇಡಿ., ಟಿ.ಸಿ.ಎಚ್ ಗಳಲ್ಲಿ ಕನ್ನಡ ಕಡ್ಡಾಯ ಭಾಷೆಯಾಗಿರಬೇಕು. ಉಳಿದ ವಿಷಯಗಳಿಗೆ ಸಮಾನವಾಗಿರುವಂತೆ ಅಂಕಗಳನ್ನು ನಿಗದಿ ಮಾಡಬೇಕು.

ಈ] ವಿದೇಶಿ ವಿದ್ಯಾರ್ಥಿಗಳಿಗೆ ಜರ್ಮನಿ, ಜಪಾನ್, ರಷ್ಯಾ ಮುಂತಾದ ದೇಶಗಳಲ್ಲಿ ಆಯಾ ದೇಶದ ಭಾಷೆಯನ್ನು ಕಲಿಸುವ ಮಾದರಿಯಲ್ಲಿ ನಮ್ಮ ರಾಜ್ಯದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ (ಬಿ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಇತ್ಯಾದಿ) ಮೊದಲೆರಡು ಸೆಮಿಸ್ಟರ್‌ಗಳಲ್ಲಿ ಹೊರರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವುದನ್ನು ಪಠ್ಯಕ್ರಮದ ಭಾಗವಾಗಿಸಬೇಕು. ಅಸಮತೋಲನದ ನಿವಾರಣೆಗಾಗಿ ಅದೇ ಅವಧಿಯಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಸೂಕ್ತ ಪಠ್ಯಕ್ರಮದೊಂದಿಗೆ ಕನ್ನಡವನ್ನು ಬೋಧಿಸಬೇಕು.

ಉ] ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದ ತರಗತಿಗಳು ನಡೆಯುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಅನುವಾದ ಕಾರ್ಯವನ್ನು ಒಳಗೊಂಡಂತೆ ಒಟ್ಟು ಕನ್ನಡಪರ ಕ್ರಿಯೆಗಾಗಿ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗ ಇರಬೇಕು.

ಊ] ಬಡ ಕನ್ನಡಿಗರ ಅನುಕೂಲಕ್ಕಾಗಿ ಮತ್ತು ಶಿಕ್ಷಣ ನೀತಿಯನ್ನು ಜನಮುಖಿಗೊಳಿಸುವ ಉದ್ದೇಶಕ್ಕಾಗಿ ವೃತ್ತಿಪರ ಪದವಿ ಕೋರ್ಸುಗಳನ್ನು ಆದ್ಯತೆಯ ಮೇಲೆ ಸರಕಾರಿ ಕಾಲೇಜುಗಳಿಗೆ ಕೊಡಬೇಕು.

ಶಿಫಾರಸು–9:

ಎಲ್ಲ ವಿಶ್ವವಿದ್ಯಾಲಯಗಳ ಎಲ್ಲ ವಿಷಯಗಳ ಪದವಿ ತರಗತಿಗಳಿಗೆ 'ಕ್ರಿಯಾತ್ಮಕ ಕನ್ನಡ' ಪಠ್ಯಕ್ರಮವನ್ನು ರೂಪಿಸಿ, ಬೋಧಿಸುವ ವ್ಯವಸ್ಥೆಯಾಗಬೇಕು.

ಶಿಫಾರಸು–10:

5ನೆಯ ತರಗತಿಯಿಂದ ಪ್ರಾರಂಭಿಸಿ ಕನಿಷ್ಟ ಪದವಿಪೂರ್ವ ತರಗತಿಯವರೆಗೆ ಕನ್ನಡ ಪಠ್ಯಪುಸ್ತಕಗಳು ಕನ್ನಡ ಸಂಸ್ಕೃತಿ ಪಠ್ಯಗಳಾಗಿ ರೂಪಾಂತರ ಹೊಂದಬೇಕು.ಸಮಕಾಲೀನ ಸಂಸ್ಕೃತಿಯ ಸಂಗತಿಗಳನ್ನೂ ಒಳಗೊಂಡಂತೆ ವಿಕಾಸ ಕ್ರಮದಲ್ಲಿ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಆಸಕ್ತಿದಾಯಕ ಪರಿಚಯವಾಗಬೇಕು. 'ಕನ್ನಡ ಭಾರತಿ' ಮುಂತಾದ ಹೆಸರುಗಳ ಬದಲು 'ಕನ್ನಡ ಸಂಸ್ಕೃತಿ ಪಠ್ಯ' ಅಥವಾ 'ಕನ್ನಡ ಸಾಂಸ್ಕೃತಿಕ ಪಠ್ಯ' ಎಂದು ಹೆಸರಿಸಬೇಕು.

ಶಿಫಾರಸು–11:

ಸರಕಾರದ ಮತ್ತು ಸರಕಾರದಿಂದ ಮನ್ನಣೆ ಪಡೆದ ಸಂಸ್ಥೆಗಳ ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡವು ಬೋಧನೆ ಮತ್ತು ಬಳಕೆಯ ಭಾಷೆಯಾಗಬೇಕು. ಇಂಗ್ಲೀಷೊಂದೇ ಬೋಧನೆ ಹಾಗೂ ಬಳಕೆಯ ಭಾಷೆಯಾಗಿರಬಾರದು.

ಶಿಫಾರಸು–12:

ಶಿಕ್ಷಣ ಕ್ರಮದ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ನಮ್ಮ ದೇಶದೊಳಗಿನ ಜನ ಅಧಿಕೃತ ಮಾತೃಭಾಷೆಗಳು ಮಾತ್ರ ಇರಬೇಕು. ವಿದ್ಯಾರ್ಥಿಯು ಪ್ರಥಮ ಭಾಷೆಯಾಗಿ ತನ್ನ ಮಾತೃಭಾಷೆಯನ್ನು ಕಲಿಯಬೇಕು ಅಥವಾ ತನ್ನ ಮಾತೃಭಾಷೆಯ ಬದಲು ರಾಜ್ಯದ ಪ್ರಾದೇಶಿಕ ಭಾಷೆಯನ್ನು ಮಾತ್ರ ಕಲಿಯಲು ಅವಕಾಶವಿರಬೇಕು. ಕರ್ನಾಟಕ ವಾಸಿಗಳ ಮಾತೃಭಾಷೆಗಳಲ್ಲದ ಸಂಸ್ಕೃತದಂತಹ ಶಾಸ್ತ್ರೀಯ ಭಾಷೆಗಳು ಪ್ರಥಮ ಭಾಷೆಗಳ ಪಟ್ಟಿಯಲ್ಲಿರಬಾರದು. ಆಂಗ್ಲೋ ಇಂಡಿಯನ್ನರು ತಮ್ಮ 'ಮಾತೃಭಾಷೆ'ಯೆಂದು ಸ್ಥಾಪಿಸಿಕೊಂಡಿರುವ ಇಂಗ್ಲೀಷನ್ನು ಇತರರು ಪ್ರಥಮ ಭಾಷೆ ಮತ್ತು ಮಾಧ್ಯಮವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿರಬಾರದು.

ಶಿಫಾರಸು–13:

ಅಧಿಕೃತವಾಗಿ ಕನ್ನಡವು ಕಡ್ಡಾಯ ಶಿಕ್ಷಣ ಮಾಧ್ಯಮವಾಗದೆ ಇರುವ ಯಾವುದೇ ಹಂತದ ತರಗತಿಗಳಲ್ಲಿ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳು ಕನ್ನಡದಲ್ಲಿ ಪಾಠ ಕೇಳಲು ಅಪೇಕ್ಷಿಸಿದರೆ ಆಂಗ್ಲಭಾಷೆಯ ಜೊತೆಗೆ ಕನ್ನಡದಲ್ಲೂ ಪಾಠ ಮಾಡಲು ಅವಕಾಶವಿರಬೇಕು ಅಥವಾ ಗಣನೀಯ ಪ್ರಮಾಣದ ವಿದ್ಯಾರ್ಥಿಗಳು ಕನ್ನಡದಲ್ಲು ಮಾತ್ರ ಪಾಠ ಕೇಳಲು ಇಚ್ಚಿಸಿದರೆ ಪ್ರತ್ಯೇಕ ವಿಭಾಗ ತೆರೆಯಲು ಅವಕಾಶವಿರಬೇಕು ಮತ್ತು ಅವರಿಗೆ ಕನ್ನಡದಲ್ಲೇ ಪರೀಕ್ಷೆ ನಡೆಸಬೇಕು. ಆಂಗ್ಲ ಮಾಧ್ಯಮ ತರಗತಿಗಳಲ್ಲಿ ಕನ್ನಡದ ಪಾಠ ಹೇಳಲು ಇಚ್ಚಿಸುವ ಅಧ್ಯಾಪಕರಿದ್ದರೆ ಅದಕ್ಕೆ ಅವಕಾಶವಿರಬೇಕು.ಈ ಬಗ್ಗೆ ಅಗತ್ಯಕ್ರಮಗಳನ್ನು ಕೈಗೊಳ್ಳಬೇಕು.ಒಟ್ಟಿನಲ್ಲಿ ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡದಲ್ಲಿ ಪಾಠ ಕೇಳುವುದು ಮತ್ತು ಕನ್ನಡದಲ್ಲಿ ಪಾಠ ಮಾಡುವುದು ಒಂದು ಹಕ್ಕಾಗಬೇಕು.

ಶಿಫಾರಸು–14:

ಶಿಕ್ಷಣದ ಪಠ್ಯಕ್ರಮ, ಮಾಧ್ಯಮ, ಸಮವಸ್ತ್ರ, ಕಾಲಾವಧಿ– ಮುಂತಾದ ಮುಖ್ಯ ಅಂಶಗಳಲ್ಲಿ ಏಕರೂಪತೆಯನ್ನು ಸಾಧಿಸುವ ಶಿಕ್ಷಣ ನೀತಿಯನ್ನು ರೂಪಿಸಿ ಅಮತೋಲನವನ್ನು ಹೋಗಲಾಡಿಸಬೇಕು.

ಶಿಫಾರಸು–15:

ಅ] ಗಡಿನಾಡು ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳ ಚರ್ಚೆಗೆ ಗಡಿಭಾಗದ ರಾಜ್ಯಗಳ ಎಲ್ಲ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು, ಸಂಸ್ಕೃತಿ ಸಚಿವರು, ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳು, ಇತರೆ ವರಿಷ್ಠಾಧಿಕಾರಿಗಳು ಭಾಷಾಭಿವೃದ್ಧಿಗೆ ಸಂಬಂಧಿಸಿದ ಅಧಿಕೃತ ವರಿಷ್ಠರು– ವರ್ಷಕ್ಕೆ ಎರಡು ಬಾರಿಯಾದರೂ ಸೇರಿ ಚರ್ಚಿಸುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಕರ್ನಾಟಕ ಸರಕಾರವೇ ನೇತೃತ್ವವಹಿಸಿ ಮುಂದಾಗಬೇಕು.

ಆ] ಗಡಿನಾಡು ಮತ್ತು ಹೊರನಾಡಿನವರು 1 ರಿಂದ 10ನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೆ, ಅಂಥವರಿಗೆ ಕರ್ನಾಟಕದೊಳಗಿನ ಅಭ್ಯರ್ಥಿಗಳಿಗೆ ಶಿಕ್ಷಣ

ಮತ್ತು ಉದ್ಯೋಗದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಮುಕ್ತವಾಗಿ ನೀಡಬೇಕು. ಇಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದೊಂದೇ ಮಾನದಂಡವಾಗಬೇಕು.

ಇ] ಕರ್ನಾಟಕದ ಗಡಿಭಾಗದ ಹೊರ ಸಮೀಪದ ಅಸಂಖ್ಯಾತ ವಿದ್ಯಾರ್ಥಿಗಳು ಗಡಿಭಾಗದ ಒಳಸಮೀಪದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ಅಂಥವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಪಾಸ್ ಸೌಲಭ್ಯ ಒದಗಿಸಬೇಕು.

ಈ] ಗಡಿಭಾಗದ ಒಳಸಮೀಪದ ಸರಕಾರಿ ಕನ್ನಡ ಶಾಲೆಗಳು ತೀರಾ ದುಃಸ್ಥಿತಿಯಲ್ಲಿದ್ದು ಅವುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಆರ್ಥಿಕ ಸೌಲಭ್ಯ ನೀಡಬೇಕು. ಗಡಿಭಾಗದಲ್ಲಿ ಅವುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಆರ್ಥಿಕ ಸೌಲಭ್ಯ ನೀಡಬೇಕು.ಗಡಿಭಾಗದಲ್ಲಿ ಇನ್ನೂ ಅನೇಕ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳ ಅಗತ್ಯವಿದ್ದು ಸರಕಾರವು ಸಮೀಕ್ಷೆ ನಡೆಸಿ ಅಗತ್ಯವಿದ್ದ ಕಡೆ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ತಕ್ಷಣ ಕ್ರಮಕೈಗೊಳ್ಳಬೇಕು.

ಉ] ಗಡಿಭಾಗದ ಒಳಸಮೀಪದ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಆದ್ಯತೆಯ ಮೇಲೆ ಅನುಮತಿ ಕೊಡಬೇಕು.

ಊ] ಗಡಿಭಾಗದ ಹೊರಸಮೀಪದಲ್ಲಿರುವ ಹಾಗೂ ತಾಂತ್ರಿಕವಾಗಿ ಹೊರರಾಜ್ಯಕ್ಕೆ ಸೇರಿರುವ ಕನ್ನಡ ಶಾಲೆಗಳಿಗೆ ಪ್ರೋತ್ಸಾಹಕವಾಗಿ ಗ್ರಂಥಭಂಡಾರ, ಪ್ರಯೋಗಾಲಯ, ಪೀಠೋಪಕರಣ– ಇಂತಹ ಸೌಲಭ್ಯಗಳಿಗಾಗಿ ನಿಗದಿತ ಪ್ರಮಾಣದ ಸಹಾಯ ಧನ ಕೊಡಲು ಸರಕಾರವು ಕ್ರಮ ಕೈಗೊಳ್ಳಬೇಕು.

ಋ] ಹೊರರಾಜ್ಯಗಳ ಒಳಗೆ ಹಾಗೂ ಗಡಿಭಾದಲ್ಲಿರುವ ಕನ್ನಡ ಶಾಲೆಗಳಿಗೆ ಪಠ್ಯಪುಸ್ತಕಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ಅಧ್ಯಾಪಕರ ನೇಮಕವೂ ವಿಳಂಬವಾಗುತ್ತಿದೆ.ಈ ಬಗ್ಗೆ ಸಂಬಂಧಪಟ್ಟ ರಾಜ್ಯ ಸರಕಾರಗಳ ಮೇಲೆ ನಮ್ಮ ಸರಕಾರವು ಕಾಲಕಾಲಕ್ಕೆ ಒತ್ತಡ ತರಬೇಕು.

ಎ] ಕರ್ನಾಟಕದ ಟಿ.ಸಿ.ಎಚ್ ನಂತೆಯೇ ಮಹಾರಾಷ್ಟ್ರದಲ್ಲಿ ಡಿ.ಇ.ಡಿ ಎಂಬ ಕೋರ್ಸ್ ಇದೆ. ಕರ್ನಾಟಕದಲ್ಲಿ ಟಿ.ಸಿ.ಎಚ್ ಮಾಡಿದ ಮರಾಠಿಗರಿಗೆ ಮಹಾರಾಷ್ಟ್ರ ಸರಕಾರವು ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಜಿ ಸಲ್ಲಿಸಲು ಅವಕಾಶ ಕೊಡುತ್ತಿದ್ದು, ಮಹಾರಾಷ್ಟ್ರದಲ್ಲಿ ಕನ್ನಡದಲ್ಲಿ ಡಿ.ಇ.ಡಿ ಮಾಡಿದ ಕನ್ನಡಿಗರಿಗೆ ಕರ್ನಾಟಕದಲ್ಲಿ ಶಿಕ್ಷಕರ ಹುದ್ಧೆಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲವೆಂದು ಹೇಳಲಾಗಿದೆ.ಕನ್ನಡದಲ್ಲಿ ಮಾಡಿದ ಡಿ.ಇ.ಡಿ ಕೋರ್ಸು ಟಿ.ಸಿ.ಎಚ್ ಗೆ ಸಮಾನವೆಂದು ಪರಿಗಣಿಸಿ ಶಿಕ್ಷಕ ಹುದ್ಧೆಗೆ ಅರ್ಜಿ ಹಾಕಲು ಅವಕಾಶ ಕೊಡಬೇಕು.

ಏ] ಗಡಿನಾಡು ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕೆಲಸಗಳಿಗೆ ಉತ್ತೇಜಕವಾಗುವಂತಹ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶೇಷ ಆದ್ಯತೆಯ ಮೇಲೆ ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

ಪ್ರೊ ಬರಗೂರು ರಾಮಚಂದ್ರಪ್ಪ ಅವರುತಮ್ಮ ವರದಿಯಲ್ಲಿ ಶಿಕ್ಷಣ ಮತ್ತು ಶಿಕ್ಷಣ ಮಾಧ್ಯಮದ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಅಂಶಗಳ ಉನ್ನತಿಗಳನ್ನು ಕುರಿತು ಸರಕಾರಕ್ಕೆ ಸಲಹೆ ನೀಡಿದ್ದಾರೆ. ಮಕ್ಕಳ ಶಿಕ್ಷಣ ನೀಡುವಿಕೆಯಲ್ಲಿರುವ ಅಸಮಾನತೆಗಳನ್ನು ಹೋಗಲಾಡಿಸಿ ಏಕರೂಪತೆ ಗುಣಹೊಂದಿರುವ ಗುಣಮಟ್ಟದ ಶಿಕ್ಷಣ ನೀಡುವ ಅಗತ್ಯವನ್ನು ಎತ್ತಿಹಿಡಿದಿದ್ದಾರೆ. ಗಡಿನಾಡಿನಲ್ಲಿ ಕನ್ನಡ ಮಾಧ್ಯಮ ಮತ್ತು ಶಿಕ್ಷಣವನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರತ್ಯೇಕವಾದ 'ಗಡಿನಾಡು ಶಿಕ್ಷಣ

ನಿರ್ದೇಶನಾಲಯ'ವನ್ನು ಸ್ಥಾಪಿಸಬೇಕು.ಬೆಳಗಾವಿಯು ಈ ನಿರ್ದೇಶನಾಲಯದ ಕೇಂದ್ರ ಸ್ಥಾನವಾಗಬೇಕೆಂದು ಶಿಫಾರಸು ಮಾಡಿದ್ದಾರೆ.

2.3 ಶಿಕ್ಷಣ ಮಾಧ್ಯಮವಾಗಿ ಮಾತೃ ಭಾಷೆ, ತಜ್ಞರ ಅಭಿಪ್ರಾಯಗಳು:

ಸ್ವಾತಂತ್ರ್ಯ ಬಂದು 78 ವರ್ಷಗಳು ಕಳೆದರೂ ಭಾರತದಲ್ಲಿ ರಾಷ್ಟ್ರಭಾಷೆ ಯಾವುದು? ಆಡಳಿತ ಭಾಷೆ ಯಾವುದು? ಶಿಕ್ಷಣದ ಭಾಷೆ ಯಾವುದಿರಬೇಕು? ಎಂಬ ಬಗ್ಗೆ ಖಚಿತ ತೀರ್ಮಾನಗಳು, ಮನಃಪೂರ್ವಕ ಆಚರಣೆಗಳು ಇನ್ನೂ ಬಾರದೇ ಇರುವುದು ವಿಷಾದಕರ. ವಿಶ್ವದ ಎಲ್ಲಾ ಶಿಕ್ಷಣ ತಜ್ಞರು, ವಿಚಾರವಂತರು, ಭಾಷಾಜ್ಞಾನಿಗಳು ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂದು ಅನುಮೋದಿಸಿದ್ದರೂ ಮಾತೃಭಾಷೆ ಶಿಕ್ಷಣ ಮಾಧ್ಯಮವನ್ನು ಬಲಪಡಿಸಲಾಗಲಿಲ್ಲ. ಪೂರ್ವ ಪ್ರಾಥಮಿಕ, ಮಾಧ್ಯಮಿಕ ಹಂತಗಳಲ್ಲಿ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ನೀಡಬೇಕು. ಭಾರತೀಯ ವಿಶ್ವವಿದ್ಯಾಲಯ ಆಯೋಗವು ಶಿಕ್ಷಣದ ಎಲ್ಲಾ ಹಂತಗಳಲ್ಲೂ ಮಾತೃಭಾಷೆಯನ್ನೇ ಬೋಧನಾ ಮಾಧ್ಯಮವನ್ನಾಗಿ ಜಾರಿಗೆ ತರುವ ಗೊತ್ತುವಳಿಯನ್ನು ಸೂಚಿಸಿತು. ನಂತರ ಬಂದ ಭಾರತೀಯ ಶಿಕ್ಷಣ ಆಯೋಗ (1964–66), ರಾಷ್ಟ್ರೀಯ ಶಿಕ್ಷಣ ನೀತಿ–1986, ಗೋಕಾಕ ವರದಿ (1981), ರಾಷ್ಟ್ರೀಯ ಹೊಸ ಶಿಕ್ಷಣ ನೀತಿ–2020 ಇವೆಲ್ಲವುಗಳು ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನೇ ಎತ್ತಿ ಹಿಡಿದಿವೆ.

ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಿರಬೇಕೆಂದು ಹಲವಾರು ಸಮಿತಿಗಳು ಶಿಫಾರಸ್ಸುಗಳನ್ನು ಮಾಡಿವೆ, ಅಲ್ಲದೆ ಶಿಕ್ಷಣ ಚಿಂತಕರು, ಭಾಷಾ ತಜ್ಞರು ಸಹ ಮಗುವಿನ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬ ಬಲವಾದ ಅಭಿಪ್ರಾಯ ವ್ಯಕ್ತಪಡಿಸಿದ್ದರೆ. ಅವರುಗಳಲ್ಲಿ ಪ್ರಮುಖರಾದವರೆಂದರೆ,

• **ಲಪಾಜ್**–ಮಗುವಿನ ತಾಯಿ ತಂದೆಯರಲ್ಲದ ಭಾಷೆಯಲ್ಲಿ ಶಿಕ್ಷಣ ನೀಡುವುದರಿಂದ ಆ ಮಗುವನ್ನು ತನ್ನ ತಾಯಿ ತಂದೆಯರಿಂದ ವಿಮುಖಗೊಳಿಸಿದಂತಾಗುತ್ತದೆ. ದೇಶೀಯವಲ್ಲದ ಭಾಷೆಯಲ್ಲಿ ಮಗುವಿಗೆ ಶಿಕ್ಷಣ ನೀಡುವುದರಿಂದ ಅವರ ದೇಶದ ಸಂಸ್ಕೃತಿಯಿಂದ ಅವನನ್ನು ವಿಮುಖಗೊಳಿಸಿದ ಹಾಗಾದೀತು. ಶಾಲಾ ಕೊಠಡಿಗೆ ಒಂದು ಭಾಷೆ, ಹೊರಗಿನ ಜಗತ್ತಿಗೇ ಒಂದು ಭಾಷೆ ಇವುಗಳೊಂದಿಗೆ ಬೆಳೆದ ವಿದ್ಯಾರ್ಥಿ ದ್ವಂದ್ವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ. ಪರಭಾಷೆಯಲ್ಲಿ ಕಲಿತ ವಿದ್ಯಾರ್ಥಿಯ ವ್ಯಕ್ತಿತ್ವ ಒಂದು ಪಾಲಿಥೀನ್ ಚೀಲದಲ್ಲಿ ಬಂಧಿತವಾಗುತ್ತದೆ. ಕಲಿತ ವಿಷಯಗಳು ಅವನ ಜೀವನ ಕ್ಷೇತ್ರಕ್ಕೆ ಉಪಯುಕ್ತವಾಗದೇ ಹೋಗುತ್ತವೆ ಎಂದು ಲಪಾಜ್ ರವರು ಅಭಿಪ್ರಾಯಪಟ್ಟಿದ್ದಾರೆ.

• **ಮಹಾತ್ಮಾ ಗಾಂಧಿ**– ಮಾತೃಭಾಷಾ ಶಿಕ್ಷಣ ಮಾಧ್ಯಮದ ಬಗೆಗೆ ಮಹಾತ್ಮ ಗಾಂಧಿಯವರ ವಿಚಾರಧಾರೆ ಮಹತ್ವವಾದುದು. ಅವರು ತಮ್ಮ 'ಮೂಲಶಿಕ್ಷಣ'ದಲ್ಲಿ ಮಾತೃಭಾಷಾ ಕಲಿಕೆಗೆ ಮತ್ತು ಮಾತೃಭಾಷೆಯ ಮೂಲಕ ಕಲಿಸುವುದಕ್ಕೆ ವಿಶೇಷ ಆದ್ಯತೆ ನೀಡಿದ್ದಾರೆ. ಇಂಗ್ಲೀಷ ಭಾಷೆ ನಮ್ಮ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಅಡ್ಡಿಯಾಗುತ್ತದೆ. ಬರೀ ಅನುಕರಣೆಯೇ ಶಿಕ್ಷಣವಾಗುತ್ತದೆ. ಅನುಕರಣಶೀಲ

ತಲೆಮಾರನ್ನು ಸೃಷ್ಟಿಸುವ ಮೂಲಕ ಯಾವುದೇ ನಾಡು ರಾಷ್ಟ್ರವಾಗಲಾರದು. ಇಂಗ್ಲೀಷ ಭಾಷೆಯಿಲ್ಲದೇ ನಾವು ಬದುಕಲಾರೆವು ಎಂದು ಭಾವಿಸುವುದು ನಮ್ಮ ಮಾನಸಿಕ ದಾಸ್ಯದ ಪರಿಣಾಮ. ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಅಗತ್ಯವಾದ ಮಾತೃಭಾಷೆಯನ್ನು ಬಿಟ್ಟು ಬೇರೊಂದು ಭಾಷೆಯನ್ನು ಅವರ ಮೇಲೆ ಹೇರುವುದು ಮಾತೃಭೂಮಿಯ ವಿರುದ್ಧ ನಾವು ಎಸಗುವ ಪಾಪವಾಗುತ್ತದೆ. ಪರಭಾಷೆಯ ಮೂಲಕ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡು ಮಾಡಿದೆ; ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ. ಗಾಂದೀಜಿಯವರು ಅಭಿಪ್ರಾಯಪಟ್ಟಿರುವಂತೆ "ಮಾತೃಭಾಷೆಯನ್ನು ನಾವು ಒಂದೇಸಮನೆ ನಿರ್ಲಕ್ಷಿಸಿಕೊಂಡು ಬಂದಿರುವುದಕ್ಕಾಗಿ ಭಾರೀ ಬೆಲೆಯನ್ನೇ ತೆರಬೇಕಾಗುತ್ತದೆ. ಇದರಿಂದಾಗಿ ರಾಷ್ಟ್ರ ಅಪಾರ ನಷ್ಟವನ್ನು ಅನುಭವಿಸುತ್ತದೆ. ಈ ಸಂಕಟದಿಂದ ರಾಷ್ಟ್ರವನ್ನು ಪಾರುಮಾಡುವುದು ಶಿಕ್ಷಿತ ವರ್ಗದ ಪ್ರಥಮ ಕರ್ತವ್ಯ."

ಮಾತೃಭಾಷೆಯನ್ನು ಕಡೆಗಣಿಸಿದರೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನೇ ನಾವು ಅರ್ಥಮಾಡಿಕೊಳ್ಳಲಾರೆವು. ಆದುದರಿಂದ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. "ತಮ್ಮದಲ್ಲದ ಭಾಷೆಯಲ್ಲಿ ಶಿಕ್ಷಣ ಪಡೆಯುವ ಮಕ್ಕಳು ಆತ್ಮಹತ್ಯೆ ಮಾಡಿಕೊಂಡಂತಯೇ."

- **ಜವಹರ್‌ಲಾಲ್‌ನೆಹರು–** ನೆಹರು ಅವರು ಕೂಡ ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನೇ ಬೆಂಬಲಿಸಿದ್ದಾರೆ. ವಿದ್ಯಾರ್ಥಿಗಳ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬುದು ಸರಕಾರದ ನೀತಿಯಾಗಬೇಕು, ಪ್ರತಿಯೊಂದು ಭಾಷಾ ಪ್ರದೇಶದಲ್ಲೂ ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ ಆ ಪ್ರಾಂತ್ಯದ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂದು ಹೇಳಿದ್ದಾರೆ. "ನಮ್ಮ ದೇಶೀಯ ಭಾಷೆಗಳು ಕೇವಲ ಆಡುಮಾತುಗಳಲ್ಲ, ಅವುಗಳಿಗೆ ಅತ್ಯಂತ ಪ್ರಾಚೀನವಾದ ಸಾಹಿತ್ಯವುಂಟು. ಆ ಭಾಷೆಗಳನ್ನಾಡುವ ಲಕ್ಷಾವದಿ ಜನರು ತಮ್ಮ ಸ್ವಂತ ಭಾಷೆಯಲ್ಲಿ ಶಿಕ್ಷಣ ಪಡೆಯುವುದರಿಂದ ಮಾತ್ರವೇ ಅವರು ಮುಂದುವರಿಯಲು ಸಾಧ್ಯ. ಆಯಾ ಪ್ರದೇಶಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಲ್ಲಿಯೇ ಸಾರ್ವಜನಿಕ ಕಾರ್ಯಗಳು ನಡೆಯಬೇಕು, ಶಿಕ್ಷಣ ನೀಡಬೇಕು. ಆ ಪ್ರದೇಶದಲ್ಲಿ ಆ ಭಾಷೆಯೇ ಪ್ರಧಾನ ಭಾಷೆಯಾಗಬೇಕು." ಎಂದು ನೆಹರು ಅವರು ಅಭಿಪ್ರಾಯಪಟ್ಟಿದ್ದಾರೆ.

- **ರವೀಂದ್ರನಾಥ ಟಾಗೂರ್–** ಟಾಗೂರ್ ಅವರು ಭಾರತದಲ್ಲಿ ಶಿಕ್ಷಣ ಮಾಧ್ಯಮವನ್ನು ಕುರಿತು "ಭಾರತವಲ್ಲದೆ ಬೇರಾವ ದೇಶದಲ್ಲೂ ವಿದ್ಯಾರ್ಥಿಯ ಭಾಷೆಗೂ, ಶಿಕ್ಷಣದ ಭಾಷೆಗೂ ಈ ಬಗೆಯ ಅಂತರವಿಲ್ಲ" ಎಂದು ಅಭಿಪ್ರಾಯಪಟ್ಟು, ಮಾತೃ ಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು ಎಂದು ಹೇಳಿದ್ದಾರೆ. ಪ್ರದೇಶ ಭಾಷೆ ಶಿಕ್ಷಣ ಮಾಧ್ಯಮವಾಗದೆ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗುವುದಿಲ್ಲ. ಮಕ್ಕಳ ಮನೆಯ ಭಾಷೆಗೂ, ಶಾಲೆಯ ಭಾಷೆಗೂ, ಸಮಾಜದ ಭಾಷೆಗೂ ವ್ಯತ್ಯಾಸವಿದ್ದಾಗ ಮಕ್ಕಳ ಸ್ವಾಭಾವಿಕ ಬೆಳವಣಿಗೆ ಕುಂಠಿತವಾಗುತ್ತದೆ. ಈಗಾಗಲೇ ತನ್ನ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡುವುದರಿಂದ ಮಗುವಿನ ಶಿಕ್ಷಣ ಹೆಚ್ಚು ಅರ್ಥಪೂರ್ಣವಾಗುತ್ತದೆ. "ವಿದ್ಯಾರ್ಥಿಯ ಭಾಷೆಯಿಂದ ಶಿಕ್ಷಣದ ಭಾಷೆಯ ವಿಚ್ಛೇದನಗೊಂಡಿರುವುದು ಭಾರತ ಹೊರತು ಪ್ರಪಂಚದ ಇನ್ನಾವ ದೇಶದಲ್ಲೂ ಕಾಣಸಿಗದು."

• **ಕುವೆಂಪು–**ಮಾತೃಭಾಷೆಯನ್ನು ಕಡೆಗಣಿಸಿ ಶಿಕ್ಷಣದಲ್ಲಿ ಇಂಗ್ಲೀಷ, ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಬಗ್ಗೆ ವ್ಯಾಮೋಹವ ಪಡುವ ಸ್ಥಿತಿಯನ್ನು ಕುರಿತು "ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ" ಎಂಬ ಕವನದಲ್ಲಿ ಕುವೆಂಪು ಈ ರೀತಿ ಹೇಳಿದ್ದಾರೆ.

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ;
ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು,
ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿ ಮೂಳೆ ಮುರಿಯುತಿದೆ,
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!
ಕೂಗಿಕೊಳ್ಳಲು ಕೂಡ ಬಲವಿಲ್ಲ; ಮಕ್ಕಳೇ
ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ.

ಮಾತೃಭಾಷೆಯ ಮೂಲಕ ಶಿಕ್ಷಣ ಮತ್ತು ಆಡಳಿತ ನಡೆಯಬೇಕು ಎಂಬುದನ್ನು ಸಂಪೂರ್ಣವಾಗಿ ಬೆಂಬಲಿಸಿರುವ ಕುವೆಂಪುರವರು ಈ ಅಭಿಪ್ರಾಯ ಹೊಂದಿದ್ದರು. ಇಂಗ್ಲೀಷ ಮಾಧ್ಯಮದ ಶಿಕ್ಷಣದಲ್ಲಿ ನಮ್ಮ ವಿದ್ಯಾರ್ಥಿಗಳ ಸುಪ್ತಪ್ರತಿಭೆಗಳು ಚಿಗುರೊಡೆಯುವ ಬದಲಾಗಿ ಅವರ ಚೈತನ್ಯವು ಮೊಳಕೆಯಲ್ಲಿಯೇ ಮುರುಟಿ ಹೋಗುತ್ತದೆ.

"ಕನ್ನಡನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು, ಶಿಕ್ಷಣದ ಎಲ್ಲ ಘಟ್ಟಗಳಲ್ಲೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು, ಅದು ರಾಜ್ಯದ ಆಡಳಿತಭಾಷೆಯೂ ಆಗಬೇಕು. ಈ ಸಂಕಲ್ಪಗಳು ಕೈಗೂಡಿದರೆ ಉಳಿದ ಎಲ್ಲಾ ಕೇಡುಗಳು ಕಣ್ಮರೆಯಾಗುತ್ತವೆ." –ಕುವೆಂಪು. (1955ರ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಭಾಷಣ)

• **ಎಂ. ಚಿದಾನಂದಮೂರ್ತಿ–** ಕರ್ನಾಟಕದಲ್ಲಿ ಕನ್ನಡವೇ ಏಕೈಕ ಪ್ರಥಮ ಭಾಷೆಯಾಗಬೇಕು, ಶಿಕ್ಷಣ ಮಾಧ್ಯಮ ಕನ್ನಡವೇ ಕಡ್ಡಾಯವಾಗಿ ಆಗಬೇಕು ಎಂದು ಕನ್ನಡಪರ ಹೋರಾಟ ನಡೆಸುತ್ತಿರುವ ಡಾ. ಎಂ. ಚಿದಾನಂದ ಮೂರ್ತಿ ಅವರ ಅಭಿಪ್ರಾಯದಂತೆ "ಆಂಗ್ಲಶಾಲೆಗಳು ಶಿಕ್ಷಣದಲ್ಲಿ ಹಳ್ಳಿ–ನಗರ ಎಂಬ ಭೇದವನ್ನು, ಬಡವ–ಶ್ರೀಮಂತ ಎಂಬ ಭೇದವನ್ನು ಸೃಷ್ಟಿಸಿ ಸಮಾಜವನ್ನು ಒಡೆದಿವೆ. ದೇಶೀಯ ಸಂಸ್ಕೃತಿಯನ್ನು ಮೂಲೆಗೆ ಒತ್ತರಿಸಿ ವಿದೇಶೀ ಸಂಸ್ಕೃತಿಗೆ ಮಕ್ಕಳನ್ನು ಒತ್ತೆ ಇಟ್ಟಿವೆ. ಮಕ್ಕಳ ಆಲೋಚನಾ ಶಕ್ತಿಯನ್ನು ಕುಂಠಿತಗೊಳಿಸಿ ಅವು ಕೇವಲ ವಿದೇಶೀ ಭಾಷೆಯ ಕಲಿಕೆಯೇ ಜ್ಞಾನ ಎಂಬ ಭ್ರಮೆಯನ್ನು ಹುಟ್ಟಿಸಿವೆ. ಭಾರತವು ಶತ ಶತಮಾನಗಳವರೆಗೆ ದಾಸ್ಯ ಸ್ಥಿತಿಯಲ್ಲಿರುವಂತೆ ಅವು ಮಾಡುತ್ತವೆ. ಅವು ಭ್ರಷ್ಟಾಚಾರದ ಕೂಪಗಳು, ಹಣ ದುಡಿಯುವ ಸಾಧನಗಳು. ಇದಕ್ಕೆಲ್ಲ ಆಂಗ್ಲ ಮಾಧ್ಯಮ ಶಾಲೆಗಳನ್ನು ಮಾತೃಭಾಷಾ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸುವುದೊಂದೇ ಮದ್ದು."

• **ಹಾ.ಮಾ.ನಾಯಕ–** ಶ್ರೇಷ್ಟ ಶಿಕ್ಷಣ ತಜ್ಞರಾದ ಹಾ.ಮಾ.ನಾಯಕರು ಕರ್ನಾಟಕದಲ್ಲಿ ಶಿಕ್ಷಣ ಮಾಧ್ಯಮವನ್ನು ಕುರಿತು "ಕನ್ನಡದ ಮಕ್ಕಳಿಗೆ ಕನ್ನಡವೇ ದಾರಿದೀಪ" ಎನ್ನುತ್ತಾರೆ. "ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ಮಗುವಿನ ಪರಿಸರದ ಭಾಷೆಯನ್ನು ಬಳಸದಿದ್ದರೆ

ಮಗುವಿನಶಕ್ತಿಯೆಲ್ಲ ಸಂಬಂಧವಿಲ್ಲದ ಬೇರೊಂದು ಭಾಷೆ ಕಲಿಯುವುದರಲ್ಲಿಯೇ ವ್ಯಯವಾಗುತ್ತದೆ. ಆದುದರಿಂದ ಜಗತ್ತಿನಾದ್ಯಂತ ಶಿಕ್ಷಣ ತಜ್ಞರು ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಶಿಕ್ಷಣವನ್ನೇ ಪುರಸ್ಕರಿಸಿದ್ದಾರೆ. ಪರಭಾಷೆಯಲ್ಲಿ ಶಿಕ್ಷಣ ಪಡೆಯುವ ಮಗು ದ್ವೀಪವಾಸಿಯಾಗುತ್ತದೆ. ಅದಕ್ಕೆ ತನ್ನವರ ಸಂಪರ್ಕವೇ ತಪ್ಪಿ ಹೋಗುತ್ತದೆ. ಅದರ ಕಲಿಕೆಯಲ್ಲಿ ಮಂಕುಟಾಗುತ್ತದೆ. ಆದುದರಿಂದ ಸಂಪೂರ್ಣವಾಗಿ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ನಡೆಯಬೇಕಾದದ್ದು ಅಗತ್ಯ, ಅವಶ್ಯಕ ಮತ್ತು ಅನಿವಾರ್ಯ. ನಮ್ಮ ದೇಶದ ಅಪಾರವಾದ ಮಾನವಶಕ್ತಿ ಹರಕು ಮುರುಕು ಇಂಗ್ಲೀಷ ಕಲಿಯುವುದರಲ್ಲಿಯೇ ಅಪವ್ಯಯವಾಗುತ್ತಿದೆ. ಇದನ್ನು ತಪ್ಪಿಸಿ ಶಿಕ್ಷಣ ಅರ್ಥವತ್ತಾಗಿ ನಡೆಯಬೇಕಾಗಿದ್ದರೆ ಮಾತೃಭಾಷಾ ಶಿಕ್ಷಣ ಒಂದೇ ಇರುವ ದಾರಿ."

• **ಬಿ. ಎಮ್.ಶ್ರೀ–** ಕನ್ನಡ ನಾಡಿಗೆ ಕನ್ನಡವೇ ಗತಿ ಎಂದು ಹೇಳಿದ ಬಿ.ಎಮ್.ಶ್ರೀಕಂಠಯ್ಯನವರು "ಭಾಷೆಯೆನ್ನುವುದು ನಿತ್ಯಗಟ್ಟಳೆಯ ವ್ಯಾಪಾರಕ್ಕಾಗಿ ಇರುವುದು ಮಾತ್ರವಲ್ಲ, ಅದರ ಮುಖ್ಯ ಕಾರ್ಯ ಒಂದು ಜನಾಂಗವನ್ನು ಸಂಸ್ಕಾರದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಲು ಸಾಧಕವಾಗುವುದು. ಈ ಕೆಲಸ ಕಷ್ಟಪಟ್ಟು ನಮ್ಮ ಬುದ್ಧಿಶಕ್ತಿಯನ್ನೆಲ್ಲಾ ವೆಚ್ಚ ಮಾಡಿ ಕಲಿಯುವ ಪರ ಭಾಷೆಯಿಂದ ನೆರವೇರುವುದಿಲ್ಲ. ಯಾವುದು ಸರಾಗವಾಗಿ ಬಂದಿರುತ್ತದೆಯೋ, ಯಾವುದು ನಮ್ಮನ್ನು ಬೆನ್ನಟ್ಟಿ ಬಂದು ರಕ್ತಗತವಾಗಿರುತ್ತದೋ ಅಂಥ ಭಾಷೆಯಿಂದ ಮಾತ್ರವೇ ಇದು ಸಾಧ್ಯ." ಎಂದಿದ್ದಾರೆ.

• **ಡಾ. ಮಹಾಬಲೇಶ್ವರ ರಾವ್–** ನಾಡಿನ ಖ್ಯಾತ ಶಿಕ್ಷಣ ತಜ್ಞರಾದ ಡಾ.ಮಹಾಬಲೇಶ್ವರ ರಾವ್ ಅವರು "ಶಾಲು ಹಾಕಿಕೊಂಡು ಮೆರೆಯುವುದರಿಂದ, ಹಾ..! ಸವಿ ಗನ್ನಡ, ಸಿರಿಗನ್ನಡ ಎಂಬ ಘೋಷಣೆಗಳನ್ನು ಕೂಗುವುದರಿಂದ, ಆಂಗ್ಲ ನಾಮಫಲಕಗಳಿಗೆ ಮಸಿಬಳಿಯುವುದರಿಂದ ಕನ್ನಡ ಉದ್ಧಾರವಾಗದು. ಈ ನಾಡಿನಲ್ಲಿ ಒಂದರಿಂದ ಹತ್ತನೆಯ ತರಗತಿಯವರೆಗೆ ಕನ್ನಡ ಭಾಷಾ ಶಿಕ್ಷಣ ಮಾಧ್ಯಮ ಜಾರಿಯಾದಾಗಲೇ ಕನ್ನಡ ಜೀವಂತವಾಗಿರಬಲ್ಲುದು" ಎಂಬ ಅಭಿಪ್ರಾಯವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಎಲ್ಲ ಚಿಂತಕರ ಅಭಿಪ್ರಾಯದಂತೆ ಮಗುವಿನ ಶಾಲಾ ಶಿಕ್ಷಣ ಹೊರೆಯೆನಿಸದಂತೆ, ಹಿತಕರವೂ ಸರಳವೂ ಆದ ವ್ಯವಸ್ಥೆಯೆಂದು ತೋರಬೇಕಾದರೆ ಮಗುವಿನ ಮಾತೃಭಾಷೆಯೋ ಅಥವಾ ಪ್ರಾದೇಶಿಕ ಭಾಷೆಯೋ ಶಿಕ್ಷಣ ಮಾಧ್ಯಮವಾಗಿರಬೇಕೇ ಹೊರತು ಇಂಗ್ಲೀಷ ಅಲ್ಲ. ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗಿರುವಂಥ ಕ್ರಮವೂ ಪ್ರಾಥಮಿಕ ಶಾಲಾ ಹಂತದಲ್ಲಿ ಹತ್ತನೆಯ ತರಗತಿಯವರೆಗೆಯಾದರೂ ಕಡ್ಡಾಯವಾಗಿ ಜಾರಿಯಲ್ಲಿರಬೇಕು.

2.4 ಮಾತೃ ಭಾಷಾ ಶಿಕ್ಷಣ ಮಾಧ್ಯಮದ ಪ್ರಾಮುಖ್ಯತೆ / ಅನುಕೂಲಗಳು:

ದೇಶವೊಂದರ ಶಿಕ್ಷಣದ ಗುಣಮಟ್ಟ ಅಲ್ಲಿನ ಶಿಕ್ಷಣ ಮಾಧ್ಯಮವನ್ನೇ ಅವಲಂಬಿಸಿರುತ್ತದೆ.ಶಿಕ್ಷಣ ಅರ್ಥಪೂರ್ಣವಾಗಬೇಕಾದರೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಮಾತೃಭಾಷೆಯು ಕೇವಲ ವ್ಯವಹಾರ ಸಾಧನವಷ್ಟೇ ಅಲ್ಲ, ಅದು ವ್ಯಕ್ತಿಯೊಬ್ಬನ ವಿಕಾಸದ ಮಾಧ್ಯಮ. ಮಗುವಿನ ಸರ್ವತೋಮುಖ ವಿಕಾಸಕ್ಕೆ ಮಾತೃವಿನಷ್ಟೇ ಮಾತೃಭಾಷೆಯೂ ಅಗತ್ಯ. ಮಾತೃಭಾಷೆಯು ವ್ಯಕ್ತಿತ್ವದ ಅಭಿವ್ಯಕ್ತಿ ಮಾಧ್ಯಮವಾಗಿ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುತ್ತದೆ. ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ

ನೀಡುವುದರಿಂದ ತಾವು ಹುಟ್ಟಿ ಬೆಳೆಯುತ್ತಿರುವ ಸಮಾಜದ ಸಂಸ್ಕೃತಿ, ಸಾಹಿತ್ಯ, ಮತ್ತು ಜನಜೀವನವನ್ನು ಅರ್ಥ ಮಾಡಿಕೊಂಡು ಉತ್ಕೃಷ್ಟವಾಗಿ ಬೆಳೆಯುತ್ತಾರೆ. ಅದಕ್ಕಾಗಿ ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿಸಬೇಕು. ಅದರಿಂದಾಗುವ ಅನುಕೂಲಗಳೆಂದರೆ,

- ಜನಿಸಿದ ಮಗುವು ತನ್ನ ತಾಯಿಯ ತೊಡೆಯ ಮೇಲೆ ಬೆಳೆಯುತ್ತಾ, ತಾಯಿಯ ಮಾತುಗಳನ್ನು ಅನುಕರಿಸುತ್ತಾ, ತನ್ನ ತಾಯಿಯ ಭಾಷೆಯನ್ನು ಕಲಿಯುತ್ತದೆ. ತನ್ನ ತಾಯಿಯಿಂದ ಕಲಿತ ಈ ಭಾಷೆಯೇ ಪ್ರಥಮ ಭಾಷೆ. ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಮಾತೆಯ ಹಾಲಿನಷ್ಟೇ ಮಾತೃಭಾಷೆಯೂ ಮುಖ್ಯ.
- ಮಗುವಿನ ಸಾಮಾಜಿಕ, ಸಾಂಸ್ಕೃತಿಕ, ಭಾವನಾತ್ಮಕ ಮತ್ತು ಶೈಕ್ಷಣಿಕ ವಿಕಾಸಕ್ಕೆ ಮಾತೃಭಾಷೆಯೇ ಸಾಧನ.
- ಮಗು ಬೆಳೆದು ವಿಕಾಸವಾಗುತ್ತಾ ಸಮಾಜ ಜೀವಿಯಾದಂತೆ ಆ ಮಗುವಿನ ಮಾತೃಭಾಷೆಯು ಬೆಳೆಯುತ್ತದೆ. ತನ್ನ ಮನೆಯವರು, ನೆರೆಹೊರೆಯವರು ಮತ್ತು ಗೆಳೆಯರ ಜೊತೆ ವ್ಯವಹರಿಸುವಾಗ ತನ್ನ ಮಾತೃಭಾಷೆಯನ್ನೇ ಬಳಸುತ್ತದೆ. ಈ ಭಾಷೆಯನ್ನೇ ಅಭ್ಯಾಸ ಮಾಡುತ್ತದೆ. ಕ್ರಮೇಣ ಶಾಲೆಗೆ ಹೋಗುವ ವೇಳೆಗೆ ತನ್ನ ಭಾಷೆಯನ್ನು ಯಶಸ್ವಿಯಾಗಿ ಬಳಸುವ ಸಾಮರ್ಥ್ಯ ಪಡೆಯುತ್ತದೆ.
- ಶಾಲೆಗೆ ಸೇರಿದ ಮಗುವಿಗೆ ವಿದ್ಯಾಭ್ಯಾಸ ಯಾವ ಭಾಷೆಯಲ್ಲಿ ಪ್ರಾರಂಭವಾಗಬೇಕು, ಶಿಕ್ಷಣ ಮಾಧ್ಯಮ ಯಾವ ಭಾಷೆ ಆಗಬೇಕು ಎಂಬುದು ಅತೀ ಮುಖ್ಯವಾದ ವಿಷಯವಾಗಿರುವುದರಿಂದ, ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.
- ಮಕ್ಕಳ ಆಲೋಚನೆ ಮತ್ತು ಸೃಜನಶೀಲ ಕೌಶಲ ಹಾಗೂ ಸಾಮರ್ಥ್ಯಗಳು ಮಾತೃಭಾಷೆಯಲ್ಲಿಯೇ ಸಹಜವಾಗಿ ಮತ್ತು ಸ್ಪಷ್ಟವಾಗಿ ರೂಪಗೊಳ್ಳುವುದರಿಂದ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು.
- ಕೋಲ್‌ರಿಜ್ ಅವರು ಅಭಿಪ್ರಾಯಪಟ್ಟಂತೆ 'ಮಾತೃಭಾಷೆ ವ್ಯಕ್ತಿಯ ಹೃದಯದ ಭಾಷೆ'– ಆದುದರಿಂದ ಮಾತೃ ಭಾಷೆಯ ಮೂಲಕ ಆಲೋಚನೆಗಳು, ಅಭಿಪ್ರಾಯಗಳು, ಭಾವನೆಗಳು ಸ್ಪಷ್ಟವಾಗಿ, ನೈಜವಾಗಿ ಮೂಡಿಬರುವುದರಿಂದ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು.
- ಪರಭಾಷೆ ಶಿಕ್ಷಣದ ಮಾಧ್ಯಮವಾದರೆ ಮಕ್ಕಳಲ್ಲಿನ ಸೃಜನಶೀಲತೆ, ಮೂಲಪ್ರವೃತ್ತಿ ಹಾಗೂ ಗುಣಗಳು ಕಣ್ಮರೆಯಾಗಿ ಕೃತಕವಾಗುತ್ತದೆ. ಅದುದರಿಂದ ಮಾತೃ ಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.
- ಮಗುವಿನ ಸಾಮಜೀಕರಣದ ಮೊದಲ ನಿಯೋಗ ಮನೆಯಾದರೆ, ಅದರಷ್ಟೇ ಬಹುಮುಖ್ಯ ಪಾತ್ರವನ್ನು ಶಾಲೆಯು ನಿರ್ವಹಿಸುತ್ತದೆ. ಮಗುವಿನ ಸಾಮಾಜೀಕರಣ ಕ್ರಮಬದ್ಧವಾಗಿ ಹಾಗೂ ಲಯಬದ್ಧವಾಗಿ ಸಮಾಜಮುಖಿಯಾಗಿ ಸಾಗಬೇಕೆಂದರೆ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.

• ಮಗು ಶಾಲೆಗೆ ಬರುವುದಕ್ಕಿಂತ ಮೊದಲೇ ಮನೆಯ / ಮಾತೃಭಾಷೆಯನ್ನು ಕಲಿಯಲು ಆರಂಭಿಸಿರುವುದರಿಂದ ಮಗುವಿಗೆ ಗೊತ್ತಿರುವ ಅಂದರೆ ಮಾತೃಭಾಷೆಯಿಂದಲೇ ಶಿಕ್ಷಣವನ್ನು ಆರಂಬಿಸುವುದು ಸೂಕ್ತ ಕ್ರಮವಾಗಿದೆ.

• ಓದು, ಬರಹ, ಚಿಂತನ, ಸೃಜನಶೀಲತೆ, ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಸುಲಭವಾಗಿ ಬೆಳೆಸಲು ಮಾತೃಭಾಷೆಯು ಸಹಕಾರಿಯಾಗಿರುವುದರಿಂದ ಮಗುವಿನ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.

• ಮಗುವಿನ ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗದೇ ಹೋದರೆ ಶಿಕ್ಷಕ ಮತ್ತು ವಿದ್ಯಾರ್ಥಿಯ ಸಂಬಂಧ ಯಾಂತ್ರಿಕಯಾಗುತ್ತದೆ. ಆದ್ದರಿಂದ ಅವರಿಬ್ಬರ ಸಂಭಂಧ ಅನ್ಯೋನ್ಯವಾಗಿದ್ದರೆ ಮಾತ್ರ ಶಿಕ್ಷಣ ಧ್ಯೇಯೋದ್ಧೇಶಗಳನ್ನು ಸಾಧಿಸಲು ಸಾಧ್ಯ. ಅದಕ್ಕಾಗಿ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.

ಒಟ್ಟಾರೆಯಾಗಿ ಮಗುವಿನ ಮಾತೃಭಾಷೆಯನ್ನು ಬಿಟ್ಟು ಅನ್ಯ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿಸಿದರೆ, ಮಗುವಿನಲ್ಲಿರುವ ಆಲೋಚನೆಗಳು, ಸುಪ್ತ ಪ್ರತಿಭೆಗಳು, ವಿಕಾಸವಾಗದೆ ಮರಗಟ್ಟಿ ಹೋಗುತ್ತವೆ.ಮಗುವು ಅನ್ಯಭಾಷೆಯನ್ನು ತನ್ನ ಮಾತೃಭಾಷೆಯ ಮಟ್ಟಕ್ಕೆ ಕಲಿಯಬೇಕಾದರೆ ಸುಮಾರು 10–12 ವರ್ಷಗಳು ಬೇಕಾಗಬಹುದು. ತನ್ನದಲ್ಲದ ಅನ್ಯಭಾಷೆಯನ್ನು ಕಲಿಯುವುದಕ್ಕಾಗಿಯೇ ತನ್ನೆಲ್ಲಾ ಮಾನಸಿಕ ಶ್ರಮ, ಸಮಯ, ಶಕ್ತಿಯನ್ನು ವ್ಯಯಿಸುವುದರಿಂದ ಜ್ಞಾನಾರ್ಜನೆಯನ್ನು ಪಡೆಯುವಲ್ಲಿ ಹಾಗೂ ಮಾನಸಿಕ, ಸಾಮಾಜಿಕ, ಭಾವನಾತ್ಮಕ, ಸಂವಹನ ಎಲ್ಲ ರೀತಿಯ ಬೆಳವಣಿಯಲ್ಲೂ ಕುಂಠಿತತೆ ಕಂಡುಬರುತ್ತದೆ. ಆದ್ದರಿಂದ ಮಗುವಿನ ಮೊದಲ ಭಾಷೆ ಅಂದರೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು.

ಸತ್ತೆನೆಂದೆನಬೇಡ; ಸೋತೆನೆಂದೆನಬೇಡ।
ಬತ್ತಿತೆನ್ನೊಳು ಸತ್ವದೂಟೆಯೆನಬೇಡ॥
ಮೃತ್ಯುವೆನ್ನುವುದೊಂದು ತೆರೆಯಿಳಿತ; ತೆರೆಯೇರು।
ಮತ್ತೆ ತೋರ್ಪುದು ನಾಳೆ – ಮಂಕುತಿಮ್ಮ॥

ಅಧ್ಯಾಯ 3: ವ್ಯಾಕರಣ ಮತ್ತು ಭಾಷಾ ಕೌಶಲ್ಯಗಳ ಪರಿಚಯ

3.1 ಕನ್ನಡ ವ್ಯಾಕರಣ ಪರಿಚಯ –ವ್ಯಾಕರಣದಹಿನ್ನೆಲೆ.

1. ಕನ್ನಡ ಅಕ್ಷರಗಳು –ಮೂಲಾಕ್ಷರಗಳು, ಗುಣಿತಾಕ್ಷರಗಳುಮತ್ತುಸಂಯುಕ್ತಾಕ್ಷರಗಳು;
ಪದಗಳು– ನಾಮಪದ, ಕ್ರಿಯಾ ಪದ ಮತ್ತು ಅವ್ಯಯ ಪದಗಳು;
ವಿಭಕ್ತಿ ಪ್ರತ್ಯಯಗಳು;
ಸಂಧಿಗಳು,
ಸಮಾಸಗಳು;
ವಾಕ್ಯ ರಚನೆ ಮತ್ತು ಪ್ರಕಾರಗಳು

3.2 ಭಾಷಾ ಕೌಶಲ್ಯಗಳು: ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರಹ – ಅರ್ಥ, ಸ್ವರೂಪ, ಪ್ರಾಮುಖ್ಯತೆ, ಲಕ್ಷಣಗಳು, ದೋಷಗಳು ಮತ್ತು ಪರಿಹಾರಗಳು

3.1 ಕನ್ನಡ ವ್ಯಾಕರಣ ಪರಿಚಯ –ವ್ಯಾಕರಣದ ಹಿನ್ನೆಲೆ:

ನಮ್ಮ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಇತರರಿಗೆ ವ್ಯಕ್ತಪಡಿಸುವುದಕ್ಕೆ ಮತ್ತು ಅವರ ಅಭಿಪ್ರಾಯಗಳನ್ನು ಮತ್ತು ಭಾವನೆಗಳನ್ನು ನಾವು ತಿಳಿಯುವ ಮಾಧ್ಯಮಕ್ಕೆ ಭಾಷೆ ಎಂದು ಹೆಸರು. ಭಾಷೆಯನ್ನು ಸರಿಯಾದ ವಿಧಾನದಲ್ಲಿ ಬಳಸಲು ಹಾಗೂ ಸಾರ್ವತ್ರೀಕರಣಗೊಳಿಸಲು ಇರುವ ಮಾರ್ಗದರ್ಶಿಯನ್ನು ವ್ಯಾಕರಣ ಎನ್ನುವರು. ಪ್ರಪಂಚದಲ್ಲಿ ಸಾವಿರಾರು ಭಾಷೆಗಳಿವೆ. ಹಲವು ಭಾಷೆಗಳಲ್ಲಿ ನಾವು ಮಾತನಾಡುವ ಕನ್ನಡವೂ ಒಂದು ಪ್ರಮುಖ ಭಾಷೆಯಾಗಿದ್ದು ತನ್ನದೇ ಲಿಪಿಯನ್ನು ಹೊಂದಿರುವ ವಿಶೇಷ ಭಾಷೆ ಇದಾಗಿದೆ.

ಭಾಷೆ ಬೆಳೆದಂತೆ ಭಾಷೆಯ ಬಗೆಗಿನ ಅಧ್ಯಯನವು ಬೆಳೆಯಿತು. ಭಾಷೆಯ ರಚನೆ ಮತ್ತು ಪ್ರಯೋಗವನ್ನು ಪರಿಷ್ಕರಿಸುತ್ತಾ ವ್ಯಾಕರಣವು ಹುಟ್ಟಿಕೊಂಡಿತು.ತನ್ನ ಬುದ್ಧಿಶಕ್ತಿಯಿಂದ ಭಾಷೆಯನ್ನು ಕಂಡುಕೊಂಡ ಮಾನವ ಕ್ರಮೇಣ ಭಾಷೆಯ ರಚನೆಯನ್ನು ಶಿಷ್ಟ ಹಾಗೂ ಪರಿಣಾಮಕಾರಿಯಾಗಿಸಲು ವ್ಯಾಕರಣವನ್ನು ಕಂಡುಕೊಂಡ. ಪ್ರತಿಯೊಂದು ಭಾಷೆಯಲ್ಲಿ ಆ ಭಾಷೆಯ ವ್ಯಾಕರಣದ ನಿಯಮಗಳು ಸಮನ್ವಯಗೊಂಡಿರುತ್ತವೆ. ಭಾಷೆಯ ಉಗಮದ ಹಂತದಲ್ಲಿ ಜನರಿಗೆ ವ್ಯಾಕರಣದ ಬಗ್ಗೆ ಅಷ್ಟಾಗಿ ಅರಿವು ಇರಲಿಲ್ಲ. ಸಂವಹನ ಸಾಧನವಾಗಿ ಭಾಷೆಯನ್ನು ಬಳಸುತ್ತಾ ಕ್ರಮೇಣ ಭಾಷೆಯ ರಚನೆ ಮತ್ತು ಪ್ರಯೋಗವನ್ನು ಶಾಸ್ತ್ರೀಯವಾಗಿ ನೋಡಲಾಯಿತು.

ಭಾಷೆಯ ರಚನೆಯ ನಿಯಮಗಳು ಹಾಗೂ ಭಾಷೆಯ ಪ್ರಯೋಗವನ್ನು ಕುರಿತ ಶಾಸ್ತ್ರೀಯ ಅಧ್ಯಯನವೇ ವ್ಯಾಕರಣ. ವ್ಯಾಕರಣವು ಭಾಷೆಯ ರಚನೆ ಮತ್ತು ಪ್ರಯೋಗಕ್ಕೆ ಸಂಬಂಧಿಸಿದ್ದು ಪದಗಳ ರಚನೆ, ಅರ್ಥಬದ್ಧತೆ, ಸುಸಂಬದ್ಧ ರಚನೆ, ಅರ್ಥಬದ್ಧತೆ ಮತ್ತು ನಿರರ್ಗಳ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಭಾಷೆಯ ರಚನೆಯನ್ನು ಅಧ್ಯಯನ ಮಾಡುವ ಕ್ರಮವಾಗಿದೆ.

ಕನ್ನಡ ಸಾಹಿತ್ಯ ಇತಿಹಾಸವನ್ನು ಅಧ್ಯಯನ ಮಾಡಿದರೆ ಪ್ರಾಚೀನ ಕಾಲದ ಭಾಷೆ ಮತ್ತು ಸಾಹಿತ್ಯವು ಹೆಚ್ಚು ಶಿಷ್ಟವಾಗಿ, ವ್ಯಾಕರಣ ಬದ್ಧವಾಗಿ ರಚನೆಯಾಗಿರುವುದು ಕಂಡುಬರುತ್ತದೆ. ಕನ್ನಡದಲ್ಲಿ ವಚನಕಾರರು ಭಾಷೆಯ ರಚನೆ ಮತ್ತು ಪ್ರಯೋಗವನ್ನು ಸುಲಭ ಹಾಗೂ ಅರ್ಥಪೂರ್ಣ ಮಾಡಿದ್ದಾರೆ. ಕನ್ನಡ ಭಾಷೆಯ ರಚನೆಯ ಸ್ವರೂಪ ಹೇಗಿತ್ತು ಎಂಬುದನ್ನು ತಿಳಿಯಲು ಸಹಾಯಕವಾಗುವಂತೆ ನಮ್ಮ ಪೂರ್ವಜರು ಅನೇಕ ವ್ಯಾಕರಣ ಶಾಸ್ತ್ರ ಗ್ರಂಥಗಳನ್ನು ಬರೆದಿಟ್ಟಿದ್ದಾರೆ. ಇವುಗಳಲ್ಲಿ ಕನ್ನಡದ ಪ್ರಥಮ ಲಾಕ್ಷಣಿಕ ಕೃತಿ ಶ್ರೀವಿಜಯನ 'ಕವಿರಾಜ ಮಾರ್ಗ' (ಕ್ರಿ.ಶ 850); ಎರಡನೆಯ ನಾಗವರ್ಮನು ರಚಿಸಿದ 'ಭಾಷಾ ಭೂಷಣ' ಮತ್ತು 'ಕಾವ್ಯಾವಲೋಕನ'(ಕ್ರಿ.ಶ 1145); ಕೇಶಿರಾಜನ 'ಶಬ್ಧಮಣಿ ದರ್ಪಣಂ'(ಕ್ರಿ.ಶ 1260); ಮತ್ತು ಭಟ್ಟಾಕಳಂಕನ 'ಶಬ್ಧಾನುಶಾಸನ'(ಕ್ರಿ.ಶ 1604) ಗಳು ಮುಖ್ಯವಾದ ವ್ಯಾಕರಣ ಗ್ರಂಥಗಳು.

ವ್ಯಾಕರಣ ಬೋಧನೆಯ ಉದ್ದೇಶಗಳು:

- ಪದ ಮತ್ತು ವಾಕ್ಯರಚನಾ ಕೌಶಲ ಬೆಳೆಸುವುದು.
- ಭಾಷೆಯನ್ನು ಶಾಸ್ತ್ರೀಯವಾಗಿ ಅರ್ಥಮಾಡಿಕೊಳ್ಳುವುದು, ಅಧ್ಯಯನ ಮಾಡುವುದು.
- ಭಾಷೆಯ ಬಗೆಗೆ ತಾರ್ಕಿಕ ಜ್ಞಾನ ಬೆಳೆಸುವುದು.
- ಉತ್ತಮ ಭಾಷಾ ಶೈಲಿಯನ್ನು ಪರಿಚಯಿಸಿ ಕಲಿಸುವುದು.
- ಶುದ್ಧ ಮತ್ತು ಅರ್ಥಬದ್ಧ ಅಭಿವ್ಯಕ್ತಿ ಕೌಶಲಗಳನ್ನು ಬೆಳೆಸುವುದು.
- ಪದ ಮತ್ತು ಕಾವ್ಯಾಧ್ಯಯನ ಸಾಮರ್ಥ್ಯ ಬೆಳೆಸುವುದು.
- ಛಂದಸ್ಸು ಮತ್ತು ಅಲಂಕಾರಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವುದು.
- ಭಾಷಾ ಸಾಮರ್ಥ್ಯವನ್ನು ಬೆಳೆಸುವುದು.

❖ **ಕನ್ನಡ ಅಕ್ಷರಗಳು:**

ಕನ್ನಡ ವರ್ಣಮಾಲೆ– ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ. ಅವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ಸ್ವರಗಳು – 13, ವ್ಯಂಜನಗಳು – 34, ಯೋಗವಾಹಗಳು – 2 ಒಟ್ಟು=49

- **ಸ್ವರಗಳು:** ಪ್ರಚಲಿತ ಕನ್ನಡ ಭಾಷೆಯ ಪದಗಳಲ್ಲಿ ಸ್ವತಂತ್ರವಾಗಿ ಬಳಕೆಯಾಗುವ ವರ್ಣಗಳನ್ನು ಸ್ವರಗಳೆಂದು ಕರೆಯುತ್ತಾರೆ. ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸಲು ಬರುವ ವರ್ಣಮಾಲೆಯ ಮೊದಲ ಹದಿಮೂರು ಅಕ್ಷರಗಳನ್ನು ಸ್ವರಗಳೆಂದು ಕರೆಯುವರು. ಸ್ವರಗಳನ್ನು ಅವುಗಳ ಉಚ್ಚಾರಣೆಗೆ ತೆಗೆದುಕೊಳ್ಳುವ ಕಾಲಾವಧಿಯನ್ನು ಅವಲಂಬಿಸಿ ಹ್ರಸ್ವ ಸ್ವರಗಳು ಹಾಗೂ

ದೀರ್ಘ ಸ್ವರಗಳು ಎಂದು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗುತ್ತದೆ. **ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ**

ಹೃಸ್ವಸ್ವರವನ್ನು ಉಚ್ಚಾರಣೆ ಮಾಡಲು ಬೇಕಾದ ಕಾಲವನ್ನು ಛಂದಸ್ಸಿನಲ್ಲಿ ಒಂದು ಮಾತ್ರೆಯ ಕಾಲ ಎಂದು ಕರೆಯಲಾಗುತ್ತದೆ. ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸಲ್ಪಡುವ ವರ್ಣಮಾಲೆಯ ಆರು ಅಕ್ಷರಗಳನ್ನು ಹೃಸ್ವ ಸ್ವರಗಳೆಂದು ಕರೆಯಲಾಗಿದೆ. **ಅವು– ಅ, ಇ, ಉ, ಋ, ಎ, ಒ.**

ದೀರ್ಘಸ್ವರಗಳ ಉಚ್ಚಾರಣೆಗೆ ಎರಡು ಮಾತ್ರೆಗಳ ಕಾಲವನ್ನು ತೆಗೆದುಕೊಳ್ಳುತ್ತೇವೆ. ಎರಡು ಮಾತ್ರೆಯ ಕಾಲದಲ್ಲಿ ಉಚ್ಚರಿಸಲ್ಪಡುವ ವರ್ಣಮಾಲೆಯ ಏಳು ಅಕ್ಷರಗಳನ್ನು ದೀರ್ಘಸ್ವರಗಳೆಂದು ಕರೆಯಲಾಗಿದೆ. **ಅವು– ಆ, ಈ, ಊ, ಏ, ಐ, ಓ, ಔ.**

- **ವ್ಯಂಜನಗಳು:**ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸಲು ಬಾರದ ವರ್ಣಮಾಲೆಯ ಮುವತ್ತನಾಲ್ಕು ಅಕ್ಷರಗಳನ್ನು ವ್ಯಂಜನಗಳೆಂದು ಕರೆಯುವರು. ಕನ್ನಡದ ವ್ಯಂಜನಗಳನ್ನು ವರ್ಗೀಯ ವ್ಯಂಜನಗಳು ಅವರ್ಗೀಯ ವ್ಯಂಜನಗಳೆಂದು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.

  –ವರ್ಗೀಯ ವ್ಯಂಜನ: ಒಂದು ವರ್ಗ ಅಥವಾ ಗುಂಪಿಗೆ ಸೇರಿಸಬಹುದಾದ ವರ್ಣಮಾಲೆಯ ಇಪ್ಪತ್ತೈದು ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎಂದು ಕರೆಯುವರು. **ಅವುಗಳೆಂದರೆ,**

  ಕ್ ಖ್ ಗ್ ಘ್ ಙ

  ಚ್ ಛ್ ಜ್ ಝ್ ಞ

  ಟ್ ಠ್ ಡ್ ಢ್ ಣ್

  ತ್ ಥ್ ದ್ ಧ್ ನ್

  ಪ್ ಫ್ ಬ್ ಭ್ ಮ್

  –ಅವರ್ಗೀಯ ವ್ಯಂಜನಗಳು: ಒಂದು ಗುಂಪು ಅಥವಾ ಒಂದು ವರ್ಗಕ್ಕೆ ಸೇರಿಸಲು ಬಾರದ ವರ್ಣಮಾಲೆಯ ಕೊನೆಯ ಒಂಬತ್ತು ಅಕ್ಷರಗಳನ್ನು ಅವರ್ಗೀಯ ವ್ಯಂಜನಗಳೆಂದು ಕರೆಯುತ್ತಾರೆ. **ಅವುಗಳೆಂದರೆ,– ಯ್ ರ್ ಲ್ ವ್ ಶ್ ಷ್ ಸ್ ಹ್ ಳ್**

  –ಯೋಗವಾಹಗಳು: ಸ್ವತಂತ್ರವಲ್ಲದ ಹಾಗೂ ಸ್ವರವೂ ಅಲ್ಲದ, ವ್ಯಂಜನವೂ ಅಲ್ಲದ ಸ್ವರಾಕ್ಷರಗಳ ಅಂತ್ಯದಲ್ಲಿನ ಹಾಗೂ ವ್ಯಂಜನಗಳ ಆರಂಭಾಕ್ಷರಗಳ ನಡುವಿನ ಎರಡು ಅಕ್ಷರಗಳನ್ನು ಯೋಗವಾಹಗಳೆಂದು ಕರೆಯುತ್ತಾರೆ. **ಅವುಗಳೆಂದರೆ– ಅನುಸ್ವಾರ 'ಂ' ಮತ್ತು ವಿಸರ್ಗ 'ಃ'.**

  (ಕರ್ನಾಟಕ ಸರಕಾರವು ತನ್ನ ಪಠ್ಯಕ್ರಮದಿಂದ 'ೠ' ಸ್ವರವನ್ನು ಕನ್ನಡ ವರ್ಣಮಾಲೆಯಿಂದ 1990ರಲ್ಲಿ ಬಿಟ್ಟಿತು.)

❖ **ಗುಣಿತಾಕ್ಷರಗಳು:** ಒಂದು ವ್ಯಂಜನಕ್ಕೆ ಯಾವುದಾದರೊಂದು ಸ್ವರವನ್ನು ಸೇರಿಸಿ ಉಚ್ಚಾರಣೆ ಮಾಡಿದಾಗ ಬರುವ ರೂಪವನ್ನು ಗುಣಿತಾಕ್ಷರ ಎಂದು ಕರೆಯುತ್ತಾರೆ. ಉದಾಹರಣೆ: **'ಕ್'** ಎಂಬ ವ್ಯಂಜನಕ್ಕೆ ಅ ಕಾರದಿಂದ ಓ ಕಾರದವರೆಗಿನ ವಿವಿಧ ಸ್ವರಗಳನ್ನು ಸೇರಿಸಿದಾಗ ಬರುವ ಕ , ಕಾ, ಕಿ, ಕೀ, ... ಕೌ ಎಂಬ ರೂಪಗಳು ಗುಣಿತಾಕ್ಷರಗಳು. ಉದಾಹರಣೆ: ಕ್+ಓ=ಕೋ; ಟ್+ಏ=ಟೇ, ಯ್+ಈ=ಯೀ **(ಕ ಕಾ ಕಿ ಕಿ ಕು ಕೂ ಕೆ ಕೇ ಕೈ ಕೊ ಕೋ)**

❖ **ಸಂಯುಕ್ತಾಕ್ಷರಗಳು:** ಯಾವುದಾದರೊಂದು ಪದದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಒಂದರ ನಂತರ ಒಂದರಂತೆ ಬಂದು, ಅವುಗಳಾದ ಮೇಲೆ ಸ್ವರವಿದ್ದರೆ, ಅಂತಹ ಅಕ್ಷರಗಳನ್ನು ಸಂಯುಕ್ತಾಕ್ಷರಗಳೆಂದು ಕರೆಯುತ್ತಾರೆ. ಉದಾಹರಣೆಗೆ: ಅಪ್ಪ, ಅಮ್ಮ, ರಾಷ್ಟ್ರ, ಸುಪ್ತ...

- **ಸಜಾತಿಯ ಸಂಯುಕ್ತಾಕ್ಷರ:** ಒಂದೇ ಜಾತಿಯ ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರವು ಸಜಾತಿಯ ಸಂಯುಕ್ತಾಕ್ಷರ ಎನಿಸುತ್ತದೆ. ಇದಕ್ಕೆ ದ್ವಿತ್ವ ಎಂದೂ ಕರೆಯುತ್ತಾರೆ. **ಉದಾ: ಕ್+ಕ್=ಕ್ಕ, ತ್+ತ್=ತ್ತ; ಅಪ್ಪ= ಅ+ಪ್+ಪ್+ಅ, ಅಮ್ಮ=ಅ+ ಮ್+ಮ್+ಅ**
- **ವಿಜಾತಿಯ ಸಂಯುಕ್ತಾಕ್ಷರ: ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಕ್ಕೆ ವಿಜಾತಿಯ ಸಂಯುಕ್ತಾಕ್ಷರ ಎನ್ನುವರು. ಉದಾ: ಕ್+ಷ್=ಕ್ಷ, ಸ್+ತ್+ರ್=ಸ್ತ್ರ; ಶತ್ರು= ಶ+ ತ್+ರ್+ಉ, ಸ್ವಾಮಿ= ಸ್+ವ್+ಆ+ಮಿ**

❖ **ಪದಗಳು:**

❖ **ನಾಮಪದ:** ಹೆಸರನ್ನು ತಿಳಿಸುವ ಪದಗಳೇ ನಾಮಪದ. ನಾಮ ಎಂದರೆ ಹೆಸರು. ಮನುಷ್ಯ, ಪ್ರಾಣಿ, ವಸ್ತು, ಸ್ಥಳ, ಕಾಲ, ದಿಕ್ಕು ಹಾಗೂ ಸಂಖ್ಯೆಗಳನ್ನು ತಿಳಿಸುವ ಪದಗಳಿಗೆ 'ನಾಮಪದ' ಎನ್ನುವರು. ಒಂದು ವಸ್ತುವಿನ, ಸ್ಥಳದ ಮತ್ತು ವ್ಯಕ್ತಿಯ ಹೆಸರನ್ನು ಸೂಚಿಸುವ ಎಲ್ಲಾ ಪದಗಳು ನಾಮಪದಗಳೆನಿಸುತ್ತವೆ.

ಉದಾ: ಮನುಷ್ಯರು– ರಾಮ, ಸೀತೆ, ರಮೇಶ, ಬಸವ, ಗಾಯತ್ರಿ, ಗೀತಾ, ಪ್ರವೀಣ, ಪ್ರಕಾಶ, ಸುಧಾ, ಸವಿತಾ ಇತ್ಯಾದಿ

ಪ್ರಾಣಿಗಳು– ಆನೆ, ಇಲಿ, ಒಂಟೆ, ಕುದುರೆ, ಕತ್ತೆ, ಹುಲಿ, ಸಿಂಹ, ಇತ್ಯಾದಿ

ವಸ್ತುಗಳು– ಮಂಚ, ಗಡಿಯಾರ, ಕುರ್ಚಿ, ಮೇಜು, ಟೇಬಲ್ಲು, ಇತ್ಯಾದಿ

ಸ್ಥಳಗಳು– ಬೈಲಹೊಂಗಲ, ಬೆಳಗಾವಿ, ಬೆಂಗಳೂರು, ಮೈಸೂರು, ಧಾರವಾಡ ಇತ್ಯಾದಿ

ಕಾಲಗಳು– ನಿನ್ನೆ, ಸಂಜೆ, ನಾಳೆ, ರಾತ್ರಿ, ಹಗಲು, ತಿಂಗಳು, ವರ್ಷ ಇತ್ಯಾದಿ

ದಿಕ್ಕುಗಳು– ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಇತ್ಯಾದಿ

ಸಂಖ್ಯೆಗಳು– ಒಂದು, ಎರಡು, ಮೂರು, ನಾಲ್ಕು, ಹತ್ತು, ನೂರು, ಸಾವಿರ ಇತ್ಯಾದಿ

ವಸ್ತುವಾಚಕಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. 1.ರೂಢನಾಮ. 2.ಅಂಕಿತನಾಮ. 3.ಅನ್ವರ್ಥನಾಮ

1.ರೂಢನಾಮ: ಬಹಳ ಹಿಂದಿನಿಂದಲೂ ರೂಢಿಯಾಗಿ ಬಂದಿರುವ ಹೆಸರನ್ನು ಸೂಚಿಸುವ ಪದಗಳನ್ನು ರೂಢನಾಮ ಎನ್ನುತ್ತರೆ. ಇವು ವಸ್ತುವಾಚಕಗಳ ಒಂದು ಬಗೆ. ರೂಢಿಯಿಂದ ಬಂದ ಸಾಮಾನ್ಯ ವಾಚಕಗಳಿಗೆ 'ರೂಢನಾಮ' ಎಂದು ಹೆಸರು. ಉದಾ: ಆನೆ, ಎಮ್ಮೆ, ಕುದುರೆ, ಗಂಡಸು, ನದಿ, ಪರ್ವತ, ಬೆಟ್ಟ, ಮಗು, ಮನುಷ್ಯ, ಹಸು, ಹುಡುಗ, ಹುಡುಗಿ, ಹೆಂಗಸು ಇತ್ಯಾದಿ. ಇವು ನಾವು ಇಟ್ಟ ಹೆಸರುಗಳಲ್ಲ. ರೂಢಿಯಿಂದ ಬಂದವುಗಳಾಗಿವೆ.

2.ಅಂಕಿತನಾಮ: ವ್ಯವಹಾರದಲ್ಲಿ ನಿರ್ದಿಷ್ಟವಾಗಿ ಗುರುತಿಸಲು ಇಷ್ಟಾನುಸಾರ ಇಟ್ಟುಕೊಂಡ ಹೆಸರುಗಳೇ ಅಂಕಿತನಾಮಗಳು. ಇವು ಕೂಡ ವಸ್ತುವಾಚಕಗಳ ಒಂದು ಪ್ರಕಾರ. ಯಾವುದೇ ವಸ್ತು, ವ್ಯಕ್ತಿ ಮತ್ತು ಸ್ಥಳಗಳನ್ನು ಪ್ರತ್ಯೇಕವಾಗಿ ಗುರುತಿಸಲು ಇಟ್ಟ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ. ಉದಾ:

ವಸ್ತು– ಮಲಪ್ರಭಾ ನದಿ, ಕಾವೇರಿ ನದಿ, ವಿಧಾನಸೌಧ, ಸುವರ್ಣಸೌಧ, ಹಿಮಾಲಯ ಪರ್ವತ ಇತ್ಯಾದಿ.

ವ್ಯಕ್ತಿ– ಕಮಲಾ, ಸುನಂದಾ, ಶಾರದಾ, ಕೃಷ್ಣ, ಆನಂದ, ಕಿರಣ ಇತ್ಯಾದಿ.

ಸ್ಥಳ– ಬೈಲಹೊಂಗಲ, ಬೆಳಗಾವಿ, ಧಾರವಾಡ, ಬೆಂಗಳುರು, ಮೈಸೂರು ಇತ್ಯಾದಿ.–ಇವು ರೂಢಿಯಿಂದ ಬಂದ ಹೆಸರುಗಳಲ್ಲ, ಅನೇಕ ವಸ್ತು, ವ್ಯಕ್ತಿಗಳ ಮಧ್ಯದಲ್ಲಿ ಇಂತಹುದೇ ಎಂದು ನಿರ್ದಿಷ್ಟವಾಗಿ ಗುರುತಿಸಲು ಇಟ್ಟ ಹೆಸರುಗಳು.

3.ಅನ್ವರ್ಥನಾಮ: ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳನ್ನು ಅನ್ವರ್ಥನಾಮಗಳೆಂದು ಕರೆಯುತ್ತಾರೆ. ಇವು ಕೂಡ ವಸ್ತುವಾಚಕದ ಒಂದು ಪ್ರಕಾರ.ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳನ್ನು ಅನ್ವರ್ಥನಾಮಗಳೆಂದು ಹೆಸರು. ಉದಾ: ಕುಂಟ, ಕಿವುಡ, ಕುರುಡ, ಕುಳ್ಳ, ತುಂಟ, ಮೂಖ, ಕರಿಯ, ಕೆಂಪ, ಕೆಂಪಿ, ವ್ಯಾಪಾರಿ, ವಿದ್ವಾಂಸ, ಸಂನ್ಯಾಸಿ ಇತ್ಯಾದಿಗಳು.

❖ **ಸರ್ವನಾಮಗಳು:** ನಾಮಪದಕ್ಕೆ ಬದಲಾಗಿ ಉಪಯೋಗಿಸುವ ಪದಕ್ಕೆ ಸರ್ವನಾಮಪದಗಳು ಎನ್ನುವರು. ಉದಾ: ಅದು, ಇದು, ಅವನು, ಇವನು, ಅವಳು, ಇವಳು, ಇತ್ಯಾದಿ.

ಸರ್ವನಾಮಗಳಲ್ಲಿ 3 ಪ್ರಕಾರಗಳು:

1] **ಪುರುಷಾರ್ಥಕ ಸರ್ವನಾಮಗಳು–** ನಾನು, ನಾವು, ನೀನು, ನೀವು, ಇವನು, ಇವಳು, ಇದು, ಇವು, ಅವನು, ಅವಳು, ಅದು, ಅವರು, ಅವು ಇತ್ಯಾದಿ.

2] **ಪ್ರಶ್ನಾರ್ಥಕ ಸರ್ವನಾಮಗಳು–** ಯಾವುದು, ಏನು, ಏತರದು, ಯಾರು, ಯಾವನು, ಯಾವಳು ಇತ್ಯಾದಿ

3] **ಆತ್ಮಾರ್ಥಕ ಸರ್ವನಾಮಗಳು–** ತಾನು, ತಾವು, ತನ್ನ ಇತ್ಯಾದಿ

***ಗುಣವಾಚಕಗಳು–** ವ್ಯಕ್ತಿ, ವಸ್ತು, ಪ್ರಾಣಿಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ಶಬ್ಧಗಳಿಗೆ ಗುಣವಾಚಕಗಳು ಎನ್ನುತ್ತಾರೆ. ಯಾವುದೇ ವಸ್ತು, ವ್ಯಕ್ತಿ, ಸ್ಥಳಗಳ ಗುಣವಿಶೇಷಗಳನ್ನು ತಿಳಿಸುವ ಶಬ್ಧಗಳಿಗೆ 'ಗುಣವಾಚಕ' ಎಂದು ಹೆಸರು.ಉದಾ: ಹಿರಿಯ, ಕಿರಿಯ, ಕರಿದು, ಬಿಳಿದು, ಹೊಸದು, ಹಳೆದು, ದೊಡ್ಡದು, ಚಿಕ್ಕದು, ಪಿರಿದು, ಹಿರಿದು, ಎಳತು ಮೊದಲಾದ ಗುಣಗಳುಳ್ಳ ವ್ಯಕ್ತಿ, ಪ್ರಾಣಿ, ವಸ್ತು 'ವಿಶೇಷ್ಯ'ಗಳು.

ಅದು ಕಪ್ಪುಕಲ್ಲಿನ ಬೆಟ್ಟ	ರಾಮನು ಒಳ್ಳೆಯ ಹುಡುಗ
ಬೈಲಹೊಂಗಲ ಸುಂದರ ನಗರ	ಇದು ಹಳೆಯ ಪುಸ್ತಕ
ಶಾರದಾ ಚಿಕ್ಕ ಹುಡುಗಿ	ಬೆಂಗಳೂರು ದೊಡ್ಡ ಪಟ್ಟಣ

ಇಲ್ಲಿ ಮೇಲೆ ಕಾಣಿಸಿದ ಉದಾಹರಣೆಗಳಲ್ಲಿ ಅಡಿಗೆರೆ ಹಾಕಿದ ಪದಗಳು ವಿಶೇಷಣಗಳು. ಯಾವುದನ್ನು ಹೇಳಲಾಗಿದೆಯೋ ಅವು ವಿಶೇಷ್ಯಗಳು.

***ಸಂಖ್ಯಾವಾಚಕಗಳು–** ಸಂಖ್ಯೆಗಳನ್ನು ಸೂಚಿಸಲು ಬಳಸುವ ಶಬ್ಧಗಳಿಗೆ 'ಸಂಖ್ಯಾವಾಚಕ'ಗಳೆಂದು ಹೆಸರು. ಉದಾ: ಒಂದು, ಎರಡು, ಹತ್ತು, ನೂರು, ಸಾವಿರ, ಲಕ್ಷ, ಕೋಟಿ ಇತ್ಯಾದಿ. ಕೆಲವು ಬಾರಿ ಸಂಖ್ಯಾವಾಚಕಗಳು ಗುಣವಾಚಕಗಳ ಮಾದರಿಯಲ್ಲಿಯೂ ಕೆಲಸ ಮಾಡುತ್ತವೆ. ಉದಾ: ಹತ್ತು ಪುಸ್ತಕಗಳು, ನೂರು ಕುದುರೆಗಳು, ಸಾವಿರ ಆನೆಗಳು, ಇಪ್ಪತ್ತು ಒಂಟೆಗಳು, ಹತ್ತು ಸಾವಿರ ಜನರು ಇತ್ಯಾದಿ.

***ಸಂಖ್ಯೇಯ ವಾಚಕ–**ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ತಿಳಿಸುವ ಶಬ್ದಗಳಿಗೆ 'ಸಂಖ್ಯೇಯ ವಾಚಕ'ಗಳೆಂದು ಹೆಸರು.ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ಧಗಳನ್ನು ಸಂಖ್ಯೇಯ ವಾಚಕಗಳು ಎನ್ನುತ್ತಾರೆ.

ಸಂಖ್ಯೆ	ಸಂಖ್ಯೇಯ
ಒಂದು	ಒಬ್ಬನು, ಒಂದನೆಯ
ಮೂರು	ಮೂವರು, ಮೂರನೆಯ
ಐದು	ಐವರು, ಐದನೆಯ

ಇಬ್ಬರು ಹುಡುಗರು, ಮೂವರು ಹುಡುಗಿಯರು, ನಾಲ್ವರು ಮಕ್ಕಳು, ಐವರು ಪುರುಷರು, ಎರಡನೆಯ, ಮೊದಲನೆಯ, ಕೊನೆಯ, ನೂರುಬಾರಿ, ಹತ್ತು ಬಾರಿ, ಕೆಲವು, ಹಲವು, ಸ್ವಲ್ಪ, ಅನೇಕ, ಇಮ್ಮಡಿ, ನೂರ್ಮಡಿ ಇತ್ಯಾದಿ.

***ಪರಿಮಾಣ ವಾಚಕ–** ಪರಿಮಾಣ ಎಂದರೆ ಅಳತೆ. ವಸ್ತುವಿನ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳು ಎನ್ನುತ್ತಾರೆ. ಯಾವುದೇ ವಸ್ತುವಿನ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಸೂಚಿಸುವ ಶಬ್ದಗಳಿಗೆ 'ಪರಿಮಾಣವಾಚಕ'ಗಳು ಎಂದು ಹೆಸರು. ಉದಾ: ಅನಿತು, ಇನಿತು, ಎನಿತು, ಎಷ್ಟು, ಇಷ್ಟು, ಅಷ್ಟು, ಕೆಲವು, ಹಲವು ಇತ್ಯಾದಿ. ಅಷ್ಟು ದೂರ, ಇಷ್ಟು ಸೇರು, ಎಷ್ಟು ತೂಕ, ಕೆಲವು ಊರುಗಳು, ಹಲವು ದಿನಗಳು, ಆನೆಯಷ್ಟು, ಬೆಟ್ಟದಷ್ಟು ಇತ್ಯಾದಿ.

*ಪ್ರಕಾರವಾಚಕ– ವ್ಯಕ್ತಿ ಅಥವಾ ವಸ್ತುಗಳ ಸ್ಥಿತಿ, ಲಕ್ಷಣ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳಿಗೆ ಪ್ರಕಾರವಾಚಕಗಳೆಂದು ಹೆಸರು. ಇವೂ ಕೂಡ ಒಂದು ಬಗೆಯ ಗುಣವಾಚಕ/ ವಿಶೇಷಣಗಳೇ. ವಸ್ತುವಿನ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು ಪ್ರಕಾರವಾಚಕಗಳು ಎನ್ನುತ್ತಾರೆ. ಉದಾ: ಇಂಥ, ಇಂಥದು, ಇಂತಹದು, ಅಂಥ, ಅಂಥದು, ಅಂತಹುದು, ಎಂಥ, ಎಂತಹ, ಅಂಥವನು, ಅಂಥವಳು ಇತ್ಯಾದಿ.

ನೀನು ಕಳೆದ ಹಬ್ಬಕ್ಕೆ ತೆಗೆದುಕೊಂಡ ಬಟ್ಟೆ ಎಂಥದು.
ಇಂಥವನು ಯಾರ ಜೊತೆಯೂ ಸ್ನೇಹದಿಂದ ಇರಲಾರ.
ಅಂಥಹ ಸಜ್ಜನರು ವಿರಳ.
ಅಂತಹ ವ್ಯಕ್ತಿಗಳು ಈಗಲೂ ಇದ್ದಾರೆಯೇ?
ಅಂಥವರ ಸಹವಾಸ ಬೇಡ.
ಎಂಥಹ ಪ್ರಾಣಿಗಳು.

*ದಿಗ್ವಾಚಕಗಳು– ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳಿಗೆ 'ದಿಗ್ವಾಚಕ'ಗಳೆಂದು ಹೆಸರು. ಉದಾ: ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೂಡಣ, ಪಡುವಣ, ತೆಂಕಣ, ಬಡಗಣ, ಆ ಕಡೆ, ಈ ಕಡೆ, ಹೊರಗಡೆ, ಒಳಗಡೆ ಇತ್ಯಾದಿ.

*ಭಾವನಾಮಗಳು– ಯಾವುದೇ ಒಂದು ವಸ್ತುವಿನ ಭಾವವನ್ನೂ ಹಾಗೂ ಕ್ರಿಯೆಯೊಂದರ ಭಾವವನ್ನು ತಿಳಿಸುವ ಶಬ್ದಗಳಿಗೆ 'ಭಾವನಾಮ'ಗಳೆಂದು ಹೆಸರು. ಭಾವನಾಮದಲ್ಲಿ ಕೃದಂತ ಭಾವನಾಮ ಮತ್ತು ತದ್ಧಿತಾಂತ ಭಾವನಾಮ ಎಂಬ ಎರಡು ವಿಧಗಳಿವೆ. ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು ಭಾವನಾಮಗಳೆನ್ನುತ್ತಾರೆ. ಉದಾ:

ಕರಿದರ ಭಾವ	–	ಕಪ್ಪು
ಬಿಳಿದರ ಭಾವ	–	ಬಿಳುಪು
ಕಿರಿದರ ಭಾವ	–	ಕಿರಿದು
ಹಿರಿದರ ಭಾವ	–	ಹಿರಿದು
ನೋಡುವುದರ ಭಾವ	–	ನೋಟ
ಆಡುವುದರ ಭಾವ	–	ಆಟ

❖ ಕ್ರಿಯಾಪದ:

ಕ್ರಿಯೆ ಎಂದರೆ ಕೆಲಸ. ಸರಳವಾಗಿ ಹೇಳುವುದಾದರೆ ಕೆಲಸವನ್ನು ಇದು ತಿಳಿಸುವ ಪದವೇ 'ಕ್ರಿಯಾಪದ'.ಭಾಷೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಕರ್ತೃವಿನ ಕಾರ್ಯವನ್ನು ತಿಳಿಸುವುದೇ ಕ್ರಿಯಾಪದ. ಕ್ರಿಯಾಪದವು ಕರ್ತೃವಿನ ಪುರುಷ, ಲಿಂಗ, ವಚನಗಳಿಗೆ ಅನುಸಾರವಾಗಿ ವರ್ತಿಸುತ್ತದೆ.

ಉದಾ: ತಾಯಿಯು ಅಡುಗೆಯನ್ನು ಮಾಡುತ್ತಾಳೆ.
ತಂದೆಯವರು ಊಟವನ್ನು ಮಾಡಿದರು.
ಅಣ್ಣನು ಊಟವನ್ನು ಮಾಡುವನು.

ಮೇಲಿನ ಉದಾಹರಣೆಗಳಲ್ಲಿ ಮಾಡುತ್ತಾಳೆ, ಮಾಡಿದನು, ಮಾಡುವನು ಎನ್ನುವವು ಕ್ರಿಯಾಪದಗಳು. ಏಕೆಂದರೆ ಇವು ಕರ್ತೃವು ಮಾಡುತ್ತಿರುವ, ಮಾಡಿದ, ಮಾಡಲಿರುವ ಕೆಲಸವನ್ನು ತಿಳಿಸುತ್ತವೆ. ಈ ಮೇಲಿನ ಕ್ರಿಯಾಪದಗಳನ್ನು ಕ್ರಮವಾಗಿ ಮಾಡು+ಉತ್ತ+ಆಳೆ, ಮಾಡು+ದ+ಅನು, ಮಾಡು+ವ+ಅನು ಎಂಬುದಾಗಿ ಬಿಡಿಸಿ ಬರೆಯಬಹುದು. ಇಲ್ಲಿ 'ಮಾಡು' ಎಂಬುದು ಧಾತು. ಹಾಗೆಯೇ ಆಳೆ, ಅನು, ಅನು ಎಂಬುದು ಆಖ್ಯಾತ ಪ್ರತ್ಯಯಗಳು. ಈ ಆಖ್ಯಾತ ಪ್ರತ್ಯಯಗಳು 'ಮಾಡು' ಎಂಬ ಧಾತುವಿನೊಂದಿಗೆ ಸೇರಿ ಕ್ರಮವಾಗಿ ಮಾಡುತ್ತಾನೆ, ಮಾಡಿದನು, ಮಾಡುವನು ಎಂಬ ಕ್ರಿಯಾಪದಗಳಾಗಿವೆ, ಹೀಗೆ 'ಧಾತು'ಗಳಿಗೆ 'ಆಖ್ಯಾತ ಪ್ರತ್ಯಯ'ಯಗಳು ಸೇರಿ ಕ್ರಿಯಾಪದಗಳಾಗುವಾಗ ವರ್ತಮಾನ, ಭೂತ, ಭವಿಷ್ಯತ್– ಕಾಲಗಳಲ್ಲಿ ಧಾತುವಿಗೂ, ಆಖ್ಯಾತ ಪ್ರತ್ಯಯಕ್ಕೂ ನಡುವೆ ಕ್ರಮವಾಗಿ ಉತ್ತ, ದ, ವ, ಎಂಬ ಒಂದು ಬಗೆಯ ಪ್ರತ್ಯಯಗಳು 'ಆಗಮ'ವಾಗುತ್ತವೆ. ಇವುಗಳಿಗೆ ಕಾಲ ಸೂಚಕ ಪ್ರತ್ಯಯಗಳೆಂದು ಹೆಸರು.

ಕ್ರಿಯಾಪದದ ಪ್ರಕಾರಗಳು:

1. ನಿಷೇಧಾರ್ಥಕ ಕ್ರಿಯಾಪದ: ಧಾತುಗಳ ಮೇಲೆ ನಿಷೇಧಾರ್ಥದ (ಅಂದರೆ ಕ್ರಿಯೆಯು ನಡೆಯಲಿಲ್ಲ ಎಂಬರ್ಥದ) ಆಖ್ಯಾತ ಪ್ರತ್ಯಯಗಳು ಸೇರಿ ಆಗುವ ಕ್ರಿಯಾಪದಗಳಿಗೆ ನಿಷೇಧಾರ್ಥಕ ಕ್ರಿಯಾಪದಗಳೆಂದು ಕರೆಯಲಾಗುತ್ತದೆ. ಉದಾ:

ಧಾತು	+	**ಆಖ್ಯಾತ ಪ್ರತ್ಯಯ =**	**ಕ್ರಿಯಾಪದ**
ಮಾಡು	+	ಅನು	ಮಾಡನು – ಮಾಡರು (ಬಹುವಚನ)
ಮಾಡು	+	ಅಳು	ಮಾಡಳು – ಮಾಡರು (ಬಹುವಚನ)
ಮಾಡು	+	ಅದು	ಮಾಡದು – ಮಾಡವು (ಬಹುವಚನ)
ಮಾಡು	+	ಎ	ಮಾಡೆ – ಮಾಡರಿ (ಬಹುವಚನ)
ಮಾಡು	+	ಎನು	ಮಾಡೆನು – ಮಾಡೆವು (ಬಹುವಚನ)

2. ಕಾಲಾರ್ಥಕ ಕ್ರಿಯಾಪದ: ಕ್ರಿಯೆ ನಡೆಯುತ್ತಿದೆ, ನಡೆದು ಹೋಯಿತು ಮತ್ತು ನಡೆಯುವುದು ಎನ್ನುವ ಕಾಲವನ್ನು ಇದು ಅರ್ಥೈಸುತ್ತದೆ. ಇದರಲ್ಲಿ 3ಪ್ರಕಾರದ ಕಾಲಗಳಿರುತ್ತವೆ.

ಅ]ವರ್ತಮಾನ ಕಾಲ– ಪ್ರಸ್ತುತದಲ್ಲಿ ಕ್ರಿಯೆ ನಡೆಯುತ್ತಿರುವ ಕಾಲವನ್ನು ಇದು ಅರ್ಥೈಸುತ್ತದೆ. ಇದರ ಕಾಲಾರ್ಥಕ ಪ್ರತ್ಯಯ 'ಉತ್'. ಉದಾ: ಹಾಡುತ್ತಾನೆ, ಹಾಡುತ್ತಿದ್ದಾನೆ, ಹಾಡುತ್ತಿರುತ್ತಾನೆ.

ಆ]ಭೂತಕಾಲ– ಕ್ರಿಯೆ ಮುಗಿದು ಹೋದ ಕಾಲವನ್ನು ಇದು ಹೇಳುತ್ತದೆ. ಇದರ ಕಾಲಾರ್ಥಕ ಪ್ರತ್ಯಯ 'ದ್'. ಉದಾ: ಹಾಡಿದನು, ಹಾಡಿದಳು, ಹಾಡಿದರು, ಹಾಡಿರುವರು.

ಇ]ಭವಿಷತ್ ಕಾಲ– ಕ್ರಿಯೆ ಮುಂದೆ ನಡೆಯುವ ಕಾಲವನ್ನು ಇದು ಹೇಳುತ್ತದೆ. ಇದರ ಕಾಲಸೂಚಕ ಪ್ರತ್ಯಯ 'ವ್'. ಉದಾ: ಹಾಡುವನು, ಹಾಡುವಳು, ಹಾಡುವರು, ಹಾಡುವವರು.

3. ಸಂಶಯಾರ್ಥಕ / ಸಂಭವನಾರ್ಥಕ ಕ್ರಿಯಾಪದ: ಕ್ರಿಯೆಯು ನಡೆಯುವ ವಿಚಾರದಲ್ಲಿ 'ಸಂದೇಹವನ್ನೂ' ಅಥವಾ 'ಊಹೆ'ಯನ್ನೂ ಸೂಚಿಸುವಲ್ಲಿ ಧಾತುಗಳ ಮೇಲೆ ಸಂಭವನಾರ್ಥದ ಆಖ್ಯಾತ ಪ್ರತ್ಯಯಗಳು ಸೇರಿ ಉಂಟಾದ ಕ್ರಿಯಾರೂಪಗಳಿಗೆ ಸಂಭವನಾರ್ಥ ಕ್ರಿಯಾ ಪದಗಳೆಂದು ಹೆಸರು. ಕ್ರಿಯೆ ಮುಂದೆ ನಡೆಯಬಹುದು (ನಡೆಯಬಹುದು / ನಡೆಯದೇ ಇರಬಹುದು) ಎಂದು ಸಂಶಯದ ಕಾಲವನ್ನು ಇದು ಹೇಳುತ್ತದೆ. ಉದಾ:

ಧಾತು + ಆಖ್ಯಾತ ಪ್ರತ್ಯಯ = ಕ್ರಿಯಾಪದ (ಏಕವಚನ) (ಬಹುವಚನ)

ಹೋಗು	+	ಆನು	=	ಹೋದಾನು	–	ಹೋದಾರು
ಹೋಗು	+	ಆಳು	=	ಹೋದಾಳು	–	ಹೋದಾರು
ಹೋಗು	+	ಈತು	=	ಹೋದೀತು	–	ಹೋದಾವು
ಹೋಗು	+	ಈಯೆ	=	ಹೋದೀಯೆ	–	ಹೋದೀರಿ
ಹೋಗು	+	ಏನು	=	ಹೋದೇನು	–	ಹೋದೇವು

4. **ವಿಧ್ಯರ್ಥಕ ಕ್ರಿಯಾಪದ:** ಅಪ್ಪಣೆ, ಆಜ್ಞೆ, ಆಶೀರ್ವಾದ, ಪ್ರಾರ್ಥನೆ, ಭಿನ್ನಹ, ವಿನಂತಿ, ಕೋರಿಕೆ, ಶಾಪ, ಹಾರೈಕೆ ಮುಂತಾದ ಅರ್ಥಗಳು ತೋರುವಾಗ ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳು ರೂಪುಗೊಳ್ಳುತ್ತವೆ. ಇಲ್ಲಿ ಕಾಲಸೂಚಕ ಪ್ರತ್ಯಯಗಳು ಬರುವುದಿಲ್ಲ. ಕ್ರಿಯೆ ನಡೆಯಲೇಬೇಕು ಎಂದು ಅಪ್ಪಣೆಯನ್ನು ಮಾಡುವುದು ವಿಧ್ಯರ್ಥಕ. ಇದರ ಕಾಲಾರ್ಥಕ ಪ್ರತ್ಯಯ 'ಅಲಿ'. ಉದಾ:

ನೀನು ಈ ಕೆಲಸವನ್ನು ಮಾಡು — ದೇವರು ನಿನಗೆ ಒಳ್ಳೆಯದನ್ನು ಮಾಡಲಿ

ದೇವರೇ, ನನಗೆ ಒಳ್ಳೆಯದನ್ನು ಮಾಡು — ದೇಶಕ್ಕೆ ಸುಭಿಕ್ಷವುಂಟಾಗಲಿ

ಅವನು ಹಾಳಾಗಿ ಹೋಗಲಿ

❖ **ಅವ್ಯಯ ಪದಗಳು:**

ಲಿಂಗ, ವಚನ, ವಿಭಕ್ತಿಗಳಿಂದ ವಿಕಾರಗೊಳ್ಳದೇ ಏಕರೂಪವಾಗಿರುವ ಶಬ್ದಗಳನ್ನು ಅವ್ಯಯಗಳೆನ್ನುವರು. ಕನ್ನಡ ಭಾಷೆಯಲ್ಲಿರುವ ಎಲ್ಲ ಶಬ್ದ/ ಪದಗಳನ್ನೂ ನಾಮಪದ, ಕ್ರಿಯಾಪದ ಮತ್ತು ಅವ್ಯಯಗಳೆಂದು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು. ನಾಮಪದ, ಕ್ರಿಯಾಪದಗಳು ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದಗಳನ್ನು ಪಡೆದರೆ ಅವ್ಯಯವು ಯಾವ ವ್ಯತ್ಯಾಸವನ್ನು ಹೊಂದದೆ ಏಕರೂಪವಾಗಿರುತ್ತದೆ.

ಅವನು 'ಮೆಲ್ಲಗೆ' ನಡೆದನು (ಪುಲ್ಲಿಂಗ – ಏಕವಚನ)

ಅವಳು 'ಮೆಲ್ಲಗೆ' ನಡೆದಳು (ಸ್ತ್ರೀಲಿಂಗ – ಏಕವಚನ)

ಅವರು 'ಮೆಲ್ಲಗೆ' ನಡೆದರು (ಪು;ಸ್ತ್ರೀ – ಲಿಂಗ)

ಅದು 'ಮೆಲ್ಲಗೆ' ನಡೆಯಿತು (ನಪುಂಸಕ ಲಿಂಗ – ಏಕವಚನ)

ಅವು 'ಮೆಲ್ಲಗೆ' ನಡೆದವು (ನಪುಂಸಕಲಿಂಗ – ಬಹುವಚನ)

ಮೇಲಿನ ವಾಕ್ಯಗಳಲ್ಲಿ ಬಂದಿರುವ 'ಮೆಲ್ಲಗೆ' ಎಂಬ ಪದವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿಯೂ, ಏಕವಚನ ಮತ್ತು ಬಹುವಚನಗಳಲ್ಲಿಯೂ ಯಾವ ವ್ಯತ್ಯಾಸವನ್ನು ಹೊಂದದೆ ಒಂದೇ ರೀತಿಯಾಗಿದೆ. 'ಮೆಲ್ಲಗೆ' ಎಂಬುದರ ಮೇಲೆ ಯಾವ ವಿಧವಾದ ಪ್ರತ್ಯಯಗಳನ್ನು ಹಚ್ಚಲಾಗುವುದಿಲ್ಲ. ಇದು ನಾಮಪದ ಹಾಗೂ ಕ್ರಿಯಾಪದಗಳ ಹಾಗೆ ರೂಪದಲ್ಲಿ ಯಾವ ಭೇದವನ್ನು ಹೊಂದುವುದಿಲ್ಲ. ಇದ್ದ ಹಾಗೆಯೇ ಯಾವಾಗಲೂ ಇರುತ್ತದೆ.ಇಂಥ ಪದಗಳನ್ನು 'ಅವ್ಯಯ'ಗಳೆನ್ನುತ್ತಾರೆ.

ಅವ್ಯಯಗಳಲ್ಲಿ 8 ವಿಧಗಳಿವೆ:

1. **ಸಾಮಾನ್ಯ ಅವ್ಯಯ:** ಕ್ರಿಯೆಯ ಕಾಲ, ಸ್ಥಳ ಮತ್ತು ರೀತಿಗಳನ್ನು ತಿಳಿಸುವ ಅವ್ಯಯಗಳಿಗೆ ಸಾಮಾನ್ಯ ಅವ್ಯಯಗಳೆನ್ನುತ್ತಾರೆ. ಇವು ಕ್ರಿಯೆಗೆ ವಿಶೇಷಣಗಳಾಗಿರುತ್ತವೆ.

- **ಕಾಲವನ್ನು ಸೂಚಿಸುವ ಅವ್ಯಯಗಳು:** ಅಂದು, ಇಂದು, ಬಳಿಕ, ತರುವಾಯ, ನಾಳೆ, ನಿನ್ನೆ, ಮೊನ್ನೆ, ಆಗ, ಈಗ, ಬೇಗ, ಅನಂತರ ಇತ್ಯಾದಿ.
- **ಸ್ಥಳವನ್ನು ಸೂಚಿಸುವ ಅವ್ಯಯಗಳು:** ಅಲ್ಲಿ, ಇಲ್ಲಿ, ಎಲ್ಲಿ, ಮೇಲೆ, ಕೆಳಗೆ, ಹಿಂದೆ, ಮುಂದೆ, ಅತ್ತ, ಇತ್ತ, ಎತ್ತ, ಸುತ್ತ ಇತ್ಯಾದಿ.
- **ರೀತಿಯನ್ನು ಸೂಚಿಸುವ ಅವ್ಯಯಗಳು:** ಹಾಗೆ, ಹೀಗೆ, ಮೆಲ್ಲನೆ, ಜೋರಾಗಿ, ಮೆತ್ತನೆ, ಸುಮ್ಮನೆ, ತಟ್ಟನೆ, ಒಡನೆ, ನೆಟ್ಟಗೆ, ಬಿಮ್ಮಗೆ, ಕಮ್ಮಗೆ, ಬೆಳ್ಳಗೆ, ಕರ್‍ರಗೆ, ತೆಳ್ಳಗೆ, ದಪ್ಪಗೆ, ಹಾಗೆ, ಹೀಗೆ, ಅಂತು, ಇಂತು, ಎಂತು, ಸುತ್ತಲು ಇತ್ಯಾದಿ.

ಅವನು ಚೆನ್ನಾಗಿ ಓದುತ್ತಾನೆ ಅವರು ಬೇಗನೆ ಬಂದರು

ಅದು ಕರ್‍ರಗೆ ಕಾಣುತ್ತಿತ್ತು ಅವರು ಎತ್ತ ನೋಡಿದರೂ ಹಸಿರ ರಾಶಿ

ಕೂಡಲೇ ಅವಳು ಅಲ್ಲಿಂದ ಹೊರಟು ಹೋದಳು

2. **ಅನುಕರಣ ಅವ್ಯಯ:** ಯಾವುದಾದರೂ ವ್ಯಕ್ತಿ, ವಸ್ತು, ಕಾರ್ಯ ಮೊದಲಾದವುಗಳ ಧ್ವನಿಯ ಅನುಕರಣವನ್ನು ಹೇಳುವ ಶಬ್ದಗಳೇ ಅನುಕರಣ ಅವ್ಯಯಗಳು. 'ನಮಗೆ ಕಾಣಿಸಿದಂತಹ ಮತ್ತು ಕೇಳಿಸಿದಂತಹ ವಸ್ತು ಮತ್ತು ಧ್ವನಿಗಳನ್ನು ಪುನಃ ಕಂಡಂತೆ ಕೇಳಿಸಿದಂತೆ ಅನುಕರಣೆ ಮಾಡಿ ಹೇಳುವ ಪದಗಳು ಅನುಕರಣ ಅವ್ಯಯಗಳಾಗಿರುತ್ತವೆ.'

ಉದಾ: ಜುಳುಜುಳು, ರಪರಪ, ಗುಸುಗುಸು, ಸರಸರ, ಪಟಪಟ, ಗಡಗಡ, ಫಳಫಳ.

3. **ಭಾವಸೂಚಕ ಅವ್ಯಯ:** ಮನಸಿನ ವಿವಿಧ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಕೆಲವು ವಿಚಿತ್ರ ಅಥವಾ ಅರ್ಥವಿಲ್ಲದ ಪದಗಳೇ ಭಾವಸೂಚಕ ಅವ್ಯಯ ಪದಗಳು. ಸಂಭ್ರಮ, ದುಃಖ, ಖೇದ, ಆಶ್ಚರ್ಯ, ಮೊದಲಾದ ಸಂದರ್ಭಗಳಲ್ಲಿ ನಮಗೆ ಅರಿವು ಇಲ್ಲದಂತೆ ಅಪ್ರಯತ್ನಪೂರ್ವಕವಾಗಿ ಉಚ್ಚರಿಸುವ ಪದಗಳು ಇವಾಗಿರುತ್ತವೆ.

ಉದಾ:ಹೌದುಹೌದು, ಭಲೇಭಲೇ, ಭೇಷ್ ಭೇಷ್, ಅಯ್ಯೋ, ಛೇಛೇ, ಥುಥು, ಅಕಟಕಟಾ, ಹೌಲಹೌಲಾ, ಸೊಕೆರೋ ಸೊಕೆರೋ, ಅಬ್ಬಾ, ಆಹಾ, ಒಹೋ, ಇತ್ಯಾದಿ. ಅಬ್ಬಾ! ಎಷ್ಟು ಸೊಗಸಾಗಿದೆ.

4. **ಕ್ರಿಯಾವಾಚಕ ಅವ್ಯಯ:** ಒಂದು ವಾಕ್ಯದಲ್ಲಿ ಕ್ರಿಯಾಪೂರ್ವದ ಸ್ಥಾನದಲ್ಲಿ ನಿಂತು ಕ್ರಿಯಾರ್ಥವನ್ನು ಪೂರ್ಣಗೊಳಿಸುವ ಪದಗಳು ಕ್ರಿಯಾವಾಚಕ ಅವ್ಯಯಗಳಾಗಿರುತ್ತವೆ. ಇವು ಪೂರ್ಣಕ್ರಿಯಾಪದಗಳ ಅರ್ಥವನ್ನು ಸ್ವತಂತ್ರವಾಗಿ ಹಾಗೂ ಯಾವ ರೂಪಭೇದಗಳನ್ನೂ ಪಡೆಯದೆ ಕೊಡುತ್ತವೆ.

ಉದಾ: ಉಂಟು, ಸಾಕು, ಬೇಕು, ಹೌದು, ಸಾರಿ, ಆಯ್ತು, ಹಾಂ, ಹುಂ, ಅಲ್ಲ, ಇಲ್ಲ, ಬೇಡ ಇತ್ಯಾದಿ.

ಇನ್ನೂ ಸ್ವಲ್ಪ ಅನ್ನ ಹಾಕು.

ನನಗೆ ನಿಮ್ಮ ಉಪದೇಶ ಸಾಕು.

ಅವನು ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ.

5. **ಸಂಬಂಧಕ ಅವ್ಯಯ:** ಎರಡು ವಸ್ತುಗಳ ಅಥವಾ ಎರಡು ವಾಕ್ಯಗಳ ಮಧ್ಯ ಇರುವ ಸಂಬಂಧವನ್ನು ಜೋಡಿಸುವ ಅಥವಾ ಹೇಳುವ ಪದಗಳು ಸಂಬಂಧಕ ಅವ್ಯಯಗಳಾಗಿರುತ್ತವೆ. ಎರಡು ಪದಗಳನ್ನಾಗಲಿ ಅಥವಾ ಹಲವು ಪದ ಸಮುಚ್ಚಯಗಳನ್ನಾಗಲಿ, ವಾಕ್ಯಗಳನ್ನಾಗಲಿ ಜೋಡಿಸುವಂಥಹ ಮತ್ತು ಸಂಬಂಧಗೊಳಿಸುವಂಥಹ ಕೆಲಸವನ್ನು ಸಂಬಂಧಕಾರ್ಥಕ ಅವ್ಯಯಗಳು ಮಾಡುತ್ತವೆ.

ಉದಾ: ಊ, ಮತ್ತು, ಹಾಗೂ, ಆದರೆ, ಆದ್ದರಿಂದ, ಕಾರಣ, ಸಲುವಾಗಿ, ಗೋಸ್ಕರ, ಅಲ್ಲದೆ, ಆದರೂ, ಮತ್ತೆ, ಇನ್ನೂ, ಆದಕಾರಣ, ಇತ್ಯಾದಿ.

ರಾಮನೂ, ಲಕ್ಷ್ಮಣನೂ, ಸೀತೆಯೂ ಕಾಡಿಗೆ ಹೋದರು.

ನಾಳೆಯೂ ಕೂಡ ನೀನು ಸಮವಸ್ತ್ರವನ್ನು ಧರಿಸಿ ಶಾಲೆಗೆ ಬರಬೇಕು.

ಇನ್ನೂ ಒಂದು ಪುಸ್ತಕ ನನಗೆ ಬೇಕು.

6. **ಕೃದಂತ ಅವ್ಯಯ:**ಧಾತುವಿನಿಂದ ಹುಟ್ಟಿ ಅವ್ಯಯದ ಗುಣವನ್ನು ಪಡೆದ ಶಬ್ಧಗಳೇ ಕೃದಂತ ಅವ್ಯಯಗಳು. ಇವು ಅಪೂರ್ಣ ಕ್ರಿಯಾಪದಗಳು. ಧಾತುಗಳ ಮೇಲೆ ಉತ, ಉತ್ತ, ಅಲು, ದರೆ, ಅಲಿಕ್ಕೇ, ಅ, ಇ, ದು ಮೊದಲಾದ 'ಕೃತ್' ಪ್ರತ್ಯಯಗಳು ಸೇರಿ ಕೃದಂತ ಅವ್ಯಯಗಳಾಗುತ್ತವೆ. ಉದಾ:

ಅವಳು ಅಡುಗೆ ಮಾಡುತ್ತ ಹಾಡು ಹೇಳುತ್ತಾಳೆ.

ಅವಳು ನೋಡದೆ ಹೋದಳು.

7. **ತದ್ಧಿತಾಂತ ಅವ್ಯಯ**: ನಾಮಪದಗಳ ಮುಂದೆ ಅಂತೆ, ಇಂತ, ಆಗಿ, ತನಕ, ವರೆಗೆ, ಓಸ್ಕರ, ಮಟ್ಟಿಗೆ – ಮೊದಲಾದ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳಾಗುತ್ತವೆ. ಈ ಪ್ರತ್ಯಯಗಳು ಬಂದಾಗ ನಾಮಪದದಲ್ಲಿರುವ ವಿಭಕ್ತಿ ಪ್ರತ್ಯಯ ಲೋಪವಾಗುವುದಿಲ್ಲ. ಉದಾ:

ಅವನು ಭೀಮನಂತೆ ಬಲಶಾಲಿ.

ಅವಳಿಗಿಂತ ಇವಳು ಸುಂದರಿ.

ಅವಳಿಗಾಗಿ ಏನೆಲ್ಲ ಮಾಡಿದೆ.

ಮನೆಯತನಕ ಬಿಟ್ಟು ಬರಬಾ.

8. **ಅವಧರಣಾರ್ಥಕ ಅವ್ಯಯ:**ಒಂದು ನಿಶ್ಚಯಾರ್ಥದಲ್ಲಿ ಬರುವ ಅವ್ಯಯವೇ ಅವಧಾರಣಾರ್ಥಕ ಅವ್ಯಯ. ಹಲವು ವ್ಯಕ್ತಿ, ವಸ್ತು, ಸ್ಥಳಗಳಲ್ಲಿ ಒಂದನ್ನು ನಿಶ್ಚಯಿಸಿ ನಿಖರವಾಗಿ ಹೇಳುವ ಅರ್ಥದಲ್ಲಿ ಅವಧಾರಣಾರ್ಥಕ ಅವ್ಯಯಗಳು ಬರುತ್ತವೆ. ಅವಧಾರಣೆಯ ಪದ 'ಏ'. ಉದಾ:

ನಾನೇ ಈ ಪುಸ್ತಕವನ್ನು ಬರೆದದ್ದು.

ಅದೇ ನಮ್ಮ ಮನೆ.

ಈ ಕೆಲಸವನ್ನು ನೀನೇ ಮಾಡಿರಬೇಕು.

ಅವನೇ ಈತ.

❖ ವಿಭಕ್ತಿ ಪ್ರತ್ಯಯಗಳು:

ನಾಮ ಪ್ರಕೃತಿಗಳ ಮೇಲೆ ಹತ್ತಿ ಶಬ್ದದ ಅರ್ಥವನ್ನು ಬದಲಾವಣೆ ಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯಗಳು' ಎಂದು ಕರೆಯಲಾಗುತ್ತದೆ. ಅಂದರೆ ನಾಮ ಪ್ರಕೃತಿಗಳ ಮೇಲೆ ಸಂದರ್ಭಕ್ಕೆ ತಕ್ಕಂತೆ, ಬೇರೆ ಬೇರೆ ಅರ್ಥವನ್ನು ಕೊಡುವ ಅಕ್ಷರ ಅಥವಾ ಅಕ್ಷರ ಸಮೂಹಗಳು ಸೇರಿಕೊಂಡು ವಾಕ್ಯದಲ್ಲಿನ ನಾಮಪ್ರಕೃತಿಗಳಿಗಿರುವ ಸಂಬಂಧವನ್ನು ತಿಳಿಸುತ್ತವೆ. ಅಂತಹ ಅಕ್ಷರ ಅಥವಾ ಅಕ್ಷರಗಳ ಸಮುದಾಯಗಳಿಗೆ (ಪ್ರತ್ಯಯ) ವಿಭಕ್ತಿ ಪ್ರತ್ಯಯ ಎಂದು ಹೆಸರು.

ವಿಭಕ್ತಿ ಎಂದರೆ ವಿಭಜಿಸುವುದು ಎಂದರ್ಥ. ವಾಕ್ಯದಲ್ಲಿ ನಾಮಪದಗಳನ್ನು ಕ್ರಿಯಾಪದಗಳೊಂದಿಗೆ ಸಂಬಂಧಿಸುವ ಪ್ರತ್ಯಯವೇ ವಿಭಕ್ತಿ. ನಾಮಪದವೊಂದನ್ನು ವಾಕ್ಯದಲ್ಲಿ ಬಳಸಿದಾಗ ಅದು ಗುರುತಿಸುವ ವ್ಯಕ್ತಿ, ವಸ್ತು, ಮೊದಲಾದವು ಆ ವಾಕ್ಯವು ಸೂಚಿಸುವ ಘಟನೆಯಲ್ಲಿ ಎಂತಹ ಕಾರ್ಯವನ್ನು ನಡೆಸುತ್ತವೆ ಎಂಬುದನ್ನು ಅದರೊಂದಿಗೆ ಬರುವ ವಿಭಕ್ತಿ ತಿಳಿಸುತ್ತದೆ.

ಸ್ವತಃ ಅರ್ಥವಿಲ್ಲದೆ, ಬೇರೆ ಬೇರೆ ಅರ್ಥಗಳಲ್ಲಿ ನಾಮಪ್ರಕೃತಿಗಳೊಡನೆ ಸೇರುವ ಸಂಕೇತ ಶಬ್ಧಗಳನ್ನು 'ವಿಭಕ್ತಿ ಪ್ರತ್ಯಯಗ' ಎನ್ನುತ್ತಾರೆ. ಇವಕ್ಕೆ ಸ್ವತಂತ್ರವಾದ ಅರ್ಥವಿರದೆ ಪ್ರಕೃತಿಯೊಂದಿಗೆ ಸೇರಿ ಅರ್ಥ ಕೊಡುತ್ತವೆ.

ನಾಮ ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿ ನಾಮಪದಗಳಾಗುತ್ತವೆ. ನಾಮ ಪ್ರಕೃತಿಗಳಿಗೆ ಸೇರುವ ಪ್ರತ್ಯಯಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳೆಂದು ಹೆಸರು. ರೂಢಿಯಲ್ಲಿ ಇವುಗಳನ್ನು ವಿಭಕ್ತಿ ಪ್ರತ್ಯಯಗಳೆಂದು ಕರೆಯುತ್ತಾರೆ.

ನಾಮ ವಾಚಕಗಳಿಗೆ ವಿಭಕ್ತಿ ಪ್ರತ್ಯಯ ಸೇರಿದಾಗ ನಾಮಪದಗಳಾಗುತ್ತವೆ. ನಾಮವಾಚಕ ಅಥವಾ ನಾಮವಾಚಿ ಎಂದರೆ, ವಿಭಕ್ತಿ ಪ್ರತ್ಯಯಗಳು ಸೇರದ ಪ್ರಾತಿಪದಿಕ ರೂಪಗಳು.

ಒಂದು ಪದಕ್ಕೂ ಇನ್ನೊಂದು ಪದಕ್ಕೂ ಇರುವ, ಕರ್ತೃ ಸಂಬಂಧವನ್ನು ಹೇಳುವ, ಲಿಂಗದ ಮೇಲೆ ಬರುವ, ವಿಶಿಷ್ಟ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು. ಇವು ಕನ್ನಡದಲ್ಲಿ 7 ಇವೆಯೆಂದು ಕೇಶಿರಾಜ ಹೇಳಿದ್ದಾನೆ.

ಸಂದಿಸಿ ಮಮಿಂಕೆಯದದೊ
ಳ್ಚೆಂದಿರ್ಪುದು ಸಪ್ತವಿಧ ವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ
ಪಿಂದೆಣಿಸಿದ ವಿವಿಧ ವಿಧದ ಲಿಂಗಕ್ಕೆಲ್ಲಂ.

ಕೇಶಿರಾಜ ವಿಭಕ್ತಿಗಳು 7 ಎಂದು ಹೇಳಿ ಸೂತ್ರದ ಸಾಲಿನಲ್ಲಿ ಈ ರೀತಿ ಪೋಣಿಸಿದ್ದಾನೆ. "ಮಮಿಂಕೆಯದದೊಳ್". ಇದರಲ್ಲಿ ಹಳಗನ್ನಡದ "ಮ್, ಅಮ್, ಇಮ್, ಕೆ, ಅತ್, ಅ, ಒಳ್" ಎಂದೂ– ಹೊಸಗನ್ನಡದಲ್ಲಿ ಕ್ರಮವಾಗಿ "ಉ, ಅನ್ನು, ಇಂದ, ಗೆ, ಕೆ, ದೆಸೆಯಿಂದ, ಅ, ಅಲ್ಲಿ" ಎಂದೂ ಇವೆ. ಹೊಸಗನ್ನಡದಲ್ಲಿ 'ಸಂಭೋದನಾ' ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಒಟ್ಟು 8 ವಿಭಕ್ತಿ ಪ್ರತ್ಯಯಗಳನ್ನು ಬಳಸುತ್ತೇವೆ.

ಕನ್ನಡದಲ್ಲಿ ಬಳಕೆಯಲ್ಲಿರುವ ವಿಭಕ್ತಿ ಪ್ರತ್ಯಯಗಳು: ಉ, ಅನ್ನು, ಇಂದ, ಕ್ಕೆ(ಗೆ), ದೆಸೆಯಿಂದ, ಅ, ಅಲ್ಲಿ, ಆ, ಏ, ಓ, ಇರಾ ಇತ್ಯಾದಿ. ಕನ್ನಡದಲ್ಲಿ ಪ್ರಮುಖವಾಗಿ ಎಂಟು ವಿಭಕ್ತಿಗಳಿದ್ದು ಅವುಗಳನ್ನು ನಾವು ಈ ಕೆಳಗಿನಂತೆ ಹೆಸರಿಸಬಹುದು.

ವಿಭಕ್ತಿಯ ಹೆಸರು	**ಪ್ರತ್ಯಯ**	**ಕಾರಕ**	**ಏಕವಚನ**	**ಬಹುವಚನ**
ಪ್ರಥಮಾ ವಿಭಕ್ತಿ	ಮ್/ಉ	ಕರ್ತೃ	ರಾಮನು	ರಾಮರು
ದ್ವಿತೀಯಾ ವಿಭಕ್ತಿ	ಅಮ್/ಅನ್ನು	ಕರ್ಮ	ರಾಮನನ್ನು	ರಾಮರನ್ನು
ತೃತೀಯಾ ವಿಭಕ್ತಿ	ಇಮ್/ಇಂದ	ಕರಣ	ರಾಮನಿಂದ	ರಾಮರಿಂದ
ಚತುರ್ಥಿ ವಿಭಕ್ತಿ	ಗೆ/ಕೆ/ಇಗೆ	ಸಂಪ್ರದಾನ (ವಸ್ತು ನಿರ್ದೇಶನ)	ರಾಮನಿಗೆ	ರಾಮರಿಂದ
ಪಂಚಮಿ ವಿಭಕ್ತಿ	ಅತ್/ದೆಸೆಯಿಂದ	ಅಪಾದಾನ (ಅಗಲುವಿಕೆ)	ರಾಮನ ದೆಸೆಯಿಂದ	ರಾಮರ ದೆಸೆಯಿಂದ
ಷಷ್ಠಿ ವಿಭಕ್ತಿ	ಅ/ಅ	ಸಂಬಂಧ	ರಾಮನ	ರಾಮರ
ಸಪ್ತಮಿ ವಿಭಕ್ತಿ	ಒಳ್/ಅಲ್ಲಿ	ಅಧಿಕರಣ	ರಾಮನಲ್ಲಿ	ರಾಮರಲ್ಲಿ
ಸಂಬೋಧನ ವಿಭಕ್ತಿ	ಏ/ಅ/ಇರಾ	ಅಭಿಮುಖೀಕರಣ	ರಾಮ, ರಾಮನೇ	ರಾಮರಿರಾ, ರಾಮರುಗಳೇ

❖ **ಸಂಧಿಗಳು:** ನಾವು ಮಾತನಾಡುವಾಗ ಅಥವಾ ಬರೆಯುವಾಗ ಪ್ರತಿಯೊಂದು ಪದ ಅಥವಾ ಪದಾಂಶವನ್ನು ಬಿಡಿಸಿ ಹೇಳುವುದಿಲ್ಲ. ಕೂಡಿಸಿ ಹೇಳುತ್ತೇವೆ. ಇದರಿಂದ ಸಮಯದ ಉಳಿತಾಯವಾಗುವುದರೊಂದಿಗೆ ನಮಗದು ತೊಡಕೂ ಆಗುವುದಿಲ್ಲ. ಇಲ್ಲಿ ನಾವು ಮಾತನಾಡುವಾಗ ಪ್ರತಿಯೊಂದು ಪದವನ್ನು ಬಿಡಿಸಿ ಬಿಡಿಸಿ ಉಚ್ಚರಿಸುವುದಿಲ್ಲ. ನಮ್ಮ ಉಚ್ಚಾರಣಶ್ರಮ ಹಾಗೂ ಕಾಲದ ಉಳಿತಾಯಕ್ಕಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನು ಕೂಡಿಸಿ ಉಚ್ಚರಿಸುತ್ತೇವೆ. ಹೀಗೆ ಅಕ್ಷರಗಳು ಎಡೆಬಿಡದೆ ಅರ್ಧಮಾತ್ರಾ ಕಾಲ ವ್ಯವಧಾನವಿಲ್ಲದೆ ಸೇರುವುದು ಸಂಧಿಯಾಗುತ್ತದೆ. ಅದೇ ರೀತಿ ಸಂಧಿಯಾಗುವಾಗ ಮೊದಲಿಗೆ ಇದ್ದ ಒಂದು ಅಕ್ಷರ ಅಥವಾ ವರ್ಣವು ಬಿಟ್ಟು

ಹೋಗುವುದಾಗಲೀ, ಹೊಸದೊಂದು ವರ್ಣವು ನಡುವೆ ಬರುವುದಾಗಲಿ ಅಥವಾ ಹಿಂದೆ ಇದ್ದ ವರ್ಣದ ಸ್ಥಾನದಲ್ಲಿ ಬೇರೊಂದು ವರ್ಣವು ಬರುವುದಾಗಲಿ ಹೀಗೆ ಕೆಲವು ವ್ಯತ್ಯಾಸಗಳು ಸಂಭವಿಸುತ್ತವೆ. ಇಂತಹ ವ್ಯತ್ಯಾಸಗಳೇ ಸಂಧಿ ಕಾರ್ಯ ಎಂದು ಕರೆಯಲ್ಪಡುತ್ತದೆ.

ಎರಡುಂ ಪಲವುಂ ವರ್ಣಂ

ಪರಸ್ಪರಂ ಕೂಡುವಂದಮದೆ ಸಂಧಿ ವಲಂ

ಸ್ವರ ರಹಿತ ವ್ಯಂಜನಮವು

ಪರವರ್ಣಮನೈದು ತಿರ್ಪುವಾ ಸಂಹಿತೆಯೊಳ್ – ಕೇಶಿರಾಜ (ಶಬ್ಧಮಣಿ ದರ್ಪಣ – ಸೂತ್ರ 59)

- ಎರಡು ಅಥವಾ ಹೆಚ್ಚು ಪದಗಳು ಒಂದಕ್ಕೊಂದು ಅರ್ಥ ಕೆಡದಂತೆ ಸೇರುವುದನ್ನು ಸಂಧಿ ಎನ್ನುವರು.
- ಎರಡು ಅಥವಾ ಹೆಚ್ಚು ಪದಗಳು ಒಂದಕ್ಕೊಂದು ಸೇರುವಾಗ ಅರ್ಥ ಕೆಡುವಂತಾದರೆ, ಹಿಂದಿನ ಸ್ವರವು ಬಿಟ್ಟು ಹೋಗುವುದು ಅಥವಾ ಹೊಸ ಅಕ್ಷರ ಸೇರುವುದರಿಂದ ಪೂರ್ಣವಾದ ಅರ್ಥ ಕೊಡುವ ಒಂದು ಪದವಾಗುವ ಕ್ರಿಯೆಯೇ ಸಂಧಿ ಕ್ರಿಯೆ ಅಥವಾ ಸಂಧಿ ಕಾರ್ಯ ಎನ್ನುವರು.
- ಸರಳ ಅರ್ಥದಲ್ಲಿ ಸಂಧಿ ಎಂದರೆ ಒಂದಕ್ಕೊಂದು ಸೇರುವುದು ಎಂದರ್ಥ.
- ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಕೂಡುವುದಕ್ಕೆ ಸಂಧಿ ಎಂದು ಹೆಸರು.

ಒಟ್ಟಾರೆಯಾಗಿ ಎರಡು ಅಕ್ಷರಗಳು ಸ್ಥಳ, ಕಾಲ ವಿಳಂಬವಾಗದಂತೆ ಅರ್ಥಕ್ಕೆ ಅನುಸಾರವಾಗಿ ಒಟ್ಟಿಗೆ ಸೇರಿ ಒಂದು ಪದವಾಗುವುದಕ್ಕೆ ಸಂಧಿ ಎನ್ನುತ್ತಾರೆ. ಹಾಗೆ ಸಂಧಿಯಾದಾಗ ಆಗುವ ವ್ಯತ್ಯಾಸಗಳಿಗೆ 'ಸಂಧಿಕಾರ್ಯ'ವೆಂದು ಸಂಧಿಕಾರ್ಯ ಆದ ಪದಗಳನ್ನು 'ಸಂಧಿಪದ'ಗಳೆಂದೂ ಕರೆಯುತ್ತಾರೆ.

ಯಾವುದೇ ಸಂಧಿ ಕ್ರಿಯೆ ನಡೆಯಬೇಕಾದರೆ ಅಲ್ಲಿ ಎರಡು ಪದಗಳಿರಬೇಕಾದದ್ದು ಸರ್ವಸಾಮಾನ್ಯ. ಆ ಪೈಕಿ ಮೊದಲನೆಯ ಪದವನ್ನು 'ಪೂರ್ವ ಪದ' ಎಂದೂ ಎರಡನೆಯ ಪದವನ್ನು 'ಉತ್ತರ ಪದ' ಎಂದೂ ಕರೆಯಲಾಗುತ್ತದೆ. ಸಂಧಿ ಮಾಡುವಾಗ ಎರಡು ಪದ (ಘಟಕ)ಗಳಿರುತ್ತವೆ. ಮೊದಲನೆಯ (ಎಡಗಡೆಯ) ಪದವನ್ನು ಪೂರ್ವಪದವೆಂದೂ, ಎರಡನೆಯ (ಬಲಗಡೆಯ) ಪದವನ್ನು ಉತ್ತರ ಪದವೆಂದೂ ಕರೆಯುತ್ತಾರೆ. ಪೂರ್ವ ಪದ ಮತ್ತು ಉತ್ತರ ಪದಗಳ ಸಂಯೋಗದಿಂದ ಸಮಸ್ತಪದ ರಚನೆಯಾಗುತ್ತದೆ. ಕನ್ನಡ ವೈಯಾಕರಣಿ **ಕೇಶಿರಾಜನ** ಪ್ರಕಾರ ಸಂಧಿ ಎಂದರೆ ಎರಡು ಅಥವಾ ಹಲವು ಅಕ್ಷರಗಳು ಪರಸ್ಪರ ಕೂಡುವುದಾಗಿದೆ.

<u>ಸ್ವರ ಸಂಧಿ ಮತ್ತು ವ್ಯಂಜನಸಂಧಿ:</u>

ಸ್ವರ ಸಂಧಿ: ಸಂಧಿ ಕಾರ್ಯವು ಯಾವಾಗಲೂ ನಡೆಯುವುದು ಪೂರ್ವಪದದ ಕೊನೆಯ ವರ್ಣ ಮತ್ತು ಉತ್ತರ ಪದದ ಮೊದಲ ವರ್ಣಗಳ ನಡುವೆ. ಪೂರ್ವ ಮತ್ತು ಉತ್ತರ ವರ್ಣಗಳೆರಡೂ ಸ್ವರಗಳಾದರೆ ಅಂತಹ ಸಂಧಿಯನ್ನು 'ಸ್ವರಸಂಧಿ' ಎಂದು ಕರೆಯುತ್ತಾರೆ. ಸಂಧಿಯಾಗುವಾಗ ಸ್ವರದ

ಮುಂದೆ ಸ್ವರ ಬಂದು ಅಂದರೆ ಸ್ವರಕ್ಕೆ ಸ್ವರ ಸೇರಿ ಸಂಧಿಯಾದರೆ ಅದು ಸ್ವರಸಂಧಿಯಾಗುತ್ತದೆ. ಸ್ವರ+ಸ್ವರ= ಸ್ವರಸಂಧಿ. ಉದಾ: ಲೋಪಸಂಧಿ, ಆಗಮ ಸಂಧಿ.

ವ್ಯಂಜನ ಸಂಧಿ: ಸಂಧಿಯಾಗುವಾಗ ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಬಂದರೆ ವ್ಯಂಜನ ಸಂಧಿ ಆಗುವುದು. ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನವೇ ಬಂದು ಸಂಧಿಯಾದರೆ ಅದು ವ್ಯಂಜನ ಸಂಧಿಯಾಗುತ್ತದೆ. ಅಂದರೆ ಪೂರ್ವಪದದ ಅಂತ್ಯಾಕ್ಷರ ಮತ್ತು ಉತ್ತರಪದದ ಆದಿ ಅಕ್ಷರ ಇವುಗಳಲ್ಲಿ ಯಾವುದಾದರೂ ಒಂದು ಸ್ವರ ಹಾಗೂ ಇನ್ನೊಂದು ವ್ಯಂಜನವಾಗಿದ್ದರೂ ಅಥವಾ ಎರಡೂ ಅಕ್ಷರಗಳೂ ವ್ಯಂಜನವಾಗಿದ್ದರೂ ಅದಕ್ಕೆ ವ್ಯಂಜನ ಸಂಧಿ ಎಂದು ಕರೆಯುತ್ತಾರೆ. ಸ್ವರ+ವ್ಯಂಜನ= ವ್ಯಂಜನಸಂಧಿ, ವ್ಯಂಜನ+ಸ್ವರ= ವ್ಯಂಜನ ಸಂಧಿ. ಉದಾ: ಆದೇಶ ಸಂಧಿ.

ಸಂಧಿಗಳ ವಿಧಗಳು:

ಕನ್ನಡದಲ್ಲಿ ಬಳಕೆಯಾಗುವ ಸಂಧಿಗಳಲ್ಲಿ ಸ್ಥೂಲವಾಗಿ ಎರಡು ವರ್ಗೀಕರಣವನ್ನು ಗುರುತಿಸಬಹುದು. 1]ಕನ್ನಡ ಸಂಧಿಗಳು. 2]ಸಂಸ್ಕೃತ ಸಂಧಿಗಳು;

ಕನ್ನಡ ಸಂಧಿಗಳು: ಸಂಧಿಕಾರ್ಯದ ಸಮಯದಲ್ಲಿ ಪೂರ್ವಪದ ಹಾಗೂ ಉತ್ತರಪದಗಳು ಎರಡೂ ಕನ್ನಡ ಪದಗಳಾಗಿದ್ದಲ್ಲಿ ಅಥವಾ ಒಂದು ಕನ್ನಡ ಪದ ಮತ್ತು ಇನ್ನೊಂದು ಸಂಸ್ಕೃತ ಪದ ಆಗಿದ್ದರೆ ಅಂತಹ ಸಂಧಿಯನ್ನು ಕನ್ನಡ ಸಂಧಿ ಎಂದು ಕರೆಯುತ್ತಾರೆ. ಸಂಧಿ ಕಾರ್ಯದಲ್ಲಿ ಭಾಗಿಯಾಗುವ ಎರಡು ವರ್ಣಗಳಲ್ಲಿ ಎರಡೂ ಅಥವಾ ಯಾವುದಾದರೂ ಒಂದು ವರ್ಣವಾದರೂ ಕನ್ನಡವಾಗಿದ್ದರೆ ಅಂತಹ ಸಂಧಿಗಳನ್ನು ಕನ್ನಡ ಸಂಧಿಗಳೆಂದು ಕರೆಯುತ್ತಾರೆ.

ಕನ್ನಡ ಸಂಧಿಯಲ್ಲಿ ಮೂರು ವಿಧಗಳು: 1] ಲೋಪಸಂಧಿ. 2] ಆಗಮ ಸಂಧಿ. 3] ಆದೇಶ ಸಂಧಿ. ಲೋಪ ಸಂಧಿ ಮತ್ತು ಆಗಮ ಸಂಧಿಗಳು ಕನ್ನಡದ ಸ್ವರ ಸಂಧಿಗಳೆಂದೂ ಆದೇಶ ಸಂಧಿಯು ಕನ್ನಡ ವ್ಯಂಜನ ಸಂಧಿಯೆಂದೂ ಕರೆಯಲ್ಪಡುತ್ತದೆ.

1] ಲೋಪಸಂಧಿ: ಸಂಧಿಕಾರ್ಯವಾಗುವಾಗ, ಪೂರ್ವಪದದ ಕೊನೆಯಲ್ಲಿರುವ ಸ್ವರಕ್ಕೆ ಉತ್ತರಪದದ ಆದಿಯಲ್ಲಿರುವ ಸ್ವರವು ಪರವಾದರೆ ಪೂರ್ವಪದದ ಕೊನೆಯ ಸ್ವರವು ಲೋಪ ಆಗುತ್ತದೆ. ಇದೇ ಲೋಪ ಸಂಧಿ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಸಂಧಿ ಮಾಡಬೇಕು. ಅರ್ಥವು ಕೆಡುವಂತಿದ್ದರೆ ಸಂಧಿ ಮಾಡಬಾರದು. ಸಂಧಿ ಕಾರ್ಯವಾಗುವಾಗ ಸ್ವರದ ಮುಂದೆ ಸ್ವರ ಬಂದರೆ ಸಾಮಾನ್ಯವಾಗಿ ಪೂರ್ವಪದದ ಸ್ವರ ಬಿಟ್ಟುಹೋಗುತ್ತದೆ. ಹೀಗೆ ಅಕ್ಷರವು ಬಿಟ್ಟು ಹೋಗುವುದಕ್ಕೆ ಲೋಪವೆಂದೂ, ಅಂತಹ ಸಂಧಿಗೆ ಲೋಪಸಂಧಿಯೆಂದೂ ಹೆಸರು. ಪೂರ್ವಪದದ ಸ್ವರವು ಲೋಪವಾದರೂ ಅರ್ಥ ಕೆಡದಂತಿರಬೇಕು.

ಎರಡು ಸ್ವರಗಳು ಸೇರುವಾಗ ರೂಢಿಯ ಅರ್ಥ ಕೆಡದೆ ಪೂರ್ವಪದದ ಕೊನೆಯ ಸ್ವರವು ಲೋಪವಾಗುವುದಕ್ಕೆ ಲೋಪಸಂಧಿ ಎಂದು ಕರೆಯುತ್ತಾರೆ. ಲೋಪ ಸಂಧಿಯಾಗುವಾಗ ಮೊದಲನೆಯ ಸ್ವರ ಲೋಪವಾಗಿ ಎರಡನೆಯ ಸ್ವರ ಹಾಗೆಯೇ ಉಳಿಯುತ್ತದೆ. ಸಾಮಾನ್ಯವಾಗಿ ಅ, ಇ, ಉ, ಎ ಸ್ವರಗಳು ಲೋಪವಾಗುತ್ತವೆ. ಸಂಧಿಯಾಗುವಾಗ ಸ್ವರದ ಮುಂದೆ ಸ್ವರವು ಬಂದಾಗ, ಅರ್ಥವು ಕೆಡದಿದ್ದ ಪಕ್ಷದಲ್ಲಿ ಮೊದಲ ಪದದ ಕೊನೆಯ ಸ್ವರವು ಲೋಪವಾಗುವುದು. ಉದಾಹರಣೆ:

ನಾವು	+	ಎಲ್ಲಾ	=	ನಾವೆಲ್ಲಾ ('ಉ' ಕಾರ ಲೋಪ)
ಬೇರೆ	+	ಒಂದು	=	ಬೇರೊಂದು ('ಎ' ಕಾರ ಲೋಪ)
ಮಾತು	+	ಇಲ್ಲ	=	ಮಾತಿಲ್ಲ ('ಉ'ಕಾರ ಲೋಪ)
ಮಾಡು	+	ಇಸು	=	ಮಾಡಿಸು ('ಉ' ಕಾರ ಲೋಪ)
ನಮ್ಮ	+	ಊರು	=	ನಮ್ಮೂರು (ಅ+ಊ=ಊ–ಅ ಕಾರ ಲೋಪ)
ಆಟ	+	ಓಟ	=	ಆಟೋಟ (ಅ+ಓ=ಓ–ಅ ಕಾರ ಲೋಪ)
ಈಗ	+	ಈಗ	=	ಈಗೀಗ (ಅ+ಈ=ಈ–ಅ ಕಾರ ಲೋಪ)
ಅಲ್ಲಿ	+	ಒಂದು	=	ಅಲ್ಲೊಂದು (ಇ+ಒ=ಒ–ಇ ಕಾರ ಲೋಪ)
ಎಲ್ಲಿ	+	ಇದೆ	=	ಎಲ್ಲಿದೆ (ಇ+ಇ=ಇ–ಇ ಕಾರ ಲೋಪ)
ಒಂದು	+	ಆಣೆ	=	ಒಂದಾಣೆ (ಉ+ಆ=ಆ–ಉ ಕಾರ ಲೋಪ)
ನನಗೆ	+	ಎಲ್ಲಿ	=	ನನಗೆಲ್ಲಿ (ಎ+ಎ=ಎ–ಎ ಕಾರ ಲೋಪ)
ಅವನಿಗೆ	+	ಇದೆ	=	ಅವನಿಗಿದೆ (ಎ+ಇ=ಇ–ಎ ಕಾರ ಲೋಪ)

2]ಆಗಮ ಸಂಧಿ: ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯ ವರ್ಣವು (ಸ್ವರ) ಲೋಪವಾಗುವುದರ ಬದಲು ಬೇರೊಂದು ವರ್ಣವು ಆಗಮವಾಗಿ ಬರುವುದಕ್ಕೆ ಆಗಮಸಂಧಿ ಎಂದು ಹೆಸರು.ಸ್ವರದ ಮುಂದೆ ಸ್ವರವು ಬಂದು ಲೋಪಸಂಧಿ ಮಾಡಿದಾಗ ಅರ್ಥ ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ನಡುವೆ 'ಯ'ಕಾರವನ್ನೋ 'ವ'ಕಾರವನ್ನೋ ಹೊಸದಾಗಿ ಸೇರಿಸಿ ಹೇಳಲಾಗುತ್ತದೆ. ಇದೇ ಆಗಮ ಸಂಧಿ. ಆಗಮ ಸಂಧಿಯಲ್ಲಿ ಯಕಾರಾಗಮ ಸಂಧಿ ಮತ್ತು ವಕಾರಾಗಮ ಸಂಧಿ ಎಂಬ ಎರಡು ಪ್ರಕಾರಗಳಿವೆ.

ಅ} ಯಕಾರಾಗಮ ಸಂಧಿ: ಪೂರ್ವಪದದ ಕೊನೆಯಲ್ಲಿರುವ ಆ, ಇ, ಈ, ಎ, ಏ, ಐ ಕಾರಗಳ ಮುಂದೆ ಸ್ವರ ಬಂದರೆ ಆ ಎರಡು ಸ್ವರಗಳ ನಡುವೆ 'ಯ್'ಕಾರವು ಆಗಮವಾಗುತ್ತದೆ. ಇದೇ ಯಕಾರಾಗಮ ಸಂಧಿ. ಉದಾಹರಣೆ:

ಕೆರೆ	+	ಇಂದ	=	ಕೆರೆಯಿಂದ	ಕೃಪೆ	+	ಇಂದ	=	ಕೃಪೆಯಿಂದ
ಕೆರೆ	+	ಅಲ್ಲಿ	=	ಕೆರೆಯಲ್ಲಿ	ಗಾಳಿ	+	ಅನ್ನು	=	ಗಾಳಿಯನ್ನು
ಮಳೆ	+	ಇಂದ	=	ಮಳೆಯಿಂದ	ಮೇ	+	ಇಸು	=	ಮೇಯಿಸು
ಕೈ	+	ಅಲ್ಲಿ	=	ಕೈಯಲ್ಲಿ	ಮನೆ	+	ಇಂದ	=	ಮನೆಯಿಂದ
ನದಿ	+	ಇಂದ	=	ನದಿಯಿಂದ	ಸಿರಿ	+	ಅನ್ನು	=	ಸಿರಿಯನ್ನು

ಗಿರಿ	+	ಇಂದ	=	ಗಿರಿಯಿಂದ	ಕಚಗುಳಿ	+	ಇಡು	=	ಕಚಗುಳಿಯಿಡು
ಹಳ್ಳಿ	+	ಅಲ್ಲಿ	=	ಹಳ್ಳಿಯಲ್ಲಿ	ಶಾಲೆ	+	ಇಂದ	=	ಶಾಲೆಯಿಂದ

ಆ} ವಕಾರಾಗಮ ಸಂಧಿ: ಪೂರ್ವಪದದ ಕೊನೆಯಲ್ಲಿರುವ ಅ, ಉ, ಊ, ಋ, ಓ ಔ ಕಾರಗಳ ಮುಂದೆ ಸ್ವರ ಬಂದರೆ ಆ ಎರಡು ಸ್ವರಗಳ ನಡುವೆ 'ವ'ಕಾರವು ಆಗಮವಾಗುತ್ತದೆ. ಇದೇ ವಕಾರಾಗಮ ಸಂಧಿ. ಉದಾಹರಣೆ:

ಮನ	+	ಅನ್ನು	=	ಮನವನ್ನು	ಕುಲ	+	ಅನ್ನು	=	ಕುಲವನ್ನು
ತೋಟ	+	ಅನ್ನು	=	ತೋಟವನ್ನು	ಗುರು	+	ಇಗೆ	=	ಗುರುವಿಗೆ
ಮಗು	+	ಇಗೆ	=	ಮಗುವಿಗೆ	ಹೂ	+	ಇನ	=	ಹೂವಿನ
ಹೂ	+	ಇಂದ	=	ಹೂವಿಂದ	ಪಿತೃ	+	ಇನ	=	ಪಿತೃವಿನ
ಮಾತೃ	+	ಅನ್ನು	=	ಮಾತೃವನ್ನು	ಗೋ	+	ಇನ	=	ಗೋವಿನ
ಬೌ	+	ಎಂದಿತು	=	ಬೌವೆಂದಿತು	ಬಲ	+	ಅನ್ನು	=	ಬಲವನ್ನು

3] ಆದೇಶ ಸಂಧಿ: ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಆದೇಶವಾಗಿ ಬರುವುದಕ್ಕೆ 'ಆದೇಶ ಸಂಧಿ' ಎಂದು ಹೆಸರು. ಸಂಧಿ ಕಾರ್ಯದಲ್ಲಿ ಒಂದು ವ್ಯಂಜನಾಕ್ಷರದ ಸ್ಥಾನದಲ್ಲಿ ಬೇರೊಂದು ವ್ಯಂಜನಾಕ್ಷರವು ಬರುವುದಕ್ಕೆ ಆದೇಶ ಸಂಧಿ ಎಂದು ಹೆಸರು. ಕನ್ನಡ ಸಂಧಿಗಳಲ್ಲಿ ಈ ಆದೇಶ ಕ್ರಿಯೆಯು ಉತ್ತರ ಪದದಲ್ಲಿರುವ ವ್ಯಂಜನಕ್ಕೆ ಮಾತ್ರ ಅನ್ವಯಿಸುತ್ತದೆ. ಇಲ್ಲಿ ಉತ್ತರ ಪದದ ಆದಿಯಲ್ಲಿರುವ ಕ, ಚ, ಟ, ತ, ಪ ವ್ಯಂಜನಗಳಿಗೆ ಕ್ರಮವಾಗಿ ಗ, ಜ, ಡ, ದ, ಬ ವ್ಯಂಜನಗಳು ಆದೇಶವಾಗಿ ಬರುತ್ತವೆ. ಇದನ್ನು ಗದಬಾದೇಶ ಸಂಧಿ ಎಂತಲೂ ಕರೆಯುವರು. ಉದಾಹರಣೆ:

ಮಳೆ	+	ಕಾಲ	=	ಮಳೆಗಾಲ	ಬೆಟ್ಟ	+	ತಾವರೆ	=	ಬೆಟ್ಟದಾವರೆ
ಕಣ್	+	ಪನಿ	=	ಕಂಬನಿ	ಬೆನ್	+	ಪತ್ತು	=	ಬೆಂಬತ್ತು
ಮೈ	+	ತೊಳೆ	=	ಮೈದೊಳೆ	ಹೊಸ	+	ಕನ್ನಡ	=	ಹೊಸಗನ್ನಡ
ಬಂಡೆ	+	ಕಲ್ಲು	=	ಬಂಡೆಗಲ್ಲು	ಹೂ	+	ಪುಟ್ಟಿ	=	ಹೂಬುಟ್ಟಿ
ಕಣ್	+	ಪಳಿ	=	ಕಂಬಳಿ	ಮೈ	+	ತುಂಬಿ	=	ಮೈದುಂಬಿ
ಹಾಲ್	+	ತೆನೆ	=	ಹಾಲ್ದೆನೆ	ತಲೆ	+	ತೂಗು	=	ತಲೆದೂಗು

ಸಂಸ್ಕೃತ ಸಂಧಿಗಳು: ಎರಡು ಸಂಸ್ಕೃತ ಶಬ್ಧಗಳು ಸೇರಿ ಸಂಧಿಯಾದರೆ ಅದಕ್ಕೆ ಸಂಸ್ಕೃತ ಸಂಧಿ ಎಂದು ಹೆಸರು. ಕನ್ನಡ ಭಾಷೆಯಲ್ಲಿ ಹಲವಾರು ಸಂಸ್ಕೃತ ಶಬ್ಧಗಳು ಸೇರಿರುವುದರಿಂದ, ಕೆಲವು ಸಂಸ್ಕೃತ ಸಂಧಿಗಳನ್ನು ಕನ್ನಡದಲ್ಲಿ ಸೇರಿಸಲಾಗಿದೆ. ಸಂಧಿಕಾರ್ಯವು ಎರಡು ಕನ್ನಡ ಶಬ್ಧಗಳ ನಡುವೆ ಏರ್ಪಟ್ಟರೆ ಅವನ್ನು ಕನ್ನಡ ಸಂಧಯಾಗಿ ಮತ್ತು ಎರಡರಲ್ಲಿ ಒಂದು ಸಂಸ್ಕೃತ ಶಬ್ಧವಾಗಿದ್ದರೆ ಅವನ್ನು ಸಂಸ್ಕೃತ ಸಂಧಿಯಾಗಿ ಪರಿಗಣಿಸಲಾಗುತ್ತದೆ.

ಸಂಸ್ಕೃತ ಸಂಧಿಗಳು

ಸ್ವರ ಸಂಧಿಗಳು

ಅ] ಸವರ್ಣ ದೀರ್ಘ ಸಂಧಿ

ಆ] ಗುಣ ಸಂಧಿ

ಇ] ವೃದ್ಧಿ ಸಂಧಿ

ಈ] ಯಣ್ ಸಂಧಿ

ವ್ಯಂಜನ ಸಂಧಿಗಳು

ಅ] ಜಶ್ತ್ವ ಸಂಧಿ

ಆ] ಶ್ಚುತ್ವ ಸಂಧಿ

ಇ] ಅನುನಾಸಿಕ ಸಂಧಿ

- ✓ **ಸ್ವರ ಸಂಧಿಗಳು:** ಎರಡು ಸಂಸ್ಕೃತ ಶಬ್ಧಗಳು ಸೇರಿ ಸಂಧಿಯಾಗುವಾಗ ಅಂದರೆ ಪೂರ್ವಪದದ ಅಂತ್ಯದ ವರ್ಣ ಮತ್ತು ಉತ್ತರ ಪದದ ಆದಿಯ ವರ್ಣ ಎವೆರಡೂ ಸ್ವರಗಳೇ ಆಗಿದ್ದು, ಸಂಧಿಯಾದಲ್ಲಿ ಅದಕ್ಕೆ 'ಸಂಸ್ಕೃತ ಸ್ವರ ಸಂಧಿ' ಎನ್ನುತ್ತಾರೆ. ಇದರಲ್ಲಿ ಸವರ್ಣದೀರ್ಘ ಸಂಧಿ, ಗುಣ ಸಂಧಿ, ವೃದ್ಧಿ ಸಂಧಿ ಮತ್ತು ಯಣ್ ಸಂಧಿ ಎಂಬ ನಾಲ್ಕು ಪ್ರಕಾರಗಳಿವೆ.

ಅ] ಸವರ್ಣ ದೀರ್ಘ ಸಂಧಿ: ಒಂದೇ ಜಾತಿಯ ಸವರ್ಣಗಳು ಅಥವಾ ಸ್ವರಾಕ್ಷರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ 'ದೀರ್ಘಸ್ವರ'ವೊಂದು ಆದೇಶವಾಗಿ ಬಂದು ಸಂಧಿಕಾರ್ಯವಾದರೆ ಅದನ್ನು ಸವರ್ಣ ದೀರ್ಘ ಸಂಧಿ ಎಂದು ಕರೆಯುತ್ತಾರೆ. ಸಮಾನ ಉಚ್ಚರವುಳ್ಳ ಅಆ, ಇಈ, ಉಊ ಸ್ವರಾಕ್ಷರಗಳು ಒಂದರ ಮುಂದೊಂದು ಬಂದರೆ ಅವೆರಡರ ಸ್ಥಾನದಲ್ಲಿ ಒಂದೇ ದೀರ್ಘ ಸ್ವರವು ಆದೇಶವಾಗಿ ಬಂದು ಸವರ್ಣದೀರ್ಘ ಸಂಧಿ ಆಗುತ್ತದೆ. ಉದಾಹರಣೆ:

ವಿದ್ಯಾ	+	ಅಭ್ಯಾಸ = ವಿದ್ಯಾಭ್ಯಾಸ	ಶುಭ	+	ಆಶಯ = ಶುಭಾಶಯ
ಮೃಗ	+	ಆಲಯ = ಮೃಗಾಲಯ	ದೇವ	+	ಆಲಯ = ದೇವಾಲಯ
ಮಹಿ	+	ಇಂದ್ರ = ಮಹೀಂದ್ರ	ರವಿ	+	ಇಂದ್ರ = ರವೀಂದ್ರ
ಕವಿ	+	ಈಶ್ವರ = ಕವೀಶ್ವರ	ಮುನಿ	+	ಈಶ್ವರ = ಮುನೀಶ್ವರ
ಲಕ್ಷ್ಮಿ	+	ಈಶ = ಲಕ್ಷ್ಮೀಶ	ಗಿರಿ	+	ಈಶ = ಗಿರೀಶ
ಗುರು	+	ಉಪದೇಶ = ಗುರೂಪದೇಶ	ಗುರು	+	ಉಪಚಾರ = ಗುರೂಪಚಾರ

ಆ] ಗುಣಸಂಧಿ: ಪೂರ್ವಪದದ ಕೊನೆಯಲ್ಲಿ ‘ಅಆ’ ಕಾರಗಳ ಮುಂದೆ ‘ಇಈ’ ಕಾರಗಳು ಬಂದರೆ ಅವೆಡರ ಸ್ಥಾನದಲ್ಲಿ ‘ಏ’ಕಾರವು, ‘ಉಊ’ ಕಾರಗಳು ಬಂದರೆ ಅವೆರಡರ ಸ್ಥಾನದಲ್ಲಿ ‘ಓ’ಕಾರವು, ‘ಋ’ಕಾರವು ಬಂದರೆ ಅವೆರಡರ ಸ್ಥಾನದಲ್ಲಿ ‘ಅರ್’ಕಾರವೂ ಆದೇಶವಾಗಿ ಬಂದರೆ ಅದನ್ನು ಗುಣಸಂಧಿ ಎಂದು ಕರೆಯುವರು. ಅಂದರೆ ಸಂಧಿಯಾಗುವಾಗ ಪೂರ್ವಪದದ ಅಂತ್ಯದಲ್ಲಿ ‘ಅ’ ಅಥವಾ ‘ಆ’ ಇದ್ದು ಅವುಗಳ ಮುಂದೆ ಅಂದರೆ ಪರಪದದ ಆದಿಯಲ್ಲಿ ‘ಇ’ ಮತ್ತು ‘ಈ’ ಬಂದು ಸಂಧಿಯಾದಾಗ ‘ಏ’ಕಾರವೂ, ‘ಉ’ ಅಥವಾ ‘ಊ’ ಪರವಾದರೆ ‘ಓ’ಕಾರವೂ, ‘ಋ’ ಬಂದರೆ ‘ಅರ್’ಕಾರವೂ ಇಲ್ಲಿ ಆದೇಶವಾಗುತ್ತದೆ. (ಅಆ+ಇಈ=ಏ, ಅಆ+ಉಊ=ಓ, ಅಆ+ಋ=ಅರ್) ಉದಾಹರಣೆ:

ಮಹಾ + ಇಂದ್ರ = ಮಹೇಂದ್ರ			ಸುರ + ಇಂದ್ರ = ಸುರೇಂದ್ರ		
ದೇವ + ಇಂದ್ರ = ದೇವೇಂದ್ರ			ರಾಜ + ಇಂದ್ರ = ರಾಜೇಂದ್ರ		
ಭಾವ + ಉದ್ರೇಕ = ಭಾವೋದ್ರೇಕ			ಚಂದ್ರ + ಉದಯ = ಚಂದ್ರೋದಯ		
ಸೂರ್ಯ + ಉದಯ = ಸೂರ್ಯೋದಯ			ಜನ + ಉಪಕಾರ = ಜನೋಪಕಾರ		
ರಾಜ + ಋಷಿ = ರಾಜರ್ಷಿ			ಮಹ + ಋಷಿ = ಮಹರ್ಷಿ		
ದೇವ + ಋಷಿ = ದೇವರ್ಷಿ			ಬ್ರಹ್ಮ + ಋಷಿ = ಬ್ರಹ್ಮರ್ಷಿ		

ಇ]ವೃದ್ಧಿ ಸಂಧಿ: ಪೂರ್ವಪದದ ಅ, ಆ ಕಾರಗಳ ಮುಂದೆ ಏ, ಐ ಕಾರಗಳು ಬಂದರೆ ‘ಐ’ಕಾರವೂ, ಓ, ಔ ಕಾರಗಳು ಬಂದರೆ ‘ಔ’ಕಾರವು ಆದೇಶವಾಗಿ (ವೃದ್ಧಿಯಾಗಿ) ಬರುವುದಕ್ಕೆ ವೃದ್ಧಿ ಸಂಧಿ ಎನ್ನುವರು. ಸಂಧಿಯಾಗುವಾಗ ಪೂರ್ವಪದದ ಅಂತ್ಯದಲ್ಲಿ ‘ಅ’ ಅಥವಾ ‘ಆ’ ಕಾರವಿದ್ದು ಅವುಗಳ ಮುಂದೆ ಅಂದರೆ ಉತ್ತರ ಪದದ ಆದಿಯಲ್ಲಿ ‘ಏ’ ಅಥವಾ ‘ಐ’ ಕಾರ ಪರವಾದರೆ ಅವುಗಳ ಸ್ಥಾನದಲ್ಲಿ ‘ಐ’ಕಾರವೂ, ‘ಓ’ ಅಥವಾ ‘ಔ’ ಕಾರ ಪರವಾದರೆ ಅವುಗಳ ಸ್ಥಾನದಲ್ಲಿ ‘ಔ’ಕಾರವೂ ಆದೇಶವಾಗಿ ಬರುತ್ತದೆ, ಇದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ. (ಅಆ+ಏಐ=ಐ, ಅಆ+ಓಔ=ಔ) ಉದಾಹರಣೆ:

ಲೋಕ + ಏಕ = ಲೋಕೈಕ   ಏಕ + ಏಕ = ಏಕೈಕ

ವನ + ಔಷಧಿ = ವನೌಷಧಿ   ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ

ಲಿಂಗ + ಐಕ್ಯ = ಲಿಂಗೈಕ್ಯ   ಮಹಾ + ಔದಾರ್ಯ = ಮಹೌದಾರ್ಯ

ವಿದ್ಯಾ + ಐಶ್ವರ್ಯ = ವಿದ್ಯೈಶ್ವರ್ಯ   ಭಾವ + ಐಕ್ಯ = ಭಾವೈಕ್ಯ

ಮಹಾ + ಔನ್ನತ್ಯ = ಮಹೌನ್ನತ್ಯ   ಜಿನ + ಐಕ್ಯ = ಜಿನೈಕ್ಯ

ಈ] ಯಣ್ ಸಂಧಿ: ಪೂರ್ವಪದದ ಕೊನೆಯಲ್ಲಿರುವ ಇ,ಈ,ಉ,ಊ,ಋ ಕಾರಗಳಿಗೆ ಯಾವುದೇ ಸ್ವರ ಪರವಾದಾಗ 'ಇಈ' ಕಾರಗಳಿಗೆ 'ಯ' ಕಾರವು, 'ಉಊ' ಕಾರಗಳಿಗೆ 'ವ' ಕಾರವೂ, 'ಋ' ಕಾರಕ್ಕೆ 'ರ್' (ರೇಫ) ಕಾರವೂ ಆದೇಶವಾಗಿ ಬರುವುದಕ್ಕೆ 'ಯಣ್ ಸಂಧಿ' ಎಂದು ಹೆಸರು. ಯ, ವ, ರ ಕಾರಗಳನ್ನು ಯಣ್ ಅಕ್ಷರಗಳು ಎನ್ನುವರು. (ಇಈ,ಉಊ,ಋ + ಬೇರೆ ಸ್ವರಪರ = ಯ್, ವ್, ರ್) ಉದಾಹರಣೆ:

ಅತಿ	+	ಆದರ = ಅತ್ಯಾದರ	ಕೋಟಿ	+	ಅಧೀಶ = ಕೋಟ್ಯಧೀಶ
ಮನು	+	ಅಂತರ = ಮನ್ವಂತರ	ಗುರು	+	ಆಜ್ಞೆ = ಗುರ್ವಾಜ್ಞೆ
ಪ್ರತಿ	+	ಉತ್ತರ = ಪ್ರತ್ಯುತ್ತರ	ಜಾತಿ	+	ಅತೀತ = ಜಾತ್ಯಾತೀತ
ಅತಿ	+	ಉಗ್ರ = ಅತ್ಯುಗ್ರ	ಪಿತೃ	+	ಆರ್ಜಿತ = ಪಿತ್ರಾರ್ಜಿತ
ಮಾತೃ	+	ಅಂಶ = ಮಾತ್ರಾಂಶ			

✓ **ವ್ಯಂಜನ ಸಂಧಿಗಳು:** ಸಂಧಿ ಕಾರ್ಯವಾಗುವಾಗ ಎರಡು ಸಂಸ್ಕೃತ ಶಬ್ದಗಳು ಅಂದರೆ ವ್ಯಂಜನದ ಮುಂದೆ ವ್ಯಂಜನವೇ ಬಂದರೂ ಅಥವಾ ಒಂದು ವ್ಯಂಜನವಾಗಿದ್ದು ಇನ್ನೊಂದು ಸ್ವರವಾಗಿದ್ದರೂ ಸಹ ಅಲ್ಲಿ ಸಂಸ್ಕೃತ ವ್ಯಂಜನ ಸಂಧಿ ಉಂಟಾಗುತ್ತದೆ. ಇದರಲ್ಲಿ ಜಶ್ತ್ವ ಸಂಧಿ, ಶ್ಚುತ್ತ್ವ ಸಂಧಿ, ಅನುನಾಸಿಕ ಸಂಧಿ ಮುಂತಾದವುಗಳು ಬರುತ್ತವೆ.

ಅ] ಜಶ್ತ್ವ ಸಂಧಿ: ಪೂರ್ವ ಪದದ ಕೊನೆಯಲ್ಲಿರುವ ಪ್ರಥಮ ವರ್ಗೀಯ ವ್ಯಂಜನ ವರ್ಣಗಳಾದ ಕ ಚ ಟ ತ ಪ ಗಳಿಗೆ ಯಾವುದೇ ವರ್ಣ ಪರವಾದರೂ ಆಯಾ ವರ್ಗದ ತೃತೀಯ ವ್ಯಂಜನಾಕ್ಷರಗಳೇ ಆದೇಶವಾಗಿ ಬರುವುದಕ್ಕೆ 'ಜಶ್ತ್ವಸಂಧಿ' ಎಂದು ಹೆಸರು. 'ಜಶ್' ಎಂದರೆ ಸಂಸ್ಕೃತ ವ್ಯಾಕರಣದಲ್ಲಿ 'ಜಬಗಡದ' ಈ ವ್ಯಂಜನಗಳನ್ನು ತಿಳಿಸುವ ಸಂಜ್ಞೆಗೆ 'ಜಶ್ತ್ವ' ಎಂದು ಕರೆಯುತ್ತಾರೆ. (ಕ ಚ ಟ ತ ಪ + ಯಾವುದೇ ವರ್ಣಪರ = ಗ ಜ ಡ ದ ಬ) ಉದಾಹರಣೆ:

ಅಚ್	+	ಅಂತ = ಅಜಂತ	ದಿಕ್	+	ಅಂತ = ದಿಗಂತ
ಅಚ್	+	ಆದಿ = ಅಜಾದಿ	ದೃಕ್	+	ಗೋಚರ = ದೃಗ್ಗೋಚರ
ಷಟ್	+	ಅಂಗ = ಷಡಂಗ	ವಾಕ್	+	ದೇವಿ = ವಾಗ್ದೇವಿ
ಸತ್	+	ಆನಂದ = ಸದಾನಂದ	ಅಪ್	+	ಧಿ = ಅಬ್ಧಿ
ಅಪ್	+	ಜ = ಅಬ್ಜ	ಷಟ್	+	ಪದಿ = ಷಟ್ಪದಿ

[ಆದೇಶ ಸಂಧಿಯಲ್ಲಿ ಉತ್ತರಪದದ ಮೊದಲು ಬರುವ 'ಕಚಟತಪ' ಗಳಿಗೆ 'ಗಜಡದಬ' ವ್ಯಂಜನ ವರ್ಣಗಳು ಆದೇಶವಾದರೆ, ಜಶ್ತ್ವಸಂಧಿಯಲ್ಲಿ ಇದೇ ರೀತಿಯ ಬದಲಾವಣೆ ಪೂರ್ವಪದದ ಕೊನೆಯ ವರ್ಣಗಳಿಗೆ ಆಗುತ್ತದೆ.]

ಆ] ಶ್ಚುತ್ತ್ವ ಸಂಧಿ: ಪೂರ್ವ ಪದದ 'ಸ'ಕಾರ ಅಥವಾ 'ತ' ವರ್ಗಗಳಿಗೆ ಉತ್ತರಪದದಲ್ಲಿ 'ಶ'ಕಾರ ಇಲ್ಲವೆ 'ಚ' ವರ್ಗಾಕ್ಷರಗಳು (ಚ, ಛ, ಜ, ಝ, ಞ) ಬಂದರೆ, 'ಸ'ಕಾರಕ್ಕೆ –'ಶ' ಕಾರವೂ, 'ತ'

ವರ್ಗಕ್ಕೆ 'ಚ' ವರ್ಗಾಕ್ಷರಗಳೂ ಬರುವುದಕ್ಕೆ ಶ್ಚುತ್ವ ಸಂಧಿ ಎನ್ನುತ್ತಾರೆ. 'ಶ್ಚು' ಎಂದರೆ 'ಶ'ಕಾರ, 'ಚ' ವರ್ಗಾಕ್ಷರಗಳು ಎಂದು.

ಸಂಸ್ಕೃತ ವ್ಯಾಕರಣ ಪರಂಪರೆಯಲ್ಲಿ 'ಶ'ಕಾರ ಮತ್ತು 'ಚ' ವರ್ಗದ ಐದು ಅಕ್ಷರಗಳಾದ ಚ, ಛ, ಜ, ಝ, ಇ~ –ಗಳಿಗೆ 'ಶ್ಚು' ಎಂದು ಕರೆಯುತ್ತಾರೆ. ಸಂಧಿ ಆಗುವಾಗ ಪೂರ್ವಪದದ ಅಂತ್ಯದಲ್ಲಿ 'ಸ'ಕಾರ ಅಥವಾ 'ತ' ವರ್ಗದ ಐದು ಅಕ್ಷರಗಳಲ್ಲಿ (ತ, ಥ, ದ, ಧ, ನ) ಯಾವುದಾದರೂ ಒಂದು ಅಕ್ಷರವಿದ್ದು, ಉತ್ತರಪದದ ಆದಿಯಲ್ಲಿ 'ಶ' ಕಾರ ಅಥವಾ 'ಚ' ವರ್ಗದಲ್ಲಿನ ಐದು ಅಕ್ಷರಗಳ ಪೈಕಿ (ಚ, ಛ, ಜ, ಝ, ಇ~) ಯಾವುದಾದರೂ ಒಂದು ಅಕ್ಷರ ಬಂದಲ್ಲಿ 'ಸ'ಕಾರಕ್ಕೆ ಬದಲಾಗಿ 'ಶ' ಕಾರವೂ 'ತ'ವರ್ಗದ ಅಕ್ಷರಗಳಿಗೆ ಬದಲಾಗಿ 'ಚ' ವರ್ಗದ ಅಕ್ಷರಗಳೂ ಆದೇಶಗಳಾಗಿ ಬರುತ್ತವೆ. ಉದಾಹರಣೆ:

ಮನಸ್ + ಶುದ್ಧಿ = ಮನಶ್ಶುದ್ಧಿ ಮನಸ್ + ಚಂಚಲ = ಮನಶ್ಚಂಚಲ

ಶರತ್ + ಚಂದ್ರ = ಶರಶ್ಚಂದ್ರ ಸತ್ + ಜನ = ಸಜ್ಜನ

ಜಗತ್ + ಜ್ಯೋತಿ = ಜಗಜ್ಯೋತಿ ಬೃಹತ್ + ಛತ್ರ = ಬೃಹಚ್ಛತ್ರ

ಬೃಹತ್ + ಜ್ಯೋತಿ = ಬೃಹಜ್ಯೋತಿ ಯಶಸ್ + ಚಂದ್ರಿಕೆ = ಯಶಶ್ಚಂದ್ರಿಕೆ

ಇ] **ಅನುನಾಸಿಕ ಸಂಧಿ:** ಸಂಧಿಯಾಗುವಾಗ ವರ್ಗೀಯ ವ್ಯಂಜನಗಳ ಪ್ರತಿಯೊಂದು ವರ್ಗದ ಪ್ರಥಮ ವರ್ಣಗಳಿಗೆ ಅಂದರೆ ಕ, ಚ, ಟ, ತ, ಪ ಗಳಿಗೆ ಯಾವುದೇ ಅನುನಾಸಿಕ ಪದ ಅಂದರೆ ಓ, ಇ~, ಙ, ಮ ಪರವಾದಾಗ ಕ, ಚ, ಟ, ತ, ಪ ಗಳಿಗೆ ಕ್ರಮವಾಗಿ ಇ~, ಙ, ನ, ಮ ಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಅನುನಾಸಿಕ ಸಂಧಿ ಎಂದು ಹೆಸರು. ಉದಾಹರಣೆ:

ವಾಕ್ + ಮಯ = ವಾಇ~ಮಯ ಚಿತ್ + ಮಯ = ಚಿನ್ಮಯ

ಷಟ್ + ಮುಖ = ಷನ್ಮುಖ ಷಟ್ + ಮಾಸ = ಷಣ್ಮಾಸ

ಸತ್ + ಮಾನ = ಸನ್ಮಾನ ದಿಕ್ + ಮೂಢ = ದಿಒಮೂಢ

❖ ಸಮಾಸಗಳು:

ಸಮಾಸ ಎಂದರೆ ಕೂಡುನುಡಿ ಅಥವಾ ಪದವಿಧಿ ಅಥವಾ ಸಂಕ್ಷೇಪವಾಗಿ ಇರುವುದು. ಎರಡು ಅಥವಾ ಅನೇಕ ಪದಗಳು ಅರ್ಥಕ್ಕೆ ಅನುಸಾರವಾಗಿ ಸೇರಿ ಮಧ್ಯೆ ಇರುವ ವಿಭಕ್ತಿ ಪ್ರತ್ಯಯಗಳನ್ನು ಲೋಪ ಮಾಡಿಕೊಂಡು ಒಂದು ಪದವಾಗುವುದೇ ಸಮಾಸ. ಎರಡು ಅಥವಾ ಅನೇಕ ಪದಗಳು ಒಟ್ಟುಗೂಡಿ ಒಂದು ಶಬ್ಧವಾಗುವುದೇ ಸಮಾಸ. ಎರಡು ಅಕ್ಷರಗಳು ಪರಸ್ಪರ ಕೂಡಿದರೆ ಸಂಧಿಯಾಗುವಂತೆ ಎರಡು ಪದಗಳು ಸೇರಿದರೆ ಸಮಾಸವಾಗುತ್ತದೆ.

ಎರಡು ಅಥವಾ ಆನೇಕ ಪದಗಳು ಸೇರಿ ಸಮಾಸವಾಗುವಾಗ ಮಧ್ಯದಲ್ಲಿನ ವಿಭಕ್ತಿ ಪ್ರತ್ಯಯವನ್ನು ಲೋಪಮಾಡಿಕೊಂಡು ಒಂದೇ ಪದವಾಗುವುದಕ್ಕೆ ಸಮಾಸ ಎನ್ನುವರು. ಸಮಾಸದ

ಮೊದಲ ಪದ ಪೂರ್ವಪದ, ಎರಡನೆಯ ಪದ ಉತ್ತರಪದವಾಗಿದೆ. ಪೂರ್ವಪದ ಮತ್ತು ಉತ್ತರಪದಗಳೆರಡೂ ಸೇರಿ ಆದ ಪದಕ್ಕೆ ಸಮಾಸ ಪದ ಎನ್ನುತ್ತೇವೆ. ಸಮಾಸ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹ ವಾಕ್ಯ ಎಂದು ಹೆಸರು.

ಪ್ರಾಚೀನ ವೈಯಾಕರಣಿ ಕೇಶಿರಾಜ ತನ್ನ 'ಶಬ್ಧಮಣಿ ದರ್ಪಣ'ದಲ್ಲಿ ಸಮಾಸದ ಲಕ್ಷಣವನ್ನು ಈ ರೀತಿಯಾಗಿ ತಿಳಿಸಿದ್ದಾನೆ. "ಕರು ತಾಯಿಯನ್ನು ಬಿಟ್ಟು ಇರದ ರೀತಿಯಲ್ಲಿ ನಾಮ ಪದವು ಅರ್ಥಾನುಸಾರಿಯಾಗಿ ಇನ್ನೊಂದು ಪದಕ್ಕೆ ಸೇರಿಕೊಂಡರೆ ಸಮಾಸ ಘಟಿಸುತ್ತದೆ. ಆಗ ಅವುಗಳ ಮಧ್ಯದಲ್ಲಿರುವ ವಿಭಕ್ತಿಗಳು ಲೋಪವಾಗುತ್ತವೆ."

'ಶಬ್ದಾನುಶಾಸನ'ದ ಕರ್ತೃ ಭಟ್ಟಾಕಳಂಕ ಹೇಳುವ ಹಾಗೆ 'ಸಮಾಸದಲ್ಲಿ ಎರಡು ಪದಗಳಿದ್ದಾಗಲೂ ಅರ್ಥವು ಒಂದನ್ನೇ ಸಮರ್ಥಿಸುತ್ತಿರಬೇಕು. ಇಂತಹ ಏಕಾರ್ಥಭಾವ ಲಕ್ಷಣವುಳ್ಳದ್ದೇ ಸಮಾಸವೆಂದಿದ್ದಾರೆ.'

ಸಮಾಸಗಳನ್ನು ಮಾಡುವಾಗ ಸಂಸ್ಕೃತ–ಸಂಸ್ಕೃತ ಶಬ್ಧಗಳನ್ನು ಸೇರಿಸಿ ಸಮಾಸ ಮಾಡಬಹುದು, ತದ್ಭವ–ತದ್ಭವ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಹುದು. ಅಚ್ಚಗನ್ನಡ ಶಬ್ದ–ತದ್ಭವ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಹುದು. ಆದರೆ ಕನ್ನಡ–ಸಂಸ್ಕೃತ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಾರದು.

ಸಂಸ್ಕೃತದಲ್ಲಿ 6 ಸಮಾಸಗಳಿವೆ ಹಾಗೂ 28 ಸಮಾಸಗಳ ಉಪವಿಭಾಗಗಳಿವೆ. ನಾಗವರ್ಮ ಮತ್ತು ಭಟ್ಟಾಕಳಂಕ 7 ಸಮಾಸಗಳನ್ನು ಹೇಳಿದ್ದಾರೆ. ಕೇಶಿರಾಜ 8 ಸಮಾಸಗಳನ್ನು ಹೇಳಿದ್ದಾನೆ. ಕೇಶಿರಾಜನನ್ನು ಕೇಂದ್ರವಾಗಿಟ್ಟುಕೊಂಡು ಸಾಂಪ್ರದಾಯಿಕ ವ್ಯಾಕರಣಕಾರರು ಹೇಳಿದ ಸಮಾಸಗಳನ್ನು ಅರ್ಥದ ದೃಷ್ಟಿಯಿಂದ 4 ವಿಧವಾಗಿ ವಿಂಗಡಿಸಬಹುದು.

- **ಉತ್ತರಪದ ಅರ್ಥ ಪ್ರಧಾನವುಳ್ಳ ಸಮಾಸ–** ತತ್ಪುರುಷ ಸಮಾಸ, ಕರ್ಮಧಾರೆಯ ಸಮಾಸ, ದ್ವಿಗು ಸಮಾಸ, ಕ್ರಿಯಾ ಸಮಾಸ, ಗಮಕ ಸಮಾಸ
- **ಪೂರ್ವಪದ ಅರ್ಥ ಪ್ರಧಾನವುಳ್ಳ ಸಮಾಸ–** ಅಂಶಿ ಸಮಾಸ/ಅವ್ಯಯಿಭಾವ ಸಮಾಸ
- **ಉಭಯಪದ ಅರ್ಥ ಪ್ರಧಾನವುಳ್ಳ ಸಮಾಸ–** ದ್ವಂದ್ವ ಸಮಾಸ
- **ಅನ್ಯಪದ ಅರ್ಥ ಪ್ರಧಾನವುಳ್ಳ ಸಮಾಸ–** ಬಹುವ್ರೀಹಿ ಸಮಾಸ

1.ತತ್ಪುರುಷ ಸಮಾಸ: ಉತ್ತರಪದ ಅರ್ಥಪ್ರಧಾನವುಳ್ಳ ಸಮಾಸ ಇದಾಗಿದ್ದು ಕೇಶಿರಾಜ ಇದನ್ನು 'ಪರಪದದೊಳರ್ಥವರ್ತನಮಿರೆ ತತ್ಪುರುಷಂ' – ಎಂದು ಹೇಳುತ್ತಾನೆ. ಈ ಸಮಾಸದಲ್ಲಿ 'ಪೂರ್ವಪದವು ಯಾವ ವಿಭಕ್ತಿಯಲ್ಲಿರುವುದೋ ಆ ವಿಭಕ್ತಿಯ ಹೆಸರನ್ನಳವಡಿಸಿಕೊಂಡು ಈ ಸಮಾಸವನ್ನು ಹೇಳುವ ವಾಡಿಕೆ ಇದೆ'. ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸ ಎಂದು ಹೆಸರು. ಉದಾಹರಣೆ:

ಬೆಟ್ಟದ + ತಾವರೆ = ಬೆಟ್ಟದಾವರೆ ಅರಸನ + ಮನೆ = ಅರಮನೆ

ಕಣ್ಣಿನಿಂದ + ಕುರುಡು = ಕಣ್ಣುಕುರುಡು ತಲೆಯಲ್ಲಿ + ನೋವು = ತಲೆನೋವು

ತೇರಿಗೆ + ಮರ = ತೇರುಮರ ಹಗಲಿನಲ್ಲಿ + ಕನಸು = ಹಗಲುಗನಸು

ಹಲ್ಲಿನಲ್ಲಿ + ನೋವು = ಹಲ್ಲುನೋವು ಹರಟೆಯಲ್ಲಿ + ಮಲ್ಲ = ಹರಟೆಮಲ್ಲ

ವಯಸ್ಸಿನಿಂದ + ವೃದ್ಧ = ವಯೋವೃದ್ಧ ಕಾಲಿನ + ಬಳೆ = ಕಾಲುಬಳೆ

2. ಕರ್ಮಧಾರೆಯ ಸಮಾಸ: ಉತ್ತರಪದದ ಅರ್ಥ ಪ್ರಧಾನವುಳ್ಳ ಸಮಾಸ ಇದಾಗಿದ್ದು ಕೇಶಿರಾಜ ಇದನ್ನು 'ಏಕಾಶ್ರಯಮಾಗಿರೆ ಕರ್ಮಧಾರೆಯಂ'– ಎಚಿದು ಹೇಳುತ್ತಾನೆ. ಉಭಯ ಪದಗಳು ಒಂದೇ ವಿಭಕ್ತಿಯಲ್ಲಿರುವುದೇ ಕರ್ಮಧಾರೆಯ ಸಮಾಸ. ಪೂರ್ವಪದ ವಿಶೇಷಣವಾಗಿರುವುದು ಒಂದು ವಿಶೇಷ. ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು, ವಿಶೇಷಣ ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರೆಯ ಸಮಾಸವೆನ್ನುವರು. ಉದಾಹರಣೆ:

ಹಿರಿದಾದ + ಜೇನು = ಹೆಜ್ಜೇನು ಮೆಲ್ಲಿತ್ತು + ನುಡಿ = ಮೆಲ್ನುಡಿ

ಹಿರಿದು + ಬಾಗಿಲು = ಹೆಬ್ಬಾಗಿಲು ಹಿರಿದಾದ + ಮರ = ಹೆಮ್ಮರ

ಕೆಚ್ಚನೆಯ + ತಾವರೆ = ಕೆಂದಾವರೆ ಹಿರಿದು + ಹುಲಿ = ಹೆಬ್ಬುಲಿ

ಬಿಳಿದು + ಕೊಡೆ = ಬೆಳ್ಗೊಡೆ ಕರಿದು + ಮೋಡ = ಕಾರ್ಮೋಡ

ಮುಖವು + ಕಮಲದಂತೆ = ಕಮಲಮುಖ ಪೀತವಾದ + ಅಂಬರ = ಪೀತಾಂಬರ

3. ದ್ವಿಗು ಸಮಾಸ: ಉತ್ತರಪದ ಪ್ರಧಾನವುಳ್ಳ ಸಮಾಸ ಇದಾಗಿದ್ದು ಕೇಶಿರಾಜ ಇದನ್ನು 'ನೆಲೆಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ'– ಎಂದಿದ್ದಾರೆ. ಪೂರ್ವಪದವು ಸಂಖ್ಯಾವಾಚಕವಾಗಿದ್ದು ಉತ್ತರಪದದ ನಾಮವಾಚಕದೊಂದಿಗೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ. ಅಂದರೆ ಪೂರ್ವಪದದಲ್ಲಿ ಸಂಖ್ಯಾವಾಚಿಯನ್ನು ಹೊಂದಿರುವುದು. ಒಮ್ಮೊಮ್ಮೆ ಪೂರ್ವೋತ್ತರ ಪದಗಳೆರಡೂ ಸಂಖ್ಯಾವಾಚಿಯಾಗಿರುವುದು. ಉದಾಹರಣೆ:

ಒಂದು + ಕಟ್ಟು = ಒಗ್ಗಟ್ಟೂ ಮೂರು + ಮಡಿ = ಮುಮ್ಮಡಿ

ಎರಡು + ಬದಿ = ಇಬ್ಬದಿ ಒಂದು + ಕಣ್ಣು = ಒಕ್ಕಣ್ಣು

ಎರಡು + ಮಡಿ = ಇಮ್ಮಡಿ ಮೂರು + ಪತ್ತು = ಮೂವತ್ತು

ನಾಲ್ಕು + ಮಡಿ = ನಾಲ್ವಡಿ ಪಂಚ + ಇಂದ್ರಿಯ = ಪಂಚೇಂದ್ರಿಯ

ನವ + ರಾತ್ರಿ = ನವರಾತ್ರಿ ಮೂವತ್ತು + ಆರು = ಮುವತ್ತಾರು

4. ಅಂಶಿ ಸಮಾಸ/ ಅವ್ಯಯಿ ಭಾವ ಸಮಾಸ: ಪೂರ್ವಪದ ಪ್ರಧಾನವುಳ್ಳ ಸಮಾಸ ಇದಾಗಿದ್ದು ಕೇಶಿರಾಜ ಇದನ್ನು 'ಅವ್ಯಯೀಭಾವ ಆದಿಪದ ಮುಖ್ಯತೆಯಿಂ'– ಎಂದಿದ್ದಾರೆ. ಭಟ್ಟಾಕಳಂಕ ಇದನ್ನು 'ಅಂಶಿ ಸಮಾಸ' ಎಮ್ದು ಹೆಸರಿಸಿದ್ದಾನೆ. ಪೂರ್ವಪದದ ಅಂಶವು ಉತ್ತರಪದದ ಅಂಶೀಯೊಂದಿಗೆ ಸೇರಿ ಆಗುವ ಸಮಾಸವಿದು. ಸಮಾಸವಾಗುವಾಗ ಪೂರ್ವಪದವು ಅಂಶವಾಚಕವಾಗಿಯೂ, ಉತ್ತರಪದವು ಅಂಶೀವಾಚಕವಾಗಿಯೂ ಇದ್ದು, ಪೂರ್ವಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿಸಮಾಸ ಎನ್ನುತ್ತಾರೆ. ವಿಗ್ರಹ ವಾಕ್ಯ ಮಾಡಿ ಬರೆಯುವಾಗ ಸಮಾಸದ ಪದಗಳು ಹಿಂದುಮುಂದು ಆದರೆ ಅದು ಅಂಶಿ ಸಮಾಸವಾಗುತ್ತದೆ. ಉದಾಹರಣೆ:

ಕೈಯ + ಅಡಿ = ಅಂಗೈ ಕಾಲಿನ + ಅಡಿ = ಅಂಗಾಲು

ಕಾಲಿನ + ಹಿಂದು = ಹಿಂಗಾಲು ತಲೆಯ + ಹಿಂದೆ = ಹಿಂದೆಲೆ

ಕೈಯ + ಮುಂದು = ಮುಂಗೈ ಇರುಳಿನ + ನಡು = ನಟ್ಟಿರುಳು

ಮೈಯ + ಒಳಗು = ಒಳಮೈ ಕುರುಳಿನ + ಮುಂದು = ಮುಂಗುರುಳು

ತುಟಿಯ + ಕೆಳಗು = ಕೆಳದುಟಿ ಮೂಗಿನ + ತುದಿ = ತುದಿಮೂಗು

5. ದ್ವಂದ್ವ ಸಮಾಸ: ಉಭಯ ಪದ ಪ್ರಧಾನವುಳ್ಳ ಸಮಾಸ ಇದಾಗಿದ್ದು ಕೇಶಿರಾಜ 'ಪದಾರ್ಥದ ಗಡಣಂ ದ್ವಂದ್ವ'– ಎಂದು ಹೇಳಿದ್ದಾರೆ. ನಾಗವರ್ಮ 'ಸರ್ವಪದ ಅರ್ಥ ಪ್ರಧಾನೋ ದ್ವಂದ್ವ'– ಎಂದು ಹೇಳಿದ್ದಾನೆ. ಸಮಾನ ಪ್ರಧಾನತೆಯುಳ್ಳ ಎರಡು ಅಥವಾ ಅನೇಕ ನಾಮಪದಗಳು ಒಂದುಗೂಡಿ ಆಗುವ ಸಮಾಸಕ್ಕೆ ದ್ವಂದ್ವ ಸಮಾಸ ಎಂದು ಹೆಸರು. ಉದಾಹರಣೆ:

ತರುಗಳು + ಗುಲ್ಮಗಳು + ಲತೆಗಳು = ತರುಗುಲ್ಮಲತೆಗಳು

ರಾಮನು + ಲಕ್ಷ್ಮಣನೂ = ರಾಮಲಕ್ಷ್ಮಣರು

ಆನೆಯೂ + ಕುದುರೆಯೂ + ಒಂಟೆಯೂ = ಆನೆ ಕುದುರೆ ಒಂಟೆಗಳು

ಅಣ್ಣಂದಿರೂ + ತಮ್ಮಂದಿರೂ = ಅಣ್ಣತಮ್ಮಂದಿರೂ

ಗಿಡವೂ + ಮರವೂ + ಬಳ್ಳಿಯೂ= ಗಿಡಮರಬಳ್ಳಿಗಳು
ಕೃಷ್ಣನು + ಅರ್ಜುನನು = ಕೃಷ್ಣಾರ್ಜುನರು
ಕೆರೆಯೂ + ಕಟ್ಟೇಯೂ = ಕೆರೆಕಟ್ಟೆಗಳು ಕಸವೂ + ಕಡ್ಡಿಯೂ = ಕಸಕಡ್ಡಿ
ಹೂವೂ + ಹಣ್ಣು + ಕಾಯಿಯೂ = ಹೂಹಣ್ಣುಕಾಯಿಗಳು

6. ಬಹುವ್ರೀಹಿ ಸಮಾಸ: ಅನ್ಯಪದದ ಅರ್ಥಪ್ರಧನವುಳ್ಳ ಸಮಾಸ ಇದಾಗಿದ್ದು ಎರಡು ಅಥವಾ ಅನೇಕ ಪದಗಳ ಅರ್ಥವನ್ನು ಬೇರೊಂದು ಪದದ ಅರ್ಥದಲ್ಲಿ ತೋರುತ್ತಿದ್ದರೆ ಅದು ಬಹುವ್ರೀಹಿ ಸಮಾಸವಾಗುತ್ತದೆ. ಕೇಶಿರಾಜ ಇದನ್ನು 'ಪದನೆರಡು ಪಲವು ಮೇಣ್ ಪರಪದಾರ್ಥಮಂ ಬಯಸುತಿರೆ ಬಹುವ್ರೀಹಿ'– ಎಂದಿದ್ದಾರೆ. ನಾಗವರ್ಮ ಇದನ್ನೇ 'ಅನ್ಯ ಪದಾರ್ಥ ಪ್ರಧಾನೋ ಬಹುವ್ರೀಹಿ– ಎಂದಿದ್ದಾರೆ. ಅಂದರೆ ಎರಡು ಅಥವಾ ಹೆಚ್ಚು ನಾಮಪದಗಳು ಸೇರಿ ಸಮಾಸವಾಗುವ ಸಂದರ್ಭದಲ್ಲಿ ಸಮಾಸದಲ್ಲಿರುವ ಪದಗಳ ಅರ್ಥಕ್ಕೆ ಪ್ರಾಧಾನ್ಯವೇ ಇಲ್ಲದೆ ಬೇರೊಂದು ಪದದ ಅಂದರೆ ಅನ್ಯಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸವಾಗಿದೆ. ಉದಾಹರಣೆ:

ಮೂರು + ಕಣ್ಣುಳ್ಳವ = ಮುಕ್ಕಣ್ಣ (ಶಿವ) ನೀಲ + ಕಂಠ = ನೀಲಕಂಠ (ಶಿವ)
ಚತುರ್ + ಮುಖವುಳ್ಳವ = ಚತುರ್ಮುಖ (ಬ್ರಹ್ಮ)
ಹಣೆಯಲ್ಲಿ ಕಣ್ಣುಳ್ಳವನು = ಹಣೆಗಣ್ಣು (ಶಿವ)
ಚಕ್ರವನ್ನು ಪಾಣಿಯಲ್ಲಿ ಧರಿಸಿದವನು = ಚಕ್ರಪಾಣಿ (ವಿಷ್ಣು)
ನಾಲ್ಕು ಮೊಗವುಳ್ಳವನು = ನಾಲ್ಮೊಗ (ಬ್ರಹ್ಮ)
ಕೆಂಪು ಕಣ್ಣು ಉಳ್ಳವನು = ಕೆಂಗಣ್ಣು
ಡೊಂಕು ಕಾಲು ಉಳ್ಳವನು = ಡೊಂಕುಗಾಲ
ಪಾಣಿಯಲ್ಲಿ ವೀಣೆ ಹಿಡಿದವಳು = ವೀಣಾಪಾಣಿ

7. ಕ್ರಿಯಾಸಮಾಸ: ಇದು ಉತ್ತರಪದ ಪ್ರಧಾನ ಸಮಾಸವಾಗಿದ್ದು, ಪೂರ್ವಪದವು ಕಾರಕವಾಗಿದ್ದು ಉತ್ತರಪದವು ಕ್ರಿಯೆಯಾಗಿದ್ದು ಅರ್ಥವು ಕೆಡದಂತಿದ್ದರೆ ಅದು ಕ್ರಿಯಾ ಸಮಾಸವಾಗುತ್ತದೆ. ಪೂರ್ವ ಪದವು ಹೆಚ್ಚಾಗಿ ದ್ವಿತೀಯಾ ವಿಭಕ್ತಿಯಿಂದ ಕೊನೆಗೊಂಡಿರುತ್ತದೆ. ಹಾಗೆಯೇ ಹಳಗನ್ನಡವಿದ್ದರೆ ಅನುಸ್ವಾರದಿಂದ ಕೂಡಿರುತ್ತದೆ. ಉದಾಹರಣೆ:

ಕೈ + ಅನ್ನು = ಕೈಯನ್ನು ಕೈ + ಮುಗಿ = ಕೈಮುಗಿ
ಕಣ್ಣಂ + ತೆರೆ = ಕಣ್ದೆರೆ ಮೈಯನ್ನು + ಮರೆತನು = ಮೈಮರೆತನು
ವಿಷವನ್ನು + ಕಾರು = ವಿಷಕಾರು ಕಿವಿಯನ್ನು + ಕೊಡು = ಕಿವಿಗೊಡು
ತಲೆಯನ್ನು + ಬಾಗಿಸು = ತಲೆಬಾಗು ಕಣ್ಣಿನಿಂದ + ಕೆಡು = ಕಂಗೆಡು

ಮಾನ್ಯವನ್ನು + ಮಾಡು = ಮಾನ್ಯಮಾಡು ಸತ್ಯವನ್ನು + ನುಡಿ = ಸತ್ಯನುಡಿ

8. ಗಮಕ ಸಮಾಸ: ಉತ್ತರಪದ ಪ್ರಧಾನವುಳ್ಳ ಸಮಾಸ ಇದಾಗಿದ್ದು ಪೂರ್ವಪದದಲ್ಲಿ ಸಂಖ್ಯೆ, ಸರ್ವನಾಮ, ಗುಣವಾಚಕ, ಕೃದಂತಗಳಲ್ಲಿ ಯಾವುದು ಇದ್ದರೂ ಗಮಕ ಸಮಾಸವಾಗುವುದು. ಇದು ಕರ್ಮಧಾರೆಯ ಸಮಾಸದ ಒಂದು ಪ್ರಭೇದವಾಗಿದೆ. "ಪೂರ್ವಪದವು ಗುಣವಾಚಕ, ಸಂಖ್ಯಾವಾಚಕ, ಸರ್ವನಾಮ, ಕೃದಂತಗಳಲ್ಲಿ ಒಂದಾಗಿದ್ದು ಉತ್ತರದಲ್ಲಿನ ನಾಮಪದದೊಂದಿಗೆ ಸೇರಿ ಆಗುವ ಸಮಾಸವೇ ಗಮಕ ಸಮಾಸ."ಉದಾಹರಣೆ:

ಮುವತ್ತು + ಆರು = ಮುವತ್ತಾರು ಅದು + ಮರ = ಆ ಮರ

ಇದು + ಮನೆ = ಈ ಮನೆ ಅವನು + ಹುಡುಗ = ಆ ಹುಡುಗ

ಅದು + ಬೆಟ್ಟ = ಆ ಬೆಟ್ಟ ಅರಳುವುದು + ಮೊಗ್ಗು = ಅರಳು ಮೊಗ್ಗು

ಕಡೆಯುವುದು + ಕೋಲು = ಕಡಗೋಲು ಕುಡಿದುದು + ಅಮೃತ = ಕುಡಿದಮೃತ

9. ಅರಿಸಮಾಸ: ಕನ್ನಡ ಪದದೊಡನೆ ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡಬಾರದು. ಅದು ಸಮಾಸ ದೋಷ. ಇದನ್ನೇ ಅರಿಸಮಾಸ ಎನ್ನಲಾಗುತ್ತದೆ. ಸಮಾಸ ಮಾಡುವಾಗ ಸಂಸ್ಕೃತ– ಸಂಸ್ಕೃತ ಪದವಾಗಲೀ, ಇಲ್ಲವೇ ಕನ್ನಡ– ಕನ್ನಡ ಪದವಾಗಲೀ ಸೇರಬಹುದು. ಆದರೆ ಕನ್ನಡ– ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡುವುದು ಸೂಕ್ತವಲ್ಲ. ಏಕೆಂದರೆ ಹೀಗೆ ಸಮಾಸವಾದರೆ ಪದಮೈತ್ರಿಯಿರುವುದಿಲ್ಲ ಹಾಗೂ ಅದು ಕಿವಿಗೆ ಹಿತವಾಗಿರುವುದಿಲ್ಲ. ಆದರೂ ಕೆಲವು ಪೂರ್ವ ಕವಿಗಳು ಇಂತಹ ಪ್ರಯೋಗ ಮಾಡಿರುವುದುಂಟು. ಇಂಥಹ ಸಮಾಸವನ್ನು ಅರಿ ಸಮಾಸ ಎನ್ನುತ್ತಾರೆ. ಆದರೆ ಗಮಕ ಮತ್ತು ಕ್ರಿಯಾ ಸಮಾಸಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಜೊತೆಗೆ ಬಿರುದಾವಳಿಗಳಿಗೂ ದೋಷವಿಲ್ಲ. ಉದಾಹರಣೆ:

ತುರಗದ + ದಳ = ತುರಗದಳ ದಳದ + ಪತಿ = ದಳಪತಿ

ಮಂಗಳವಾದ + ಆರತಿ = ಮಂಗಳಾರತಿ ಮಳೆಯ + ಕಾಲ = ಮಳೆಗಾಲ

ಅರಸನ + ಕುಮಾರಂ = ಅರಸುಕುಮಾರಂ ಮಂಗಳದ + ಊರು = ಮಂಗಳೂರು

❖ ವಾಕ್ಯರಚನೆ ಮತ್ತು ಪ್ರಕಾರಗಳು:

ಸ್ವರಗಳನ್ನು ಅರ್ಥವತ್ತಾಗಿ ಜೋಡಿಸಿದಾಗ ಪದ ರಚನೆಯಾಗುತ್ತದೆ. ಕೆಲವೊಮ್ಮೆ ಒಂದೇ ಅಕ್ಷರವೂ ಪದವೆಂದು ಕರೆಯಲ್ಪಡುತ್ತದೆ. ಪದಗಳಿಂದ ಮಾತು ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ.

ಒಂದು ಮಾತಿನ ಪೂರ್ಣ ವಿಚಾರವನ್ನು ತಿಳಿಯಪಡಿಸುವ ಪದಗಳ ಸಮುದಾಯವೇ 'ವಾಕ್ಯ'. ಮಾತಿನ ವಿಚಾರವು ಪರರಿಗೆ ತಿಳಿಯಲು ಬರುವಂತೆ ಶಬ್ಧಗಳನ್ನು ಕ್ರಮಬದ್ಧವಾಗಿ ಸೇರಿಸುವುದನ್ನು 'ವಾಕ್ಯರಚನೆ' ಎಂದು ಹೇಳುತ್ತಾರೆ. ಸಂಪೂರ್ಣ ಅರ್ಥವನ್ನು ಕೊಡುವ, ಸುಸಜ್ಜಿತ ಪದ ಸಮೂಹವನ್ನು ವಾಕ್ಯ ಎನ್ನಬಹುದು. ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ಧಿಷ್ಟ ರೀತಿಯಲ್ಲಿ ಅರ್ಥವತ್ತಾಗಿ ಜೋಡಣೆಯಾದಾಗ ಮಾತ್ರ ವಾಕ್ಯ ಎನಿಸಿಕೊಳ್ಳುತ್ತದೆ.

ಸಾಮಾನ್ಯವಾಗಿ ಒಂದು ವಾಕ್ಯದಲ್ಲಿ ಮೂರು ತೆರನಾದ ಪದಗಳಿರುತ್ತವೆ. ಅವುಗಳೆಂದರೆ 1. ಕರ್ತೃಪದ 2. ಕರ್ಮಪದ 3. ಕ್ರಿಯಾಪದ. ಅಂದರೆ ವಾಕ್ಯ ಎಂಬುದು ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಂದಲೂ ಮತ್ತು ಕ್ರಮವಾಗಿ ಅವುಗಳ ವಿಶೇಷಣಗಳಿಂದಲೂ ಕೂಡಿದ ಪದಗಳ ಸಮೂಹ. ಇವು ವಾಕ್ಯವೊಂದರ ಘಟಕಗಳೂ ಆಗಿವೆ. ಇವುಗಳೊಂದಿಗೆ ವಿಭಕ್ತಿ ಪ್ರತ್ಯಯ ಸಹ ವಾಕ್ಯ ಘಟಕವೇ ಆಗಿದೆ. ವಾಕ್ಯವೊಂದರಲ್ಲಿ ಮೊದಲು ಬರುವುದು ಕರ್ತೃಪದ ಬಳಿಕ ಕರ್ಮಪದ ತದನಂತರ ಕ್ರಿಯಾಪದ ಬರುತ್ತದೆ. ವಿಶೇಷಣಗಳು ಆಯಾಯ ಪದಗಳ ಹಿಂದೆ ಇರುತ್ತವೆ.

ಉದಾಹರಣೆ: "ಜಿಂಕೆ ಹುಲ್ಲನ್ನು ತಿಂದಿತು." – 'ಜಿಂಕೆ' ಎಂಬುದು ಕರ್ತೃಪದ. 'ಹುಲ್ಲು' ಎಂಬುದು ಕರ್ಮಪದ. 'ತಿಂದಿತು' ಎಂಬುದು ಕ್ರಿಯಾಪದ.

ಸಿ. ಎಫ್. ಹಾಕೆಟ್ ಅವರು "ವಾಕ್ಯವು ಸಂಪೂರ್ಣ ಅರ್ಥವನ್ನು ಕೊಡುವ ಗರಿಷ್ಟತಮ ಭಾಷಿಕ ಘಟಕ" ಎಂದು ಹೇಳಿದ್ದರೆ.

ಸಾಂಪ್ರದಾಯಿಕ ವೈಯಾಕರಣಿಗಳು "ಸಂಪೂರ್ಣ ಅರ್ಥವನ್ನು ಕೊಡುವ ಪದಗಳ ಗುಂಪೇ ವಾಕ್ಯ" ಎಂದಿದ್ದಾರೆ. ಇಲ್ಲಿ ಪದಗಳ ಗುಂಪು ಎಂದರೆ ಕರ್ತೃಪದ, ಕರ್ಮಪದ, ಕ್ರಿಯಾಪದ, ವಿಶೇಷಣ ಇವೆಲ್ಲವೂ ಸೇರಿದ್ದು ಎಂದರ್ಥ.

ಇನ್ನು ಕೆಲವು ವೈಯಾಕರಣಿಗಳು"ನಾಮಪದ ಮತ್ತು ಕ್ರಿಯಾಪದಗಳಿಂದಾದುದೇ ವಾಕ್ಯ" ಎಂದಿದ್ದಾರೆ.

ಒಟ್ಟಾರೆಯಾಗಿ ಸಂಪೂರ್ಣ ಅರ್ಥ ನೀಡುವ ಪದಗಳ ವ್ಯವಸ್ಥಿತ ಜೋಡಣೆಯೇ ವಾಕ್ಯ ಅಥವಾ ಅರ್ಥಸಹಿತ ಪದಗಳು ಸೇರಿ ಪರಿಪೂರ್ಣ ಅರ್ಥವನ್ನು ಉಂಟುಮಾಡುವುದಕ್ಕೆ ವಾಕ್ಯ ಎನ್ನುವರು.

ವಾಕ್ಯದ ವಿಧಗಳು/ಪ್ರಕಾರಗಳು:

1. ಸರಳ ವಾಕ್ಯ: ಇದನ್ನು ಸಾಮನ್ಯ ವಾಕ್ಯ ಎಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಒಂದು ನಾಮಪದ ಮತ್ತು ಒಂದು ಕ್ರಿಯಾಪದ ಇರುವ ವಾಕ್ಯವೇ ಸರಳ ವಾಕ್ಯವೆನಿಸುತ್ತದೆ. ಒಂದು ಪೂರ್ಣ ಕ್ರಿಯಾಪದವನ್ನು ಒಳಗೊಂಡಿರುವ ಸ್ವತಂತ್ರವಾಗಿ ಅರ್ಥವನ್ನು ಕೊಡುವ ವಾಕ್ಯಗಳಿಗೆ ಸಾಮಾನ್ಯ ವಾಕ್ಯಗಳೆಂದು ಹೆಸರು. ಸಾಮಾನ್ಯ ಅರ್ಥವನ್ನು ಕೊಡುವ ವಾಕ್ಯವೇ ಸಾಮಾನ್ಯ ವಾಕ್ಯ. ಉದಾಹರಣೆಗೆ:

ಸಂತೋಷನು ಓದುತ್ತಾನೆ.

ಕುದುರೆ ಓಡಿತು.

ಸವಿತಾ ಹಾಡುತ್ತಾಳೆ.
ಬೆಕ್ಕು ಜಿಗಿಯಿತು.

2. ಪ್ರಶ್ನಾರ್ಥಕ ವಾಕ್ಯ: ಕೇಳುಗರಿಂದ ಯಾವುದಾದರೊಂದು ವಿಷಯವನ್ನು ಅರಿತುಕೊಳ್ಳುವುದಕ್ಕಾಗಿ ಆಡುಗರು (ಹೇಳುವವರು) ಪ್ರಯೋಗಿಸುವ ವಾಕ್ಯಗಳೇ ಪ್ರಶ್ನಾರ್ಥಕ ವಾಕ್ಯಗಳು. ಅಂದರೆ ಪ್ರಶ್ನೆ ಕೇಳುವ – ಯಾಕೆ? ಹೇಗೆ? ಏನು? ಎಲ್ಲಿ? ಯಾವಾಗ? ಯಾದು? ಎಲ್ಲಿಂದ? ಎಷ್ಟು? ಎಂಬ ರಚನೆಗಳೇ ಪ್ರಶ್ನಾರ್ಥಕ ವಾಕ್ಯಗಳು. ಉದಾಹರಣೆ:
ರಮೇಶನು ಹೇಗಿದ್ದಾನೆ?
ನೀನು ಊರಿಗೆ ಯಾವಾಗ ಹೋಗುವೆ?
ಹಣ್ಣು ಹೇಗಿದೆ?
ಮನೆಯಲ್ಲಿ ಏನಿದೆ?

3. ಉದ್ಗಾರವಾಚಕ ವಾಕ್ಯ: ಆ ಆ ಕ್ಷಣಗಳಲ್ಲಿ ಉಂಟಾದ ಭಾವನೆಗಳನ್ನು ಅಭಿವ್ಯಕ್ತಪಡಿಸುವಂಥ ವಾಕ್ಯಗಳೇ ಉದ್ಗಾರವಾಚಕ ವಾಕ್ಯಗಳು. ಆ ಭಾವನೆ, ಆ ನೋವು, ಆನಂದ, ಆತಂಕ, ಆಶ್ಚರ್ಯ, ವಿಸ್ಮಯ, ದುಃಖ, ಹೆದರಿಕೆ, ಅಚ್ಚರಿ ಮೊದಲಾದ ವಿಸ್ಮಯ ಸೂಚಕ ಭಾವವನ್ನು ಅಭಿವ್ಯಕ್ತಗೊಳಿಸುವಾಗ ಬಳಸುವ ವಾಕ್ಯಗಳಾಗಿವೆ. ಉದಾಹರಣೆ:
ಆಹಾ!, ಹೋ ಹೋ!, ಅಯ್ಯೋ!, ಅಬ್ಬಾ!, ಹೇ ರಾಮಾ!, ಇದೇನಿದು! ಶಿವನೇ!
ಭಲೇ! ಭಲೇ! ತುಂಬಾ ಚನ್ನಾಗಿ ಆಡಿದೆ.
ಆಹಾ! ಆ ಉದ್ಯಾನವನ ನೋಡಲು ಎಷ್ಟು ಸುಂದರವಾಗಿದೆ.
ಅಯ್ಯೋ! ಮಗು ಮೆಟ್ಟಿಲಿನಿಂದ ಕೆಳಗೆ ಬಿದ್ದಿತು.
ಅಬ್ಬಾ! ಭೀಮನ ಸಾಹಸವೇ ಸಾಹಸ.

4. ಆಜ್ಞಾರ್ಥಕ ವಾಕ್ಯ: ಆಜ್ಞೆ, ಅಪ್ಪಣೆ, ಆಶೀರ್ವಾದ, ವಿನಂತಿ, ಪ್ರಾರ್ಥನೆ, ಹಾರೈಕೆ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸುವ ರಚನೆಗಳು ಆಜ್ಞಾರ್ಥಕ ವಾಕ್ಯಗಳೆನಿಸುವವು. ಉದಾಹರಣೆ:
ದಯವಿಟ್ಟು ಮಾಡಿರಿ.
ದಯವಿಟ್ಟು ಬನ್ನಿರಿ.
ದೇವರು ಅವನಿಗೆ ಒಳ್ಳೆಯದನ್ನು ಮಾಡಲಿ.
ನಾಳೆ ಈ ಪದ್ಯವನ್ನು ಕಂಠಪಾಠ ಮಾಡಲೇಬೇಕು.
ನಾಳೆಯಿಂದ ನೀನು ಆಟಕ್ಕೆ ಹೋಗಬೇಡ.

ವಾಕ್ಯ ಸಂಯೋಜನೆ:'ಸಂಯೋಜನೆ' ಎಂದರೆ ಕೂಡುವಿಕೆ ಅಥವಾ ಒಂದಾಗುವಿಕೆ ಎಂದರ್ಥ. ಸಂಯೋಜಿತ ವಾಕ್ಯಗಳು ಅತಿ ಉದ್ದ ಇರುವಾಗ, ಇಂತಹ ಸಂಯೋಜಿತ ಕ್ರಮದಿಂದ ಅವನ್ನು ಅರ್ಥ

ಕೆಡದಂತೆ ಚಿಕ್ಕ-ಚೊಕ್ಕ ಅರ್ಥಪೂರ್ಣ ರೀತಿಯಲ್ಲಿ ರಚಿಸಬಹುದು. ಇದರಿಂದ ಓದಲೂ ಸೊಗಸು, ನೋಡಲೂ ಸೊಗಸು. ಅಂದರೆ ಕೆಲವೇ ಪದಗಳ ಅರ್ಥಸಹಿತ ವಾಕ್ಯಗಳ ಸೇರುವಿಕೆಯಿಂದ ಅವುಗಳ ಸಂಬಂಧವು ಸಡಿಲಗೊಳ್ಳದ ರೀತಿಯಲ್ಲಿ ರಚಿಸುವ ಶೈಲಿಗೆ ವಾಕ್ಯ ಸಂಯೋಜನೆ ಎನ್ನಬಹುದು.

ಉದಾಹರಣೆ: 'ರಾಮನು ಬುದ್ದಿವಂತನು ಆಗಿದ್ದನು. ಶಕ್ತಿವಂತನೂ ಆಗಿದ್ದನು.'

ಮೇಲಿನ ವಾಕ್ಯದಲ್ಲಿ ಪೂರ್ಣ ಅರ್ಥವನ್ನು ಕೊಡುವ ಎರಡು ವಾಕ್ಯಗಳಿವೆ. ಈ ಎರಡೂ ವಾಕ್ಯಗಳನ್ನು ಸೇರಿಸಿ ಅರ್ಥಗೆಡದಂತೆ ಸಂಯೋಜಿಸಿದಾಗ -'ರಾಮನು ಬುದ್ಧಿವಂತನೂ, ಶಕ್ತಿವಂತನೂ ಆಗಿದ್ದನು.' ಎಂದಾಗುತ್ತದೆ.

3.2 ಭಾಷಾ ಕೌಶಲ್ಯಗಳು: ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರಹ – ಅರ್ಥ, ಸ್ವರೂಪ, ಪ್ರಾಮುಖ್ಯತೆ, ಲಕ್ಷಣಗಳು, ದೋಷಗಳು ಮತ್ತು ಪರಿಹಾರಗಳು

ಮಾನವ ಭಾಷೆಯನ್ನು ಕಲಿಯುದು ಸುಲಭ ಸಾಧ್ಯ. ಆದರೆ ಎಲ್ಲಿ, ಯಾರೊಂದಿಗೆ, ಹೇಗೆ, ಏನು, ಎಷ್ಟು ಮಾತನಾಡಬೇಕು ಹಾಗೂ ಕೇಳುಗರು ಅಥವಾ ಓದುಗರು ಯಾರಿದ್ದಾರೆ ಎಂಬುದನ್ನು ಅರಿತು ಭಾಷೆಯನ್ನು ಬಳಸಬೇಕಾಗುತ್ತದೆ. ಒಂದು ಭಾಷೆಯಲ್ಲಿ ಪ್ರಭುತ್ವ, ಸಾಮರ್ಥ್ಯ ಅಥವಾ ಹಿಡಿತ ಸಾಧಿಸಲು ಆ ಭಾಷೆಯ ಕೌಶಲ್ಯಗಳ ಸಂಪೂರ್ಣ ಅರಿವು ಇರಬೇಕಾಗುತ್ತದೆ. ಈಗಾಗಲೇ ನೋಡಿರುವಂತೆ ಭಾಷೆಯು ಒಂದು ಕೌಶಲವಾಗಿದೆ. ಭಾಷೆಯಲ್ಲಿನ ಕೌಶಲ್ಯಗಳ ಪ್ರಾವಿಣ್ಯತೆ ಸಾಧಿಸುವುದರಿಂದ ಭಾಷಾ ಸಾಮರ್ಥ್ಯ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ.

ಮಗು ಭಾಷೆಯಲ್ಲಿ ಪ್ರಭುತ್ವವನ್ನು ಪಡೆಯಬೇಕಾದರೆ ಭಾಷೆಯ ಕೌಶಲ್ಯಗಳಾದ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದನ್ನು ಕಲಿಸಬೇಕಾಗಿರುತ್ತದೆ. ಈ ನಾಲ್ಕು ಕೌಶಲ್ಯಗಳು ಭಾಷೆಯ ಪ್ರಮುಖ ಕೌಶಲ್ಯಗಳಾಗಿರುತ್ತವೆ. ಇವುಗಳಲ್ಲಿ ಪ್ರಭುತ್ವವನ್ನು ಸಾಧಿಸಿದಾಗಲೇ ಮಗು ಭಾಷಾ ಪ್ರಭುತ್ವವನ್ನು ಸಂಪಾದಿಸುತ್ತದೆ. ಆದ್ದರಿಂದ ಶಾಲೆಗಳಲ್ಲಿ ಶಿಕ್ಷಕರು ಭಾಷಾ ಕೌಶಲ್ಯಗಳನ್ನು ಮಕ್ಕಳಲ್ಲಿ ಬೆಳೆಸಲು ಅನೇಕ ಚಟುವಟಿಕೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಈ ಭಾಷಾ ಕೌಶಲ್ಯಗಳ ಪ್ರಾಮುಖ್ಯತೆಯ ಅರಿವನ್ನು ಮಾಡಿಕೊಟ್ಟು ಅವರ ಭಾಷಾ ಕೌಶಲ್ಯಗಳ ಬೆಳವಣಿಗೆಗೆ ಶಿಕ್ಷಕ ಶ್ರಮಿಸಬೇಕಾಗುತ್ತದೆ.

- **ಆಲಿಸುವಿಕೆ :**

ಆಲಿಸುವಿಕೆಯು ಭಾಷೆಯ ಪ್ರಪ್ರಥಮ ಮತ್ತು ಮೂಲ ಕೌಶಲ್ಯ. ಧ್ವನಿಸಂಕೇತಗಳನ್ನು ಆಲಿಸುವುದು ಮತ್ತು ಅನುಕರಿಸುವುದರಿಂದ ಭಾಷೆಯನ್ನು ಕಲಿಯಲಾಗುತ್ತದೆ. ಆಲಿಸುವಿಕೆಯು ಯಾಂತ್ರಿಕ ಕ್ರಿಯೆಯಾಗದೆ ಉದ್ದೇಶಪೂರ್ವಕ, ಪ್ರಜ್ಞಾಪೂರ್ವಕ, ಕ್ರಮಬದ್ಧ ಮತ್ತು ಅರ್ಥಪೂರ್ಣವಾದ ಮಾನಸಿಕ ಕ್ರಿಯೆಯಾಗಬೇಕು. ನಾಲ್ಕೂ ಕೌಶಲ್ಯಗಳಲ್ಲಿ ಆಲಿಸುವಿಕೆಯೇ ಮೊದಲಿನದು ಮತ್ತು ಪ್ರಮುಖವಾದುದು. ಆಲಿಸುವಿಕೆಯೇ ಮುಂದಿನ ಮೂರೂ ಕೌಶಲ್ಯಗಳಿಗೆ ಆಧಾರ.

ಸಾಮಾನ್ಯಾರ್ಥದಲ್ಲಿ ಕೇಳುವಿಕೆಯನ್ನೇ ಆಲಿಸುವಿಕೆ ಎಂದು ಭಾವಿಸಲಾಗುತ್ತದೆ. ಆದರೆ ನಮ್ಮ ಕಿವಿಗೆ ಕೇಳಿಸುವ ಶಬ್ದಗಳೆಲ್ಲ ಆಲಿಸುವಿಕೆಯಾಗುದಿಲ್ಲ. "ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕ, ಉದ್ದೇಶಪೂರ್ವಕ ಮಾನಸಿಕ ಕ್ರಿಯೆಯಾಗಿದ್ದು ನಾವು ಕೇಳುವ ಶಬ್ದಗಳಲ್ಲಿರುವ ಅರ್ಥಗಳನ್ನು, ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ನಿರೂಪಿಸುದೇ ಆಲಿಸುವಿಕೆಯಾಗಿದೆ." ಅಂದರೆ ಕೇಳುವ ಶಬ್ದಗಳನ್ನು ಅರ್ಥಗಳನ್ನಾಗಿ ವ್ಯಾಖ್ಯಾನಿಸಿ ಸ್ವೀಕರಿಸುವ ಮಾನಸಿಕ ಕ್ರಿಯೆಯೇ ಆಲಿಸುವಿಕೆ.

ಆಲಿಸುವಿಕೆ ಎಂದರೆ "ಕೇಳುವುದು, ಲಕ್ಷ್ಯಪೂರ್ವಕವಾಗಿ ಕೇಳುವುದು, ಧ್ವನಿ ಮತ್ತು ಸಪ್ಪಳಗಳನ್ನು ವಿಂಗಡಿಸಿ ಕೇಳುವುದು, ಶಬ್ದಾರ್ಥಗಳಲ್ಲಿರುವ ವ್ಯಾಚ್ಯಾರ್ಥ, ಲಕ್ಷಣಾರ್ಥ, ಮತ್ತು ವ್ಯಂಗ್ಯಾರ್ಥವನ್ನು ಗ್ರಹಿಸುದೇ ಆಲಿಸುವಿಕೆ."

ಆಲಿಸುವ ಕೌಶಲ್ಯ ಗ್ರಹಿಸುವ ಕೌಶಲ್ಯವಾಗಿದೆ. ಆಲಿಸುವುದು ಸಂವಹನ ವಿಧಾನವಾಗಿದ್ದು, ಆಲಿಸುವವರು ಅರ್ಥಮಾಡಿಕೊಳ್ಳಲು, ಅರ್ಥೈಸಲು ಮತ್ತು ಕೇಳುವುದನ್ನು ನಿರ್ಣಯಿಸಲು ಅಗತ್ಯವಾಗಿರುತ್ತದೆ. ಸಮಸ್ಯೆಗಳನ್ನು ಕಡಿಮೆ ಮಾಡುವುದರ ಮೂಲಕ, ಸಹಕಾರವನ್ನು ಹೆಚ್ಚಿಸುವ ಮೂಲಕ ಮತ್ತು ತಿಳುವಳಿಕೆಯನ್ನು ಬೆಳೆಸುವ ಮೂಲಕ ವೈಯಕ್ತಿಕವಾಗಿ ಪರಸ್ಪರ ಕೇಳುವ ಸಾಮರ್ಥ್ಯ ಸಂವಹನವನ್ನು ಪರಿಣಾಮಕಾರಿಗೊಳಿಸುತ್ತದೆ. ಈ ಪರಿಣಾಮಕಾರಿ ಸಂವಹನದ ಯಶಸ್ಸು ಉತ್ತಮ ಅವಧಾನಪೂರ್ವಕ ಆಲಿಸುವಿಕೆಯಿಂದಾಗುತ್ತದೆ.

ಸ್ವರೂಪ:

- ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕ ಮತ್ತು ಮಾನಸಿಕ ಪ್ರಕ್ರಿಯೆಯಾಗಿದೆ.
- ಕೇಳುವ ಶಬ್ದಗಳನ್ನು ಅರ್ಥಗಳನ್ನಾಗಿ ವ್ಯಾಖ್ಯಾನಿಸಿ ಸ್ವೀಕರಿಸುವ ಮಾನಸಿಕ ಕ್ರಿಯೆಯಾಗಿದೆ.
- ಆಲಿಸುವಿಕೆಯಲ್ಲಿ ಕೇಳುವ ಕ್ರಿಯೆ ಇದೆಯಾದರೂ ಕೇಳುವಿಕೆಯೇ ಆಲಿಸುವಿಕೆಯಲ್ಲ.
- ಕೇಳುವಿಕೆಯು ಆಲಿಸುವಿಕೆಯ ಒಂದು ಭಾಗ.
- ಕೇಳುವಿಕೆಯಲ್ಲಿ ಶಬ್ದ ತರಂಗಗಳು ಯಾಂತ್ರಿಕವಾಗಿ ಕಿವಿಯ ಮೂಲಕ ಮೆದುಳಿಗೆ ತಲುಪುತ್ತವೆ. ಆದರೆ ಆಲಿಸುವಿಕೆಯಲ್ಲಿ ಈ ರೀತಿ ಕೇಳುವ ಶಬ್ದಗಳು ಅರ್ಥಗಳಾಗಿ, ವಿಷಯಗಳಾಗಿ, ಭಾವನೆಗಳಾಗಿ ಸ್ವೀಕೃತವಾಗುತ್ತವೆ ಮತ್ತು ಸ್ಮರಣೆಯಲ್ಲಿ ಉಳಿಯುತ್ತವೆ.
- ಕೇಳುವ ಶಬ್ದಗಳನ್ನು ಅರ್ಥೈಸಿಕೊಂಡು ವ್ಯಾಖ್ಯಾನಿಸುತ್ತಾ, ಸಂಬಂಧ ತಿಳಿಯುತ್ತಾ ವಿಷಯ ಮತ್ತು ಭಾವನೆಗಳನ್ನು ಗ್ರಹಿಸುವುದಾಗಿದೆ.
- ಆಲಿಸುವಿಕೆ ಒಂದು ಪ್ರಯತ್ನಪೂರ್ವಕ ಮತ್ತು ಆಯ್ಕೆಗೊಳಪಡುವ ಕ್ರಿಯೆ ಮತ್ತು ಸ್ವೀಕೃತ ಕೌಶಲ್ಯವಾಗಿದೆ.
- ಆಲಿಸುವಿಕೆ ಒಂದು ಪ್ರಜ್ಞಾಶೀಲ ಮಾನಸಿಕ ಕ್ರಿಯೆ.
- ಆಲಿಸುವಿಕೆ ಮಾನಸಿಕ ಸಿದ್ಧತೆ, ಆಸಕ್ತಿ, ಅವಧಾನ, ಅರ್ಥಗ್ರಹಿಕೆ ಮತ್ತು ಸ್ಮರಣೆಯನ್ನು ಒಳಗೊಂಡಿದೆ.

- ಶಬ್ದಗಳನ್ನು ಕೇವಲ ಶಬ್ದಗಳಾಗಿ ಕೇಳದೆ ಶಬ್ದಗಳಲ್ಲಿ ಅಡಗಿರುವ ಅರ್ಥವನ್ನು, ಭಾವನೆಯನ್ನು ಸ್ವೀಕರಿಸಲಾಗುತ್ತದೆ.

ಪ್ರಾಮುಖ್ಯತೆ:

ಈಗಾಗಲೇ ಗಮನಿಸಿದಂತೆಆಲಿಸುವುದನ್ನು ಅರಿಯದ ವ್ಯಕ್ತಿ ಭಾಷೆಯ ಉಳಿದ ಕೌಶಲ್ಯಗಳನ್ನು ಕಲಿಯುವುದು ತುಂಬ ಕಷ್ಟ. ಮಾತು, ಓದು, ಬರಹ, ಯೋಚನೆ ಮತ್ತು ವಿವಿಧ ಗ್ರಹಿಕೆಗೆ ಆಲಿಸುವಿಕೆ ನೆರವಾಗುತ್ತದೆ. ಯಾವ ವಿದ್ಯಾರ್ಥಿಯಲ್ಲಿ ಆಲಿಸುವಿಕೆಯ ಕೌಶಲ್ಯ ಉತ್ತಮವಾಗಿರುತ್ತದೆಯೋ ಆ ವಿದ್ಯಾರ್ಥಿ ಹೆಚ್ಚು ಕಲಿಯುತ್ತಾನೆ. ಶಿಕ್ಷಣದಲ್ಲಿ ಆಲಿಸುವಿಕೆಯ ಕ್ರಿಯೆ ಮಕ್ಕಳ ಉತ್ತಮ ಕಲಿಕೆಯತ್ತ ಗಮನಹರಿಸುತ್ತದೆ. ಆದರೆ ಬಹಳಷ್ಟು ಮಕ್ಕಳು ಆಲಿಸುವಿಕೆಯಲ್ಲಿ ಸೂಕ್ತ ತರಬೇತಿ ಇಲ್ಲದೆ ಸರಿಯಾಗಿ ಆಲಿಸುವುದಿಲ್ಲ. ಆಲಿಸುವ ಬಗ್ಗೆ ಶಿಕ್ಷಕರು, ಪಾಲಕರು ಗಮನ ಹರಿಸುವುದು ಕಡಿಮೆ. ಅದೆಷ್ಟೋ ಶಾಲಾ ಕಾಲೇಜುಗಳಲ್ಲಿ ಆಲಿಸುವ ಕ್ರಿಯೆಯ ಬಗ್ಗೆ ಯೋಚನೆಯೇ ಮಾಡುವುದಿಲ್ಲ. ಬಹಳಷ್ಟು ಮಕ್ಕಳು ತರಗತಿಗಳಲ್ಲಿ ನಿಷ್ಕ್ರೀಯ ಕೇಳುಗರಾಗಿ ಕುಳಿತಿರುತ್ತಾರೆ. ಸರಿಯಾಗಿ ಆಲಿಸುವುದನ್ನು ಕಲಿಯದೆ ಅಪಾರ ಜ್ಞಾನ ಮತ್ತು ಸಮಯವನ್ನು ನಷ್ಟ ಮಾಡಿಕೊಳ್ಳುತ್ತಾರೆ. ಇವರು ಕಲಿಕೆಯಲ್ಲಿ ಹಿಂದೆ ಉಳಿಯುತ್ತಾರೆ.

ಆಲಿಸುವ ಕ್ರಿಯೆಯನ್ನು ಈ ರೀತಿ ನಿರ್ಲಕ್ಷ್ಯ ಮಾಡಿದರೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತದೆ. ಆದುದರಿಂದ ಆರಂಭಿಕ ಹಂತಗಳಲ್ಲಿಯೇ ಉತ್ತಮವಾಗಿ ಆಲಿಸುವ ಕೌಶಲ್ಯದ ಬಗ್ಗೆ ಸೂಕ್ತ ತಿಳುವಳಿಕೆ, ತರಬೇತಿ ನೀಡಬೇಕು. ಮಕ್ಕಳ ಆಲಿಸುವಿಕೆಯಲ್ಲಿ ಕಂಡುಬರುವ ದೋಷಗಳನ್ನು ಗುರುತಿಸಿ ಸೂಕ್ತ ಅಭ್ಯಾಸಗಳನ್ನು ಮಾಡಿಸಿ ಚಟುವಟಿಕೆಗಳ ಮೂಲಕ ಉತ್ತಮವಾಗಿ ಆಲಿಸುವ ಸಾಮರ್ಥ್ಯವನ್ನು ಬೆಳೆಸಬೇಕು. ಇದರಿಂದ ಮಕಳ ಉನ್ನತ ಮಟ್ಟದ ಶೈಕ್ಷಣಿಕ ಸಾಧನೆಯನ್ನು ಅಪೇಕ್ಷಿಸಬಹುದು.

ಆಲಿಸುವಿಕೆಯು ಮಕ್ಕಳ ಶಿಕ್ಷಣದಲ್ಲಿ ಹಲವಾರು ಉದ್ದೇಶಗಳಿಂದ ಅತ್ಯಂತ ಮಹತ್ವ ಎನಿಸಿದೆ. ಅವುಗಳೆಂದರೆ;

–ವಿಷಯದ ಗ್ರಹಿಕೆಗೆ

–ಉತ್ತಮ ಸಾಮಾಜಿಕ ಸಂಪರ್ಕಕ್ಕೆ

–ಯೋಗ್ಯ ಮತ್ತು ಯಶಸ್ವಿ ಸಮಾಜ ಜೀವನಕ್ಕೆ

–ವಿಚಾರಗಳ ವಿನಿಮಯಕ್ಕೆ, ಸಂಭಾಷಣೆಗೆ

–ವಿಷಯ ಜ್ಞಾನಕ್ಕೆ ಮತ್ತು ಜ್ಞಾನಾರ್ಜನೆಗೆ

–ತರಗತಿಯ ಬೋಧನೆಯನ್ನು ಗ್ರಹಿಸಲು

–ಯೋಚನಾ ಶಕ್ತಿಯನ್ನು ಬೆಳಿಸಿಕೊಳ್ಳಲು

–ರೇಡಿಯೋ, ದೂರದರ್ಶನದ ಕಲಿಕಾ ಕಾರ್ಯಕ್ರಮಗಳನ್ನು ಅರ್ಥಮಾಡಿಕೊಳ್ಳಲು

–ಭಾಷಣ, ಉಪನ್ಯಾಸಗಳನ್ನು ಕೇಳಿ ಗ್ರಹಿಸಲು, ಇತ್ಯಾದಿ.

–ಗುಂಪಿನ ಚರ್ಚೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು.

–ಉತ್ತಮವಾದ ಕೇಳುಗ ಉತ್ತಮ ಮಾರ್ಗದರ್ಶಕ ಮತ್ತು ಉತ್ತಮ ಸಮಾಲೋಕನಾಗಿರುತ್ತಾನೆ.

ಲಕ್ಷಣಗಳು:

ಉತ್ತಮ ಆಲಿಸುವಿಕೆಯು ಮಾನಸಿಕ ಸಿದ್ಧತೆ, ಆಸಕ್ತಿ, ಅವಧಾನ, ಅರ್ಥಗ್ರಹಿಕೆ ಮತ್ತು ಸ್ಮರಣೆಯನ್ನು ಒಳಗೊಂಡಿರುತ್ತದೆ ಎಂದು ಈಗಾಗಲೇ ನಾವು ಅರಿತಿದ್ದೇವೆ. ಶಬ್ದಗಳನ್ನು ಕೇವಲ ಶಬ್ದಗಳಾಗಿ ಕೇಳದೇ ಶಬ್ದದಲ್ಲಿ ಅಡಗಿರುವ ಅರ್ಥವನ್ನೂ ಭಾವನೆಯನ್ನೂ ಸ್ವೀಕರಿಸಲಾಗುತ್ತದೆ. ಯಾಂತ್ರಿಕ ಕೇಳುವಿಕೆಯಿಂದ ಮಕ್ಕಳಲ್ಲಿ ಜ್ಞಾನಾರ್ಜನೆ ನಿರೀಕ್ಷಿತ ಮಟ್ಟದಲ್ಲಾಗುವುದಿಲ್ಲ. ಹೀಗಾಗಿ ಕಲಿಕೆಯಲ್ಲಿ ಮಕ್ಕಳು ಹಿಂದೆ ಉಳಿಯುತ್ತಾರೆ. ಅವರ ವಿಚಾರ–ವಿನಿಮಯ ಶಕ್ತಿ ಕುಂಠಿತಗೊಳ್ಳುತ್ತದೆ. ಪರಸ್ಪರ ಅಂತರಸಂಬಂಧಗಳು ಉತ್ತಮವಾಗಿ ಬೆಳೆಯಲಾರವು. ಆದ್ದರಿಂದ ಶಿಕ್ಷಕರು ಉತ್ತಮ ಆಲಿಸುವಿಕೆಯ ಲಕ್ಷಣಗಳನ್ನು ಅರಿತುಕೊಂಡು ಮಕ್ಕಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಆಲಿಸುವಿಕೆಯ ಕೌಶಲ್ಯವನ್ನು ಬೆಳೆಸಬೇಕು. ಉತ್ತಮ ಆಲಿಸುವಿಕೆಯ ಲಕ್ಷಣಗಳು ಈ ಕೆಳಗಿನಂತಿವೆ;

- **ಪ್ರಜ್ಞಾಪೂರ್ವಕವಾಗಿ, ಪ್ರೇರಣೆಗೊಂಡು ಆಲಿಸುವುದು–** ಇಲ್ಲಿ ಆಲಿಸುವ ಕಾರ್ಯ ಕೇಳುವ ಕಾರ್ಯವಾಗಬಾರದು. ಆಲಿಸುವಿಕೆ ಸ್ವಪ್ರೇರಣೆ ಮತ್ತು ಪ್ರಜ್ಞಾಪೂರ್ವಕವಾಗ ಆಗಬೇಕು. ಮಾನಸಿಕ ಸಿದ್ಧತೆ, ಶಿಸ್ತು, ಏಕಾಗ್ರತೆಯಿಂದ ಆಲಿಸಬೇಕು. ಅಂದಾಗ ಮಾತ್ರ ಅದು ಸಾರ್ಥಕ ಆಲಿಸುವಿಕೆಯಾಗುತ್ತದೆ. ಉಳಿದ ಕೌಶಲ್ಯಗಳಿಗೂ ಉತ್ತಮ ತಳಪಾಯವಾಗುತ್ತದೆ. 'ಉತ್ತಮ ಕೇಳುಗ ಉತ್ತಮ ಮಾತುಗಾರನಾಗಬಲ್ಲ' ಆದ್ದರಿಂದ ಉದ್ದೇಶಪೂರ್ವಕವಾಗಿ, ಪ್ರೇರಣೆಗೊಂಡು ಆಲಿಸುವ ಕ್ರಿಯಾಶೀಲತೆ ಮಕ್ಕಳಲ್ಲಿ ಬೆಳೆಸಬೇಕು.

- **ದೈಹಿಕ–ಮಾನಸಿಕ ಆರೋಗ್ಯ ಮತ್ತು ಶ್ರವಣ ಆರೋಗ್ಯದಿಂದ ಆಲಿಸುವುದು–** ಆಲಿಸುವಿಕೆ ಕ್ರಿಯೆಗೆ ಶಾರೀರಿಕ ಮತ್ತು ಮಾನಸಿಕ ಹೊಂದಾಣಿಕೆ ಅಗತ್ಯ. ಶ್ರವಣ ಆರೋಗ್ಯ ಉತ್ತಮವಾಗಿರಬೇಕಾದುದು ಅತ್ಯಂತ ಅವಶ್ಯ. ಅದೇ ರೀತಿಯಾಗಿ ಒಬ್ಬ ವ್ಯಕ್ತಿ ಮಾನಸಿಕ ಕ್ಲೇಶಕ್ಕೊಳಗಾದಾಗಲೂ ಆಲಿಸುವಿಕೆ ಕಾರ್ಯದಲ್ಲಿ ಸರಿಯಾಗಿ ಪಾಲ್ಗೊಳ್ಳಲಾರ. ಮಾನಸಿಕ ಸ್ಥಿಮಿತತೆ ಇರಲೇಬೇಕಾಗುತ್ತದೆ. ಆದ್ದರಿಂದ ಶಾರೀರಿಕ, ಮಾನಸಿಕ, ಶ್ರವಣ ಆರೋಗ್ಯ ಉತ್ತಮವಾಗಿದ್ದು ಮಾನಸಿಕ ಹೊಂದಾಣಿಕೆಯಿಂದ ಸಂಪೂರ್ಣವಾಗಿ ಪಾಲ್ಗೊಂಡು ಮಾನಸಿಕ ಶಾಂತಿಯಿಂದ ಆಲಿಸುವುದೂ ಉತ್ತಮ ಶ್ರವಣಗಾರಿಕೆಯ ಲಕ್ಷಣವಾಗಿದೆ.

- **ಆಸಕ್ತಿಯಿಂದ ಆಲಿಸುವುದು–** ಆಲಿಸುವಿಕೆ ಸ್ವಯಂ ಆಸಕ್ತಿಯಿಂದ ನಡೆಯಬೇಕು. ಆಲಿಸುವಾಗ ಯಾವುದೇ ರೀತಿಯ ಆತಂಕಕ್ಕೊಳಗಾಗಬಾರದು; ಆರಾಮವಾಗಿ ಕುಳಿತು ಪ್ರಶಾಂತವಾಗಿ ಆಲಿಸಬೇಕು; ವಿಷಯಗಳನ್ನು ಆತ್ಮೀಯತೆಯಿಂದ ಆಲಿಸಬೇಕು; ಪ್ರತಿ ವಿಷಯವನ್ನು ಆಸಕ್ತಿಯಿಂದ ಕಿವಿಗೊಟ್ಟು, ಗಮನವಿಟ್ಟು ಆಲಿಸಬೇಕು. ಆಸಕ್ತಿಯನ್ನು ಕೊನೆಯವರೆಗೂ ಉಳಿಸಿಕೊಂಡು ಆಲಿಸುವುದು ಅವಶ್ಯವಾಗಿದೆ.

- **ಆಲಿಸುವಿಕೆಯ ಜೊತೆಯಲ್ಲಿ ಅರ್ಥಗ್ರಹಣ ಅಥವಾ ಅವಧಾನ ಹೊಂದಿರಬೇಕು–** ವಿಷಯವನ್ನು ಕೇವಲ ಶಬ್ದಗಳಾಗಿ ಕೇಳಬಾರದು. ಕೆಲವೇ ಕ್ಷಣದಲ್ಲಿ ಆ ಅರ್ಥಹೀನ ಶಬ್ದಗಳೆಲ್ಲ ಮರೆತುಹೋಗುತ್ತವೆ. ಅರ್ಥಪೂರ್ಣ ಶಬ್ದಗಳನ್ನು ಮಾತ್ರ ನೆನಪಿಟ್ಟುಕೊಳ್ಳಲು ಸಾಧ್ಯ. ಆದ್ದರಿಂದ ನಾವು ಕೇಳುವ ಶಬ್ದಗಳನ್ನು ವಿಷಯಗಳಾಗಿ, ಭಾವನೆಗಳಾಗಿ, ಸಂದೇಶಗಳಾಗಿ, ಗ್ರಹಿಸಬೇಕು. ಕೇಳಿದ ವಿಷಯಗಳನ್ನು

ಅವಧಾನದಿಂದ ಅರ್ಥಮಾಡಿಕೊಳ್ಳುತ್ತಾ ಸಾಗಬೇಕು ಮತ್ತು ಅವುಗಳ ಜೊತೆ ಆಳವಾಗಿ ಪ್ರತಿಸ್ಪಂದಿಸಬೇಕು.

- **ಉತ್ತಮ ಭಾಷಾ ಸಾಮರ್ಥ್ಯದೊಂದಿಗೆ ಆಲಿಸುವುದು–** ಉತ್ತಮ ಭಾಷಾ ಸಾಮರ್ಥ್ಯ ಉತ್ತಮ ಆಲಿಸುವಿಕೆಯ ಆಧಾರಸ್ಥಂಭವಿದ್ದಂತೆ. ನಾವು ಕೇಳುತ್ತಿರುವ ವಿಷಯದ ಭಾಷೆಯ ಪರಿಚಯ ನಮಗಿರಬೇಕು. ಅಷ್ಟೇ ಅಲ್ಲದೇ ಆ ಭಾಷೆ, ಭಾಷೆಯ ಪದಗಳು, ವಾಕ್ಯಗಳ ಪರಿಚಯ, ಭಾಷಾ ಪ್ರಭುತ್ವ, ಧ್ವನಿ ವ್ಯತ್ಯಾಸ, ಅರ್ಥವ್ಯತ್ಯಾಸ, ಶಬ್ದಾರ್ಥ, ಭಾವಾರ್ಥ ಎಲ್ಲವುಗಳ ಕುರಿತು ಪರಿಚಯ ನಮಗಿರಬೇಕು. ಭಾಷಾ ಸಾಮರ್ಥ್ಯವಿದ್ದಾಗ ಧ್ವನಿ ವ್ಯತ್ಯಾಸಗಳಲ್ಲಾಗುವ ಅರ್ಥವ್ಯತ್ಯಾಸಗಳನ್ನು ಗ್ರಹಿಸಲು ಮತ್ತು ಶಬ್ದಾರ್ಥ, ಭಾವಾರ್ಥಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯ. ಕೇವಲ ಮೇಲ್ಮೈ ವಿಷಯ ಮಾತ್ರ ಕೇಳದೇ ಸಮಗ್ರ ವಿಷಯವನ್ನು ಕೇಳಿ ಅರ್ಥ ಮಾಡಿಕೊಳ್ಳಬೇಕು. ಕ್ಲಿಷ್ಟ ವಿಷಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

- **ವಿಷಯವನ್ನು ಬಿಡಿಯಾಗಿಸದೇ ಇಡಿಯಾಗಿ ಆಲಿಸುವುದು–**ಆಲಿಸುವಾಗ ಪದಗಳನ್ನು ಬಿಡಿಬಿಡಿಯಾಗಿ ಆಲಿಸದೇ ಇಡಿಯಾಗಿ ಆಲಿಸಿ ವಿಷಯವನ್ನು ಸಮಗ್ರವಾಗಿ ಗ್ರಹಿಸಬೇಕು. ಇಲ್ಲದಿದ್ದಲ್ಲಿ ವಿಷಯವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಲಾರದು. ಇದಕ್ಕಾಗಿ ಆಲಿಸುತ್ತಿರುವಾಗ ಮನಸ್ಸಿನಲ್ಲಿಯೇ ಪದಗಳನ್ನು ವಾಕ್ಯದೊಂದಿಗೆ ಅನುಕ್ರಮವಾಗಿ ಜೋಡಿಸಿಕೊಳ್ಳಬೇಕು, ಆಲಿಸುವ ವಿಷಯವನ್ನು ದೃಶ್ಯ ರೂಪದಲ್ಲಿ ಪರಿಕಲ್ಪನೆ ರಚಿಸಿಕೊಳ್ಳುತ್ತಾ ವಿಷಯವನ್ನು ಕ್ರಮಬದ್ಧವಾಗಿ ಜೋಡಿಸಿಕೊಂಡು ಇಡಿಯಾಗಿ ಆಲಿಸುವುದರಿಂದ ವಿಷಯದ ಪೂರ್ಣ ಅರ್ಥ ಅರ್ಥಪೂರ್ಣವಾಗುತ್ತದೆ.

- **ಹೇಳುವ ವ್ಯಕ್ತಿ ಅಥವಾ ವಿಷಯದ ಕುರಿತು ಪೂರ್ವಗ್ರಹವಿಲ್ಲದೇ ಮುಕ್ತ ಮನಸ್ಸಿನಿಂದ ಆಲಿಸುವುದು–** ಹೇಳುವ ವ್ಯಕ್ತಿ ಅಥವಾ ವಿಷಯದ ಕುರಿತು ಸಂಕುಚಿತ ದೃಷ್ಟಿ ಅಥವಾ ಪೂರ್ವಾಗ್ರಹ ಭಾವನೆ ಇದ್ದಲ್ಲಿ ಆಲಿಸುವಿಕೆ ಯಶಸ್ವಿಯಾಗಲಾರದು. ತೆರೆದ ಮನಸ್ಸಿನಿಂದ, ಕುತೂಹಲದಿಂದ, ಆಸಕ್ತಿಯಿಂದ ಆಲಿಸಬೇಕು. ವಿಷಯ ನಮ್ಮ ಭಾವನೆ ಅನಿಸಿಕೆಗಳಿಗೆ ಹೊರತಾದದ್ದಾದರೂ ಆಸಕ್ತಿಯಿಂದಲೇ ಆಲಿಸುವುದನ್ನು ರೂಢಿಸಿಕೊಳ್ಳಬೇಕು. ನಮ್ಮಲ್ಲಿ ಎಲ್ಲಿಯವರೆಗೆ ವ್ಯಕ್ತಿ ಅಥವಾ ವಿಷಯದ ಕುರಿತು ಪೂರ್ವಗ್ರಹ ಭಾವನೆ ಇರುತ್ತದೆಯೋ ಅಲ್ಲಿಯವರೆಗೆ ಆಲಿಸುವಿಕೆ ಅರ್ಥಪೂರ್ಣವಾಗಲಾರದು.

- **ಹೊಸ ವಿಷಯಗಳನ್ನು ಅರಿತುಕೊಳ್ಳುತ್ತಿದ್ದೇನೆ ಎಂಬ ಭಾವನೆಯಿಂದ ಆಲಿಸುವುದು–** ನಾವು ಪ್ರತಿ ಬಾರಿಯೂ ಆಲಿಸುವಾಗ ಹೊಸ ವಿಷಯವನ್ನು ಕೇಳಿಸಿಕೊಳ್ಳುತ್ತಿದ್ದೇನೆ ಎಂಬ ಭಾವನೆಯಿಂದಲೇ ಆಲಿಸಬೇಕು. ವಿಷಯ ಗೊತ್ತಿದ್ದರೂ ಹೇಳುವ ವ್ಯಕ್ತಿ ಅದನ್ನು ವಿಭಿನ್ನ, ಆಕರ್ಷಕ, ಮನಮುಟ್ಟುವಂತೆ ಪರಿಣಾಮಕಾರಿಯಾಗಿ ಹೇಳುವ ಶೈಲಿ ಹೊಸತನದಿಂದ ಕೂಡಿದ್ದಾಗ ಅಂತಹ ಮಾಹಿತಿಯನ್ನು ನಾವು ಈಗಾಗಲೇ ಗೊತ್ತಿದೆ ಎಂದುಕೊಂಡು ಗಮನ ಕೊಡದೆ ಹೋದರೆ ವಿಷಯದ ನಿಜಾಂಶ ನಮಗೆ ತಿಳಿಯದೇ ಹೋಗುತ್ತದೆ. ಅದಕ್ಕಾಗಿ ಪ್ರತಿ ಬಾರಿಯೂ ನಾವು ಹೊಸ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೇವೆ ಎಂಬ ಭಾವನೆಯಿಂದಲೇ ಆಲಿಸಬೇಕು.

- **ವಿಷಯಗಳನ್ನು ನಿರೀಕ್ಷೆಯೊಂದಿಗೆ ನಿರಂತರವಾಗಿ ಆಲಿಸುವುದು–** ಯಾವುದೇ ವಿಷಯಗಳನ್ನು ಆಲಿಸುವಾಗ ಬಿಟ್ಟು ಬಿಟ್ಟು ಕೇಳದೇ ನಿರಂತರವಾಗಿ ಆಲಿಸುತ್ತಿರಬೇಕು ಮತ್ತು ವಿಷಯದ ಹೊಸ ನಿರೀಕ್ಷೆಯೊಂದಿಗೆ ಆಲಿಸಬೇಕು. ನಿರಂತರವಾಗಿ ನಿರೀಕ್ಷೆಯೊಂದಿಗೆ ಆಲಿಸುವುದರಿಂದ ಹಿಂದಿನ ವಿಷಯದ ಅರ್ಥವಿವರಣೆ ಈಗ ಆಲಿಸುವ ವಿಷಯದೊಂದಿಗೆ ಸಂಪರ್ಕ ಹೊಂದಿ ಮುಂದಿನ ಆಲಿಸುವ ವಿಷಯದ ಸಂಪೂರ್ಣ ಮಾಹಿತಿ ಅರ್ಥಪೂರ್ಣವಾಗುತ್ತದೆ.

- **ವಸ್ತುನಿಷ್ಟವಾಗಿ ಆಲಿಸುವುದು–** ನಾವು ಆಲಿಸುವ ವಿಷಯ ವ್ಯಕ್ತಿನಿಷ್ಟವಾಗಿರದೇ ವಸ್ತುನಿಷ್ಟವಾಗಿ, ತರ್ಕಬದ್ಧವಾಗಿ ಸಾಗಿದಾಗ ಆಲಿಸುವ ವಿಷಯ ಸ್ಪಷ್ಟವಾಗುತ್ತಾ ಹೋಗುತ್ತದೆ. ಬರೀ ಟೀಕೆ ಮಾಡುವ ದೃಷ್ಟಿಯಿಂದಲೇ ತಪ್ಪುಗಳನ್ನು ಹುಡುಕುವ ಉದ್ದೇಶದಿಂದಲೇ ಆಲಿಸಬಾರದು. ಆಲಿಸುವಿಕೆ ಋಣಾತ್ಮಕವಾಗಿರದೇ ಧನಾತ್ಮಕವಾಗಿರಬೇಕು. ಆಲಿಸುವಾಗ ಹೇಳುವ ವ್ಯಕ್ತಿ ಮತ್ತು ವಿಷಯವನ್ನಷ್ಟೇ ಗಮನಿಸದೆ ಹೇಳುವ ಶೈಲಿ, ಭಾಷಾಶೈಲಿ, ಉದ್ದೇಶ ಮುಂತಾದವುಗಳನ್ನು ಗಮನಿಸುತ್ತಾ ವಸ್ತುನಿಷ್ಟವಾಗಿ ಆಲಿಸಬೇಕು.

ಇಷ್ಟೇ ಅಲ್ಲದೇ ಆಲಿಸುವಿಕೆ ಕೌಶಲ್ಯವು ವಿವಿಧ ಲಕ್ಷಣಗಳನ್ನು ಒಳಗೊಂಡಿದೆ. ಹೇಳುವವರನ್ನು ನೋಡುತ್ತಾ ಆಲಿಸವುದು, ಸಾವಧಾನವಾಗಿ ಸಮಾಧಾನದಿಂದ ಆಲಿಸಬೇಕು. ಆಲಿಸುವಿಕೆ ಯಶಸ್ವಿಯಾಗಿ ಆದರೇ ಉಳಿದೆಲ್ಲ ಕೌಶಲ್ಯಗಳು ಪರಿಣಾಮಕಾರಿಯಾಗುತ್ತವೆ.

ದೋಷಗಳು:

ಮಕ್ಕಳ ಕಲಿಕೆಯಲ್ಲಿ ಆಲಿಸುವ ಕ್ರಿಯೆ ವಹಿಸುವ ಪಾತ್ರ ಬಹಳಷ್ಟಿದ್ದರೂ ಈ ಬಗ್ಗೆ ಸೂಕ್ತ ಮಾರ್ಗದರ್ಶನವಿಲ್ಲದೆ ಅಥವಾ ಉದಾಸೀನದಿಂದ ತಮಗೆ ಅರಿವಿಲ್ಲದಂತೆಯೇ ಮಕ್ಕಳು ಆಲಿಸುವ ಕ್ರಿಯೆಯನ್ನು ನಿರ್ಲಕ್ಷಿಸುತ್ತಾರೆ. ಇದರಿಂದಾಗಿ ಆಲಿಸುವ ಕ್ರಿಯೆಯಲ್ಲಿ ಅನೇಕ ದೋಷಗಳು ಹುಟ್ಟಿಕೊಳ್ಳುತವೆ. ಅವುಗಳೆಂದರೆ,

- **ಮಾನಸಿಕ ಸಿದ್ಧತೆ ಇಲ್ಲದೆ ಸಂಭವಿಸುವ ದೋಷಗಳು–** ಶಾರೀರಿಕ, ಮಾನಸಿಕ ಸಿದ್ಧತೆ ಇಲ್ಲದೆ ಆಲಿಸುವುದು, ಪ್ರಚೋದನೆಗೊಳ್ಳದೆ ಬೇಕಾಬಿಟ್ಟಿ ಕೇಳಿವುದು, ಆನಾಸಕ್ತಿಯಿಂದ ಕೇಳುವುದು, ಕೇಳುಗರನ್ನು ಪ್ರಚೋದಿಸದೇ ಹೇಳುವ ಸಂದರ್ಭಗಳು, ಏಕೆ ಕೇಳಬೇಕು, ಏನು ಕೇಳಬೇಕು ಮತ್ತು ಹೇಗೆ ಕೇಳಬೇಕೆಂಬ ಉದ್ದೇಶವೇ ಇಲ್ಲದೆ ಆಲಿಸುವುದು, ಮಾನಸಿಕ ಏಕಾಗ್ರತೆಯ ಕೊರತೆಯಿಂದ ಕೇಳುವುದು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.

- **ಭಾಷೆಯ ಅಪೂರ್ಣತೆಯಿಂದಾಗಿ ಸಂಭವಿಸುವ ದೋಷಗಳು–** ಕೇಳುವ ಭಾಷೆಯ ಧ್ವನಿ, ಶೈಲಿಯ ಪರಿಚಯವಿಲ್ಲದೆ ಕೇಳುವುದು, ಧ್ವನಿ ವ್ಯತ್ಯಾಸಗಳಿಂಡಾಗುವ ಅರ್ಥ ವ್ಯತ್ಯಾಸಗಳನ್ನು ಗುರುತಿಸದೆ ಕೇಳುವುದು, ಪದಸಂಪತ್ತಿನ ಕೊರತೆಯಿಂದ ಕೇಳುವುದು, ಪರಿಚಯವಿಲ್ಲದ ವಾಕ್ಯಗಳನ್ನು ಕೇಳುವುದು, ವ್ಯಾಕರಣದ ನಿಯಮಗಳ ಬಗ್ಗೆ ತಿಳುವಳಿಕೆ ಇಲ್ಲದೆ ಕೇಳುವುದು, ಹೇಳುವವರ ಅಸ್ಪಷ್ಟ ಉಚ್ಚಾರಗಳು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.

- **ದೈಹಿಕ ಆಯಾಸ ಮತ್ತು ಶ್ರವಣ ದೋಷಗಳಿಂದ ಆಗುವ ದೋಷಗಳು–** ದೈಹಿಕವಾಗಿ ಬಳಲಿರುವಾಗ ಕೇಳುವುದು, ಆತುರವಾಗಿ, ಭಯ, ಸಂಕೋಚದಿಂದ ಕೇಳುವುದು, ಸರಿಯಾಗಿ ಕುಳಿತುಕೊಳ್ಳದೆ, ಒತ್ತಡದಲ್ಲಿ ಕೇಳುವುದು, ಕಿವಿ ಸ್ಪಷ್ಟವಾಗಿ ಕೇಳಿಸದೆ ಇರುವಾಗ ಕೇಳುವುದು, ನೆಗಡಿ, ಕೆಮ್ಮು, ತಲೆನೋವು ಇರುವಾಗ ಕೇಳುವುದು, ಆಯಾಸದಿಂದ ಅಪೂರ್ಣ ಕೇಳುವುದು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.
- **ಮಾನಸಿಕ ವಿಕ್ಷಿಪ್ತತೆಯಿಂದಾಗುವ ದೋಷಗಳು–** ಮಾನಸಿಕ ಸಿದ್ಧತೆ ಇಲ್ಲದೆ ಕೇಳುವುದು, ಅನ್ಯ ಮನಸ್ಸಿನಿಂದ ಕೇಳುವುದು, ಹಗಲುಗನಸು ಕಾಣುತ್ತಾ ಕೇಳುವುದು, ಮಾನಸಿಕ ಒತ್ತಡದ ಸಂದರ್ಭಗಳಲ್ಲಿ ಕೇಳುವುದು, ಭಯದ ವಾತಾವರಣದಲ್ಲಿ ಕೇಳುವುದು, ಮಾನಸಿಕ ಅಸ್ವಸ್ಥತೆಯಿಂದ ಕೇಳುವುದು, ಕೇಳುತ್ತಾ ಭಾವುಕರಾಗಿ ಪ್ರತಿಕ್ರಿಯಿಸುವುದು, ಸಂಕೋಚದಿಂದ ಕೇಳುವುದು, ಕೇಳುವಾಗ ಸಹನೆ ಕಳೆದುಕೊಳ್ಳುವುದು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.
- **ಅಪೂರ್ಣ ಕೇಳುವಿಕೆಯ ದೋಷಗಳು–** ಕೆಲವೇ ಅಂಶಗಳನ್ನು ಕೇಳುವುದು, ಬಿಟ್ಟು ಬಿಟ್ಟು ವಿಷಯಗಳನ್ನು ಕೇಳುವುದು, ಕೇಳುವಾಗ ಹಿಮ್ಮರಳುವಿಕೆ ಆಗುವುದು, ಅಂಕಿ ಅಂಶಗಳನ್ನು ಮಾತ್ರ ಕೇಳಿ ವಿಷಯವನ್ನು ಕೈಬಿಡುವುದು, ಸರಳ ವಿಷಯಗಳನ್ನು ಕೇಳಿ ಕ್ಲಿಷ್ಟ ವಿಷಯಗಳನ್ನು ನಿರ್ಲಕ್ಷಿಸುವುದು, ಅರ್ಥಗ್ರಹಿಸದೆ ಯಾಂತ್ರಿಕವಾಗಿ ಕೇಳುವುದು, ಮುಖ್ಯಾಂಶಗಳನ್ನು ಗಮನಿಸದೆ ಕೇಳುವುದು, ವಿಷಯವನ್ನು ಇಡಿಯಾಗಿ ಗ್ರಹಿಸದೆ ಬಿಡಿಬಿಡಿಯಾಗಿ ಕೇಳುವುದು, ಕೇಳಿದ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳದೆ ವಿಸ್ಮೃತಿಗೊಳಗಾಗುವುದು, ಪೂರ್ಣ ಕೇಳುವ ಮುನ್ನವೇ ತೀರ್ಮಾಣ ಕೈಗೊಳ್ಳುವುದು, ಕೇಳುವುದೆಲ್ಲವನ್ನು ಆತುರಾತುರವಾಗಿ ಟಿಪ್ಪಣಿ ಮಾಡಿಕೊಳ್ಳುವುದು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.
- **ಆಲಿಸುವಿಕೆಯಲ್ಲಿ ಬರಬಹುದಾದ ವ್ಯಕ್ತಿನಿಷ್ಠ ದೋಷಗಳು–** ವ್ಯಕ್ತಿ ಅಥವಾ ವಿಷಯದ ಬಗೆಗೆ ಪೂರ್ವಾಗ್ರಹ ಹೊಂದಿರುವುದು, ಕೀಳರಿಮೆ ಮತ್ತು ಮೇಲರಿಮೆಯಿಂದ ಕೇಳುವುದು, ವಿಷಯ ಅತ್ಯಂತ ಮುಖ್ಯ ಅಥವಾ ಅಮುಖ್ಯ ಎಂಬ ಭಾವನೆಯಿಂದ ಕೇಳುವುದು, ಇದೆಲ್ಲವೂ ನನಗೆ ಗೊತ್ತಿದೆ ಎಂಬ ಭಾವನೆಯಿಂದ ಕೇಳುವುದು, ನನಗೆ ಅರ್ಥವೇ ಆಗುವುದಿಲ್ಲ ಎಂದು ಭಾವಿಸಿ ಕೇಳುವುದು, ತಪ್ಪು ಹುಡುಕುವ ಉದ್ದೇಶದಿಂದ ಕೇಳುವುದು ಮುಂತಾದವುಗಳು ಆಲಿಸುವಿಕೆಯ ದೋಷಗಳಾಗಿವೆ.
- **ಆಲಿಸುವ ಸಂದರ್ಭ ಅಥವಾ ಸ್ಥಳಗಳಲ್ಲಿನ ಅಡಚಣೆಗಳು–** ಕುಳಿತು ಕೇಳುವ ಆಸನ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದು, ಶಬ್ಧ ಮಾಲಿನ್ಯ ಇರುವುದು, ಸರಿಯಾದ ಗಾಳಿ, ಬೆಳಕಿನ ಕೊರತೆ ಇರುವುದು, ನಿರ್ಬಂಧದ ಸನ್ನಿವೇಶಗಳಲ್ಲಿ ಕೇಳುವುದು ಮುಂತಾದವುಗಳು ಆಲಿಸುವಿಕೆಯಲ್ಲಿನ ದೋಷಗಳಾಗಿವೆ.

ಈ ರೀತಿಯಾಗಿ ವಿವಿಧ ಕಾರಣಗಳಿಂದಾಗಿ ಆಲಿಸುವ ಕ್ರಿಯೆಯಲ್ಲಿ ದೋಷಗಳಾಗುತ್ತವೆ. ಮಕ್ಕಳ ಆಲಿಸುವಿಕೆಯಲ್ಲಿ ಕಂಡುಬರುವ ಇಂತಹ ದೋಷಗಳನ್ನು ಗುರುತಿಸಿ ಸೂಕ್ತ ತಿಳುವಳಿಕೆ

ನೀಡುವುದು ಅಗತ್ಯ. ಸೂಕ್ತ ಅಭ್ಯಾಸಗಳು ಮತ್ತು ಚಟುವಟಿಗಳ ಮೂಲಕ ಈ ದೋಷಗಳನ್ನು ಪರಿಹರಿಸಬೇಕು.

ಪರಿಹಾರಗಳು:

ಉತ್ತಮ ಆಲಿಸುವಿಕೆ ಬರೀ ಯಾಂತ್ರಿಕ ಕೇಳುವಿಕೆಯಲ್ಲ. ಶಬ್ಧಗಳನ್ನು ಕೇಳಿ ಪುನರುಚ್ಚರಿಸುವುದಷ್ಟೇ ಆಲಿಸುವಿಕೆಯಲ್ಲ. ಇದೊಂದು ಪ್ರಜ್ಞಾಪೂರ್ವಕ, ಅರ್ಥಪೂರ್ಣ ಮಾನಸಿಕ ಕ್ರಿಯೆ. ಆಲಿಸುವಿಕೆಯು ಒಂದು ವಸ್ತುನಿಷ್ಟ, ಮುಕ್ತ ಸ್ವೀಕೃತ ಕ್ರಿಯೆ. ಹತ್ತು ಹಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಲಿಸಿದಾಗ ಆಲಿಸುವಿಕೆ ಅರ್ಥಪೂರ್ಣವಾಗುತ್ತದೆ. ಈ ದೃಷ್ಟಿಯಲ್ಲಿ ಆಲಿಸುವಿಕೆಯಲ್ಲಿನ ದೋಷಗಳನ್ನು ಗಮನದಲ್ಲಿಟ್ಟುಕೊಂಡು ಆಲಿಸುವಿಕೆಯನ್ನು ಉತ್ತಮಪಡಿಸಲು ಗಮನದಲ್ಲಿಡಬೇಕಾದ ಪರಿಹಾರಾತ್ಮಕ ಅಂಶಗಳೆಂದರೆ...

- ಮಕ್ಕಳು ಆರಾಮವಾಗಿ ಕುಳಿತು ಆಲಿಸುವ ಆಸನ ವ್ಯವಸ್ಥೆ, ಪ್ರಶಾಂತ ವಾತಾವರಣವನ್ನು ಕಲ್ಪಿಸುವುದು.
- ಮಾನಸಿಕ ಸಿದ್ಧತೆಯಿಂದ, ಆಸಕ್ತಿಯಿಂದ, ಉದ್ದೇಶಪೂರ್ವಕವಾಗಿ ಆಲಿಸುವಂತೆ ತಿಳುವಳಿಕೆ ನೀಡುವುದು.
- ಉತ್ತಮವಾಗಿ ಆಲಿಸುವ ಶಿಷ್ಟಾಚಾರದ ಬಗ್ಗೆ ತಿಳುವಳಿಕೆ ನೀಡುವುದು.
- ಧ್ವನಿ ಏರಿಳಿತಗಳಿಂದ ಆಗುವ ಅರ್ಥವ್ಯತ್ಯಾಸವನ್ನು ಗುರುತಿಸುವ ಬಗ್ಗೆ ತಿಳುವಳಿಕೆ ನೀಡಬೇಕು.
- ವಿಷಯಗಳನ್ನು ಆಲಿಸುವಾಗ ದೃಶ್ಯಾವಳಿಗಳನ್ನು ಕಲ್ಪಿಸಿಕೊಂಡು ಅರ್ಥ ಮಾಡಿಕೊಳ್ಳುವ ಅಭ್ಯಾಸಗಳನ್ನು ನೀಡಬೇಕು.
- ಭಾಷಾ ಬೋಧಕ ಬೋಧನೆ ಮಾಡುವಾಗ ಮಕ್ಕಳ ಗ್ರಹಿಸುವಿಕೆ ಕುರಿತು ಮತ್ತು ವೈಯಕ್ತಿಕವಾಗಿ ಲಕ್ಷ್ಯ ವಹಿಸಬೇಕು.
- ಗದ್ಯಪಾಠ ಮಾಡುವಾಗ ನಡುನಡುವೆ ಪ್ರಶ್ನೆಗಳನ್ನು ಕೇಳಬೇಕು ಮತ್ತು ಚರ್ಚೆಯ ಮೂಲಕ ಮಕ್ಕಳನ್ನು ಪಾಠದಲ್ಲಿ ಪಾಠದಲ್ಲಿ ತೊಡಗಿಸಿಕೊಳ್ಳಬೇಕು.
- ಶಿಕ್ಷಕನು ಮನೋವೈಜ್ಞಾನಿಕ ಮಟ್ಟವನ್ನರಿತು ಬೋಧಿಸಬೇಕು.
- ಮಕ್ಕಳ ಜೀವನಾನುಭವಗಳಿಗೆ ಹೊಂದಿಕೊಂಡಂತೆ ಅಥವಾ ಅವುಗಳೊಂದಿಗೆ ಸಹಸಂಬಂಧ ಕಲ್ಪಿಸುತ್ತಾ ಪಾಠ ಮಾಡಬೇಕು.
- ಪ್ರತಿ ಪಾಠಕ್ಕೂ ಅಭಿಪ್ರೇರಣೆ ಮುಖ್ಯ.
- ಹೊಸ ಹೊಸ ಆಸಕ್ತಿದಾಯಕ ಮತ್ತು ಪರಿಣಾಮಕಾರಿ ಬೋಧನಾ ತಂತ್ರಗಳನ್ನು ಬಳಸಬೇಕು.
- ಪಾಠ ಮಾಡುವಾಗ ದೃಕ-ಶ್ರವಣೋಪರಣಗಳನ್ನು ಬಳಸಬೇಕು.

- ಪದ್ಯ ಬೋಧಿಸುವಾಗ ಶಿಕ್ಷಕರು ರಾಗ, ಲಯಬದ್ಧವಾಗಿ ಹಾಡಿ ಪದ್ಯ ಕಲಿಸಬೇಕು. ಇಲ್ಲಿ ಶಿಕ್ಷಕ ಸಂಗೀತಗಾರನೇ ಆಗಿರಬೇಕೆಂದೇನಿಲ್ಲ, ತನ್ನ ನೈಜ ಸ್ವರದಲ್ಲಿಯೇ ರಾಗಬದ್ಧವಾಗಿ ಹಾಡಿದರೂ ಮಕ್ಕಳು ಸಂತೋಷಪಡುತ್ತಾರೆ. ಇದರಿಂದ ಮಕ್ಕಳ ಅವಧಾನ ಹೆಚ್ಚಾಗುತ್ತದೆ.
- ಗದ್ಯ ಬೋಧನೆಯಲ್ಲಿ ವಿವರಣೆ ಅರ್ಥಬದ್ಧವಾಗಿ ಮಕ್ಕಳ ಮಟ್ಟಕ್ಕನುಗುಣವಾಗಿರಬೇಕು. ಅಲ್ಲಲ್ಲಿ ಉದಾಹರಣೆಗಳು, ಉಪಕತೆಗಳು, ನಗೆಹನಿಗಳನ್ನು ಸಂದರ್ಭೋಚಿತವಾಗಿ ಬಳಸಬೆಕು. ಇದರಿಂದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿ ಆಲಿಸುವಿಕೆ ಯಶಸ್ವಿಯಾಗುತ್ತದೆ.
- ನಾಟಕ ಬೋಧನೆ ಮಾಡುವಾಗ ಶಿಕ್ಷಕ ಅಭಿಅನಯಶೀಲತೆಯನ್ನು ಪ್ರದರ್ಶಿಸಬೇಕು. ಭಾವಾಭಿವ್ಯಕ್ತಿಗೆ ಪ್ರಾಧಾನ್ಯತೆ ಕೊಡಬೇಕು. ಇದರಿಂದ ಮಕ್ಕಳ ಗಮನ ತನ್ನತ್ತ ಕೇಂದ್ರೀಕರೀಸಿಕೊಳ್ಳಲು ಶಿಕ್ಷಕರಿಗೆ ಸಾಧ್ಯವಾಗುತ್ತದೆ.
- ವ್ಯಾಕರಣ ಬೋಧನೆಯಲ್ಲಿ ಸಮನ್ವಯ ಪದ್ಧತಿ, ಕ್ರಿಡಾಪದ್ಧತಿಗಳನ್ನು ಬಳಸಬೇಕು.
- ಕತೆ, ಗಟ್ಟಿವಾಚನ, ವಿವರಣೆ, ಉಪನ್ಯಾಸ ಮತ್ತು ಭಾಷಣಗಳನ್ನು ಕೇಳಿ ಗ್ರಹಿಸುವ ಅವಕಾಶಗಳನ್ನು ನೀಡುವುದು.
- ರೇಡಿಯೋ ಮತ್ತು ದೂರ್ದರ್ಶನದಲ್ಲಿ ಪ್ರಸಾರವಾಗುವ ಸಂದರ್ಶನ, ಪ್ರಶ್ನೋತ್ತರ, ಚರ್ಚೆಗಳು, ವಾರ್ತೆಗಳು, ಭಾಷಣಗಳನ್ನು ಕೇಳಿ ಅರ್ಥಗ್ರಹಿಸುವ ಕ್ರಮದ ಬಗ್ಗೆ ತರಬೇತಿ ನೀಡುವುದು.
- ತರಗತಿಯಲ್ಲಿ ಪ್ರಶಾಂತವಾಗಿ ಕುಳಿತು ಏಕಾಗ್ರತೆಯಿಂದ ಆಲಿಸುತ್ತಾ ವಿಷಯ ಗ್ರಹಿಸುವ, ಆಸ್ವಾದಿಸುವ ಹಾಗೂ ಮುಖ್ಯಾಂಶಗಳನ್ನು ನೇನಪಿನಲ್ಲಿಟ್ಟುಕೊಳ್ಳುವ ಬಗ್ಗೆ ಸೂಕ್ತ ಸೂಚನೆಗಳು, ತಿಳುವಳಿಕೆ, ಅಭ್ಯಾಸಗಳನ್ನು ನೀಡಬೇಕು.
- ಬೋಧನೆಯ ಸಂದರ್ಭದಲ್ಲಿ ಶಿಕ್ಷಕ ವಿಶೇಷ ಗಮನ ಹರಿಸಿ ಆಲಿಸುವಿಕೆಯ ದೋಷ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಮೇಲೆ ಹೇಳಿದ ಸೂಕ್ತ ಮಾರ್ಗದರ್ಶನ ನೀಡಬೇಕು.

ಶಿಕ್ಷಕರು ಪ್ರಾಥಮಿಕ ಹಂತಗಳಲ್ಲಿ ಪ್ರತಿದಿನ ಔಪಚಾರಿಕ, ಅನೌಪಚಾರಿಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಆಲಿಸುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಸೂಕ್ತ ಸೂಚನೆಗಳು, ತಂತ್ರಗಳು, ಅಗತ್ಯ ತಿಳುವಳಿಕೆ ಹಾಗೂ ಅಭ್ಯಾಸಗಳನ್ನು ನೀಡುತ್ತಾ ಮಕ್ಕಳ ಆಲಿಸುವಿಕೆ ಸಾಮರ್ಥ್ಯವನ್ನು ಉತ್ತಮಗೊಳಿಸಬೇಕು.

- **ಮಾತುಗಾರಿಕೆ:**

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತೆಯಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.

ನುಡಿಯೊಳಗಾಡಿ ನಡೆಯದಿದ್ದರೆ ಮೆಚ್ಚ
ನಮ್ಮ ಕೂಡಲಸಂಗಮದೇವಾ. – ಬಸವಣ್ಣನವರು.

ಬಸವಣ್ಣನವರ ಈ ವಚನ ನುಡಿ ಮಾತು ಹೇಗಿರಬೇಕೆಂಬುದನ್ನು ತಿಳಿಸುತ್ತದೆ.

ಮನಸ್ಸಿನ ಭಾವನೆ, ಆಲೋಚನೆ ಮತ್ತು ಅಭಿಪ್ರಾಯಗಳನ್ನು ಅರ್ಥಪೂರ್ಣವಾಗಿ, ಸುಸಂಬದ್ಧವಾಗಿ ಶಾಬ್ದಿಕವಾಗಿ ಪ್ರಕಟಪಡಿಸುವುದೇ ಮಾತು. ವ್ಯವಸ್ಥಿತವಾಗಿ ಧ್ವನಿ ಹೊರಡಿಸುವ ಶಕ್ತಿ ಸಹಜವಾಗಿ ಮಾನವನಲ್ಲಿ ಮೂಡಿ ಬಂದಿರುತ್ತದೆ. ಮಗು ಹುಟ್ಟಿದೊಡನೆಯೇ ಅಳುತ್ತದೆ. ಅಂದರೆ ತಾಯಿಯ ಗರ್ಭದಿಂದ ಹೊರಬಂದ ಕೂಡಲೇ ಅದು ಪ್ರತಿಕ್ರಿಯಿಸುತ್ತದೆ ಎಂದಾಯಿತು. ಆಗ ಅದಕ್ಕಿರುವ ಅಭಿವ್ಯಕ್ತಿ ಸಾಧನ ಅಳುವೊಂದೇ. ಈ ಅಳುವಿನ ಮುಂದಿನ ಹೆಜ್ಜೆ ಮಾತು. ಹುಟ್ಟುವಾಗ ಸಹಜವಾಗಿ ಬಂದ ಅನುವಂಶಿಕ ಶಕ್ತಿಯ ಜೊತೆಗೆ ಪರಿಸರದ ಪ್ರೇರಕ ಶಕ್ತಿ ಮಗುವಿನಲ್ಲಿ ಮಾತಿನ ಅಭ್ಯಾಸವನ್ನುಂಟು ಮಾಡುತ್ತದೆ. ಆಲಿಸುತ್ತಾ, ಆಲಿಸಿದ್ದನ್ನು ಗ್ರಹಿಸುತ್ತಾ ಅನುಕರಣೆಯ ಮೂಲಕ ಮಗು ಮಾತು ಕಲಿಯುತ್ತದೆ.

ಅಭಿವ್ಯಕ್ತಿ ಸಾಧನವಾಗಿರುವ ಮಾತು ಒಂದು ಮಾನಸಿಕ ಕ್ರಿಯೆ. ಮಾತುಗಾರಿಕೆ ಎಂದರೆ ಸ್ಪಷ್ಟವಾದ ಉಚ್ಚಾರಣೆ, ಸ್ವರಭಾರ ಇವು ಮಾತ್ರವಲ್ಲ. ಪದಗಳ ಬಳಕೆ, ಪದ–ಅರ್ಥಗಳ ಪರಿಪೂರ್ಣ ಜ್ಞಾನ, ಪ್ರಯೋಗ ಇವೂ ಅಗತ್ಯ.

ಮನುಷ್ಯ ಮಾತನಾಡುವುದನ್ನು ಕಲಿತಾಗಲೇ ಭಾಷೆಯು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು. ಮಾತು ಭಾಷೆಯ ಮೂಲ ಮತ್ತು ಭಾಷೆಯ ಪ್ರಾಥಮಿಕ ಹಂತ. ಪ್ರಾಣಿಗಳಂತಿದ್ದ ಆದಿಮಾನವರು ಮಾತಿನಿಂದಲೇ ಮಾನವರಾದರು. ಮಾತನ್ನು ಮುಂದುವರಿಸುತ್ತಾ ಹಂತಹಂತವಾಗಿ ನಾಗರೀಕರಾದರು. ಇಂದು ಮನುಷ್ಯನ ಜೀವನದಲ್ಲಿ ಮಾತು ಅತ್ಯಂತ ಪ್ರಮುಖವಾದ ಕ್ರಿಯೆಯಾಗಿದೆ. ಮಾತಿಲ್ಲದೆ ಮನುಷ್ಯನ ಅಸ್ತಿತ್ವವೇ ಇಲ್ಲ ಎಂದೆನಿಸುತ್ತದೆ. ಮಾತಿಲ್ಲದ ಸಮಾಜವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

ಮಾತು ಒಂದು ಶಾಬ್ದಿಕ ಹಾಗೂ ಮಾನಸಿಕ ಕ್ರಿಯೆ. ಒಂದು ನಿರ್ದಿಷ್ಟ ಭಾಷೆಯ ಧ್ವನಿ ಸಂಕೇತಗಳ ಮೂಲಕ ಮಾತಿನ ಕ್ರಿಯೆ ನಡೆಯುತ್ತದೆ. ವ್ಯಕ್ತಿಯು ತನ್ನ ಭಾವನೆ, ಯೋಚನೆ, ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ನಿರ್ದಿಷ್ಟ ಧ್ವನಿ ಸಂಕೇತಗಳ ಮೂಲಕ ಅರ್ಥಪೂರ್ಣವಾಗಿ, ವ್ಯವಸ್ಥಿತವಾಗಿ ಶಬ್ದಗಳ ಮೂಲಕ ಪ್ರಕಟಪಡಿಸುವುದೇ ಮಾತು. ಮಾತು ಬರೀ ಶಬ್ಧಗಳ ಪ್ರಕಟಣೆ ಎನ್ನುವಂತಿಲ್ಲ. ಮಾತಿನಲ್ಲಿ ಶಬ್ದ, ಅರ್ಥ, ಭಾವನೆಗಳು ಸಮನ್ವಯಗೊಳ್ಳುತ್ತವೆ. ಮಾತನಾಡಲು ಧ್ವನಿಗಳು ಬೇಕು. ಇದೇ ರೀತಿ ಮನಸ್ಸು, ಯೋಚನೆ ಮತ್ತು ಅರ್ಥಗಳು ಬೇಕು.

ಸ್ವರೂಪ:

- ಮಾತು ಶಾಬ್ಧಿಕ ಮತ್ತು ಮಾನಸಿಕ ಕ್ರಿಯೆಯಾಗಿದೆ.
- ಸ್ಪಷ್ಟ, ದೋಷಮುಕ್ತ, ತರ್ಕಬದ್ಧವಾಗಿರುವಂತದ್ದು.
- ಮಾತು ಶಬ್ದಾಧಾರಿತ ಕೌಶಲ್ಯವಾಗಿದೆ.

- ಸುಸ್ಪಷ್ಟ ಉಚ್ಚಾರ ಹಾಗೂ ಅರ್ಥಕ್ಕನುಗುಣವಾದ ಧ್ವನಿ ಏರಿಳಿತಗಳೊಂದಿಗೆ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವಾಗಿದೆ.
- ಒಂದು ವಿಷಯ, ಆಲೋಚನೆ, ಅಭಿಪ್ರಾಯವನ್ನು ಕುರಿತಂತೆ ಸ್ವತಂತ್ರವಾಗಿ ಅರ್ಥಬದ್ಧವಾಗಿ ಮಾತನಾಡುವ ಸಾಮರ್ಥ್ಯವನ್ನು ಒಳಗೊಂಡಿದೆ.
- ಒಂದು ವಿಷಯ, ಆಲೋಚನೆ, ಅಭಿಪ್ರಾಯ ಮುಂತಾದವುಗಳನ್ನು ಸುಸಂಬದ್ಧ ವಾಕ್ಯಗಳಲ್ಲಿ ಒಂದು ಚೌಕಟ್ಟಿನಲ್ಲಿ ನಿರೂಪಿಸುವ ಸಾಮರ್ಥ್ಯ ಹೊಂದಿದೆ.
- ವ್ಯಾಕರಣಬದ್ಧವಾಗಿ ಮಾತನಾಡುವ, ಚರ್ಚೆ ಮಾಡುವ ಮತ್ತು ಸಮ್ಭಾಷಣೆಗಳನ್ನು ನಡೆಸುವ ಕೌಶಲ್ಯಗಳಲ್ಲಿ ಸಾಮರ್ಥ್ಯವನ್ನು ಬೇಳೆಸುವುದಾಗಿದೆ.
- ಮಾತಿನ ಮೂಲಕ ವಿಷಯ ವಿವರಣೆ, ಕತೆ ಹೇಳುವುದು, ಸಂಭಾಷಣೆ, ಚರ್ಚೆ, ಭಾಷಣ, ಅಭಿಪ್ರಾಯ ನಿರೂಪಣೆ ಮುಂತಾದ ಕೌಶಲ್ಯಗಳಲ್ಲಿ ಸಾಮರ್ಥ್ಯವನ್ನು ಪ್ರದರ್ಶಿಸುವುದಾಗಿದೆ.

ಪ್ರಾಮುಖ್ಯತೆ:

ಮಾತೇ ಮಾಣಿಕ್ಯ; ಮಾತು ಬಲ್ಲವನಿಗೆ ಜಗಳವಿಲ್ಲ; ಮಾತು ಕತ್ತಿಗಿಂತ ಹರಿತು; ಮಾತು ಆಡಿದರೆ ಹೋಯಿತು; ಅರಿತು ನುಡಿದರೆ ಅಮೃತ, ಮರೆತು ನುಡಿದರೆ ವಿಷ; ಮಾತೆಂಬುದು ಜ್ಯೋತಿರ್ಲಿಂಗ; ಮುಂತಾದ ನುಡಿಮುತ್ತುಗಳನ್ನು ಗಮನಿಸಿದಾಗ ಮಾತಿಗಿರುವ ಪ್ರಾಮುಖ್ಯತೆ ಅರ್ಥವಾಗುತ್ತದೆ. ಇದೇ ರೀತಿ ಮಾತೇ ಮುತ್ತು, ಮಾತೇ ಮೃತ್ಯು; ಮಾತು ಮನೆ ಕೆಡಿಸಿತು; ಮಾತು ಆಯಸ್ಸನ್ನು ಕಡಿಮೆ ಮಾಡುತ್ತದೆ. ಮಾತು ಕಡಿಮೆ, ಕೆಲಸ ಹೆಚ್ಚು; ಮಾತು ಬೆಳ್ಳಿ, ಮೌನ ಬಂಗಾರ; ಮಾತು ಕ್ಷಣಿಕ, ಮೌನ ಅನಂತ; ಮುಂತಾದ ಎಚ್ಚರಿಕೆಯ ನುಡಿಗಳು ಮಾತಿನ ಬಗ್ಗೆ ರೂಢಿಯಲ್ಲಿವೆ. ಅರ್ಥವಿಲ್ಲದ ಮಾತು ವ್ಯರ್ಥ. ಮಾತು ಮಿತವಾಗಿದ್ದರೆ ಹಿತ. ಮಾತನ್ನು ಮಾನವನ ಉನ್ನತಿಗಾಗಿಯೇ ಬಳಸಿಕೊಳ್ಳಬೇಕು. ಮಾತಿನಿಂದಲೇ ಒಬ್ಬ ವ್ಯಕ್ತಿಯ ಸಂಸ್ಕಾರ, ಆತನ ಗುಣಗಳು ವ್ಯಕ್ತವಾಗುತ್ತವೆ ಎಂಬ ಅಭಿಪ್ರಾಯಗಳಿವೆ. ಈ ಮೂಲಕ ಮಾತುಗಾರಿಕೆಯ ಅವಶ್ಯಕತೆ, ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ಗಮನಿಸುವುದಾದರೆ,

–ಮಾನಸಿಕ ವಿಕಾಸ ಹಾಗೂ ಯೋಚನಾ ಶಕ್ತಿಯನ್ನು ಬೆಳೆಸಲು ಮಾತುಗಾರಿಕೆ ಸಹಾಯಕವಾಗಿದೆ.

–ಸಾಮಾಜಿಕ ಸಂಪರ್ಕವನ್ನು ಸುಗಮಗೊಳಿಸಲು, ವ್ಯಕ್ತಿ ವ್ಯಕ್ತಿಗಳ ನಡುವೆ, ವ್ಯಕ್ತಿ, ಸಮಾಜ ಹಾಗೂ ಸರಕಾರದ ನಡುವೆ, ಸಾಮಾಜಿಕ ಸಂಘಸಂಸ್ಥೆಗಳ ಜೊತೆಗೆ ಹಾಗೂ ಸಮೂಹ ಮಾಧ್ಯಮಗಳ ಲಾಭ ಪಡೆಯಲು ಮಾತುಗಾರಿಕೆ ನೆರವಾಗುತ್ತದೆ.

–ಜನರನ್ನು ಸಾಮಾಜಿಕ ಜೀವನಕ್ಕೆ ತರಬೇತಿಗೊಳಿಸಿ ಉತ್ತಮ ಸಾಮಾಜಿಕ ಬಾಂಧವ್ಯಗಳನ್ನು ಬೆಳೆಸಲು ಅವಶ್ಯಕವಾಗಿದೆ.

–ಸಂವಹನಕ್ಕೆ, ಅಬಿವ್ಯಕ್ತಿಗೆ ಮತ್ತು ವಿಚಾರಗಳ ವಿನಿಮಯಕ್ಕೆ ಮಾತು ಅವಶ್ಯಕವಾಗಿದೆ.

–ಮಾತುಗಾರಿಕೆ ಸಂಘಜೀವನವನ್ನು ಪ್ರೋತ್ಸಾಹಿಸುತ್ತದೆ ಮತ್ತು ಬೆಳೆಸುತ್ತದೆ.

–ಮಾತುಗಾರಿಕೆ ಸಾಮಾಜಿಕ ಅಂತರ್ ಸಂಬಂಧಗಳನ್ನು ವಿಕಾಸಗೊಳಿಸುತ್ತದೆ.

–ಮಾತುಗಾರಿಕೆ ಸಾಹಿತ್ಯ, ಸಂಸ್ಕೃತಿಯ ಪ್ರಸರಣ ಮಾಡುತ್ತದೆ.
–ಮಾತುಗಾರಿಕೆ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗುತ್ತದೆ.

ಲಕ್ಷಣಗಳು:

- ಬೇರೆಯವರಿಗೆ ತಿಳಿಯುವಂತೆ ಸುಸ್ಪಷ್ಟವಾಗಿ ಮಾತನಾಡುವುದು.
- ಮಾತು ಸರಳವಾಗಿರಬೇಕು ಮತ್ತು ಅರ್ಥಪೂರ್ಣವಾಗಿರಬೇಕು.
- ಕೇಳುವವರಿಗೆ ಆಸಕ್ತಿ, ಅಭಿರುಚಿಯುಂಟಾಗುವಂತೆ ಮಾತನಾಡುವುದು.
- ಉದ್ದೇಶಪೂರ್ವಕವಾಗಿ, ಮಾನಸಿಕ ಸಿದ್ಧತೆಯಿಂದ ಮಾತನಾಡಬೇಕು.
- ಸುಸ್ಪಷ್ಟವಾಗಿ, ನಿರರ್ಗಳವಾಗಿ ಉಚ್ಚಾರ ಇರಬೇಕು. ಮಾತಿನ ಅರ್ಥಕ್ಕೆ ಅನುಗುಣವಾಗಿ ಧ್ವನಿಯ ಏರಿಳಿತಗಳು, ಮುಖಭಾವಗಳು ಅಭಿವ್ಯಕ್ತವಾಗಬೇಕು.
- ಮಾತು ಅರ್ಥಬದ್ಧವಾಗಿ, ಭಾವಪೂರ್ಣವಾಗಿ, ತರ್ಕಬದ್ಧವಾಗಿ, ವ್ಯಾಕರಣಬದ್ಧವಾಗಿರಬೇಕು.
- ಮಾತು ಸಹಜವಾಗಿ, ನೇರವಾಗಿ, ಸರಳ ಹಾಗೂ ನಿರ್ದಿಷ್ಟವಾಗಿ ಹೊರ ಹೊಮ್ಮಬೇಕು.
- ಅರ್ಥಕ್ಕನುಗುಣವಾಗಿ ನಿಲುಗಡೆಯ ತಾಣಗಳನ್ನು ಅನುಸರಿಸಿ ಮಾತನಾಡಬೇಕು.
- ಗಂಭೀರವಾಗಿ, ನಿಧಾನವಾಗಿ ಮಾತನಾಡಬೇಕು.
- ಅಕ್ಷರ ಮತ್ತು ಪದಗಳನ್ನು ಬಿಡಿಸಿ ಬಿಡಿಸಿ ಹೇಳದೆ ಸುಸಂಬದ್ಧವಾಗಿ ಸಂಯೋಜಿಸಿ ಮಾತನಾಡಬೇಕು.
- ವಾಕ್ಯಗಳನ್ನು ಮಧ್ಯೆ ನಿಲ್ಲಿಸಿ ಮಾತನಾಡದೆ ಪೂರ್ಣ ವಾಕ್ಯವನ್ನು ನಿರರ್ಗಳವಾಗಿ ಮಾತನಾಡಬೇಕು.
- ಮಾತಿನಲ್ಲಿ ಹಿಮ್ಮರಳುವಿಕೆ, ಅತೀ ಪುಉಣರಾವರ್ತನೆ ಇರಬಾರದು.
- ಕೇಳುವವರನ್ನು ಗಮನಿಸಿ ಅವರಿಗೆ ಸ್ಪಷ್ಟವಾಗಿ ಅರ್ಥವಾಗುವಂತೆ ಮಾತನಾಡಬೇಕು.
- ಆತುರ, ನಾಚಿಕೆ, ಭಯ, ಗಾಬರಿಯಿಂದ ಮಾತನಾಡದೆ ಗಂಭೀರವಾಗಿ, ಸಹಜವಾಗಿ ಆತ್ಮವಿಶ್ವಾಸದಿಂದ ಮಾತನಾಡಬೇಕು.
- ಮಾತಿನ ಶೈಲಿ ಆಕರ್ಷಕವಾಗಿರಬೇಕು. ಭಾಷೆಯ ಜಾಯಮಾನ ಹಾಗೂ ವಿಷಯದ ಸ್ವರೂಪಕ್ಕೆ ಹೊಂದುವ ಶೈಲಿ ಇರಬೇಕು.
- ಆತ್ಮವಿಶ್ವಾಸದಿಂದ, ಸ್ಫೂರ್ತಿಯಿಂದ, ಕಳಕಳಿಯಿಂದ ಮಾತನಾಡಬೇಕು.
- ಆತುರವಾಗಿ ಮಾತನಾಡದೆ ಯೋಚಿಸಿ ಮಾತನಾಡಬೇಕು. ಏನು ಮಾತನಾಡಬೇಕು? ಎಷ್ಟು ಮಾತನಾಡಬೇಕು? ಹೇಗೆ ಮಾತನಾಡಬೇಕು? ಎಂಬ ಅರಿವು ಇರಬೇಕು.

- ಉತ್ತಮ ಮಾತುಗಾರ ಉತ್ತಮ ಕೇಳುಗನಾಗಿರುತ್ತಾನೆ. ಅಂತೆಯೇ ಅನವಶ್ಯಕವಾಗಿ ಮಾತನಾಡದೆ ಬೇರೆಯವರ ಮಾತನ್ನು ಕೇಳುತ್ತಾ ಕಡಿಮೆ ಮಾತನಾಡಬೇಕು. ಮಾತು ಕಡಿಮೆ ಮಾಡಿ ಆಲೋಚನೆ, ಆಲಿಸುವಿಕೆ ಹಾಗೂ ಕೆಲಸವನ್ನು ಹೆಚ್ಚು ಮಾಡಬೇಕು.

ಒಟ್ಟಿನಲ್ಲಿ ಶಿಕ್ಷಕರು ಮಕ್ಕಳು ಸುಸ್ಪಷ್ಟವಾಗಿ, ನಿಖರವಾಗಿ, ತಪ್ಪಿಲ್ಲದೆ, ತಡವರಿಸದೇ, ಬೇರೆಯವರಿಗೆ ತಿಳಿಯುವಂತೆ ಮಾತನಾಡಲು ಕಲಿಯಲು ಸಾಕಷ್ಟು ತರಬೇತಿ ಕೊಡಬೇಕಾಗುತ್ತದೆ. ಮಕ್ಕಳು ಸ್ಪಷ್ಟವಾಗಿ, ಧೈರ್ಯವಾಗಿ, ತಪ್ಪಿಲ್ಲದೆ, ತಡವರಿಸದೆ ಸರಳವಾದ ಭಾಷೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯ ಪಡೆದುಕೊಳ್ಳಬೇಕು. ಅವರ ಭಾಷೆಯಲ್ಲಿ ಉಚ್ಚಾರಣಾ ದೋಷವಿರಬಾರದು. ವ್ಯಾಕರಣ ನಿಯಮಗಳ ಉಲ್ಲಂಘನೆ ಕಾಣಬಾರದು. ಅರ್ಥಪೂರ್ಣವಾದ ಧ್ವನಿಯಲ್ಲಿ ಮನಮುಟ್ಟುವಂತೆ ಮಾತನಾಡುವುದನ್ನು ಅವರು ಕಲಿಯಬೇಕು. ಮಕ್ಕಳು ಆಡಿದ ಮಾತುಗಳು ಬೇರೆಯವರಿಗೆ ಅರ್ಥವಾಗುವಂತೆ ಇರಬೇಕು. ಒಂದು ಬಾರಿ ಆಡಿದುದನ್ನು ಕೇಳಿದ ಮೇಲೆ ಇನ್ನೂ ಮಾತನಾಡಿದರೆ ಒಳ್ಳೆಯದು ಎನ್ನುವಂತಿರಬೇಕು.

ದೋಷಗಳು:

ಸ್ವಾಭಾವಿಕವಾಗಿ ಮಗು ಶಾಲೆಗೆ ಬರುವ ಮುಂಚೆಯೇ ಮಾತು ಕಲಿತಿರುತ್ತದೆ. ಆದರೂ ಶಾಲೆಗೆ ಬರುವ ಮಕ್ಕಳ ಮಾತುಗಾರಿಕೆಯಲ್ಲಿ ಹಲವಾರು ದೋಷಗಳು ಕಂಡುಬರುತ್ತವೆ. ಮಕ್ಕಳ ಮಾತುಗಾರಿಕೆಯಲ್ಲಿ ಕಂಡುಬರುವ ದೋಷಗಳಿಗೆ ಅವರ ಮನೆಯ ಪರಿಸರ, ನೆರೆಹೊರೆ, ಅನುವಂಶೀಯತೆ, ಸಾಮಾಜಿಕ–ಸಾಂಸ್ಕೃತಿಕ ವಾತಾವರಣ, ವೃತ್ತಿಗಳು, ಆರ್ಥಿಕ ಸ್ಥಿತಿಗತಿಗಳು, ಆರೋಗ್ಯ, ಆಹಾರ ಪದ್ಧತಿ, ಹವಾಮಾನ ಮುಂತಾದವುಗಳು ಕಾರಣವಾಗಿರಬಹುದು. ಮಕ್ಕಳ ಮಾತುಗಾರಿಕೆಯಲ್ಲಿ ಕಂಡುಬರುವ ದೋಷಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- **ಉಚ್ಚಾರಕ್ಕೆ ಸಂಬಂಧಿಸಿದ ದೋಷಗಳು–** ಉತ್ತಮ ಮಾತುಗಾರಿಕೆಗೆ ಸುಸ್ಪಷ್ಟ ಉಚ್ಚಾರ ಕ್ರಮ ಅಗತ್ಯ. ಅಕ್ಷರ, ಪದಗಳ ಸ್ವರೂಪಕ್ಕನುಗುಣವಾಗಿ ಉಚ್ಚರಿಸದಿರುವುದು. ಉಚ್ಚಾರದಲ್ಲಿ ಖಚಿತತೆ ಇಲ್ಲದಿರುವುದು. ವಿಶೇಷವಾಗಿ ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ದೀರ್ಘಾಕ್ಷರ, ಸಂಯುಕ್ತಾಕ್ಷರ ಇತ್ಯಾದಿ. ಧ್ವನಿ ಸೂಕ್ಷ್ಮದ ಅರಿವಿಲ್ಲದೇ ಅಕ್ಷರಗಳನ್ನು ಬದಲು ಮಾಡಿ ಉಚ್ಚರಿಸುವುದು. ಅ–ಹ, ಶ–ಷ–ಸ, ಳ–ಲ, ನ–ಣ, ರು–ಋ ಇತ್ಯಾದಿಗಳು. ಅಗ್ಗ–ಹಗ್ಗ, ಶಂಖ–ಸಂಖ, ಷಣ್ಮುಖ–ಶನ್ಮುಕ, ಅನ್ನ–ಅಣ್ಣ, ಗೃಹ–ಗ್ರಹ ಮುಂತಾದ ದೋಷಗಲು ಕಂಡುಬರುತ್ತವೆ. ಅಲ್ಲದೆ ವಾಕ್ಯಗಳನ್ನು ಮಧ್ಯೆ ಮಧ್ಯೆ ತಡೆದು ಉಚ್ಚರಿಸುವುದು. ಉಚ್ಚಾರದಲ್ಲಿ ಆದಿ, ಅಂತ್ಯ ನುಂಗುವುದು. ನಾಸಿಕ ಧ್ವನಿಗಳನ್ನು ಸರಿಯಾಗಿ ಉಚ್ಚರಿಸದಿರುವುದು, ಉದಾಹರಣೆಗೆ ಕೋಣ–ಕೋನ, ಮಣ–ಮನ, ಜ್ಞಾನ–ಗ್ಯಾನ,
- **ಭಾಷೆಯ ಅಪೂರ್ಣ ಕಲಿಕೆಗೆ ಸಂಬಂಧಿಸಿದ ದೋಷಗಳು–** ಸುಸಂಬದ್ಧ ಮಾತುಗಾರಿಕೆಗೆ ಭಾಷಾಜ್ಞಾನ ಅಗತ್ಯ. ಭಾಶಾ ಜ್ಞಾನದ ಕೊರತೆಯಿಂದ, ಭಾಷಾ ದೋಷಗಳಿಂದ ಮಾತುಗಾರಿಕೆಯಲ್ಲಿ ದೋಷಗಳು ಸಂಭವಿಸುತ್ತವೆ. ಪದಸಂಪತ್ತಿನ ಕೊರತೆ, ಸಾಂದರ್ಭಿಕವಾಗಿ

ಪದಗಳ ರಚನೆ ಮಾಡುವ ಸಾಮರ್ಥ್ಯ ಇಲ್ಲದೆ ಇರುವುದು, ಪದಗಳ ಅರ್ಥವನ್ನು್ನ ತಿಳಿಯದೇ ಇರುವುದು, ವಾಕ್ಯ ರಚನಾ ಕೌಶಲ್ಯದ ಕೊರತೆ, ವ್ಯಾಕರಣದ ಅಂಶಗಳನ್ನು ಅಳವಡಿಸಿ ಮಾತನಾಡುವ ತಿಳುವಳಿಕೆಯ ಕೊರತೆ, ಸಾಂದರ್ಭಿಕವಾಗಿ ಪದಗಳನ್ನು ಬಳಸುವ ಜಾಣ್ಮೆ ಇಲ್ಲದಿರುವುದು, ಸಂದರ್ಭಕ್ಕೆ ಅಗತ್ಯವಾದ ಪದಗಳನ್ನು್ನ ಆಯ್ಕೆಮಾಡಿಕೊಳ್ಳುವಲ್ಲಿ ತಿಳುವಳಿಕೆಯ ಕೊರತೆ, ಅಲ್ಪಪ್ರಾಣ ಮಹಾಪ್ರಾಣಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸದಿರುವುದು, ಕಾಲ ವಚನ ಲಿಂಗಗಳ ಬಗ್ಗೆ ತಿಳುವಳಿಕೆ ಇಅಲ್ಲದಿರುವುದು ಮುಂತಾದ ದೋಷಗಳು ಭಾಷೆಯ ಅಪೂರ್ಣ ಕಲಿಕೆಗೆ ಸಂಬಂಧಿಸಿದ ದೋಷಗಳಾಗಿವೆ.

- **ಉಗ್ಗುವಿಕೆ ಮತ್ತು ತೊದಲುವಿಕೆಯ ದೋಷಗಳು–** ಭಾಷಾ ಕಲಿಕಾ ಆರಂಭದ ಹಂತದಲ್ಲಿ ಎಲ್ಲ ಮಕ್ಕಳಲ್ಲಿ ಅಲ್ಲದಿದ್ದರೂ ಹೆಚ್ಚು ಮಕ್ಕಳಲ್ಲಿ ಸರ್ವೇ ಸಾಮನ್ಯವಾಗಿ ಕಂಡುಬರುವ ದೋಷ ಇದಾಗಿದೆ. ನಿರಂತರವಾಗಿ ಮಾತನಾಡದೆ ನಿಲ್ಲಿಸಿ ನಿಲ್ಲಿಸಿ ಮಾತನಾಡುವುದು, ಒಂದೇ ಪದ ಅಥವಾ ಅಕ್ಷರಗಳನ್ನು ಪುನಃ ಪುನಃ ಉಚ್ಚರಿಸುವುದು, ಪದ ಅಥವಾ ವಾಕ್ಯಗಳಲ್ಲಿ ಆದಿ, ಅಂತ್ಯಭಾಗವನ್ನು ನುಂಗುವುದು, ಪದಗಳನ್ನು ಅತಿಯಾಗಿ ಹಿಮ್ಮರಳಿಸಿ ಮಾತನಾಡುವುದು, ಮುಂತಾದ ದೋಷಗಳು ಉಗ್ಗುವಿಕೆ ಮತ್ತು ತೊದಲುವಿಕೆಯಲ್ಲಿ ಕಂಡು ಬರುತ್ತವೆ.
- **ಶಾರೀರಿಕ ದೋಷಗಳು–** ಶಾರೀರಿಕ ವಿಕಲಾಂಗತೆ, ಅನಾರೋಗ್ಯ, ದೈಹಿಕ ಬಲಹೀನತೆ, ಇಂದ್ರೀಯಗಳ ಅನಾರೋಗ್ಯ, ನರಗಳ ದೌರ್ಬಲ್ಯ, ರಕ್ತದ ಒತ್ತಡ, ನಾಲಿಗೆಯ ಮಂದತೆ, ತುಟಿಗಳಿಗೆ ಆಗುವ ಘಾಸಿ, ಹಲ್ಲುಗಳ ಅವ್ಯವಸ್ಥಿತ ರಚನೆ, ಕಣ್ಣಿನ ತೊಂದರೆ, ಪೋಲಿಯೋ, ನಾಯಿಕೆಮ್ಮು, ಪಾರ್ಶ್ವವಾಯು, ಬುದ್ಧಿಮಾಂದ್ಯತೆ ಇತ್ಯಾದಿ ಕಾರಣಗಳಿಂದ ಮಾತಿನಲ್ಲಿ ದೋಷಗಳಾಗುತ್ತವೆ.
- **ಧ್ವನ್ಯಂಗಗಳಿಗೆ ಸಂಬಂಧಿಸಿದ ದೋಷಗಳು–** ಧ್ವನ್ಯಂಗಗಳ ಹೊಂದಾಣಿಕೆ ತಪ್ಪಿದಾಗ, ಧ್ವನ್ಯಂಗಗಳು ಘಾಸಿಗೊಂಡಾಗ ಮಾತಿನಲ್ಲಿ ದೋಷಗಳು ಸಂಭವಿಸುತ್ತವೆ. ಸೀಳು ತುಟಿಗಳು, ಹಲ್ಲಿನ ರಚನೆಯ ಏರುಪೇರು, ಗಂಟಲಿನ ದೋಷಗಳು, ನಾಲಿಗೆಯ ಮಂದತೆ ಹಾಗೂ ದಪ್ಪ ನಾಲಿಗೆ, ಸೀಳು ಧ್ವನಿ, ಕರ್ಕಶ ಧ್ವನಿ, ಪಿಸುಧ್ವನಿ, ಕೀರಲು ಧ್ವನಿ ಮುಂತಾದ ದೋಷಗಳು. ಧ್ವನ್ಯಂಗಗಳು ಘಾಸಿಗೊಂಡಾಗ ಮತ್ತು ಅವುಗಳ ಸಾಮರಸ್ಯ ತಪ್ಪಿದಾಗ ಮಾತಿನಲ್ಲಿ ದೋಷಗಳಾಗುತ್ತವೆ.
- **ಪರಿಸರದ ಪ್ರಭಾವದಿಂದ ಉಂಟಾಗುವ ದೋಷಗಳು–** ಮಕ್ಕಳು ಬೆಳೆಯುವ ಪರಿಸರವೂ ಕೂಡ ಮಾತುಗಾರಿಕೆಯ ಮೇಲೆ ಪ್ರಭಾವ ಬೀರುತ್ತದೆ. ಪರಿಸರದಲ್ಲಿ ಭಯೋತ್ಪಾದಕ ವಾತಾವರಣವಿದ್ದರೆ, ತಂದೆ ತಾಯಿಗಳು ಸದಾ ಜಗಳವಾಡುತ್ತಿದ್ದರೆ, ಮದ್ಯಪಾನ ಮಾಡಿ ಕೂಗಾಡಾತ್ತಿದ್ದರೆ, ಸಣ್ಣ ಸಣ್ಣ ತಪ್ಪಿಗೂ ಮಕ್ಕಳನ್ನು್ನ ಉಗ್ರವಾಗಿ ದಂಡಿಸುತ್ತಿದ್ದರೆ ಭಯದಿಂದ ಮಕ್ಕಳು ಮಾತನಾಡುವಲ್ಲಿ ದೋಷ ಮಾಡುತ್ತಾರೆ.
- **ಪರಭಾಷೆಯ ಪ್ರಭಾವದಿಂದ ಉಂಟಾಗುವ ದೋಷಗಳು–** ಬೇರೆ ಬೇರೆ ಭಾಷೆಗಳ ಧ್ವನಿ, ಉಚ್ಚಾರಗಳು ವಿಭಿನ್ನವಾಗಿರುತ್ತವೆ. ಈ ಧ್ವನಿಯ ಪ್ರಭಾವ ಮತ್ತು ಪರಭಾಷಾ ಪದಗಳನ್ನು ಯಾಂತ್ರಿಕವಾಗಿ ಬಳಸಿದಾಗ ದೋಷಗಳು ಸಂಭವಿಸುತ್ತವೆ. ಗಡಿನಾಡಿನ ಪ್ರದೇಶಗಳಲ್ಲಿ ಕನ್ನಡ

ಭಾಷೆಯ ಮೇಲೆ ತೆಲುಗು, ಕೊಂಕಣಿ, ತುಳು, ಉರ್ದು, ತಮಿಳು, ಮರಾಠಿ ಭಾಷೆಗಳ ಪ್ರಭಾವದಿಂದಾಗಿ ದೋಷಗಳು ಕಂಡುಬರುತ್ತವೆ.

- **ಇತರೆ ಕಾರಣಗಳಿಂದ ಸಂಭವಿಸಬಹುದಾದ ದೋಷಗಳು**–ಸರಿಯಾದ ಕಾಗುಣಿತದ ಜ್ಞಾನವಿಲ್ಲದಿರುವುದು, ಶಬ್ಧಭಂಡಾರದ ಕೊರತೆ, ಮಾನಸಿಕ ಆಘಾತ, ಬುದ್ಧಿಭ್ರಮಣೆ, ಗೇಲಿ ಮಾತು ಅಥವಾ ಕೊಂಕಾಗಿ ಮಾತನಾಡುವುದರಿಂದ, ಅತಿಯಾದ ಶೈಲಿ ಪ್ರದರ್ಶಿಸಲು ಹೋದಾಗ, ಭಯ–ಜಿಗುಪ್ಸೆಗಳಿಂದ, ದೈಹಿಕ ಅನಾರೋಗ್ಯ, ಮಾತಿನಲ್ಲಿ ಆತುರತೆಯಿದ್ದಾಗ, ಅತಿ ವೇಗವಾಗಿ ಮಾತನಾಡುವುದು ಮುಂತಾದ ಇತರೆ ಕಾರಣಗಳಿಂದ ಮಾತುಗಾರಿಕೆಯಲ್ಲಿ ದೋಷಗಳು ಕಂಡುಬರುತ್ತವೆ.

ಈ ರೀತಿ ಹಲವಾರು ಕಾರಣಗಳಿಂದ ಮಾತಿನ ದೋಷಗಳನ್ನು ಹೊತ್ತು ಶಾಲೆಗೆ ಬರುವ ಮಕ್ಕಳಲ್ಲಿ ಪ್ರಾಥಮಿಕ ಹಂತಗಳಲ್ಲಿಯೇ ಅವರ ದೋಷಗಳನ್ನು ಗುರುತಿಸಬೇಕು. ಮಕ್ಕಳ ದೋಷಗಳನ್ನು ಅವರ / ಪಾಲಕರ ಗಮನಕ್ಕೆ ತರಬೇಕು. ಮುಕ್ತವಾದ ವಾತಾವರಣ ಕಲ್ಪಿಸಿಕೊಟ್ಟು ಆತ್ಮೀಯತೆಯಿಂದ ಅವರನ್ನು ಮಾತನಾಡಿಸುತ್ತಾ, ಸೂಕ್ತ ತರಬೇತಿ ಮತ್ತು ಅಭ್ಯಾಸಗಳನ್ನು ನೀಡಬೇಕು.

ಪರಿಹಾರಗಳು:

- ಮಾತುಗಾರಿಕೆಯಲ್ಲಿ ಕಂಡುಬರುವ ಉಚ್ಚಾರಕ್ಕೆ ಸಂಬಂಧಿಸಿದ ದೋಷಗಳಿಗೆ– ವರ್ಣಮಾಲೆಯ ಅಕ್ಷರಗಳನ್ನು ಪರಿಚಯಿಸಿ, ಪ್ರತಿ ವರ್ಣದ ಧ್ವನಿ ಮತ್ತು ಉಚ್ಚಾರ ಕ್ರಮವನ್ನು ಹೇಳಿಕೊಡುವುದು. ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಸಂಯುಕ್ತಾಕ್ಷರ, ದೀರ್ಘಾಕ್ಷರಗಳನ್ನು ಉಚ್ಚರಿಸುವ ಕ್ರಮವನ್ನು ಪರಿಚಯಿಸುವುದು. ಪದ ಮತ್ತು ವಾಕ್ಯಗಳ ಸುಸಂಬದ್ಧ ಉಚ್ಚಾರ ಕ್ರಮವನ್ನು ಅಭ್ಯಾಸ ಮಾಡಿಸುವುದು. ಶ, ಸ, ಷ ಣ, ನ, ಳ, ಲ ಇಂತಹ ಅಕ್ಷರಗಳ ಸ್ಪಷ್ಟ ಉಚ್ಚಾರ ಕ್ರಮವನ್ನು ಅಭ್ಯಾಸ ಮಾಡಿಸುವುದು. ವೈಯಕ್ತಿಕವಾಗಿ ಗಮನಕೊಟ್ಟು ದೋಷಗಳನ್ನು ತಿದ್ದುವುದು.
- ಭಾಷೆಯ ದೋಷಗಳ ಪರಿಹಾರಕ್ಕೆ ಅಭ್ಯಾಸಗಳೆಂದರೆ– ವಿವಿಧ ಪದಗಳ ಅರ್ಥ, ಧ್ವನಿ, ಹಾಗೂ ಉಚ್ಚಾರದ ಅಭ್ಯಾಸಗಳನ್ನು ಮಾಡಿಸುವುದು. ಪ್ರತಿ ಪದದ ಧ್ವನಿ, ಅರ್ಥ, ಉಚ್ಚಾರದ ಜ್ಞಾನ ಕೊಟ್ಟು ಅಭ್ಯಾಸ ಮಾಡಿಸುವುದು. ವಾಕ್ಯರಚನೆ ಮತ್ತು ನಿರರ್ಗಳ ಉಚ್ಚಾರ ಕ್ರಮದ ಬಗ್ಗೆ ಅಭ್ಯಾಸಗಳನ್ನು ಮಾಡಿಸುವುದು. ವ್ಯಾಕರಣಬದ್ಧ ಮಾತುಗಾರಿಕೆಯ ಅಭ್ಯಾಸಗಳನ್ನು ಮಾಡಿಸುವುದು. ಅಲ್ಪಪ್ರಾಣ ಮತ್ತು ಮಹಾಪ್ರಾಣಗಳನ್ನು ಬಳಸುವ ಔಚಿತ್ಯದ ಬಗ್ಗೆ ತಿಳುವಳಿಕೆ ನೀಡುವುದು ಹಾಗೂ ಇವುಗಳ ಉಚ್ಚಾರಕ್ರಮವನ್ನು ಅಭ್ಯಾಸ ಮಾಡಿಸುವುದು. ಕಾಲ, ವಚನ, ಲಿಂಗಗಳ ಬಗ್ಗೆ ತಿಳುವಳಿಕೆ ನೀಡುವುದು. ಉತ್ತಮ ವಾಕ್ಯ ರಚನೆ ಮೂಲಕ ಅಭ್ಯಾಸ ಮಾಡಿಸುವುದು.

- ಉಗ್ಗುವಿಕೆ ಮತ್ತು ತೊದಲುವಿಕೆಗೆ ಪರಿಹಾರಗಳು– ಅದಾ ವಾಕ್ಯಗಳನ್ನು ಉಚ್ಚರಿಸುವ ಅಭ್ಯಾಸ. ಕಠಿಣ ಪದಗಳನ್ನು ಪುನಃ ಪುನಃ ಉಚ್ಚರಿಸುವುದು. ನಿಧಾನವಾಗಿ ಮಾತನಾಡುವುದನ್ನು ಅಭ್ಯಾಸ ಮಾಡಿಸುವುದು. ಆತುರ, ಗಾಬರಿ, ಭಯದ ವಾತಾವರಣವನ್ನು ದೂರ ಮಾಡಿ ಮುಕ್ತವಾದ ಆತ್ಮೀಯ ವಾತಾವರಣವನ್ನು ನಿರ್ಮಿಸುವುದು. ಉಗ್ಗುವಿಕೆಯನ್ನು ವ್ಯಂಗ್ಯವಾಗಿ ನೋಡದೆ ಪ್ರೀತಿಯಿಂದ ಅವರನ್ನು ಮಾತನಾಡಿಸಿ ಆತ್ಮವಿಶ್ವಾಸ ಬೆಳೆಸಬೇಕು. ನಿರಂತರ ಮಾತನಾಡುವ ಅಭ್ಯಾಸವನ್ನು ಮಾಡಿಸುವುದು.
- ಶಾರೀರಿಕ ದೋಷಗಳ ನಿವಾರಣೆಗೆ ಪರಿಹಾರಗಳು– ಪ್ರಾಥಮಿಕ ಹಂತಗಳಲ್ಲಿಯೇ ಕಣ್ಣು, ಕಿವಿ, ಮೂಗು, ನಾಲಿಗೆ, ಹಲ್ಲುಗಳು, ಗಂಟಲು, ತುಟಿಗಳು ಮುಂತಾದ ಅಂಗಗಳ ಅಸ್ವಸ್ಥತೆ ಮತ್ತು ಅನಾರೋಗ್ಯಗಳನ್ನು ಗುರುತಿಸಿ ಸೂಕ್ತ ಅಭ್ಯಾಸ ಮತ್ತು ವೈದ್ಯಕೀಯ ಸಲಹೆಗಳನ್ನು ಕೊಡಿಸಬೇಕು. ನಿರಂತರ ಅಭ್ಯಾಸದ ಮೂಲಕ ಸ್ವಲ್ಪಮಟ್ಟಿಗೆ ಈ ದೋಷಗಳನ್ನು ಪರಿಹರಿಸಬಹುದು.
- ಧ್ವನ್ಯಂಗಗಳ ದೋಷಗಳಿಗೆ ಪರಿಹಾರಗಳು– ಕ್ರಮಬದ್ಧ ಶ್ವಾಸೋಚ್ಛ್ವಾಸ ಕ್ರಿಯೆಯನ್ನು ಅಭ್ಯಾಸ ಮಾಡಿಸುವುದು. ತುಟಿ ಮತ್ತು ನಾಲಿಗೆಯ ಚಾಲನೆಯನ್ನು ನಾಲಿಗೆ ಸುರಳಿ ವಾಕ್ಯಗಳ ಅಭ್ಯಾಸದಿಂದ ಸಕ್ರಿಯಗೊಳಿಸುವುದು. ಬುದ್ಧಿಮಾಂಧ್ಯರು ಮತ್ತು ಸೆಳೆತ ರೋಗಗಳಿಗೆ ಬಲಿಯಾಗಿ ಮಾತಿನ ದೋಷಗಳಿರುವವರಿಗೆ ವಿಶೇಷ ಅಭ್ಯಾಸ ತರಗತಿಗಳನ್ನು ಏರ್ಪಾಡು ಮಾಡಿಸುವುದು. ಧ್ವನ್ಯಂಗಗಳ ದೋಷಗಳಿಗೆ ಅಖಿಲ ಭಾರತ ವಾಕ್ ಶ್ರವಣ ಶಿಕ್ಷಣ ಸಂಸ್ಥೆಯಲ್ಲಿ ಸೂಕ್ತ ಸಲಹೆ ಮತ್ತು ಚಿಕಿತ್ಸೆ ಕೊಡಿಸಬೇಕು.
- ಪರಿಸರದ ದೋಷಗಳಿಗೆ ಪರಿಹಾರಗಳು– ಮಕ್ಕಳಿಗೆ ಉತ್ತಮ ಪರಿಸರ ಒದಗಿಸಿ ಕೊಡುವುದು, ಉತ್ತಮವಾದ ಮಾತುಗಾರಿಕೆಯನ್ನು ಕೇಳುವ ಅವಕಾಶಗಳನ್ನು ಕಲ್ಪಿಸುವುದು, ಮಕ್ಕಳನ್ನು ತಂಬಾಕು, ಮದ್ಯಪಾನ, ಧೂಮಪಾನಗಳಿಂದ ದೂರ ಇಡುವುದು. ವಿವಿಧ ಸಭೆ ಸಮಾರಂಭಗಳಲ್ಲಿ ಮಕ್ಕಳು ಹಾಜರಾಗಿ ಭಾಷಣ, ಚರ್ಚೆ, ಪ್ರಶ್ನೋತ್ತರಗಳನ್ನು ಕೇಳುವ ಅವಕಾಶ ಒದಗಿಸಬೇಕು. ರೇಡಿಯೋ, ದೂರದರ್ಶನದಲ್ಲಿ ಪ್ರಸಾರವಾಗುವ ವಿವಿಧ ಕಾರ್ಯಕ್ರಮಗಳನ್ನು ನೋಡುತ್ತಾ ಕೇಳುವ ಅವಕಾಶಗಳನ್ನು ಕಲ್ಪಿಸಬೇಕು.
- ಪರಭಾಷಾ ಪ್ರಭಾವದ ದೋಷಗಳಿಗೆ ಪರಿಹಾರಗಳು– ಬೇರೆ ಭಾಷೆಯ ಪದಗಳನ್ನು ಕನ್ನಡ ಮಾತಿನಲ್ಲಿ ಪ್ರಯೋಗಿಸುವ ಅನಿವಾರ್ಯ ಇದ್ದಾಗ ಪ್ರಯೋಗಿಸಬೇಕು. ಆದರೆ ಬಳಸುವ ಪದಗಳ ಸ್ಪಷ್ಟ ಪರಿಚಯ ಮತ್ತು ಉಚ್ಚಾರ ಕ್ರಮ ಅಭ್ಯಾಸ ಮಾಡಿಸಬೇಕು. ಅನವಶ್ಯಕವಾಗಿ ಬೇರೆ ಭಾಷೆಯ ಪದಗಳನ್ನು ಬಳಸಬಾರದು. ಶುದ್ಧ ಶಿಷ್ಟ ಭಾಷಾಭ್ಯಾಸ ಮಾಡಿಸಬೇಕು.

ಇಂತಹ ಹತ್ತು ಹಲವಾರು ಪರಿಹಾರಗಳನ್ನು ಕಂಡುಕೊಂಡು ಮಾತುಗಾರಿಕೆಯಲ್ಲಿನ ದೋಷಗಳನ್ನು ತಿದ್ಧಬೇಕು. ಪ್ರಾಥಮಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಕೊಡಿಸುವುದರಿಂದ ಮತ್ತು ತರಬೇತಿ ಹಾಗೂ ಸೂಕ್ತ ಅಭ್ಯಾಸಕ್ರಮಗಳನ್ನು ಮಾಡಿಸುವುದರಿಂದ ಶಿಕ್ಷಕರು ಮತ್ತು ಪಾಲಕರು ಮಕ್ಕಳ ಮಾತುಗಾರಿಕೆಯಲ್ಲಿನ ದೋಷಗಳನ್ನು ಮುಕ್ತಗೊಳಿಸಲು ಸಾಧ್ಯವಾಗುತ್ತದೆ.

- **ಓದುಗಾರಿಕೆ:**

ಓದುಗಾರಿಕೆ ಭಾಷಾಕೌಶಲ್ಯಗಳಲ್ಲೊಂದು. ಓದಿಗೆ ಶಿಕ್ಷಣದಲ್ಲಿ ವಿಶೇಷ ಸ್ಥಾನವಿದೆ. ಓದು, ಬರಹಗಳೇ ಶಿಕ್ಷಣದಲ್ಲಿ ಪ್ರಧಾನವಾದವುಗಳು. ಶಿಕ್ಷಿತನಾಗಲೀ ಅಶಿಕ್ಷಿತನಾಗಲೀ ಅವನನ್ನು ಗುರುತಿಸುವುದು ಅವರ ಓದು ಬರಹಗಳ ಆಧಾರದ ಮೇಲಿನಿಂದ. 'ಓದು' ಎನ್ನುವುದಕ್ಕೆ ವಿಶೇಷಾರ್ಥಗಳಿವೆ. ಓದುವುದು ಒಂದು ಮಾನಸಿಕ ಶಾಬ್ದಿಕ ಕ್ರಿಯೆ. ಮಾತುಗಾರಿಕೆಯ ನಂತರ ಕಲಿಯಲ್ಪಡುವ ಓದುಗಾರಿಕೆಯು ಭಾಷೆಯ ಒಂದು ಅತಿಮುಖ್ಯ ಕೌಶಲ್ಯ. ಓದುವುದು ಮಾತನಾಡುವುದಕ್ಕಿಂತ ಕಷ್ಟ ಮತ್ತು ಹೆಚ್ಚು ನಿಯಮಬದ್ಧ. ಓದಿಗೆ ಮಾತುಗಾರಿಕೆಯ ಆಧಾರ ಬೇಕು. ಯಾಕೆಂದರೆ ಮಾತಿನಂತೆ ಓದು ಕೂಡ ಅಭಿವ್ಯಕ್ತಿ ಕೌಶಲವಾಗಿದೆ. ಮಾತಿನ ಕೌಶಲಗಳು ಓದುಗಾರಿಕೆಯನ್ನು ಪುಷ್ಟಿಗೊಳಿಸುತ್ತವೆ.

ಓದುವುದು ಒಂದು ಮಾನಸಿಕ ಹಾಗೂ ಶಾಬ್ದಿಕ ಕ್ರಿಯೆಯಾಗಿದೆ. ಮುದ್ರಿತ ಪದ, ವಾಕ್ಯಗಳನ್ನು ನೋಡಿ ಗಮನಿಸಿ ಅರ್ಥಮಾಡಿಕೊಳ್ಳುವುದು ಅಥವಾ ಲಿಪಿಯನ್ನು ಶಬ್ಧರೂಪದಲ್ಲಿ, ಅರ್ಥಬದ್ಧವಾಗಿ ಹೊರಹೊಮ್ಮಿಸುವ ಕ್ರಿಯೆಯನ್ನು ಓದುಗಾರಿಕೆ ಎನ್ನಬಹುದು. ಓದು ಶಾಬ್ದಿಕವಾಗಿದ್ದರೆ ಗಟ್ಟಿವಾಚನ ಎಂದು, ಶಬ್ಧವಿಲ್ಲದೆ ಮಾನಸಿಕವಾಗಿ ಓದಿ ಅರ್ಥಗ್ರಹಿಸಿದರೆ ಮೌನವಾಚನ ಎನ್ನಬಹುದು. ಓದುಗಾರಿಕೆ ಕೇವಲ ಮಾನಸಿಕ ಕ್ರಿಯೆಯಷ್ಟೇ ಅಲ್ಲ, ಇದೊಂದು ಮನೋವೈಜ್ಞಾನಿಕ ಕ್ರಿಯೆಯಾಗಿದೆ. ಓದುವ ಕ್ರಿಯೆಯಲ್ಲಿ ಮಾನಸಿಕ ಸಿದ್ಧತೆ, ಆಸಕ್ತಿ, ಪ್ರಚೋದನೆ, ಮಾನಸಿಕ ಏಕಾಗ್ರತೆ, ಅರ್ಥಗ್ರಹಿಕೆ, ಬಿಂಬಕಲ್ಪನೆ, ಸ್ಮರಣೆ ಮತ್ತು ಯೋಚನಾ ಕೌಶಲಗಳು ಸಮನ್ವಯಗೊಂಡು ಕೆಲಸ ಮಾಡುತ್ತವೆ. ಆದ್ದರಿಂದ ಓದುವುದನ್ನು ಒಂದು ಆಲೋಚನಾ ಕ್ರಿಯೆ ಎಂದೂ ಕರೆಯಬಹುದು.

ಭಾಷಾ ಶಾಸ್ತ್ರಜ್ಞರ ಪ್ರಕಾರ 'ಮುದ್ರಿತ ವಿಷಯದ ಜೊತೆ ವ್ಯಕ್ತಿಯೊಬ್ಬನು ನಡೆಸುವ ಮಾನಸಿಕ ಅಂತರ ಕ್ರಿಯೆಯೆ ಓದುಗಾರಿಕೆ.' ಮುದ್ರಿತ ವಿಷಯವನ್ನು ಆ ಭಾಷೆಯ ಮೂಲಕ ಪ್ರವೇಶಿಸಿ ಅದರಲ್ಲಡಗಿರುವ ಅರ್ಥ, ಭಾವನೆ, ವಿಷಯವನ್ನು ಗ್ರಹಿಸುವ ಕ್ರಿಯೆಯೆ ಓದುಗಾರಿಕೆ. ಲಿಪಿ ಗುರುತಿಸಿ ಅವುಗಳ ಅರ್ಥವನ್ನು ಕಲ್ಪಿಸಿಕೊಂಡು, ಪದ ಮತ್ತು ವಾಕ್ಯಗಳನ್ನು ಒಟ್ಟಾಗಿ, ಅರ್ಥಬದ್ಧವಾಗಿ ಉಚ್ಚರಿಸುವುದು ಮತ್ತು ಅರ್ಥಮಾಡಿಕೊಳ್ಳುವುದೇ ಓದಿನ ಕ್ರಿಯೆ.ಲಿಪಿಗಳು ಕಣ್ಣುಗಳ ಮೂಲಕ ಮನಸ್ಸನ್ನು ಪ್ರವೇಶಿಸಿ ಭಾಷೆಯ ಮೂಲಕ ಧ್ವನಿಯಾಗಿ ಅರ್ಥಪೂರ್ಣವಾಗಿ ಹೊರಹೊಮ್ಮುವುದೇ ಓದು. ಲಿಪಿಗಳು ಕೈಯಿಂದ ಮೂಡಿಬಂದರೆ ಬರವಣಿಗೆ ಮತ್ತು ಲಿಪಿಗಳು ಬಾಯಿಯಿಂದ ಉಚ್ಚರಿಸಲ್ಪಟ್ಟರೆ ಓದು ಎಂದು ಭಾಷಾಶಾಸ್ತ್ರಜ್ಞರು ಓದು-ಬರಹದ ಅರ್ಥವನ್ನು ಹೇಳುತ್ತಾರೆ.

ಸ್ವರೂಪ:

- ಇದೊಂದು ಮಾನಸಿಕ ಮತ್ತು ಶಾಬ್ದಿಕಕ್ರಿಯೆಯಾಗಿದೆ.
- ಗಟ್ಟಿ ವಾಚನ ಮತ್ತು ಮೌನ ಓದು ಎರಡನ್ನೂ ಒಳಗೊಂಡಿದೆ.
- ಓದುಗಾರಿಕೆ ಒಂದು ಮನೋಭಾಷಿಕ ಪ್ರಕ್ರಿಯೆಯಾಗಿದೆ.
- ಓದುಗಾರಿಕೆ ಒಂದು ಆಲೋಚನಾ ಕ್ರಿಯೆ ಮತ್ತು ಕಲಿಕಾ ಪ್ರಕ್ರಿಯೆಯಾಗಿದೆ.

- ಓದುಗಾರಿಕೆಯು ಪ್ರಧಾನವಾಗಿ ಒಂದು ಸ್ವೀಕೃತ ಕ್ರಿಯೆ.
- ಓದುಗಾರಿಕೆಯು ಉತ್ಪಾದಕ ಕೌಶಲ್ಯವಾಗಿದೆ. ಓದುವುದರ ಮೂಲಕ ವಿಷಯ ಗ್ರಹಿಕೆ, ಜ್ಞಾನ, ಸೃಜನಶೀಲತೆ ನಂತರ ಹೊಸತನದ ಉತ್ಪಾದಕತೆ ನಡೆಯುತ್ತದೆ.
- ಹೊಸ ಆಲೋಚನೆಗಳ ಉಗಮಕ್ಕೆ ಮೂಲವಾಗಿದೆ.
- ಜ್ಞಾನಾರ್ಜನೆ ಮಾತು ಆಲೋಚನಾ ಕ್ರಿಯೆಯ ಮೂಲವಾಗಿದೆ.
- ಓದುವುದು ಓದುಗ ಮತ್ತು ಬರಹಗಾರನ ನಡುವಿನ ಸಂವಾದಾತ್ಮಕ ಪ್ರಕ್ರಿಯೆಯಾಗಿದೆ.
- ಪ್ರಾಕಲ್ಪನೆಗಳ ರಚನೆಯಾಗುತ್ತಾ ಓದುಗಾರಿಕೆ ಸಾಗುತ್ತದೆ.

ಪ್ರಾಮುಖ್ಯತೆ:

"ನಾವು ಓದುವಂತೆಯೆ ಬಾಳುತ್ತೇವೆ, ನಾವು ಬಾಳುವಂತೆಯೆ ಓದುತ್ತೇವೆ" ಎಂಬ ಮಾತಿದೆ. ವ್ಯಕ್ತಿಯ ಬದುಕಿನಲ್ಲಿ ಓದುಗಾರಿಕೆಗೆ ಮಹತ್ವದ ಸ್ಥಾನವಿದೆ. ಬದುಕನ್ನು ಉತ್ತಮವಾಗಿ ರೂಪಿಸಲು ಓದುಗಾರಿಕೆ ಅತ್ಯವಶ್ಯಕ. ಓದಿದ, ಓದುತ್ತಿರುವ ವ್ಯಕ್ತಿ ಹೊಸ ಪ್ರಪಂಚವನ್ನು ನೋಡುತ್ತಾನೆ. ವಿಶಾಲ ಸಮಾಜದಲ್ಲಿ ಬಾಳುತ್ತಾನೆ. ಏನೂ ಓದದೆ ಮೂಲೆಯಲ್ಲಿರುವ ವ್ಯಕ್ತಿ ಕಣ್ಣಿದ್ದೂ ಕುರುಡುನಾಗುತ್ತಾನೆ. ಸಮಕಾಲೀನ ಜಗತ್ತನ್ನು ಅರ್ಥಮಾಡಿಕೊಳ್ಳಲಾರ. ಆದ್ದರಿಂದ ನಮ್ಮ ಮಕ್ಕಳಿಗೆ, ಯುವಕರಿಗೆ ಉತ್ತಮ ಪುಸ್ತಕಗಳನ್ನು ಒದಗಿಸಿ ಅವರಲ್ಲಿ ಓದುವ ಹವ್ಯಾಸಗಳನ್ನು ಬೆಳೆಸಿದರೆ ಅವರ ಬಾಳು ಉತ್ತಮವಾಗಿ ರೂಪುಗೊಳ್ಳುತ್ತದೆ.

ಓದುಗಾರಿಕೆಯ ಪ್ರಕ್ರಿಯೆಯು ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಮಹತ್ವ ಪಡೆದಿದೆ. ಇಡೀ ಶಿಕ್ಷಣವೇ ಓದುವುದು ಎನ್ನುವಷ್ಟು ವ್ಯಾಪಕತೆ ಪಡೆದಿದೆ. ಶಿಕ್ಷಣದ ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆಗೆ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಲ್ಲೂ ಓದುಗಾರಿಕೆ ಹಾಸುಹೊಕ್ಕಾಗಿದೆ. ಒಂದು ದೇಶದ ಭವಿಷ್ಯವು ಆ ದೇಶದ ಜನರು ಓದುವ ಹವ್ಯಾಸದ ಮೇಲೆ ಬಹುವಾಗಿ ಆಧರಿತವಾಗಿರುತ್ತದೆ. ಓದಿ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವ ಮೂಲಕ ಒಬ್ಬ ವ್ಯಕ್ತಿ ಉತ್ತಮ ನಾಗರಿಕನಾಗಿ ರೂಪಿಸಲ್ಪಡುತ್ತಾನೆ. ಮಗುವನ್ನು ಒಬ್ಬ ಉತ್ತಮ ನಾಗರಿಕನನ್ನಾಗಿ ಮಾಡುವುದೇ ಶಿಕ್ಷಣದ ಮೂಲ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಯಾಗಬೇಕಾದರೆ ಮಕ್ಕಳಲ್ಲಿ ಓದುಗಾರಿಕೆಯ ಕೌಶಲ್ಯವನ್ನು ಶಿಕ್ಷಕರು ಬೆಳೆಸಬೇಕಾಗಿದೆ. ಈ ಮೂಲಕ ಓದುಗಾರಿಕೆಯ ಪ್ರಮುಖ್ಯತೆಯನ್ನು ಗಮನಿಸುವುದಾರೆ,

–ಓದುವ ಹವ್ಯಾಸ ಬೆಳೆಸಿಕೊಳ್ಳಲು
–ವಿಷಯ ಗ್ರಹಿಕೆ ಮತ್ತು ಜ್ಞಾನಾರ್ಜನೆಗಾಗಿ
–ಸ್ವತಂತ್ರವಾದ ಆಲೋಚನಾ ಶಕ್ತಿಯನ್ನು ಬೆಳಿಸಿಕೊಳ್ಳಲು
–ಭಾಷಾ ಕೌಶಲ್ಯಗಳಲ್ಲಿ ಸಾಮರ್ಥ್ಯವನ್ನು ಗಳಿಸುವುದಕ್ಕಾಗಿ
–ತರ್ಕಬದ್ಧವಾದ ಯೋಚನಾಶಕ್ತಿ ಬೆಳೆಸಿಕೊಳ್ಳುವುದಕ್ಕಾಗಿ
–ಅಧ್ಯಯನ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದಕ್ಕಾಗಿ
–ಸಾಂಸ್ಕೃತಿಕ ಮತ್ತು ಭಾವನಾತ್ಮಕ ಉನ್ನತಿಗಾಗಿ

–ಸಮಕಾಲೀನ ವಿಚಾರಗಳನ್ನು ಗ್ರಹಿಸುವುದಕ್ಕಾಗಿ
–ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಳ್ಳುವುದಕ್ಕಾಗಿ
–ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲು
–ಪತ್ರಿಕೆ, ನಿಯತಕಾಲಿಕೆಗಳ ಮೂಲಕ ಜ್ಞಾನ ಪಡೆಯಲು
–ಸಾಮಾಜಿಕ ಸಂಪರ್ಕಕ್ಕಾಗಿ
–ಶಿಕ್ಷಣ ಸಾಹಿತ್ಯ ಮತ್ತು ಸಂಸ್ಕೃತಿಯ ಉನ್ನತಿಗಾಗಿ
–ಆತ್ಮಸಂತೋಷಕ್ಕಾಗಿ
–ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದಕ್ಕಾಗಿ
–ವ್ಯಕ್ತಿತ್ವ ವಿಕಾಸಕ್ಕಾಗಿ

ಒಟ್ಟಾರೆ ವ್ಯಕ್ತಿ ಮತ್ತು ಸಮಾಜದ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ, ಸಾಂಸ್ಕೃತಿಕ, ಆಡಳಿತ, ಭಾವನಾತ್ಮಕ ಉನ್ನತಿಗಾಗಿ ಓದುಗಾರಿಕೆ ಮಹತ್ವ ಎನಿಸುತ್ತದೆ.

ಓದು ಕಲಿಸುವ ವಿಧಾನಗಳು / ಪದ್ಧತಿಗಳು:

1.ಅಕ್ಷರಮಾಲಾ ಪದ್ಧತಿ
2.ಪದಮಾಲಾ ಪದ್ಧತಿ
3.ವಾಕ್ಯಮಾಲಾ ಪದ್ಧತಿ
4.ನೋಡಿ ಹೇಳುವ ಪದ್ಧತಿ
5.ಕಥಾ ಪದ್ಧತಿ

1. ಅಕ್ಷರಮಾಲಾ ಪದ್ಧತಿ: ಅಕ್ಷರಮಾಲಾ ಪದ್ಧತಿಯನ್ನು ವರ್ಣಮಾಲಾ ಪದ್ಧತಿ ಎಂತಲೂ ಕರೆಯುತ್ತಾರೆ. ಇದು ಮಕ್ಕಳಿಗೆ ವರ್ಣಮಾಲೆಯನ್ನು ಹಾಕಿಕೊಟ್ಟು ಓದುವುದನ್ನು ಬೋಧಿಸಲಾಗುತ್ತದೆ. ಕನ್ನಡದ ವರ್ಣಮಾಲೆಯ ಪ್ರತಿಯೊಂದು ವರ್ಣಕ್ಕೂ ತನ್ನದೇ ಆದ ನಿರ್ದಿಷ್ಟವಾದ ಧ್ವನಿ ಇದೆ. ಪ್ರತಿಯೊಂದು ವರ್ಣದಲ್ಲಿ ಆಗುವ ಎಲ್ಲ ಕಾಗುಣಿತ ವ್ಯತ್ಯಾಸಗಳಿಗೂ ಒಂದೊಂದು ವಿಶೇಷ ಧ್ವನಿ, ಉಚ್ಚಾರ ಕ್ರಮವಿದೆ. ಆದುದರಿಂದ ಅಕ್ಷರಗಳನ್ನು ಬಿಡಿಬಿಡಿಯಾಗಿ ಕಲಿತು, ಅವುಗಳಿಗೆ ಸ್ವರಗಳನ್ನು ಜೋಡಿಸಲು ಕಲಿತು, ಎರಡು, ಮೂರು, ನಾಲ್ಕು ಅಕ್ಷರಗಳನ್ನು ಕೂಡಿಸಿ ಪದಗಳನ್ನಾಗಿ ಉಚ್ಚರಿಸಿ, ಕಾಗುಣಿತ, ಸಜಾತಿ–ವಿಜಾತಿ ಸಂಯುಕ್ತಾಕ್ಷರ ಮತ್ತು ಒತ್ತಕ್ಷರಗಳನ್ನು ತಿಳಿಸುವುದು ಅಕ್ಷರಮಾಲಾ ಪದ್ಧತಿಯಾಗಿದೆ.

ಈ ಪದ್ಧತಿಯು ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿರುವ ಪದ್ಧತಿಯಾಗಿದೆ. ವರ್ಣಗಳನ್ನು ಹಾಕಿಕೊಟ್ಟು ಅವುಗಳನ್ನು ಅನ್ನುತ್ತ ತಿದ್ದುವಂತೆ ಶಿಕ್ಷಕರು ಹೇಳುತ್ತಿದ್ದರು. ಅಕ್ಷರಗಳ ಪರಿಚಯದ ನಂತರ, ಶಿಕ್ಷಕರು ಹಾಕಿಕೊಟ್ಟ ಅಕ್ಷರಗಳನ್ನು ಅಳಿಸಿ ಮಗುವಿಗೆ ತಾನೇ ಸ್ವತಂತ್ರವಾಗಿ ಅಕ್ಷರಗಳನ್ನು ಅನ್ನುತ್ತ ಬರೆಯಲು ಹೇಳಲಾಗುತ್ತಿತ್ತು. ಇದೆಲ್ಲವನ್ನು ಮಗು ಹಲಗೆ ಬಳಪದಲ್ಲಿಯೇ ಕಲಿಯುತ್ತಿತ್ತು. ನಂತರ ಹಲಗೆಯಲ್ಲಿ ಅಥವಾ ರಟ್ಟಿನಲ್ಲಿ ಕೊರೆದ ಅಕ್ಷರಗಳನ್ನು ಓದುತ್ತಾ ಅವುಗಳ ಮೇಲೆ ಕೈಯಾಡಿಸಲು ಅವಕಾಶ ಮಾಡಿಕೊಡಲಾಗುತ್ತಿತ್ತು. ನಂತರ ಹಾಳೆಯ ಮೇಲೆ ಬರೆಯಲು

ಅವಕಾಶ ಮಾಡಿಕೊಡಲಾಗುತ್ತಿತ್ತು. ಈ ಪದ್ಧತಿಯಲ್ಲಿ ಕಣ್ಣು, ಕಿವಿ, ನಾಲಿಗೆ ಮೊದಲಾದ ಇಂದ್ರಿಯಗಳ ಮೇಳವಿರುತ್ತದೆ.

ಅನುಕೂಲಗಳು:

–ಈ ಪದ್ಧತಿಯು ಮಕ್ಕಳಿಗೆ ಪ್ರತಿಯೊಂದು ವರ್ಣಗಳನ್ನು ಮತ್ತು ಅವುಗಳ ಉಚ್ಚಾರಗಳನ್ನು ಖಚಿತವಾಗಿ ತಿಳಿಸಿಕೊಡುತ್ತದೆ.

–ಈ ಪದ್ಧತಿಯು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಪದ್ಧತಿಯಾಗಿದೆ. ಅನೇಕ ಜನರು ಈ ಪದ್ಧತಿಯಿಂದಲೇ ಓದನ್ನು ಕಲಿತಿರುವರು.

–ಈ ಪದ್ಧತಿಯಲ್ಲಿ ಉಪಾಧ್ಯಾಯರ ಕೆಲಸ ಸುಲಭ.

–ಓದನ್ನು ಬೋಧಿಸಲು ಹೆಚ್ಚು ಬೋಧನೋಪಕರಣಗಳು ಬೇಕಾಗಿರುವುದಿಲ್ಲ.

–ಅತೀ ಕಡಿಮೆ ವೆಚ್ಚದಲ್ಲಿ ಮಗುವಿಗೆ ಓದನ್ನು ಬೋಧಿಸಬಹುದು.

ಅನಾನುಕೂಲಗಳು:

–ಮನಃಶಾಸ್ತ್ರಜ್ಞರ ಪ್ರಕಾರ ಈ ಪದ್ಧತಿಯು ಅವೈಜ್ಞಾನಿಕ ಪದ್ಧತಿಯಾಗಿದೆ. ಮಗು ಪದಗಳನ್ನು ಇಡಿಯಾಗಿಯೇ ಕಲಿಯುತ್ತದೆಯೇ ವಿನಃ ಬಿಡಿ ಬಿಡಿಯಾಗಿ ಅಲ್ಲ. ಉದಾ: ಗುಲಾಬಿ ಹೂ ಎಂದಾಗ ಮಗುವಿನ ಕಣ್ಣೆದುರಿಗೆ ಬರುವುದು ಗುಲಾಬಿ ಹೂವಿನ ಸಂಪೂರ್ಣವಾದ ಆಕೃತಿಯೇ ಹೊರತು ಅದರ ದೇಟು, ಪಕಳೆಗಳು, ಬಣ್ಣ ಹೀಗೆ ಬಿಡಿ ಬಿಡಿಯಾಗಿ ಅಲ್ಲ.

–ಈ ಪದ್ಧತಿಯು ಜ್ಞಾಪಕಶಕ್ತಿಯನ್ನು ಹೆಚ್ಚಾಗಿ ಅವಲಂಬಿಸಿದೆ.

–ಅಕ್ಷರಗಳನ್ನು ಬಿಡಿ ಬಿಡಿಯಾಗಿ ಕಲಿಯುವುದರಿಂದ ಸ್ಮರಣೆಯಲ್ಲಿ ಉಳಿಯುವುದಿಲ್ಲ.

–ಅಕ್ಷರಗಳ ಕಲಿಕೆ ಯಾಂತ್ರಿಕವಾಗಿರುತ್ತದೆ ಮತ್ತು ನಿಧಾನವಾಗಿ ಸಾಗುತ್ತದೆ.

–ಈ ಪದ್ಧತಿಯು ಮಕ್ಕಳಿಗೆ ಓದುವಿಕೆಯಲ್ಲಿ ಆಸಕ್ತಿಯನ್ನುಂಟು ಮಾಡುವುದಿಲ್ಲ.

2. **ಪದಮಾಲಾ ಪದ್ಧತಿ:** ಮಕ್ಕಳಿಗೆ ಅಕ್ಷರಗಳನ್ನು ಅವುಗಳ ಧ್ವನಿ, ಸ್ವರಗಳನ್ನು ಪರಿಚಯಿಸುವುದರ ಬದಲಾಗಿ ಪದಗಳನ್ನು, ಪದಗಳ ಉಚ್ಚಾರಣೆ ಮತ್ತು ಅರ್ಥವನ್ನು ತಿಳಿಸಿಕೊಡುವುದೇ ಪದಮಾಲಾ ಪದ್ಧತಿಯಾಗಿದೆ. ಮಕ್ಕಳಿಗೆ ಈಗಾಗಲೇ ಗೊತ್ತಿರುವ ಪದಗಳ ಮೂಲಕ ಓದನ್ನು ಬೋಧಿಸಲಾಗುವುದು. ಮಕ್ಕಳಿಗೆ ಗೊತ್ತಿರುವ ಪದಗಳ ಪಟ್ಟಿ ಮಾಡಿ, ಆ ಪದಗಳಲ್ಲಿ ಬಂದಿರುವ ಸ್ವರ ಅಥವಾ ವ್ಯಂಜನಗಳ ಆದಿ–ಮಧ್ಯ–ಅಂತ್ಯಾಕ್ಷಗಳನ್ನು ಒಂದುಗೂಡಿಸಿ ಬೋಧಿಸಲಾಗುತ್ತದೆ. ಮೊದಲು ಸುಲಭ ಅಕ್ಷರಗಳು ನಂತರ ಒತ್ತಕ್ಷರ, ಸಂಯುಕ್ತಾಕ್ಷರ, ಸಜಾತಿ–ವಿಜಾತಿ ಸಂಯುಕ್ತಾಕ್ಷರಗಳನ್ನು ಬೋಧಿಸಬೇಕಾಗುತ್ತದೆ.

ಪದಮಾಲಾ ಪದ್ಧತಿಯಲ್ಲಿ ಓದುಗಾರಿಕೆಯನ್ನು ಕಲಿಸುವಾಗ ಮೊದಲು ನಿತ್ಯಜೀವನಕ್ಕೆ ಸಂಬಂಧಿಸಿದ ಸರಳ ಸುಲಭ ಪದಗಳನ್ನು ಪರಿಚಯಿಸಿ, ನಂತರ ಸಂಕೀರ್ಣ ಪದಗಳನ್ನು ಕಲಿಸಬೇಕು. ಪ್ರತಿಯೊಂದು ಪದವನ್ನು ಅರ್ಥಕ್ಕನುಗುಣವಾಗಿ ಉಚ್ಚರಿಸುವ ಕ್ರಮವನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು. ನಂತರ ಪ್ರತಿಯೊಂದು ಪದದಲ್ಲಿರುವ ಕಾಗುಣಿತಾಂಶಗಳನ್ನು ಪರಿಚಯ ಮಾಡಿಕೊಡಬೇಕು. ಸಾಕಷ್ಟು ಪದಗಳನ್ನು ಕಲಿತ ಮೇಲೆ ಓದುವುದನ್ನು ಪ್ರಾರಂಭಿಸಬೇಕು. ಈ

ಪದ್ಧತಿಯಲ್ಲಿ ಕಲಿಯುವ ಪ್ರತಿಯೊಂದು ಪದಕ್ಕು ಒಂದು ಅರ್ಥ ಇರುತ್ತದೆ. ಇಡೀ ಪದವನ್ನು ಒಟ್ಟಾಗಿ ಗ್ರಹಿಸುತ್ತಾ ಉಚ್ಚರಿಸುತ್ತಾರೆಯಾದುದರಿಂದ ಅಕ್ಷರಮಾಲಾ ಪದ್ಧತಿಗಿಂತ ಪದಮಾಲಾ ಪದ್ಧತಿ ಪರಿಣಾಮಕಾರಿಯಾಗಿದೆ.

ಅನುಕೂಲಗಳು:

–ಅರ್ಥಪೂರ್ಣವಾದ ಪದಗಳು ಇರುವುದರಿಂದ ಕಲಿಕೆ ಸುಲಭವಾಗುತ್ತದೆ.

–ಪದಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಗುರುತಿಸುವುದರಿಂದ ಮಾನಸಿಕ ಬೆಳವಣಿಗೆಗೆ ಸಹಾಯಕವಾಗುತ್ತದೆ.

–ಪದಗಳನ್ನು ಗುರುತಿಸಲು ಮಕ್ಕಳಿಗೆ ಸುಲಭವಾಗುತ್ತದೆ.

–ಅರ್ಥಯುಕ್ತ ಪದಗಳಿರುವುದರಿಂದ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಬೆಳೆಯುತ್ತದೆ.

ಅನಾನುಕೂಲಗಳು:

–ಈ ಪದ್ಧತಿಯು ಸಹ ಯಾಂತ್ರಿಕ ರೀತಿಯ ಕಲಿಕೆಗೆ ಅವಕಾಶ ಮಾಡಿಕೊಡುತ್ತದೆ.

–ಮಕ್ಕಳ ಅನುಭವಕ್ಕೆ ಬಂದಿರುವ ಪದಗಳನ್ನು ಪಟ್ಟಿ ಮಾಡಿ ಕಲಿಸುವುದು ಸುಲಭವಲ್ಲ.

–ಮಕ್ಕಳಿಗೆ ಗೊತ್ತಿರುವ ಪದಗಳು ಒತ್ತಕ್ಷರಗಳೇ ಆಗಿರುತ್ತವೆ. ಇದರಿಂದ ಮಕ್ಕಳಿಗೆ ಸುಲಭವಾದ ಪದಗಳನ್ನು ಕಲಿಸಲು ಸಾಧ್ಯವಾಗುವುದಿಲ್ಲ. ಉದಾ: ಅಪ್ಪ–ಅವ್ವ, ಅಜ್ಜ–ಅಜ್ಜಿ, ಅಣ್ಣ–ಅಕ್ಕ ಇತ್ಯಾದಿಗಳು.

–ಪುನರುಕ್ತಿಯೇ ಹೆಚ್ಚು ಇರುವುದರಿಂದ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಉಂಟಾಗುವುದಿಲ್ಲ.

3.ವಾಕ್ಯಮಾಲಾ ಪದ್ಧತಿ: ಈ ಪದ್ಧತಿಯು ಮನಃಶಾಸ್ತ್ರದ ಫಲವಾಗಿದೆ. ಈ ಪದ್ಧತಿಯಲ್ಲಿ ಒಂದೊಂದೆ ಅಕ್ಷರಗಳನ್ನು, ಒಂದೊಂದೆ ಪದಗಳನ್ನು ಹೇಳಿಕೊಡದೆ ಪೂರ್ಣವಾದ ಅರ್ಥವನ್ನು ಕೊಡುವ ಪದಗಳ ಸಹಾಯದಿಂದ ರಚಿತವಾದ ವಾಕ್ಯಗಳ ಮೂಲಕ ಓದನ್ನು ಬೋಧಿಸುವ ಪದ್ಧತಿಯೇ ವಾಕ್ಯಮಾಲಾ ಪದತಿ. ಓದುವುದು ಎಂದರೆ ಓದಿ ಅರ್ಥಮಾಡಿಕೊಳ್ಳುವುದು ಎಂದರ್ಥ. ಓದಿನಲ್ಲಿ ಅರ್ಥವು ಪ್ರಧಾನವಿರುವುದರಿಂದ ಓದುಗಾರಿಕೆಯನ್ನು ಅರ್ಥಪೂರ್ಣ ವಾಕ್ಯಗಳಿಂದಲೇ ಪ್ರಾರಂಭಿಸುವುದು ಸಮಂಜಸ. ಅರ್ಥಪೂರ್ಣ ವಾಕ್ಯಗಳನ್ನು ಮಕ್ಕಳಿಗೆ ಪರಿಚಯಿಸುತ್ತಾ ಓದು ಕಲಿಸುವುದೇ ವಾಕ್ಯಮಾಲಾ ಪದ್ಧತಿ.

ವಾಕ್ಯಮಾಲಾ ಪದ್ಧತಿಯಲ್ಲಿ ಮಕ್ಕಳು ಇಡೀ ವಾಕ್ಯವನ್ನು ಒಂದೇ ಬಾರಿ ಹೇಳುವುದರಿಂದ ಅವರ ಉಚ್ಚಾರ ಮತ್ತು ಸ್ವರಭಾರ ಉತ್ತಮವಾಗುತ್ತವೆ. ಮಗು ವಾಕ್ಯದಲ್ಲಿಯ ಭಾವ ಮತ್ತು ಅರ್ಥವನ್ನು ತಿಳಿದು ಓದುವುದರಿಂದ ಓದುಗಾರಿಕೆ ಪರಿಪೂರ್ಣವೆನಿಸುತ್ತದೆ. ಮಕ್ಕಳಿಗೆ ಪರಿಚಯವಿರುವ ವಿಷಯವನ್ನು ಚಿಕ್ಕ ಚಿಕ್ಕ, ಸರಳ ವಾಕ್ಯಗಳನ್ನು ರಚಿಸಿ ತನ್ಮೂಲಕ ಓದನ್ನು ಬೋಧಿಸಬೇಕು. ನಂತರ ಕ್ರಮೇಣ ಮಿಶ್ರ, ಸಂಕೀರ್ಣ, ದೊಡ್ಡ ವಾಕ್ಯಗಳ ರಚನಾ ಕ್ರಮಗಳನ್ನು ತಿಳಿಸಬೇಕು. ವಾಕ್ಯಮಾಲಾ ಪದ್ಧತಿಯು ಓದನ್ನು ಬೋಧಿಸಲು ಅತ್ಯುತ್ತಮವಾದ ಪದ್ಧತಿಯಾಗಿದೆ.

ಅನುಕೂಲಗಳು:

–ಸಂಪೂರ್ಣವಾಗಿ ಅರ್ಥಕೊಡುವ ವಾಕ್ಯಗಳ ಮೂಲಕ ಓದನ್ನು ಬೋಧಿಸುವುದರಿಂದ ಓದು ಪರಿಪೂರ್ಣ ಮತ್ತು ಅರ್ಥಪೂರ್ಣವೆನಿಸುತ್ತದೆ.

–ಮಕ್ಕಳಿಗೆ ಪರಿಚಯವಿರುವ ವಿಷಯವನ್ನೇ ಚಿಕ್ಕ ಚಿಕ್ಕ ವಾಕ್ಯಗಳನ್ನು ರಚಿಸಿ ಬೋಧಿಸುವುದರಿಂದ ಮಕ್ಕಳ ಓದು ಸುಲಭವಾಗುತ್ತದೆ.

–ಮನೋವೈಜ್ಞಾನಿಕ ಉತ್ತಮವಾದ ಪದ್ಧತಿಯಾಗಿರುತ್ತದೆ.

ಅನಾನುಕೂಲಗಳು:

–ಮಕ್ಕಳಿಗೆ ಪರಿಚಯವಿರುವ ವಿಷಯದಲ್ಲಿಯೇ ಚಿಕ್ಕ ಚಿಕ್ಕ ವಾಕ್ಯಗಳನ್ನು ರಚಿಸಿ ಬೋಧಿಸುವುದು ಸ್ವಲ್ಪ ಕಷ್ಟವೆನಿಸುತ್ತದೆ.

–ಕೇವಲ ವಾಕ್ಯಗಳನ್ನು ಬಾಯಿಪಾಠ ಮಾಡುತ್ತಾರೆ. ಆದರೆ ವಾಕ್ಯಗಳಲ್ಲಿ ಬಂದಿರುವ ಪದಗಳು ಮತ್ತು ಪದಗಳಲ್ಲಿರುವ ಅಕ್ಷರಗಳ ಪರಿಚಯ ಹೊಂದುವುದಿಲ್ಲ.

4.ನೋಡಿ ಹೇಳುವ ಪದ್ಧತಿ: ಮಾಂಟೆಸೋರಿ ಮತ್ತು ಫ್ರೋಬೆಲ್‌ನ ಬೋಧನಾ ಪದ್ಧತಿಗಳ ತತ್ವಗಳ ಆಧಾರದಿಂದ ಮೂಡಿಬಂದಿರುವ ಈ ಪದ್ಧತಿಯಲ್ಲಿ ಚಟುವಟಿಕೆಯ ಮೂಲಕ, ಕ್ರೀಡೆಗಳ ರೀತಿಯಲ್ಲಿ ಹಲವಾರು ಸಲಕರಣೆಗಳನ್ನು, ಬಣ್ಣದ ಚಾರ್ಟುಗಳನ್ನು ಉಪಯೋಗಿಸಿಕೊಂಡು ಓದುವುದನ್ನು ಕಲಿಸಲಾಗುವುದು. ಬಣ್ಣದ ಚಾರ್ಟುಗಳು, ಮಾದರೀ ವಾಕ್ಯಗಳ ಫಲಕಗಳು, ವಿವಿಧ ಉಪಕರಣಗಳ ಮೇಲೆ ಅವುಗಳ ಹೆಸರು, ಉಪಯೋಗ ಇತ್ಯಾದಿಗಳನ್ನು ಬರೆದಿರುವ ವಾಕ್ಯಗಳು, ಸಚಿತ್ರ ಪುಸ್ತಕಗಳು ಇದ್ದು ಈ ವಾಕ್ಯ ಫಲಕಗಳನ್ನು ನೋಡುತ್ತಾ ಅದರ ಕೆಳಗೆ ಇರುವ ವಾಕ್ಯಗಳನ್ನು ಓದುತ್ತಾರೆ. ಈ ಪದ್ಧತಿಯಲ್ಲಿ ಪರಸ್ಪರ ಸಂಬಂಧವಿರುವ ಚಿತ್ರಗಳನ್ನು ಹೊಂದಾಣಿಕೆ ಬರುವಂತೆ ಜೋಡಿಸಿ ಸಂಭಾಷಣೆಗಳನ್ನು ಓದಿಸಲಾಗುತ್ತದೆ.

ಪುಟಾಣಿ ಕತೆಗಳನ್ನು, ಸಂಭಾಷಣೆಗಳನ್ನು ಈ ರೀತಿ ಸಚಿತ್ರ ಪುಸ್ತಕಗಳಲ್ಲಿ ಅಳವಡಿಸುವುದರಿಂದ ಮಕ್ಕಳು ಚಿತ್ರಗಳನ್ನು ನೋಡುತ್ತಾ ಪೂರ್ಣ ಅರ್ಥಗ್ರಹಿಸುತ್ತಾ ಓದನ್ನು ಕಲಿಯುತ್ತಾರೆ. ತರಗತಿಯಲ್ಲಿ ವಿವಿಧ ಸರಳ ಸಂಭಾಷಣೆಗಳು ಮತ್ತು ಕತೆಗಳು ಇರುವ ಸಚಿತ್ರ ಚಾರ್ಟುಗಳನ್ನು ಮಕ್ಕಳು ಗಮನಿಸುವಂತೆ ಪ್ರದರ್ಶಿಸಿದರೆ ಮಕ್ಕಳು ಈ ಚಿತ್ರಪಟಗಳನ್ನು ನೋಡುತ್ತಾ ಸ್ವಯಂ ಓದುವುದನ್ನು ಕಲಿಯಲು ಪ್ರಯತ್ನಿಸುತ್ತಾರೆ.

ಅನುಕೂಲಗಳು:

–ಕ್ರೀಡಾ ಪದ್ಧತಿಯನ್ನು ಅನುಸರಿಸಿ ಪಾಠಮಾಡುವ ಕ್ರಮಕ್ಕೆ ಇದು ಸರಿಯಾದ ಪದ್ಧತಿಯಾಗಿರುತ್ತದೆ,

–ಮಕ್ಕಳ ಮನಸ್ಸಿನ ಮೇಲೆ ಇಡಿ ಶಬ್ದಗಳ ಚಿತ್ರಗಳು ನಿಲ್ಲುತ್ತವೆ.

–ಮಕ್ಕಳು ಬಿಡಿ ಬಿಡಿಯಾಗಿ ಅರ್ಥವಿಲ್ಲದ ಪದಗಳನ್ನು ಓದುವುದು ತಪ್ಪುತ್ತವೆ.

–ಅರ್ಥಪೂರ್ಣವಾದ ಪದಗಳನ್ನು ಮಗು ಬೇಗನೆ ಕಲಿಯುತ್ತದೆ.

–ಸುಲಭವಾದ ಸಂಭಾಷಣೆಯ ಮೂಲಕ ಮಕ್ಕಳು ಓದನ್ನು ಕಲಿಯುವರು.

ಅನಾನುಕೂಲಗಳು:

–ಚಿತ್ರಗಳ ಸಂಗ್ರಹಣೆಗೆ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

–ಮಕ್ಕಳ ಮನಸ್ಸಿನ ಮೇಲೆ ಚಿತ್ರಗಳೇ ನಿಲ್ಲುತ್ತವೆ ಹೊರತು, ಆ ಚಿತ್ರಗಳಿಗೆ ಸಂಬಂಧಿಸಿದ ಪದಗಳು ಮತ್ತು ಪದಗಳಿಗೆ ಸಂಬಂಧಿಸಿದ ಅಕ್ಷರಗಳಲ್ಲ.

–ಈ ಪದ್ಧತಿಯು ಬಾಯಿಪಾಠಕ್ಕೆ ಅವಕಾಶ ಮಾಡಿಕೊಡುತ್ತದೆ.
ಮಕ್ಕಳು ಕೇವಲ ಚಿತ್ರಗಳನ್ನು ನೋಡಿ ಓಡುವುದರಿಂದ ಮಕ್ಕಳಿಗೆ ಪದಗಳು ಮತ್ತು ಅಕ್ಷರಗಳ ಪರಿಚಯವಾಗುವುದಿಲ್ಲ.

5.ಕಥಾ ಪದ್ಧತಿ: ಕಥೆಯು ಒಂದು ಭಾವನಾ ರೂಪದ ಜೀವಂತ ಬರಹವಾಗಿದ್ದು ಮಕ್ಕಳ ಮಟ್ಟಕ್ಕೆ ಅನುಗುಣವಾದ ಆಕರ್ಷಕ ಕಥೆಗಳನ್ನು ಸರಳ ಭಾಷೆಯಲ್ಲಿ ಪುಟ್ಟ ಪುಟ್ಟ ವಾಕ್ಯಗಳಲ್ಲಿ ರಚಿಸಿ, ಮುದ್ರಿಸಿದ ಕಥೆಗಳನ್ನು ಸಂಭಾಷಣೆಯ ರೀತಿ ಹೇಳುತ್ತಾ ಓದಿದರೆ ಮಕ್ಕಳು ಅನುಕರಣೆ ಮಾಡುತ್ತಾ ಓದುವುದನ್ನು ಕಲಿಯುತ್ತಾರೆ. ಈ ಪದ್ಧತಿಯಲ್ಲಿ ಸ್ವರಬಾರ, ಧ್ವನಿ ಏರಿಳಿತ, ಉಚ್ಚಾರ ಕ್ರಮವನ್ನು ಸರಿಯಾಗಿ ಕಲಿಸಬಹುದು. ಪ್ರಾರಂಭಿಸುವಾಗ ಸಚಿತ್ರ ಕಥೆಗಳನ್ನು ಪರಿಚಯಿಸಬೇಕು. ಕಥೆಗೆ ಸಂಬಂಧಿಸಿದಂತೆ ಅನುಕ್ರಮವಾಗಿ ಚಿತ್ರಗಳು ಜೋಡಿಸಲ್ಪಟ್ಟಿದ್ದು ಅಯಾ ಚಿತ್ರಗಳ ಕೆಳಗೆ ಸರಳ ವಾಕ್ಯಗಳಲ್ಲಿ ವಿಷಯಗಳನ್ನು ಬರೆಯಲಾಗಿರುತ್ತದೆ. ಮಕ್ಕಳು ಚಿತ್ರಗಳನ್ನು ನೋಡುತ್ತಾ ಸುಲಭವಾಗಿ ಓದುವುದನ್ನು ಕಲಿಯುತ್ತಾರೆ.

ಈ ಪದ್ಧತಿಯು ಸಾಮಾನ್ಯವಾಗಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಇದರಲ್ಲಿ ಮನಃಶಾಸ್ತ್ರದ ಸೂತ್ರ ಮತ್ತು ನುಡಿ ಬೆಳವಣಿಗೆಯ ರೀತಿ ಸಮಾಗಮ ಹೊಂದಿರುತ್ತದೆ. ಮಕ್ಕಳು ಪದಗಳನ್ನು ಗುರುತಿಸಿ, ಆ ತರದ ಅಕ್ಷರಗಳನ್ನು ಗುರುತು ಮಾಡಿಕೊಂಡು, ಸ್ವರ ತಿಳಿದು ನಂತರ ಓದಲು ಪ್ರಾರಂಭಿಸುವರು. ಕಥೆಯ ಮೂಲಕ ಓದು ಸಾಗುವುದರಿಂದ ಮಕ್ಕಳಿಗೆ ಇಷ್ಟವಾದ ಪದ್ಧತಿಯಾಗಿದೆ.

ಅನುಕೂಲಗಳು:

–ಅರ್ಥಪೂರ್ಣವಾದ ಕಥೆಯ ಮೂಲಕ ಓದು ಸಾಗುವುದರಿಂದ ಮಕ್ಕಳಿಗೆ ಓದಿನಲ್ಲಿ ಆಸಕ್ತಿಯುಂಟಾಗುತ್ತದೆ ಮತ್ತು ಸುಲಭವೆನಿಸುತ್ತದೆ.
–ಪುಸ್ತಕಗಳಲ್ಲಿ ಕಥೆಗೆ ಸಂಬಂಧಿಸಿದ ಚಿತ್ರಗಳು ಇರುವುದರಿಂದ ಗ್ರಹಿಕೆ ಬಲಗೊಳ್ಳುತ್ತದೆ.
–ಒಂದು ವಾಕ್ಯಕ್ಕೂ ಮತ್ತೊಂದು ವಾಕ್ಯಕ್ಕೂ ಸಂಬಂಧವಿರುವುದರಿಂದ ಓದಿನಲ್ಲಿ ಸಮಗ್ರತೆಯುಂಟಾಗುತ್ತದೆ.
–ಮಕ್ಕಳ ಬೌದ್ಧಿಕ ವಿಕಾಸಕ್ಕೆ ಈ ಓದು ಸಹಾಯಕವಾಗುತ್ತದೆ.

ಅನಾನುಕೂಲಗಳು:

–ಈ ಪದ್ಧತಿಯು ಗಿಳಿಪಾಠದಿಂದ ಮುಕ್ತವಾಗಿಲ್ಲ.
–ವಾಕ್ಯಗಳಲ್ಲಿ ಬರುವ ಒತ್ತಕ್ಷರ ಮತ್ತು ಸಂಯುಕ್ತಾಕ್ಷರಗಳು ಓದಿನಲ್ಲಿ ತಡೆಯನ್ನುಂಟು ಮಾಡುತ್ತವೆ.
–ಸಚಿತ್ರ ಪುಸ್ತಕಗಳಿಗೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ.

ಸಂಯೋಜಿತ ಪದ್ಧತಿ: ಮೇಲೆ ಚರ್ಚಿಸಿದ ಯಾವ ಓದು ಬೋಧನಾ ವಿಧಾನಗಳು ದೋಷಮುಕ್ತವಾಗಿರುವುದಿಲ್ಲ. ಆದರೆ ಪ್ರತಿಯೊಂದು ಪದ್ಧತಿಯು ತನ್ನದೇ ಆದ ವಿಶೇಷ ಗುಣಲಕ್ಷಣಗಳನ್ನು ಹೊಂದಿರುತ್ತವೆ. ಮಕ್ಕಳಲ್ಲಿ ಪ್ರತಿಯೊಂದು ಪದ್ಧತಿಯು ವಿಶಿಷ್ಟ ಸಾಮರ್ಥ್ಯವನ್ನು ಬೆಳೆಸುವಲ್ಲಿ ಸಹಾಯಕವಾಗಿವೆ. ವರ್ಣಮಾಲಾ ಪದ್ಧತಿಯ ಮೂಲಕ ಮಕ್ಕಳು ಅಕ್ಷರಗಳ ಸ್ಪಷ್ಟವಾದ

ಉಚ್ಚಾರವನ್ನು ಕರಗತ ಮಾಡಿಕೊಳ್ಳುವರು. ಇದರಿಂದ ಓದುಗಾರಿಕೆ ಮತ್ತು ಬರವಣಿಗೆ ಯಲ್ಲಿ ದೋಷಗಳು ಕಡಿಮೆಯಾಗುತ್ತವೆ. ಶಿಕ್ಷಕರು ಪ್ರತಿಯೊಂದು ಪದ್ಧತಿಯ ಗುಣಗಳು ಮತ್ತು ಇತಿಮಿತಿಗಳನ್ನು ಅರಿತುಕೊಂಡು, ಪ್ರತಿಯೊಂದು ಪದ್ಧತಿಯ ಕೇವಲ ಗುಣಗಳನ್ನು ತೆಗೆದುಕೊಂಡು ಅವುಗಳನ್ನು ಸಂಯೋಜಿಸಿ, ತಮ್ಮದೇ ಆದ ರೀತಿಯಲ್ಲಿ ಓದನ್ನು ಮಕ್ಕಳಿಗೆ ಬೋಧಿಸಬೇಕು. ಈ ರೀತಿಯ ಓದುಗಾರಿಕೆಯೇ ಸಂಯೋಜಿತ ಪದ್ಧತಿಯಾಗಿದೆ. ಶಿಕ್ಷಕ ಯಾವುದೇ ಪದ್ಧತಿಯ ಮೂಲಕ ಮಕ್ಕಳಿಗೆ ಓದನ್ನು ಬೋಧಿಸಿದರೂ ಮಕ್ಕಳ ವಯೋಮಾನ ಮತ್ತು ಕಲಿಕಾ ಪರಿಸರಕ್ಕೆ ಉಪಯುಕ್ತವಾದ ಪದ್ಧತಿಯನ್ನು ಬಳಸುವ ಸಮನ್ವಯ ದೃಷ್ಟಿಯನ್ನು ಕನ್ನಡ ಭಾಷಾ ಶಿಕ್ಷಕರು ಬೆಳೆಸಿಕೊಳ್ಳಬೇಕು.

ಸಾಮಾನ್ಯವಾಗಿ ಸಂಯೋಜಿತ ಪದ್ಧತಿಯಲ್ಲಿ ಓದು ಬೋಧಿಸುವ ಎಲ್ಲ ಬೋಧನಾ ಪದ್ಧತಿಗಳ ಗುಣಗಳನ್ನು ಒಳಗೊಂಡಿರುತ್ತದೆ. ಶಿಕ್ಷಕರು ಕಥಾ ಪದ್ಧತಿಯ ಮೂಲಕ ಮಕ್ಕಳಿಗೆ ಓದನ್ನು ಬೋಧಿಸುವಾಗ ವಾಕ್ಯಪದ್ಧತಿಯಲ್ಲಿ ಬೋಧಿಸುವಂತೆ ವಾಕ್ಯಗಳನ್ನು ಉಪಯೋಗಿಸಿಕೊಂಡು ಮಕ್ಕಳಿಗೆ ಓದನ್ನು ಬೋಧಿಸಲಾಗುತ್ತದೆ. ವಾಕ್ಯಗಳಲ್ಲಿ ಬಂದಿರುವ ಪದಗಳನ್ನು ಪದಮಾಲಾ ಪದ್ಧತಿಯಂತೆ ಪದಗಳ ಪಟ್ಟಿಮಾಡಿ ಓದು ಬೋಧಿಸಲಾಗುತ್ತದೆ. ನೋಡಿ ಹೇಳುವ ಪದ್ಧತಿಯಂತೆ ಪ್ರತಿಯೊಂದು ಪದಕ್ಕೂ ಸಂಬಂಧಿಸಿದ ಚಿತ್ರಗಳ ಅಡಿಯಲ್ಲಿ ಸಂಬಂಧಿಸಿದ ಪದಗಲನ್ನು ಬರೆದು ಇವೇನೆಂದು ಕೇಳಿ ನೋಡಿ ಹೇಳುವಂತೆ ಮಾಡಲಾಗುತ್ತದೆ. ಪ್ರತಿಯೊಂದು ಪದಗಳಲ್ಲಿ ಬಂದಿರುವ ವರ್ಣಗಳನ್ನು ಅಕ್ಷರಮಾಲಾ ಪದ್ಧತಿಯಂತೆ ಒಂದೊಂದು ವರ್ಣಗಳನ್ನು ಪರಿಚಯಿಸಲಾಗುತ್ತದೆ. ಆಯಾ ವರ್ಣಗಳನ್ನು ಉಚ್ಚರಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಹೀಗೆ ಓದು ಬೋಧಿಸುವ ಎಲ್ಲ ವಿಧಾನಗಳ ಗುಣಗಳನ್ನು ಮಾತ್ರ ಸಂಯೋಜಿಸಿ ಕನ್ನಡ ಭಾಷಾ ಶಿಕ್ಷಕರು ಮಕ್ಕಳಿಗೆ ಕನ್ನಡವನ್ನು ಓದಲು ಬೋಧಿಸಬೇಕು.

ಓದಿನ ವಿಧಗಳು: ಓದುಗಾರಿಕೆಯಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. 1. ಗಟ್ಟಿ ವಾಚನ ಅಥವಾ ಮೌಖಿಕ ವಾಚನ. 2. ಮೌನ ವಾಚನ ಎಂದು. ಮೌನ ವಾಚನದಲ್ಲಿ ಹಲವು ರೀತಿಯ ವಾಚನ ವಿಧಾನಗಳಿವೆ. ಆಳವಾದ ವಾಚನ, ವಿಶಾಲ ವಾಚನ, ಸ್ಥೂಲ ವಾಚನ, ಸೂಕ್ಷ್ಮ ವಾಚನ, ಶೀಘ್ರ ವಾಚನ, ವಿಮರ್ಶಾತ್ಮಕ ವಾಚನ, ಸೃಜನಶೀಲ ವಾಚನ ಎಂದು.

1. ಗಟ್ಟಿ ವಾಚನ ಅಥವಾ ಮೌಖಿಕ ವಾಚನ:

ಓದುಗಾರಿಕೆ ಕೌಶಲ್ಯದ ಬೆಳವಣಿಗೆಯಲ್ಲಿ ಗಟ್ಟಿ ಓದು ಅಥವಾ ಮೌಖಿಕ ಓದು ಅತ್ಯಂತ ಮಹತ್ವದ್ದಾಗಿದೆ. ಈ ಓದಿನಿಂದ ಮಕ್ಕಳಲ್ಲಿ ಭಾಷೆಗೆ ಮುಖ್ಯವಾದ ಮೌಖಿಕ ಅಭಿವ್ಯಕ್ತಿ ಕಲೆ ಬೆಳೆಯುತ್ತದೆ. ಈ ಓದಿನಲ್ಲಿ ವಾಕ್ಯಗಳ ಸ್ಪಷ್ಟ ಉಚ್ಚಾರ, ನಿರರ್ಗಳತೆ, ಧ್ವನಿಯ ಏರಿಳಿತಗಳು ಒಳಗೊಂಡಿರುತ್ತವೆ. ಈ ವಾಚನ ಕ್ರಿಯೆಯಲ್ಲಿ ಶಿಷ್ಟವಾದ ಮಾತಿನ ರೀತಿಯನ್ನು ಅನುಸರಿಸಲಾಗುತ್ತದೆ.

ವಾಕ್ಯಗಳನ್ನು ಗಟ್ಟಿಯಾಗಿ ಶಬ್ದದೊಂದಿಗೆ ಬೇರೆಯವರಿಗೆ ಕೇಳುವಂತೆ ಓದುವುದೇ ಗಟ್ಟಿವಾಚನ. ಲಿಖಿತ ಅಥವಾ ಮುದ್ರಿತ ಪದ ವಾಕ್ಯಗಳನ್ನು ನೋಡುತ್ತಾ ಸಂಯೋಜಿಸಿಕೊಂಡು ಅರ್ಥಮಾಡಿಕೊಳ್ಳುತ್ತಾ ಅಗತ್ಯ ಧ್ವನಿ ಏರಿಳಿತಗಳೊಂದಿಗೆ ಓದುವ ಕ್ರಿಯೆಯೇ ಗಟ್ಟಿವಾಚನ. ಶಬ್ಧ

ಪ್ರಧಾನವಾಗಿರುವ ಗಟ್ಟಿವಾಚನದಲ್ಲಿ ವಾಕ್ಯಗಳ ಸುಸ್ಪಷ್ಟ ಉಚ್ಚಾರ, ನಿರರ್ಗಳತೆ ಮತ್ತು ಧ್ವನಿ ಏರಿಳಿತಗಳು ಒಳಗೊಂಡಿರುತ್ತವೆ. ಗಟ್ಟಿವಾಚನ ಕ್ರಿಯೆಯಲ್ಲಿ ಕಣ್ಣು, ಮನಸ್ಸು ಮತ್ತು ಧ್ವನ್ಯಂಗಗಳು ಸಮನ್ವಯಗೊಂಡು ಕೆಲಸ ಮಾಡುತ್ತವೆ. ಗಟ್ಟಿವಾಚನ ಅಭ್ಯಾಸದಿಂದ ಸ್ಪಷ್ಟವಾದ ಉಚ್ಚಾರ, ಧ್ವನಿಯ ಏರಿಳಿತ, ವ್ಯಾಕರಣಬದ್ಧ ಹಾಗೂ ನಿರರ್ಗಳ ಮಾತುಗಾರಿಕೆಯ ಸಾಮರ್ಥ್ಯ ಬೆಳೆಯುತ್ತದೆ. ಮಕ್ಕಳನ್ನು ಗಟ್ಟಿವಾಚನದಲ್ಲಿ ಪಳಗಿಸಿದರೆ ಮುಂದೆ ಭಾವೀ ಜೀವನದಲ್ಲಿ ವರದಿ ವಾಚನ, ಲಿಖಿತ ಭಾಷಣ, ಚರ್ಚೆ, ಸುದ್ದಿ ಪ್ರಸಾರ, ಉತ್ತಮ ಮಾತುಗಾರಿಕೆ ಮಾಡಲು ಸಮರ್ಥರಾಗುವರು.

ಗುಣಲಕ್ಷಣಗಳು: ಯಾಜ್ಞವಲ್ಕ್ಯರು ತಮ್ಮ ಸ್ಮೃತಿಯಲ್ಲಿ ಮೌಖಿಕ ವಾಚನದ 6 ಗುಣಲಕ್ಷಣಗಳನ್ನು ಈ ರಿತಿಯಾಗಿ ಹೇಳಿದ್ದಾರೆ;

"ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು।
ಧೈರ್ಯಂ ಲಯಸಮರ್ಥಂ ಚ ಷಡೇತೇ ಪಾಠಕಾಃ ಗುಣಾಃ॥"–

* ಮಧುರತೆಯಿಂದ ಕೂಡಿರಬೇಕು.
* ಅಕ್ಷರ, ಪದಗಳ ಸ್ಪಷ್ಟ ಉಚ್ಚಾರದಿಂದ ಕೂಡಿರಬೇಕು.
* ಪದಗಳನ್ನು ಉಚಿತವಾಗಿ ವಿಭಜಿಸಿ ಶಬ್ಧಸಮೂಹಗಳಲ್ಲಿ ಸಂಯೋಜಿಸಿ ಓದುವುದು.
* ಸುಂದರ ಮತ್ತು ಶುದ್ಧ ಸ್ವರದಿಂದ ಓದುವುದು.
* ಧೈರ್ಯದಿಂದ ಆತ್ಮವಿಶ್ವಾಸದಿಂದ ಓದುವುದು.
* ಉಚಿತ ಧ್ವನಿಯ ಏರಿಳಿತಗಳೊಂದಿಗೆ ಓದುವುದು.

–ಗಂಭೀರವಾಗಿ ನಿಂತು ಪುಸ್ತಕವನ್ನು ಸರಿಯಾದ ಅಂತರದಲ್ಲಿ, ಕ್ರಮದಲ್ಲಿ ಹಿಡಿದು ಓದುವುದು.
–ಮಾನಸಿಕ ಸಿದ್ಧತೆಯಿಂದ, ಆಸಕ್ತಿಯಿಂದ, ಉತ್ಸಾಹದಿಂದ ಓದುವುದು.
–ಪದಗಳು ಮತ್ತು ವಾಕ್ಯಗಳನ್ನು ಸುಸ್ಪಷ್ಟ ಉಚ್ಚಾರದೊಂದಿಗೆ ಓದುವುದು.
–ಬಿಡಿಬಿಡಿಯಾಗಿ ಓದದೆ ಪದಗಳು, ವಾಕ್ಯವನ್ನು ಸಂಯೋಜಿಸಿ ಓದುವುದು.
–ವಿಷಯಕ್ಕನುಗುಣವಾಗಿ ಧ್ವನಿ ಏರಿಳಿತಗಳನ್ನು ಅಳವಡಿಸುವುದು.
–ಕಾಗುಣಿತಾಂಶಗಳನ್ನು ಹಾಗೂ ಲೇಖನ ಚಿಹ್ನೆಗಳನ್ನು ಅಳವಡಿಸಿಕೊಂಡು ಓದುವುದು.
–ವಾಕ್ಯ ಹಾಗೂ ವಾಕ್ಯವೃಂದದಲ್ಲಿ ನಿಲುಗಡೆಯ ಸ್ಥಳಗಳನ್ನು ಅನುಸರಿಸಿ ಓದುವುದು.
–ಸಹಜವಾಗಿ, ಸೂಕ್ಷ್ಮವಾಗಿಕಣ್ಚಾಲನೆಯೊಂದಿಗೆ ಓದುವುದು.
–ಒತ್ತು ಕೊಡುವ ಮುಖ್ಯಾಂಶಗಳು, ಹೇಳಿಕೆಗಳನ್ನು, ನುಡಿಮುತ್ತುಗಳನ್ನು ವಿಶೇಷ ಒತ್ತು ಕೊಟ್ಟು ಓದಬೇಕು.
–ಅಕ್ಷರಗಳು, ಪದಗಳನ್ನು ನುಂಗದೆ ಸಹಜವಾಗಿ ಓದುವುದು.
–ಅಲ್ಪಪ್ರಾಣ, ಮಹಾಪ್ರಾಣ, ಅರ್ಧಕ್ಷರ, ಒತ್ತಕ್ಷರ ಮತ್ತು ಸಂಯುಕ್ತಾಕ್ಷರಗಳನ್ನು ಸರಿಯಾಗಿ ಅರ್ಥಕೆಡದಂತೆ ಓದುವುದು.
–ಹಿಮ್ಮರಳುವಿಕೆ ಇಲ್ಲದೆ ಓದುವುದು.
–ಅಗತ್ಯ ಧ್ವನಿ ಮತ್ತು ಸೂಕ್ತ ವೇಗದಲ್ಲಿ ಓದುವುದು.
–ಓದುತ್ತಾ ಅರ್ಥಗ್ರಹಿಸುವುದು.

–ಕೇಳುವವರ ಪ್ರತಿಕ್ರಿಯೆ ಗಮನಿಸುತ್ತಾ ಓದುವುದು.
–ಓದುತ್ತಾ ಮುಖಭಾವಗಳನ್ನು ವ್ಯಕ್ತಪಡಿಸುವುದು.
–ಆತ್ಮವಿಶ್ವಾಸದಿಂದ ಧೈರ್ಯವಾಗಿ ಓದುವುದು.
–ಶ್ರೋತೃಗಳ ಪ್ರತಿಕ್ರಿಯೆ ಗಮನಿಸುತ್ತಾ ಓದುವುದು.

ಗಟ್ಟಿವಾಚನದಲ್ಲಿನ ದೋಷಗಳು: ಯಾಜ್ಞವಲ್ಕ್ಯರು ವಾಚನ ಕಲೆಯ ಕುರಿತಾಗಿ ವಿವೇಚನೆ ಮಾಡುವಾಗ ವಾಚನದ ದೋಷಗಳನ್ನು ಸಹ ಉಲ್ಲೇಖಿಸಿದ್ದಾರೆ.

"ಶಂಕಿತಂ ಭೀತಮುದಘುಷ್ಟಮವ್ಯಕ್ತಮನುನಾಸಿಕಮ್।
ಕಾಕಸ್ವರಂ ಮೂರ್ಧ್ನಿ ಗತಂ ತಥಾ ಸ್ಥಾನವಿವರ್ಜಿತಮ್॥
ವಿಸ್ವರಂ ವಿರಸಂ ಚೈವ ವಿಶ್ಲಿಷ್ಟಂ ವಿಷಮಾಹತಂ।
ವ್ಯಾಕುಲಂ ತಾಲುಹೀನಂ ಚ ಪಾಠದೋಷಾಶ್ಚತುರ್ದಶ॥"

*ವಾಚನದ ಸಂದರ್ಭದಲ್ಲಿ ಅನುಮಾನ ಪಡುವುದು. ಅಂದರೆ ಮಾನಸಿಕ ಸಿದ್ಧತೆಯಿಲ್ಲದೇ, ಅನಾಸಕ್ತಿಯಿಂದ, ಆತ್ಮವಿಶ್ವಾಸವಿಲ್ಲದೇ ಓದುವುದು.
*ಭಯಭೀತರಾಗಿ ಓದುವುದು.
*ಜೋರಾಗಿ ಒದರಿ ಓದುವುದು. ಸೂಕ್ತಸ್ವರ, ವೇಗದ ಕಲ್ಪನೆಯಿಲ್ಲದೇ ಓದುವುದು.
*ಸ್ಪಷ್ಟತೆಯಿಲ್ಲದೇ ಅಸ್ಪಷ್ಟವಾದ ಉಚ್ಚಾರ ಕ್ರಮದಿಂದ ಓದುವುದು.
*ಅನುನಾಸಿಕ ಧ್ವನಿ ತೆಗೆದು ಓದುವುದು.
*ಕಾಗೆಗಳ ರೀತಿಯಲ್ಲಿ ಕರ್ಣಕಠೋರ ಸ್ವರ ತೆಗೆದು ಓದುವುದು. ಕೇಳುಗರಿಗೆ ಕೇಳಲು ಅಸಾಧ್ಯವಾದ ರೀತಿಯಲ್ಲಿ ಓದುವುದು.
*ತಲೆ ಅಲ್ಲಾಡಿಸುತ್ತಾ ಓದುವುದು.
* ಸೂಕ್ತ ನಿಲುಗಡೆ ಇಲ್ಲದೆ ಓದುವುದು.
* ಸೂಕ್ತ ಸ್ವರವಿಲ್ಲದೇ (ಸುಸ್ವರ) ಓದುವುದು.
* ಅನಾಸಕ್ತಿಯಿಂದ ನೀರಸವಾಗಿ ಓದುವುದು.
* ವ್ಯಾಕುಲತೆಯಿಂದ ಓದುವುದು.
* ಸ್ವರಹೀನನಂತೆ ಓದುವುದು.

–ಗಂಭೀರವಾಗಿ ನಿಂತುಕೊಳ್ಳದೇ ಓದುವುದು, ಮಾನಸಿಕ ಸಿದ್ಧತೆಯಿಲ್ಲದೆ ನಿರಾಸಕ್ತಿಯಿಂದ ಓದುವುದು.
–ಪುಸ್ತಕವನ್ನು ಕಣ್ಣಿಗೆ ಸರಿಯಾದ ಅಂತರದಲ್ಲಿ ಹಿಡಿಯದಿರುವುದು.
–ಸಾಲುಗಳ ಮೇಲೆ ಬೆರಳಿಟ್ಟು ಓದುವುದು, ತಲೆದೂಗುತ್ತಾ ಓದುವುದು.
–ಕಣ್ಚಾಲನೆ ಸೂಕ್ಷ್ಮವಾಗಿ ಹರಿಸದೆ ಎರಡು ಸಾಲುಗಳ ನಡುವೆ ಹರಿಸುವುದು, ಮತ್ತೆ ಮತ್ತೆ ಓದಿದ ಸಾಲನ್ನೇ ಓದುವುದು.

–ಅಕ್ಷರ ಮತ್ತು ಪದಗಳನ್ನು ಬಿಡಿಸಿ ಬಿಡಿಸಿ ಓದುವುದು, ಮತ್ತು ನಿರರ್ಗಳವಾಗಿ ಓದದೆ ತಡವರಿಸುವುದು.

–ಅಕ್ಷರ ಅಥವಾ ಪದಗಳನ್ನು ನುಂಗುತ್ತಾ ಓದುವುದು ಮತ್ತು ಅಸ್ಪಷ್ಟವಾದ ಉಚ್ಚಾರ ಕ್ರಮ.

–ಅರ್ಥಕ್ಕನುಗುಣವಾಗಿ ಧ್ವನಿಯ ಏರಿಳಿತಗಳನ್ನು ಅಳವಡಿಸಿಕೊಳ್ಳದಿರುವುದು.

–ಕಾಗುಣಿತಾಂಶಗಳನ್ನು ಮತ್ತು ಲೇಖನ ಚಿಹ್ನೆಗಳನ್ನು ಅಳವಡಿಸಿಕೊಳ್ಳದೆ ಓದುವುದು.

–ಅಪರಿಚಿತ ಮತ್ತು ಕಠಿಣ ಪದಗಳನ್ನು ಕಣ್ಣು ತಪ್ಪಿಸಿ ಅಥವಾ ಮುದ್ದಾಮ ಬಿಟ್ಟು ಓದುವುದು.

–ಓದುವಾಗ ಹಾ... ಆ... ಎಂದು ರಾಗ ಎಳೆಯುವುದು.

–ದೊಡ್ಡ ಪದಗಳನ್ನು ವಿಭಜಿಸಿ ಓದುವುದು, ಕೆಲವು ಪದಗಳನ್ನು ಎರಡೆರಡು ಬಾರಿ ಓದುವುದು.

–ವಾಕ್ಯದ ಅರ್ಥಗ್ರಹಿಸದೆ ಯಾಂತ್ರಿಕವಾಗಿ ಓದುವುದು ಮತ್ತು ಓದುವಾಗ ಹಿಮ್ಮರಳುವಿಕೆ ಸಂಭವಿಸುವುದು. ಇತ್ಯಾದಿ,

ಗಟ್ಟಿವಾಚನದಲ್ಲಿನ ದೋಷಗಳಿಗೆ ಪರಿಹಾರಗಳು:

–ಉತ್ತಮವಾಗಿ ಮೌಖಿಕ ವಾಚನ ಮಾಡುವ ಕುರಿತು ಪ್ರಾರಂಭದಲ್ಲಿ ಮಗುವಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕು.

–ಓದಲು ಪ್ರೇರೇಪಿಸಿ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಮೂಡಿಸಬೇಕು.

–ಮೌಖಿಕ ವಾಚನದ ಗುಣಲಕ್ಷಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮೌಖಿಕ ವಾಚನದ ಶಿಷ್ಟಾಚಾರಗಳ ಕುರಿತು ತಿಳುವಳಿಕೆ ನೀಡಬೇಕು.

–ಸೂಕ್ತ ಕಣ್ಚಾಲನೆ ಮತ್ತು ಕಣ್ಣಿನ ಸ್ಥಿರೀಕರಣದ ಕ್ರಮದ ಕುರಿತು ರೂಢಿಸಬೇಕು.

– ಪದ ಮತ್ತು ವಾಕ್ಯಗಳ ಸ್ಪಷ್ಟ ಉಚ್ಚಾರವನ್ನು ಅಭ್ಯಾಸ ಮಾಡಿಸಬೇಕು.

–ಅರ್ಥಕ್ಕೆ ಹೊಂದುವಂತೆ ಧ್ವನಿಯ ಏರಿಳಿತಗಳನ್ನು ಅಳವಡಿಸಿ ಓದುವ ಅಭ್ಯಾಸ ಮಾಡಿಸುವುದು.

–ಲೇಖನ ಚಿಹ್ನೆಗಳನ್ನು ತಿಳಿಸಿ ಅವುಗಳನ್ನು ಗಮನಿಸಿ, ನಿಲುಗಡೆ ತಾಣಗಳನ್ನು ಅನುಸರಿಸಿ ಓದುವ ಅಭ್ಯಾಸ ಮಾಡಿಸುವುದು.

–ವಾಕ್ಯಗಳನ್ನು ಸಂಯೋಜಿಸಿ ಓದುವ ಅಭ್ಯಾಸ ಮಾಡಿಸುವುದು.

–ವ್ಯಾಕರಣಬದ್ಧವಾಗಿ ಓದುವ ಅಭ್ಯಾಸ ಮಾಡಿಸುವುದು.

–ಶಾರೀರಿಕ ಮತ್ತು ಧ್ವನ್ಯಂಗಗಳ ದೋಷ ಗುರುತಿಸಿ ಸೂಕ್ತ ಚಿಕಿತ್ಸೆ ಹಾಗೂ ಅಭ್ಯಾಸ ಮಾಡಿಸುವುದು.

–ಪತ್ರಿಕೆ, ಪ್ರಬಂಧ, ವರದಿ, ಪ್ರಶ್ನೋತ್ತರಗಳನ್ನು ಗಟ್ಟಿಯಾಗಿ ಓದಿಸುವುದು.

–ಕೇಳುಗರತ್ತ ಗಮನ ಕೊಡುತ್ತಾ ಓದುವ ಕುರಿತು ತಿಳುವಳಿಕೆ ನೀಡುವುದು, ಅಭ್ಯಾಸ ಮಾಡಿಸುವುದು.

–ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರ, ಸಂಯುಕ್ತಾಕ್ಷರ ಮುಂತಾದ ಪದಗಳನ್ನು ಓದುವ ಕ್ರಮದಲ್ಲಿ ಸೂಕ್ತ ಅಭ್ಯಾಸಗಳನ್ನು ನೀಡುವುದು.

–ಗಾಬರಿ, ಆತುರ ಪಡದೆ ಆತ್ಮವಿಶ್ವಾಸದಿಂದ ಓದುವಂತೆ ಮಾರ್ಗದರ್ಶನ ನೀಡಿ, ಸ್ವಯಂ ಪ್ರೇರಣೆಗೊಳ್ಳುವಂತೆ ಮಾಡುವುದು.

–ಮುಖ್ಯಾಂಶಗಳು, ಹೇಳಿಕೆಗಳು ಮತ್ತು ನುಡಿಗಟ್ಟುಗಳನ್ನು ವಿಶೇಷ ಒತ್ತು ಕೊಟ್ಟು ಓದುವ ಬಗ್ಗೆ ಅಭ್ಯಾಸಗಳನ್ನು ನೀಡುವುದು.

ಮಕ್ಕಳಿಗೆ ಗಟ್ಟಿವಾಚನ ಅಭ್ಯಾಸ ಮಾಡಲು ಸೂಕ್ತ ಸೂಚನೆಗಳನ್ನು ಕೊಟ್ಟು ಓದಿಸಬೇಕು. ಅವರು ಓದುವಾಗ ಉತ್ತಮ ಗಟ್ಟಿವಾಚನದ ಗುಣಲಕ್ಷಣಗಳು ಹಾಗೂ ತಂತ್ರಗಳನ್ನು ಗಮನದಲ್ಲಿರಿಸಿಕೊಂಡು ಅವರ ವಾಚನವನ್ನು ಮೌಲ್ಯಮಾಪನ ಮಾಡಬೇಕು. ಅವರು ಓದುವಾಗ ಮಾಡುವಂತಹ ತಪ್ಪುಗಳನ್ನು ಗುರುತಿಸಿ ಆಯಾ ಸಂದರ್ಭಗಳಲ್ಲಿಯೇ ಸರಿಯಾಗಿ ತಿದ್ದಿ ಹೇಳುತ್ತಾ ಅಭ್ಯಾಸ ಮಾಡಿಸಬೇಕು. ಮಾದರಿ ಗಟ್ಟಿವಾಚನವನ್ನು, ಸೂಕ್ತ ಅಭ್ಯಾಸಗಳನ್ನು ನೀಡುತ್ತಾ ಗಟ್ಟಿವಾಚನದಲ್ಲಿ ಸಂಭವಿಸುವ ದೋಷಗಳನ್ನು ಸರಿಪಡಿಸಬೇಕು.

2. ಮೌನ ವಾಚನ:

ಪ್ರಾಚೀನ ಶಿಕ್ಷಣ ಕ್ರಮವನ್ನು ಅವಲೋಕಿಸಿದರೆ ಬಾಯೋದು ಅಥವಾ ಕಂಠಪಾಠವು ಹೆಚ್ಚು ಪ್ರಧಾನವಾಗಿದ್ದು ಮೌನ ಓದನ್ನು ಅಷ್ಟಾಗಿ ಅಭ್ಯಸಿಸುತ್ತಿರಲಿಲ್ಲ. ಕಾಲಗತಿಸಿದಂತೆ ಶಿಕ್ಷಣ ರಂಗ ವಿಶಾಲವಾದಂತೆ ಓದಬೇಕಾದ ವಿಷಯಗಳ ವ್ಯಾಪ್ತಿ, ವಿಷಯ ಸಾಮಗ್ರಿಗಳು ಬೆಳೆದಂತೆ ಮೌನ ಓದನ್ನು ಹೆಚ್ಚಾಗಿ ಬಳಸಿಕೊಳ್ಳಲು ಆರಂಭಿಸಲಾಯಿತು. ಪ್ರಾರಂಭದ ಹಂತದಲ್ಲಿ ಮಕ್ಕಳಿಗೆ ಮೌಖಿಕ ವಾಚನ ರೂಢಿಸುವುದು ಎಷ್ಟು ಮುಖ್ಯವೋ ಕ್ರಮೇಣ ಮೌನವಾಚನ ರೂಢಿಸುವುದು ಅಷ್ಟೇ ಮುಖ್ಯ. ಮೌನ ಓದು ಒಂದು ಮಾನಸಿಕ ಕ್ರಿಯೆ. ಈ ತಂತ್ರದ ಬಳಕೆಯಿಂದ ಓದಿನ ವೇಗ ಮತ್ತು ಅರ್ಥಗ್ರಹಣ ಸಾಮರ್ಥ್ಯ ಹೆಚ್ಚಾಗುತ್ತದೆ.

ಶಬ್ಧ ಕೇಳದಂತೆ ವಿಷಯಗಳನ್ನು ಓದಿ ಅರ್ಥಮಾಡಿಕೊಳ್ಳುವುದೇ ಮೌನ ವಾಚನ. ಇದು ಒಂದು ಮಾನಸಿಕ ಕ್ರಿಯೆಯಾಗಿರುವುದರಿಂದ ಭಾವಯುಕ್ತವಾಗಿ ಮನಸ್ಸಿನ ಆಲೋಚನೆಗೆ ಸಂಬಂಧಿಸಿದ್ದಾಗಿದೆ. ಶಬ್ಧ ಸಂಕೇತಗಳನ್ನು ಕಣ್ಣಿನಿಂದ ನೋಡುತ್ತಾ, ಅವುಗಳ ಅರ್ಥಗಳನ್ನು ಗ್ರಹಿಸುತ್ತಾ ಸದ್ದಿಲ್ಲದೆಯೇ ಮನಸ್ಸಿನಲ್ಲಿ ಓದಿಕೊಳ್ಳುವುದು ಮೌನವಾಚನ. ಅರ್ಥಗ್ರಹಿಕೆಗೆ ಹೆಚ್ಚಿನ ಮಹತ್ವವಿರುವ ಮೌನವಾಚನದಲ್ಲಿ ಅಕ್ಷರಗಳ ಗುರುತಿಸುವಿಕೆ, ಪದಗಳ ಅರ್ಥಗ್ರಹಿಕೆ ಮತ್ತು ಪದಗಳ ಸಂಯೋಜನೆ ಹಾಗೂ ವಾಕ್ಯಗಳ ಅರ್ಥವನ್ನು ಗ್ರಹಿಸುವುದರ ಮೂಲಕ ಆ ಬರವಣಿಗೆಯಲ್ಲಿನ ಅರ್ಥ ಮತ್ತು ಭಾವನೆಯನ್ನು ಗ್ರಹಿಸಲಾಗುತ್ತದೆ. ಮೌನ ವಾಚನವು ಒಬ್ಬ ವ್ಯಕ್ತಿಗೆ ಮಾತ್ರ ಸಂಬಂಧಿಸಿದ್ದು, ಇಲ್ಲಿನ ಸಂಬಂಧ ಓದುವುದನ್ನು ಮತ್ತು ಬರೆದಿರುವವರಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ವಾಚನದಲ್ಲಿ ಓದುಗನೊಬ್ಬನೇ ಪ್ರಮುಖ. ಮೌಖಿಕ ವಾಚನದಂತೆ ಶಾರೀರಿಕ ಶ್ರಮ ಇಲ್ಲಿರುವುದಿಲ್ಲ.

ಮೌನವಾಚನದ ಗುಣಲಕ್ಷಣಗಳು:

–ಮೌನ ವಾಚನ ಮಾನಸಿಕ ಕ್ರಿಯೆಗೆ ಸಂಬಂಧಿಸಿದೆ.

–ಮೌನ ವಾಚನಭಾವಯುಕ್ತವಾಗಿರುತ್ತದೆ.

–ಅರ್ಥಗ್ರಹಣಕ್ಕೆ ಹೆಚ್ಚಿನ ಮಹತ್ವವಿರುತ್ತದೆ.

–ಮೌನ ವಾಚನದಲ್ಲಿ ಧ್ವನ್ಯಂಗಗಳಿಗೆ ಕೆಲಸ ಇರುವುದಿಲ್ಲ.

–ಮೌನ ವಾಚನಕ್ಕೆ ಮನಸ್ಸಿನ ಏಕಾಗ್ರತೆ ಅತ್ಯವಶ್ಯಕ.
–ಗಟ್ಟಿವಾಚನಕ್ಕಿಂತ ಹೆಚ್ಚು ವೇಗವಾಗಿ ಓದಬಹುದು.
–ಉನ್ನತ ಹಂತಗಳಲ್ಲಿ ಕಲಿಸುವ ಓದು ಇದಾಗಿದೆ.
–ಈ ವಾಚನದಿಂದ ವಿಷಯಗ್ರಹಿಕೆಯ ಕೌಶಲ್ಯ ಬೆಳೆಯುತ್ತದೆ.
–ಮೌನ ವಾಚನದಲ್ಲಿ ಯಾವುದೇ ಕಾರಣಕ್ಕೆ ತುಟಿ ಬಿಚ್ಚಿ, ಪಿಸು ಧ್ವನಿಯಲ್ಲೂ ಓದುವುದಿಲ್ಲ.

ಮೌನ ವಾಚನದಲ್ಲಿನ ದೋಷಗಳು:
–ಮಾನಸಿಕವಾಗಿ ಸಿದ್ಧರಾಗದೆ ಅನಾಸಕ್ತಿಯಿಂದ ಓದುವುದು.
–ಸರಿಯಾಗಿ ಕುಳಿತುಕೊಳ್ಳದೆ ಓದುವುದು.
–ಓದುವ ಪಠ್ಯದ ಬಗ್ಗೆ ಉದ್ದೇಶಗಳನ್ನು ಗುರುತು ಮಾಡಿಕೊಳ್ಳದೇ ಓದುವುದು.
–ಮಾನಸಿಕ ಏಕಾಗ್ರತೆಯಿಲ್ಲದೆ ಅವಸರವಸರವಾಗಿ ಓದುವುದು.
–ಅನ್ಯಮನಸ್ಕರಾಗಿ ಯೋಚಿಸುತ್ತಾ ಓದುವುದು.
–ವಾಕ್ಯವನ್ನು ಸಂಯೋಜಿಸಿ ಓದಿ ಗ್ರಹಿಸದೆ ಪದಗಳನ್ನು ಬಿಡಿ ಬಿಡಿಯಾಗಿ ಓದುವುದು.
–ಓದಿದ ವಿಷಯಗಳನ್ನು ಪುನಃ ಹಿಂದೆ ಹೋಗಿ ಓದುವುದು.
–ತಲೆದೂಗುತ್ತಾ, ಬೆರಳಿಟ್ಟು ಅರ್ಥಗ್ರಹಿಸದೆ ಓದುವುದು.
–ಪೂರ್ವಾಗ್ರಹ ಮನಸ್ಸಿನಿಂದ ಓದುವುದು.
–ಓದುತ್ತಾ ಭಾವಾವೇಶಕ್ಕೆ ಒಳಗಾಗುವುದು.

ಭಾಷಾ ಸಾಮರ್ಥ್ಯದ ಕೊರತೆ,ಚಾಕ್ಷುಷ ದೋಷಗಳು, ಶ್ರವಣ ದೋಷಗಳು, ಧ್ವನ್ಯಂಗಗಳ ದೋಷಗಳು, ಮಾನಸಿಕ ಅನಾರೋಗ್ಯ, ವಿಷಯದ ಕ್ಲಿಷ್ಟತೆ, ಮುದ್ರಣ ದೋಷಗಳು, ಓದುವ ಬಗ್ಗೆ ಸೂಕ್ತ ತರಬೇತಿ ಮತ್ತು ನಿರಂತರ ಅಭ್ಯಾಸಗಳಿಲ್ಲದಿರುವುದು, ಶಿಕ್ಷಕರ ಮತ್ತು ಪಾಲಕರ ಮಾರ್ಗದರ್ಶನದ ಕೊರತೆ, ಓದುವ ಸಾಮಗ್ರಿಗಳ ಕೊರತೆ, ಓದಲು ಆಸಕ್ತಿಯಿಲ್ಲದಿರುವುದು, ಅನರೋಗ್ಯಕರ ಸನ್ನಿವೇಶದಲ್ಲಿ ಓದುವುದು ಮುಂತಾದ ಕಾರಣಗಳಿಂದಾಗಿ ಮಕ್ಕಳ ಓದಿನಲ್ಲಿ ದೋಷಗಳು ಸಂಭವಿಸುತ್ತವೆ. ಪ್ರಾಥಮಿಕ ಹಂತಗಳಲ್ಲಿ ಸೂಕ್ತ ತರಬೇತಿ ಮತ್ತು ದಿನನಿತ್ಯ ಓದುವ ಅಭ್ಯಾಸಗಳಿಲ್ಲದೆ ಈ ದೋಷಗಳು ಪ್ರೌಢಹಂತದಲ್ಲಿಯೂ ಮುಂದುವರೆಯುತ್ತವೆ. ಪ್ರಾಥಮಿಕ ಹಂತಗಳಲ್ಲಿ ಓದುಗಾರಿಕೆಯ ದೋಷಗಳನ್ನು ಗುರುತಿಸಿ ವಿವಿಧ ಪ್ರಕಾರಗಳಲ್ಲಿ ಓದುವಿಕೆಯನ್ನು ಕಲಿಸಬೇಕು. ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಹಾಗೂ ಓದುವ ಕೌಶಲಗಳಲ್ಲಿ ಸೂಕ್ತ ತರಬೇತಿ ಅಭ್ಯಾಸಗಳನ್ನು್ನ ಮಾಡಿಸಬೇಕು.

ಮೌನ ವಾಚನ ಸಾಮರ್ಥ್ಯ ಬೆಳೆಸುವ ಕ್ರಮಗಳು/ವಿಧಾನಗಳು:
–ಮೌನ ವಾಚನಕ್ಕಾಗಿ ಮಾನಸಿಕವಾಗಿ ಮಗುವನ್ನು ಸಿದ್ಧಗೊಳಿಸಿ ಓದಿನ ಕುರಿತು ಆಸಕ್ತಿ ಮೂಡಿಸುವುದು.
–ಮೌನ ವಾಚನದ ಶಿಷ್ಟಾಚಾರದ ಕುರಿತು ತಿಳುವಳಿಕೆ ನೀಡುವುದು.
–ಮೌನವಾಗಿ ಓದಿ ಅರ್ಥಗ್ರಹಿಸುವ ತಂತ್ರ ಹಾಗೂ ಕ್ರಮಗಳನ್ನು ಅಭ್ಯಾಸ ಮಾಡಿಸುವುದು.

–ಓದುವ ಮುನ್ನ ಉದ್ದೇಶಗಳನ್ನು ಗುರುತಿಸಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡುವುದು.
–ಮಾನಸಿಕ ಏಕಾಗ್ರತೆಯಿಂದ ಓದುವ ಬಗೆ ಹೇಗೆಂದು ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು.
–ಪ್ರತಿದಿನ ಮೌನ ವಾಚನದ ಮನೆಗೆಲಸ ಅಭ್ಯಾಸಗಳನ್ನು ನೀಡುವುದು.
–ಮೌನ ವಾಚನಕ್ಕಾಗಿ ಪೂರಕ ಚಟುವಟಿಕೆ ಅಭ್ಯಾಸಗಳನ್ನು ನೀಡುವುದು.
–ಸ್ವತಂತ್ರವಾಗಿ ಮುಕ್ತವಾಗಿ ಓದುವ ಅವಕಾಶ ಕಲ್ಪಿಸುವುದು.
–ಓದಿದ ವಿಷಯದ ಕುರಿತು ಅನುಸರಣೀಯ ಚಟುವಟಿಕೆಗಳನ್ನು ಮತ್ತು ಅಭ್ಯಾಸಗಳನ್ನು ನಿಯೋಜಿಸುವುದು.
–ಓದಿದ ವಿಷಯದ ಕುರಿತು ಪ್ರಶ್ನೋತ್ತರ, ಚರ್ಚೆ, ಮುಖ್ಯಾಂಶ ಕೇಳುವುದು, ಟಿಪ್ಪಣಿ ಮಾಡುವುದು, ಅಭಿಪ್ರಾಯ ಕೇಳಿ ಮಕ್ಕಳ ಅರ್ಥಗ್ರಹಿಕೆಯಲ್ಲಾದ ಕೊರತೆಗಳನ್ನು ಗುರುತಿಸುವುದು.
–ಓದಿದ ವಿಷಯದ ನೆನಪಿಗಾಗಿ ಚಟುವಟಿಕೆ ಕೈಗೊಳ್ಳುವುದು.

➢ **ಶೀಘ್ರವಾಚನ:** "ಪಠ್ಯವಿಷಯಗಳನ್ನು ವೇಗವಾಗಿ ಓದುತ್ತಾ ಅದೇ ವೇಗದಲ್ಲಿ ಅರ್ಥಮಾಡಿಕೊಳ್ಳುವುದೇ ಶೀಘ್ರವಾಚನ." ಕಡಿಮೆ ಸಮಯದಲ್ಲಿ ಹೆಚ್ಚು ವಿಷಯಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು. ಸಮಯದ ಸದ್ವಿನಿಯೋಗಕ್ಕೆ, ಅರ್ಥಗ್ರಹಿಕೆಗೆ, ಜ್ಞಾನಾರ್ಜನೆಗಾಗಿ ಮತ್ತು ಸಮಕಾಲೀನ ಜಗತ್ತಿನೊಡನೆ ನಿರಂತರ ಸಂಪರ್ಕ ಇಟ್ಟುಕೊಳ್ಳಲು ಶೀಘ್ರವಾಚನ ಸಹಾಯಕ. ನಮ್ಮ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕಗಳನ್ನಷ್ಟೇ ಓದುವುದರಿಂದ ಅವರ ವ್ಯಕ್ತಿತ್ವ ವಿಕಾಸ ಪೂರ್ಣವಾಗಲಾರದು. ಶಾಲೆಯ ಓದಿಗೆ ಪೂರಕವಾಗಿ ಮತ್ತು ಸಾಮಾಜಿಕ ಜೀವನಕ್ಕೆ ಅಗತ್ಯವೆನಿಸುವ ಹತ್ತು ಹಲವು ವಿಷಯಗಳನ್ನು ಓದಬೇಕಾಗುತ್ತದೆ. ಆದುದರಿಂದ ವಿದ್ಯಾರ್ಥಿಗಳಿಗೆ ಶೀಘ್ರವಾಚನದಲ್ಲಿ ಸೂಕ್ತ ತರಬೇತಿ ಮತ್ತು ಅಭ್ಯಾಸಗಳನ್ನು ನೀಡಬೇಕು.

➢ **ಆಳವಾದ ಓದು:** ಮಕ್ಕಳ ವಿದ್ಯಾಭ್ಯಾಸದಲ್ಲಿ ಒಂದು ಹಂತದವರೆಗೂ ಓದುವುದನ್ನು ಕಲಿಯಲು ಓದಲಾಗುತ್ತದೆ. ಓದುವುದನ್ನು ಕಲಿತ ನಂತರ ಓದುವುದನ್ನು ವಿಷಯಗ್ರಹಿಕೆಯ ಒಂದು ಯಶಸ್ವಿ ಸಾಧನವಾಗಿ ಅಳಸಿಕೊಳ್ಳಲಾಗುತ್ತದೆ. "ಓದುವ ವಿಷಯವನ್ನು ಕೇವಲ ಅರ್ಥಗ್ರಹಿಕೆಯಿಂದಷ್ಟೇ ಓದದೆ ಆ ವಿಷಯದಲ್ಲಿನ ಪ್ರತಿಯೊಂದು ಪದದ ಅರ್ಥ, ಭಾವನೆ, ವ್ಯಾಕರಣಾಂಶಗಳು, ವಿವರಗಳನ್ನು ಗಮನಿಸಿ ಓದುವುದೇ ಆಳವಾದ ಓದು."ಇಲ್ಲಿ ಓದಿದ ವಿಷಯವನ್ನು ವಿಮರ್ಶಿಸಿ ಅದರ ಯೋಗ್ಯತೆಯನ್ನು, ಸತ್ಯಾಸತ್ಯತೆಯನ್ನು ಪರೀಕ್ಷಿಸಲಾಗುತ್ತದೆ. ಆಳವಾದ ಓದಿನಲ್ಲಿ ಭಾಷೆ ಹಾಗೂ ವಿಷಯ ಎರಡನ್ನೂ ಬಹು ಎಚ್ಚರಿಕೆಯಿಂದ ಗಮನಿಸಲಾಗುತ್ತದೆ. ಇದು ವಿಮರ್ಶಾತ್ಮಕ ಓದಾಗಿದ್ದು ಇಲ್ಲಿ ಪ್ರತಿ ಪದದ ಅರ್ಥ, ಭಾವನೆ, ಸಾಂದರ್ಭಿಕ ಅರ್ಥ, ವ್ಯಾಕರಣಾಂಶಗಳು, ಅಲಂಕಾರಗಳು, ಹೋಲಿಕೆ, ವ್ಯತ್ಯಾಸಗಳು, ವಿವರಣೆಗಳು, ಪ್ರತಿಪಾದನೆಗಳನ್ನು ಓದಲಾಗುತ್ತದೆ.

ಆಳವಾದ ಓದು ವಿಮರ್ಶಾತ್ಮಕ ಓದಾಗಿದ್ದು ಮಕ್ಕಳ ಚಿಂತನೆ, ತಾರ್ಕಿಕ ಪ್ರಜ್ಞೆ ಮತ್ತು ವಿಮರ್ಶಾತ್ಮಕ ಮನೋಭಾವವನ್ನು ಬೆಳೆಸಲು ಹೆಚ್ಚು ಸಹಾಯಕವಾಗಿದ್ದು, ಪ್ರೌಢಶಾಲಾ ಹಂತದಲ್ಲಿ ಈ ಓದಿನ ಅಭ್ಯಾಸವನ್ನು ಮಾಡಿಸಬಹುದು. ಸೀಮಿತ ಭಗಗಳನ್ನು ಮಕ್ಕಳಿಗೆ ಕೊಟ್ಟು ಅದರಲ್ಲಿನ ಪದಗಳ ಅರ್ಥ,

ಭಾವಾರ್ಥ, ಸಾಂದರ್ಭಿಕ ಅರ್ಥ, ಪದ ಜೋಡಣಾ ಕ್ರಮ, ವಾಕ್ಯಗಲ ನಿರೂಪಣೆ, ವ್ಯಾಕರಣಾಂಶಗಳು, ಲೇಖನ ಚಿಹ್ನೆಗಳನ್ನು ಗಮನಿಸಿ ಓದುವಂತೆ ಹೇಳಬೇಕು. ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಭಾವನೆ ಗ್ರಹಿಸುವುದು, ವರ್ಣನೆಯನ್ನು ತಿಳಿಯುವುದು, ಕಾರ್ಯಕಾರಣ ಸಂಬಂಧ ಗುರುತಿಸಿರುವುದರ ಬಗ್ಗೆ ತಿಳುವಳಿಕೆ ನೀಡಬೇಕು.

➢ **ವಿಶಾಲವಾದ ಓದು:** ವಿಶಾಲವಾದ ಓದನ್ನು ವ್ಯಾಪಕ ಓದು, ಪೂರಕ ಮತ್ತು ವಿಸ್ತರಣಾ ಓದು ಎಂತಲೂ ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ವಿಶಾಲ ಓದು ಒಂದು ವಿಷಯದ ಬಗೆಗೆ ವಿಶಾಲವಾಗಿ ಓದುವುದಾಗಿದೆ. "ಓದುವ ವಿಷಯದಲ್ಲಿ ಪ್ರತಿಯೊಂದು ಪದದ ಅರ್ಥ, ವಿವರ ಮತ್ತು ಅಭಿವ್ಯಕ್ತಿಯ ವಿಶೇಷತೆಗೆ ಅಷ್ಟಾಗಿ ಗಮನ ಕೊಡದೆ ವಿಷಯದ ತಾತ್ಪರ್ಯ, ಮುಖ್ಯಭಾವನೆ ಅಥವಾ ಮುಖ್ಯಾಂಶಗಳನ್ನು ಗ್ರಹಿಸುವ ಉದ್ದೇಶದಿಂದ ಓದುವುದೇ ವಿಶಾಲ ಓದು." ವಿಶಾಲ ಓದು ವಿಷಯ ಸಂಗ್ರಹ ಓದಾಗಿದ್ದು ಇದರಲ್ಲಿ ಒಂದು ನಿರ್ಧಿಷ್ಟ ವಿಷಯದ ಬಗೆಗೆ ಹಲವು ಪೂರಕ ಗ್ರಂಥಗಳಿಂದ ವಿಶಾಲವಾಗಿ ಓದಿ ತಿಳಿಯುವ ಪ್ರಯತ್ನ ಇರುತ್ತದೆ.

ವಿಶಾಲ ಓದು ಸ್ವತಂತ್ರವಾದ ವ್ಯಕ್ತಿಗತವಾದ ಓದಾಗಿದ್ದು ತಿಳುವಳಿಕೆಗಾಗಿ, ವಿಷಯ ಗ್ರಹಿಕೆಗಾಗಿ, ಆತ್ಮಸಂತೋಷಕ್ಕಾಗಿ ಓದುವ ಅಭ್ಯಾಸವಾಗಿರುತ್ತದೆ. ಗ್ರಂಥಾಲಯದಲ್ಲಿ ಲಭ್ಯವಿರುವ ಪೂರಕ ಗ್ರಂಥಗಳು, ಆಧಾರ ಗ್ರಂಥಗಳು, ನಿಯತಕಾಲಿಕೆಗಳು, ದಿನಪತ್ರಿಕೆಗಳು ಮುಂತಾದವುಗಳನ್ನು ಸ್ವತಂತ್ರವಾಗಿ ಓದುವುದರಿಂದ ವಿಷಯ ಗ್ರಹಿಕೆಯಾಗುತ್ತದೆ. ಓದುಗಾರಿಕೆಯ ಹವ್ಯಾಸವೂ ಬೆಳೆಯುತ್ತದೆ. ಶಾಲೆಯಲ್ಲಿ ವಿಶಾಲ ಓದನ್ನು ಕಲಿತ ಮಕ್ಕಳು ಮುಂದೆ ಓದುವುದನ್ನು ಒಂದು ನಿರಂತರ ಹವ್ಯಾಸವನ್ನಾಗಿ ಬೆಳೆಸಿಕೊಳ್ಳುತ್ತಾರೆ. ಇದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುತ್ತದೆ.

➢ **ಸ್ಥೂಲವಾಚನ:** ಓದುವ ವಿಷಯವನ್ನು ಸೂಕ್ಷ್ಮವಾಗಿ, ಸವಿಸ್ತಾರವಾಗಿ ಪ್ರತಿಯೊಂದು ಸಾಲು, ವಾಕ್ಯ ಮತ್ತು ಪದಗಳನ್ನು ಗಮನಿಸಿ ಓದದೇ ಲೇಖನದಲ್ಲಿನ ಮುಖ್ಯಾಂಶವನ್ನು, ಸಾಮಾನ್ಯ ಭಾವನೆಯನ್ನು ಮತ್ತು ಮುಖ್ಯ ಸಂದೇಶಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಮಾತ್ರ ಮೌನವಾಗಿ ಮತ್ತು ಶೀಘ್ರವಾಗಿ ಓದುವುದೇ ಸ್ಥೂಲವಾಚನ." ಸ್ಥೂಲವಾಚನದಲ್ಲಿ ಮುಖ್ಯ ಅಂಶಗಳನ್ನು ಸಮಗ್ರವಾಗಿ ತಿಳಿಯುವ ಉದ್ದೇಶದಿಂದ ಓದಲಾಗುತ್ತದೆ. ವಿವರಣಾತ್ಮಕವಾಗಿ ಓದದೆ ಲೇಖನದ ವಿಷಯಸೂಚಿ, ಶೀರ್ಷಿಕೆಗಳು, ಉಪಶೀರ್ಷಿಕೆಗಳು, ಮುಖ್ಯ ವಾಕ್ಯಗಳು, ಮುಖ್ಯಾಂಶಗಳು, ಅಂಕಿ ಅಂಶಗಳು, ಕೋಷ್ಟಕಗಳು, ಸಾರಾಂಶಗಳನ್ನು, ಅಭಿಪ್ರಾಯಗಳನ್ನು ತಿಳಿಯಲಾಗುತ್ತದೆ. ಸಾರಾಂಶವನ್ನು ಗ್ರಹಿಸಲಾಗುತ್ತದೆ.

ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಸ್ಥೂಲವಾಚನ ಕೌಶಲವನ್ನು ಬೆಳೆಸುವುದು ಕಷ್ಟವೇನಲ್ಲ. ಸ್ಥೂಲವಾಚನ ಕೌಶಲ ಬೆಳೆಸುವುದರಿಂದ ಅವರಲ್ಲಿ ಓದುಗಾರಿಕೆಯ ಹವ್ಯಾಸ ಬೆಳೆಯುತ್ತದೆ. ವಿಷಯ ಸಂಗ್ರಹಣೆಗೆ, ಜ್ಞಾನಾರ್ಜನೆಗೆ ಅನುಕೂಲವಾಗುತ್ತದೆ. ಕಡಿಮೆ ಕಾಲಾವಧಿಯಲ್ಲಿ ಹೆಚ್ಚು ಪುಸ್ತಕಗಳನ್ನು ಓದಿ ಗ್ರಹಿಸುವುದು ಸಾಧ್ಯವಾಗುತ್ತದೆ. ಸಹ ಪಠ್ಯಪುಸ್ತಕಗಳು, ಪೂರಕ ಗ್ರಂಥಗಳು, ಸಾಹಿತ್ಯ ಕೃತಿಗಳು, ದಿನಪತ್ರಿಕೆಗಳು, ನಿಯತಕಾಲಿಕೆಗಳನ್ನು ಈ ರೀತಿ ಓದುವುದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುತ್ತದೆ.

➢ **ಸೂಕ್ಷ್ಮವಾಚನ:** "ವಿಷಯವನ್ನು ವಿವರವಾಗಿ ಓದದೆ ಒಟ್ಟಾರೆ ಅರ್ಥವನ್ನು ಪರಿಗಣಿಸದೆ ಒಂದು ನಿರ್ದಿಷ್ಟ ಅಂಶ ಅಥವಾ ಒಂದು ಪ್ರಶ್ನೆಗೆ ಉತ್ತರವನ್ನು ಹುಡುಕುವ ಉದ್ದೇಶದಿಂದ ಮಾತ್ರ ಸೂಕ್ಷ್ಮವಾಗಿ ಓದಿ ಗ್ರಹಿಸುವುದೇ ಸೂಕ್ಷ್ಮವಾಚನ." ಸ್ಥೂಲವಾಚನದಲ್ಲಿ ಲೇಖನದ ಒಟ್ಟು ಅರ್ಥವನ್ನು ಗ್ರಹಿಸುವುದು ಉದ್ದೇಶವಾದರೆ ಸೂಕ್ಷ್ಮವಾಚನದಲ್ಲಿ ಲೇಖನದ ಒಂದು ನಿರ್ಧಿಷ್ಟ ಅಂಶವನ್ನು ಹುಡುಕುವುದಾಗಿದೆ. ಇಲ್ಲಿ ಓದುಗನು ತನಗೆ ಬೇಕಾಗಿರುವ ಒಂದು ನಿರ್ಧಿಷ್ಟ ಅಂಶವನ್ನು, ಒಂದು ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಉದ್ದೇಶದಿಂದ ಮಾತ್ರ ಓದುತ್ತಾನೆ. ತನಗೆ ಅಗತ್ಯವಿಲ್ಲದ ವಿಷಯಗಳು, ಪದಗಳು ಅಥವಾ ವಾಕ್ಯಗಳನ್ನು ಓದುವುದೇ ಇಲ್ಲ ಮತ್ತು ಗಮನಿಸುವುದೂ ಇಲ್ಲ. ಇದು ಅನ್ವೇಷಣಾ ರೀತಿಯ ಓದಾಗಿದ್ದು ಮುದ್ರಿತ ಪುಟವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಕಣ್ಣಾಲನೆಯನ್ನು ಪುಟದ ನಡುವೆ ಮೇಲಿನಿಂದ ಕೆಳಕ್ಕೆ ಹರಿಸುತ್ತಾ ನಿರ್ದಿಷ್ಟ ವಿಷಯವನ್ನು ಹುಡುಕುಲಾಗುತ್ತದೆ.

ಸೂಕ್ಷ್ಮವಾಚನ ಕೌಶಲವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದರಿಂದ ಅವರು ಹೆಚ್ಚು ಹೆಚ್ಚು ವಿಷಯಗಳನ್ನು ತಿಳಿಯಲು ಉತ್ತೇಜಿಸಬಹುದು. ಎಲ್ಲ ಪುಸ್ತಕಗಳನ್ನು ಅನವಶ್ಯಕವಾಗಿ ವಿವರವಾಗಿ ಓದದೆ ಶೀಘ್ರವಾಗಿ ಮತ್ತು ಸೂಕ್ಷ್ಮವಾಗಿ ಓದಿ ವಿಷಯ ಗ್ರಹಿಸಲು ಮತ್ತು ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಹಾಯಕವಾಗುತ್ತದೆ.

➢ **ವಿಮರ್ಶಾತ್ಮಕ ವಾಚನ:** "ಕೇವಲ ಮಾಹಿತಿಗಾಗಿ ಓದದೆ, ಪರಿಕಲ್ಪನೆಗಳ ಅರ್ಥವನ್ನಷ್ಟೇ ಗ್ರಹಿಸದೆ, ವಿಮರ್ಶಾತ್ಮಕ ದೃಷ್ಟಿಯಿಂದ ಓದುತ್ತಾ ವಿಷಯಗಳನ್ನು ತಳಸ್ಪರ್ಶಿಯಾಗಿ ಗ್ರಹಿಸುತ್ತಾ, ವಿಮರ್ಶಿಸುತ್ತಾ, ಅರ್ಥಮಾಡಿಕೊಳ್ಳುತ್ತಾ, ವಿಷಯಗಳನ್ನು ಮೌಲ್ಯೀಕರಿಸುತ್ತಾ ನಿರೂಪಿಸುವುದೇ ವಿಮರ್ಶಾತ್ಮಕ ವಾಚನ." ವಿಮರ್ಶಾತ್ಮಕ ಚಿಂತನೆಯಿಂದಲೇ ಸಾಗುವ ಈ ವಾಚನ ಒಂದು ಪ್ರಜ್ಞಾಪೂರ್ವಕ ಪ್ರಬುದ್ಧ ಮಾನಸಿಕ ಕ್ರಿಯೆ. ಓದುತ್ತಾ, ಯೋಚಿಸುತ್ತಾ, ವಿಷಯಗಳನ್ನು ವಿಶ್ಲೇಷಿಸುತ್ತಾ, ಸಂಯೋಜಿಸುತ್ತಾ, ಅರ್ಥ ರೂಪಿಸುತ್ತಾ, ಸಂಬಂಧ ಕಲ್ಪಿಸುತ್ತಾ, ಕಾರ್ಯಕಾರಣ ಸಂಬಂಧಗಳನ್ನು ಹುಡುಕುತ್ತಾ ವಿಷಯದ ಮಹತ್ವವನ್ನು ಮತ್ತು ಸಮಂಜಸತೆಯನ್ನು ತಿಳಿಯುತ್ತಾ, ಸತ್ಯಾಸತ್ಯಗಳನ್ನು ಪರಿಶೀಲಿಸುತ್ತಾ, ವಿಷಯವನ್ನು ವಿವಿಧ ದೃಷ್ಟಿಕೋನಗಳಲ್ಲಿ ತರ್ಕಬದ್ಧವಾಗಿ ಗ್ರಹಿಸಲಾಗುತ್ತದೆ ಮತ್ತು ನಿರೂಪಿಸಲಾಗುತ್ತದೆ.

ವಿಮರ್ಶಾತ್ಮಕ ವಾಚನವು ಒಂದು ಪ್ರಬುದ್ಧ ವಾಚನವಾಗಿದ್ದು, ಈ ರೀತಿ ಓದಲು ಅತ್ಯುತ್ತಮ ಮಾನಸಿಕ ಸಾಮರ್ಥ್ಯ, ಭಾಷೆ ಮತ್ತು ವಿಷಯದ ಬಗೆಗೆ ಹೆಚ್ಚಿನ ಪರಿಣಿತಿ ಬೇಕು. ವಿಮರ್ಶಾತ್ಮಕ ವಾಚನವು ಕೇವಲ ಸಾಲುಗಳ ನಡುವೆ ಅಥವಾ ಸಾಲುಗಳಿಗೆ ಸೀಮಿತವಾಗಿ ಓದುವ ಕ್ರಿಯೆಯಾಗಿರದೆ, ಸಾಲುಗಳ ಒಳಹೊಕ್ಕು ಅದರಲ್ಲಡಗಿರುವ ಸತ್ಯಾಸತ್ಯತೆಗಳನ್ನು ಪರಿಶೀಲಿಸಲಾಗುತ್ತದೆ. ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು ವಿಮರ್ಶಾತ್ಮಕವಾಗಿ ಓದುವ ಮಾನಸಿಕ ಸಾಮರ್ಥ್ಯ ಹೊಂದಿರುವುದಿಲ್ಲವಾದರೂ ಶಿಕ್ಷಕರು ವಿಷಯಗಳನ್ನು ಓದಿ ಅರ್ಥೈಸುವಾಗ ಅಗತ್ಯವಿರುವ ಕಡೆ ವಿಮರ್ಶಾತ್ಮಕವಾಗಿ ಹೇಳಬೇಕು. ಹಂತ ಹಂತವಾಗಿ ವಿಮರ್ಶಾತ್ಮಕ ವಾಚನವನ್ನು ಅಭ್ಯಾಸ ಮಾಡಿಸಬೇಕು. ಇದರಿಂದ ಮಕ್ಕಳಲ್ಲಿ ತಾರ್ಕಿಕ ಶಕ್ತಿ ಬೆಳೆಯುತ್ತದೆ.

➢ **ಸೃಜನಶೀಲ ವಾಚನ:** ಸೃಜನಶೀಲ ವಾಚನವು ವಿಮರ್ಶೆಯನ್ನು ಮೀರಿದ ಒಂದು ಪ್ರಬುದ್ಧ ಚಿಂತನೆ. ಸೃಜನಶೀಲ ಓದುಗನು ವಿಮರ್ಶೆಯನ್ನು ಮೀರಿ ವಿಷಯಗಳಲ್ಲಡಗಿರುವ ಅಂತಃಸತ್ವಗಳನ್ನು

ಸೃಷ್ಟಿ ಮಾಡುತ್ತಾನೆ. ಸೃಜನಶೀಲ ಮನಸ್ಸಿನಿಂದ ನಡೆಯುವ ವಾಚನದಲ್ಲಿ ಅನ್ವೇಷಣಾ ಪ್ರವೃತ್ತಿ, ಹೊಸತನ ಇದ್ದು ವಿಷಯದ ಬಗ್ಗೆ ಒಳನೋಟದ ಚಿಂತನೆಯಿರುತ್ತದೆ. ಲೇಖಕನ ಮೂಲ ಭಾವನೆಗಳಿಂದ ಮುಂದೆ ಹೋಗಿ ಹೊಸ ಅನುಭವ, ಹೊಸ ಆಲೋಚನೆಗಳು ಮೂಡಿ ಬರುತ್ತವೆ. ಇಲ್ಲಿ ಲಿಪಿಗಳಲ್ಲಡಗಿರುವುದಕ್ಕಿಂತ ಹೆಚ್ಚು ಉತ್ಕೃಷ್ಟವಾದ ಅರ್ಥಗಳು ಹೊಳೆಯುತ್ತವೆ.

ಲೇಖಕ ಕಾಣದ್ದನ್ನು ವಿಮರ್ಶಕ ಕಾಣುತ್ತಾನೆ ಎಂಬ ಮಾತಿದೆ. ಲೇಖಕನ ಬರಹವನ್ನು ವಿಮರ್ಶಾತ್ಮಕವಾಗಿ ಸೃಜನಶೀಲವಾಗಿ ಓದುವ ಓದುಗನು ಲೇಖಕನ ಯೋಚನೆಗಳಿಗಿಂತ ಮೇಲೇರಿ ಆ ಬರಹದಲ್ಲಿ ಹೊಸತನ್ನು ಕಾಣಲು ಶಕ್ತನಾಗುತ್ತಾನೆ. ಇದಕ್ಕೆ ಸೃಜನಶೀಲ ಚಿಂತನೆ ಅಗತ್ಯ. ಮಕ್ಕಳಲ್ಲಿ ಅವ್ಯಕ್ತವಾಗಿರುವ ಎಷ್ಟೋ ಸೃಜನಶೀಲ ಸಾಮರ್ಥ್ಯಗಳು, ಗುಣಗಳನ್ನು ಹೊರಹೊಮ್ಮಿಸಲು ಸೃಜನಶೀಲವಾಚನ ಸಹಾಯಕ. ಶಿಕ್ಷಕರು ತಾವು ಸೃಜನಶೀಲ ವಾಚನ ಕೌಶಲ್ಯವನ್ನು ಬೆಳೆಸಿಕೊಂಡು ಮಕ್ಕಳಲ್ಲಿ ಹಂತ ಹಂತವಾಗಿ ಈ ಕೌಶಲ ಮತ್ತು ಸಾಮರ್ಥ್ಯವನ್ನು ಬೆಳೆಸಬೇಕು.

ವಿದ್ಯಾರ್ಥಿಗಳಲ್ಲಿ ಓದುಗಾರಿಕೆಯ ಸಾಮರ್ಥ್ಯ ಬೆಳೆಸುವ ಅಭ್ಯಾಸಗಳು: ಓದುವುದು ಕೇವಲ ಭಾಷಾ ತರಗತಿಗಳಲ್ಲಿ ಅಥವಾ ಪರೀಕ್ಷೆಯ ಸಮಯದಲ್ಲಿ ಮಾತ್ರ ಎಂದು ಭಾವಿಸಬಾರದು. ಶಿಕ್ಷಣದಲ್ಲಿ ಓದುವಿಕೆಯು ಒಂದು ವ್ಯಾಪಕವಾದ, ಜೀವಂತ ಕ್ರಿಯೆ. ಮಕ್ಕಳಿಗೆ ಔಪಚಾರಿಕವಾಗಿ ಓದು ಕಲಿಸಿದ ನಂತರ ಅವರು ಜೀವನ ಪರ್ಯಂತ್ಯ ಓದಿನಿಂದ ಹೆಚ್ಚು ಲಾಭ ಪಡೆಯಬೇಕ್ತು, ಓದುತ್ತಾ ಬೆಳೆಯಬೇಕು ಮತ್ತು ಬೆಳೆಯುತ್ತಾ ವಿಕಾಸವಾಗಬೇಕು. ಓದುವುದು ಒಂದು ನಿರಂತರ ಮತ್ತು ಅವಶ್ಯಕ ಅಭ್ಯಾಸ ಎಂಬ ಭಾವನೆ ಮಕ್ಕಳಲ್ಲಿ ಬೆಳೆಯಬೇಕು. ಇದಕ್ಕಾಗಿ ಶಾಲಾ ಹಂತದಲ್ಲಿ ಓದುಗಾರಿಕೆಯ ಬಗ್ಗೆ ಸೂಕ್ತ ತರಬೇತಿ ಮತ್ತು ಅಭ್ಯಾಸಗಳನ್ನು ನೀಡಿ ಉತ್ತಮ ತಳಹದಿ ಹಾಕಬೇಕು. ಅದಕಾಗಿ...

–ಉತ್ತಮವಾಗಿ ಅರ್ಥಬದ್ಧವಾಗಿ ಓದುವ ಕೌಶಲಗಳಲ್ಲಿ ತರಬೇತಿ ನೀಡಬೇಕು.
–ವಿವಿಧ ರೀತಿಯ ಅವಶ್ಯಕತೆಗಳಿಗನುಗುಣವಾಗಿ ಓದುವ ಸಾಮರ್ಥ್ಯ ಬೆಳೆಸಬೇಕು.
–ಶಾಲೆ ಮತ್ತು ಸಮಾಜದಲ್ಲಿರುವ ಗ್ರಂಥಾಲಯಗಳ ಲಾಭ ಪಡೆಯುವಂತೆ ಆಸಕ್ತಿ ಮೂಡಿಸಬೇಕು.
–ದಿನಪತ್ರಿಕೆಗಳು, ನಿಯತಕಾಲಿಕೆಗಳನ್ನು ನಿರಂತರವಾಗಿ ಓದುವ ಹವ್ಯಾಸ ಬೆಳೆಸಬೇಕು.
–ಪಠ್ಯಪುಸ್ತಕಗಳು, ಉಪಪಠ್ಯಪುಸ್ತಕಗಳು, ಆಧಾರ ಗ್ರಂಥಗಳನ್ನು ಓದಿಸಬೇಕು.
–ಉಪಯುಕ್ತ ಸಾಹಿತ್ಯ, ವಿಜ್ಞಾನ, ಕತೆ, ಕಾದಂಬರಿ, ವಿಚಾರಗಳನ್ನು ಓದಿಸಬೇಕು.
–ಓದುಗಾರಿಕೆಯ ಬಗ್ಗೆ ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಬೇಕು.
–ಗ್ರಂಥಾಲಯದಲ್ಲಿ ಓದಿ ಬರೆಯುವಂತಹ ಅಭ್ಯಾಸಗಳನ್ನು ನೀಡಬೇಕು.
–ಪುಸ್ತಕಗಳನ್ನು ಆಧರಿಸಿದ ರಸಪ್ರಶ್ನೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
–ಉತ್ತಮ ಪುಸ್ತಕಗಳ ಖರೀದಿಸಿ ಓದುವ ಆಸಕ್ತಿ ಭಾವನೆಯನ್ನು ಮೂಡಿಸುವುದು.
–ಸಾಹಿತ್ಯ ಸಂಘಗಳನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ನಡೆಸುವುದು.
–ವಿವಿಧ ರೀತಿಯ ಓದುಗಾರಿಕೆಯ ಕೌಶಲ್ಯಗಳು ಮತ್ತು ಸಾಮರ್ಥ್ಯಗಳನ್ನು ಬೆಳೆಸಲು ವಿಶೇಷ ಕಾರ್ಯಾಗಾರಗಳನ್ನು ನಡೆಸಬೇಕು.
–ಓದುವ ಬಗ್ಗೆ ವಿದ್ಯಾರ್ಥಿಗಳಲ್ಲಿ ಸ್ವಯಂ ಕಾಳಜಿ, ಸ್ವಯಂ ಸ್ಫೂರ್ತಿ ಮೂಡಿಸುವುದು.

–ಶಾಲೆಯ ವಾತಾವರಣ ಮತ್ತು ಕಾರ್ಯಕ್ರಮಗಳು ಓದುವಿಕೆಗೆ ಸಹಾಯಕ ಆಗುವಂತಿರಬೇಕು.

"ಓದಿನ ಮೂಲಕ ನಾವು ಕಾಲ ದೇಶಗಳನ್ನು ಮೀರಿ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವುದು ಸಾಧ್ಯ. ಓದು ನಮ್ಮ ತಿಳುವಳಿಕೆಗೆ ಹೆಚ್ಚಿನ ದೃಢತೆಯನ್ನು ತಂದುಕೊಡುತ್ತದೆ. ದ್ವೀಪಜೀವಿಯಾದ ಮನುಷ್ಯ ವಿಶ್ವಮಾನವ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದಕ್ಕೆ ಓದಿನಿಂದ ದೊರಕುವ ನೆರವು ಇನ್ನಿತರ ಸ್ಥಾನಗಳಿಗಿಂತ ಮಹತ್ತರವಾದದ್ದು. ನಿಜವಾದ ಓದುಗಾರಿಕೆ ಮನುಷ್ಯನನ್ನು ವಜ್ರವನ್ನಾಗಿಸುತ್ತದೆ... ಬೆಳಕು ಅಲ್ಲಿ ಪ್ರತಿಫಲಿಸುತ್ತದೆ." –ಹಾ. ಮಾ. ನಾಯಕ.

- **ಬರಹ:**

ಭಾಷಾ ಕೌಶಲಗಳಲ್ಲಿ ನಾಲ್ಕನೆಯ ಕೌಶಲ ಬರಹ ಅಥವಾ ಬರವಣಿಗೆ. ಭಾಷೆಯ ಬೆಳವಣಿಗೆಯಲ್ಲಿ ಬರವಣಿಗೆಗೆ ವಿಶಿಷ್ಟ ಸ್ಥಾನವಿದೆ. ಬರಹವು ರೇಖಾವಿನ್ಯಾಸಗಳ ಕೌಶಲವಾಗಿದ್ದು ಅಕ್ಷರಗಳ ರೇಖಾವಿನ್ಯಾಸಗಳು ಅರ್ಥಬದ್ಧವಾಗಿ ಜೋಡಿಸಲ್ಪಟ್ಟಿರುತ್ತವೆ. ಒಂದು ವಿಷಯ, ಆಲೋಚನೆಯನ್ನು ಅಕ್ಷರಗಳ ನಿರ್ಧಿಷ್ಟ ರೇಖಾವಿನ್ಯಾಸಗಳಿಂದ ಕ್ರಮಬದ್ಧವಾಗಿ, ಅರ್ಥಬದ್ಧವಾಗಿ ಜೋಡಿಸಿ ಬರೆಯುವುದೇ ಬರವಣಿಗೆ. ಬರಹದಲ್ಲಿ ಮನಸ್ಸು, ಕೈಬೆರಳುಗಳು, ರೇಖಾವಿನ್ಯಾಸಗಳು ಒಳಗೊಂಡಿರುತ್ತವೆ. ಒಂದು ವಿಷಯ ಅಥವಾ ಆಲೋಚನೆಯನ್ನು ಮನಸ್ಸಿನಲ್ಲಿ ಸಂಘಟಿಸಿ ಅದಕ್ಕನುಗುಣವಾದ ಲಿಪಿಯನ್ನು ಕ್ರಮಬದ್ಧಗೊಳಿಸಿ ಅರ್ಥಬದ್ಧವಾಗಿ ಬರೆಯುವುದೇ ಬರವಣಿಗೆ ಕೌಶಲ.

ಕೈಬರಹಕ್ಕೆ ಕೆಲವು ಕೌಶಲಗಳು ಮುಖ್ಯವಾಗಿ ಬೇಕು. ಲಿಪಿಯ ಕುರಿತು ಸೂಕ್ತ ಜ್ಞಾನವಿರಬೇಕು, ಭಾಷೆಯ ನಿಯಮಗಳ ಜ್ಞಾನವಿರಬೇಕು, ಕೈಬೆರಳುಗಳ ಸ್ನಾಯು ಕೌಶಲವಿರಬೇಕು, ಅಂದರೆ ಬರಹದ ಸಾಧನಗಳಾದ ಬಳಪ, ಪೆನ್ಸಿಲ್, ಪೆನ್ನು ಇವುಗಳನ್ನು ಸೂಕ್ತವಾಗಿ ಹಿಡಿದು ಬರೆಯುವ ಸಾಮರ್ಥ್ಯವಿರಬೇಕು, ಬೆರಳ ತುದಿಗಳ ಸ್ನಾಯುಗಳು ಅದಕ್ಕೆ ತಕ್ಕಂತೆ ಕಾಠಿಣ್ಯ ಪಡೆಯಬೇಕು, ಬರವಣಿಗೆಯ ಹಲಗೆ ಅಥವಾ ಹಾಳೆಯನ್ನು ಇಟ್ಟುಕೊಳ್ಳುವ ಕ್ರಮ ಅರಿತಿರಬೇಕು, ಅಕ್ಷರಗಳನ್ನು ಪ್ರಾರಂಭಿಸುವ ಅಂತ್ಯಗೊಳಿಸುವ ಪರಿಯನ್ನು ತಿಳಿದಿರಬೇಕು, ಬರೆಯಲು ಕುಳಿತುಕೊಳ್ಳುವ ಭಂಗಿಯನ್ನು ಅರಿತಿರಬೇಕು, ರೇಖಾವಿನ್ಯಾಸಗಳ ನಿಶ್ಚಿತ ನೀತಿ–ನಿಯಮ–ವ್ಯವಸ್ಥೆ ಅರಿತಿರಬೇಕು.

ಬರವಣಿಗೆಯು ಮಾನವನ ಅತ್ಯಂತ ಮಹತ್ವದ ಆವಿಷ್ಕಾರವಾಗಿದೆ. ಭಾಷೆಗೆ ಒಂದು ವ್ಯಾಪ್ತಿ ಮತ್ತು ಶಾಶ್ವತತೆ ತಂದುಕೊಟ್ಟಿರುವುದು ಬರವಣಿಗೆ. ಬರವಣಿಗೆ ಇಲ್ಲದ ಭಾಷೆ ಅಸ್ತಿತ್ವದಲ್ಲಿದ್ದರೂ ಅವುಗಳ ಉಳಿವು ಅನಿಶ್ಚಿತ. ಹಾಗೆಯೇ ಆ ಭಾಷೆಗೆ ಶಾಶ್ವತವಾದ ಮೌಲ್ಯವೂ ಇರುವುದಿಲ್ಲ. ಭಾಷೆ ಕಾಲ ಮತ್ತು ದೂರವನ್ನು ಜಯಿಸಿ ನಿಂತಿರುವುದು ತನ್ನ ಬರವಣಿಗೆಯಿಂದಲೇ. ಮಾತು ಕಲಿತ ಮನುಷ್ಯ ಮಾನವನಾದನು, ಬರವಣಿಗೆ ಕಲಿತ ಮಾನವ ನಾಗರಿಕನಾದನು.

ಬರವಣಿಗೆಯ ಪ್ರಾಮುಖ್ಯತೆ:

ಬರವಣಿಗೆಯು ಭಾಷೆಯ ಶಾಶ್ವತ ರೂಪ. ಮಾತು ಕಲಿತ ನಂತರ ಮಾನವ ಬರವಣಿಗೆಯನ್ನು ಕಲಿತು ಸಾಹಿತ್ಯ ಸೃಷ್ಟಿ ಮಾಡಿದ. ಮಾನವ ಇತಿಹಾಸದ ಸಾಂಸ್ಕೃತಿಕ ಪರಂಪರೆ ಹಾಗೂ ಜ್ಞಾನ

ರಾಶಿಯನ್ನು ಎಲ್ಲ ಸಮಾಜಗಳಿಗೂ, ಎಲ್ಲ ಕಾಲಕ್ಕೂ ಪ್ರಸಾರ ಮಾಡುವ ಕಾರ್ಯ ಬರವಣಿಗೆಯಿಂದ ಸಾಧ್ಯವಾಗಿದೆ. ಭಾಷೆಯು ಕಾಲ ಮತ್ತು ದೂರವನ್ನು ಗೆದ್ದು ಎಲ್ಲರನ್ನು ತಲುಪುವುದು ಬರವಣಿಗೆಯ ಮೂಲಕ. ಶಿಕ್ಷಣದಲ್ಲಿ ಓದು ಬರಹ ಜೊತೆ ಜೊತೆಯಲ್ಲಿಯೇ ಸಾಗುತ್ತಿದ್ದು ಕಲಿಯುವ ವಿಷಯಗಳನ್ನು ಬರವಣಿಗೆ ದೃಢೀಕರಿಸುತ್ತದೆ. ಬರೆಯದೆ ಓದುವುದು ಫಲಕಾರಿಯಾಗಲಾರದು. ಬರವಣಿಗೆಯ ಅಭ್ಯಾಸದಿಂದ ಮಾತು, ಚರ್ಚೆ ಹಾಗೂ ಓದುವ ಕೌಶಲಗಳು ಗಟ್ಟಿಗೊಳ್ಳುತ್ತವೆ. ವಿಷಯಗಳನ್ನು ಬರೆಯುತ್ತಾ ಓದುವುದರಿಂದ, ಅಭ್ಯಾಸ ಮಾಡುವುದರಿಂದ ಹೆಚ್ಚು ಕಾಲ ಮನಸ್ಸಿನಲ್ಲುಳಿಯುತ್ತವೆ. ಕೈಬರಹದಲ್ಲಿ ಕ್ರಮಬದ್ಧ ಅಭ್ಯಾಸ ಮಾಡುವುದರಿಂದ ಮಕ್ಕಳು ಸ್ವತಂತ್ರವಾಗಿ ಬರೆಯಲು ಶಕ್ತರಾಗುತ್ತಾರೆ. ಇದರಿಂದ ಅವರ ಶೈಕ್ಷಣಿಕ ಸಾಧನೆ ಬಲಗೊಳ್ಳುತ್ತದೆ.

–ಬರವಣಿಗೆಯು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ.

–ಉತ್ತಮ ಬರಹ ನಾಗರಿಕತೆಯ ಪ್ರತಿಬಿಂಬವಾಗಿದೆ.–ತಾಳೆಗರಿಗಳಲ್ಲಿ, ಶಾಸನಗಳಲ್ಲಿ ಬರಹ ರೂಪವು ಒಂದು ರೀತಿ ಇದ್ದರೆ ಇಂದು ಅಕ್ಷರಗಳ ಸ್ವರೂಪ ಬರವಣಿಗೆಯಲ್ಲಿ ಮಾರ್ಪಾಟಾಗಿರುವುದನ್ನು ಗಮನಿಸಬಹುದು.

–ಓದುವ ವಿಚಾರಗಳಿಗೆ ಬರಹವು ಶಾಶ್ವತ ಸ್ಮರಣೆಯನ್ನು ತಂದುಕೊಡುತ್ತದೆ. (ಹತ್ತು ಬಾರಿ ಓದುವುದಕ್ಕಿಂತ ಒಂದು ಬಾರಿ ಬರೆಯುವುದು ಲೇಸು)

–ಸಾಮಾಜಿಕ ಮತ್ತು ಆಡಳಿತಾತ್ಮಕ ವ್ಯವಹಾರಗಲಿಗೆ ಬರವಣಿಗೆ ಅತ್ಯವಶ್ಯಕ.

–ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಗಳಿಸಿಕೊಳ್ಳಲು ಬರವಣಿಗೆಯ ಕರಗತ ಮಾಡಿಕೊಳ್ಳಬೇಕು.

–ಸ್ವತಂತ್ರ ಯೋಚನೆ ಮತ್ತು ಸೃಜನಶೀಲ ಅಭಿವ್ಯಕ್ತಿಗೆ ಸಹಾಯಕ.

–ಸಾಹಿತ್ಯ ಸೃಷ್ಟಿ, ಅಧ್ಯಯನ ಮತ್ತು ಸಾಹಿತ್ಯ ಪ್ರಸಾರಕ್ಕೆ ಪೂರಕವಾದುದಾಗಿದೆ.

–ಸಂಸ್ಕೃತಿಯ ವಿಕಾಸಕ್ಕೆ ಹಾಗೂ ಪ್ರಸಾರಕ್ಕೆ ಅವಶ್ಯಕವಾಗಿದೆ.

–ಜ್ಞಾನದ ಸೃಷ್ಟಿ, ಅಭಿವ್ಯಕ್ತಿ ಮತ್ತು ದಾಖಲೆಗೆ ಬರವಣಿಗೆ ಅವಶ್ಯಕವಾಗಿದೆ.

–ವಿಷಯದ ಅಧ್ಯಯನ ಮತ್ತು ವಿಷಯದ ಸಂಗ್ರಹಣೆಗೆಯಲ್ಲಿ ಬರವಣಿಗೆ ಪ್ರಾಮುಖ್ಯತೆಯನ್ನು ಹೊಂದಿದೆ.

–ವಿದ್ಯಾರ್ಥಿಗಳ ಸೃಜನಶೀಲ ಆಲೋಚನೆಗಳ ಅಭಿವ್ಯಕ್ತಿಗೆ ಅವಶ್ಯಕ.

–ಒಟ್ಟಾರೆ ಮಾನವನ ಇತಿಹಾಸದ ಶ್ರೀಮಂತ ಪರಂಪರೆ ಮತ್ತು ಅಪರಿಮಿತ ಜ್ಞಾನರಾಶಿಯನ್ನು ಎಲ್ಲರಿಗೂ ಎಲ್ಲಾ ಕಾಲಕ್ಕೂ ಲಭ್ಯವಾಗುವಂತೆ ಅವಿಚ್ಛಿನ್ನವಾಗಿ ಸಾಗಿಸುವ ಕಾರ್ಯ ಬರವಣಿಗೆಯಿಂದಲೇ ಸಾಗುತ್ತದೆ.

ಬರವಣಿಗೆಯ ಉದ್ದೇಶಗಳು:

–ಅರ್ಥಬದ್ಧವಾಗಿ, ಸುಸ್ಪಷ್ಟವಾಗಿ ಬರೆಯುವ ಕೌಶಲಗಳಲ್ಲಿ ಸಾಮರ್ಥ್ಯ ಬೆಳೆಸುವುದು.

–ಅರ್ಥಬದ್ಧ ವಾಕ್ಯಗಳು ಮತ್ತು ವಾಕ್ಯವೃಂದಗಳನ್ನು ಬರೆಯುವ ಕೌಶಲಗಳಲ್ಲಿ ಸಾಮರ್ಥ್ಯ ಬೆಳೆಸುವುದು.

–ಒಂದು ವಿಷಯದ ಬಗ್ಗೆ, ತನ್ನ ಆಲೋಚನೆ, ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ತನ್ನ ಭಾಷೆಯಲ್ಲಿ ಸ್ವತಂತ್ರವಾಗಿ ಬರೆಯುವ ಸಾಮರ್ಥ್ಯ ಬೆಳೆಸುವುದು.
–ವ್ಯಾಕರಣಶುದ್ಧವಾಗಿ, ಅಗತ್ಯ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯುವ ಸಾಮರ್ಥ್ಯ ಬೆಳೆಸುವುದು.
–ಉಚಿತ ವೇಗದಲ್ಲಿ ಕೇಳಿ ಬರೆಯುವ ಮತ್ತು ನೋಡಿ ಬರೆಯುವ ಸಾಮರ್ಥ್ಯ ಬೆಳೆಸುವುದು.
–ವಿವಿಧ ರೀತಿಯ ಪತ್ರಗಳು, ಕತೆ, ಕವನ ಮತ್ತು ಪ್ರಬಂಧಗಳನ್ನು ಅರ್ಥಬದ್ಧವಾಗಿ ಬರೆಯುವ ಸಾಮರ್ಥ್ಯ ಬೆಳೆಸುವುದು.
–ತನ್ನ ವ್ಯವಹಾರಿಕ ಜೀವನದಲ್ಲಿ ಅಗತ್ಯವಿರುವ ವಿವಿಧ ನಮೂನೆಗಳನ್ನು ಭರ್ತಿ ಮಾಡುವುದು, ಅರ್ಜಿಗಳು ಮನವಿ ಪತ್ರಗಳನ್ನು ಬರೆಯುವ ಸಾಮರ್ಥ್ಯ ಬೆಳೆಸುವುದು.
–ತರಗತಿಯ ಹಾಗೂ ವಿವಿಧ ಪರೀಕ್ಷೆಗಳಲ್ಲಿ ಪ್ರಶ್ನೆಗಳಿಗೆ ತರ್ಕಬದ್ಧ, ಕ್ರಮಬದ್ಧ ಉತ್ತರಗಳನ್ನು ಬರೆಯುವ ಸಾಮರ್ಥ್ಯ ಬೆಳೆಸುವುದು.
–ವಿಷಯಗಳನ್ನು ಸಂಕ್ಷೇಪಿಸಿ ಬರೆಯುವುದು, ವಿಸ್ತರಿಸಿ ಬರೆಯುವುದು, ಸರಳವಾದ ವರದಿ ಮತ್ತು ವಿವರಣೆಗಳನ್ನು ಬರೆಯುವುದು ಹಾಗೂ ಪದ್ಯಗಳಿಗೆ ತಾತ್ಪರ್ಯ ಬರೆಯುವ ಸಾಮರ್ಥ್ಯ ಬೆಳೆಸುವುದು.
–ತರಗತಿಯ ವಿವರಣೆಗಳು, ಉಪನ್ಯಾಸ ಮತ್ತು ಭಾಷಣಗಳನ್ನು ಕೇಳುತ್ತಾ ಹಾಗೂ ಪಠ್ಯವನ್ನು ಓದಿ ಅರ್ಥಬದ್ಧವಾಗಿ ಟಿಪ್ಪಣಿ ಮಾಡುವ ಸಾಮರ್ಥ್ಯ ಬೆಳೆಸುವುದು.
–ವಿಷಯಗಳನ್ನು, ಅಂಕಿ ಅಂಶಗಳನ್ನು ಕೋಷ್ಟಕದಲ್ಲಿ, ರೇಖಾನಕ್ಷೆಗಳಲ್ಲಿ ಅರ್ಥಪೂರ್ಣವಾಗಿ ನಿರೂಪಿಸಿ ಬರೆಯುವ ಕೌಶಲ ಬೆಳೆಸುವುದು.
–ಸುಸ್ಪಷ್ಟ, ಸುಂದರ, ಅರ್ಥಬದ್ಧವಾಗಿ, ವೇಗವಾಗಿ ಬರೆಯುವ ಸಾಮರ್ಥ್ಯ ಬೆಳೆಸುವುದು.

ಈ ಎಲ್ಲ ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಒಂದೇ ವರ್ಷದಲ್ಲಿ ಕೇವಲ ತರಗತಿಯ ಅಭ್ಯಾಸಗಳಿಂದ ಬೆಳೆಸಲಾಗುವುದಿಲ್ಲ. ಪಠ್ಯ ಅಭ್ಯಾಸಗಳ ಜೊತೆಗೆ ಬರವಣಿಗೆ ಅಭ್ಯಾಸಗಳು, ಸಾಹಿತ್ಯ ಚಟುವಟಿಕೆಗಳನ್ನು ಕೈಗೊಂಡು ಹಂತಹಂತವಾಗಿ ಬರವಣಿಗೆಯ ಕೌಶಲಗಳನ್ನು ಬೆಳೆಸಬಹುದು.

ವಿದ್ಯಾರ್ಥಿಗಳ ಕೈಬರಹದಲ್ಲಿ ಕಂಡುಬರುವ ಸಾಮಾನ್ಯ ದೋಷಗಳು:

ಮಕ್ಕಳು ಬರಹದಲ್ಲಿ ಮಾಡುವ ಸಾಮಾನ್ಯ ದೋಷವೆಂದರೆ ಕಾಗುಣಿತ ಬಳಕೆಯ ದೋಷ. ಕಾಗುಣಿತದ ರೇಖಾ ವಿನ್ಯಾಸಗಳನ್ನು ಸರಿಯಾಗಿ ಮೂಡಿಸದೇ ಇರುವುದು, ತಲೆಗಟ್ಟು, ದೀರ್ಘ, ಕೊಂದು, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಇತ್ಯಾದಿಗಳನ್ನು ಸರಿಯಾಗಿ ಬರೆಯದಿರುವುದು, ಅಲ್ಪಪ್ರಾಣ, ಮಹಾಪ್ರಾಣ, ದೀರ್ಘಾಕ್ಷರ, ಸಂಯುಕ್ತಾಕ್ಷರಗಳನ್ನು ಕ್ರಮವಾಗಿ ಬರೆಯದಿರುವುದು ಇತ್ಯಾದಿ ದೋಷಗಳು ಕಂಡುಬರುತ್ತವೆ.

1. ಅಕ್ಷರ ರಚನಾ ವಿನ್ಯಾಸದಲ್ಲಿ ಸಂಭವಿಸುವ ದೋಷಗಳು– ಇಲ್ಲಿ ರೇಖಾವಿನ್ಯಾಸಗಳನ್ನು ನಿರರ್ಗಳವಾಗಿ ಮೂಡಿಸದೆ ಅಸ್ಪಷ್ಟವಾಗಿ ಬರೆಯುವುದು, ಅಕ್ಷರಗಳನ್ನು ಅವುಗಳ ಮೂಲ ರೂಪಕ್ಕೆ ತಕ್ಕಂತೆ ಬರೆಯದೆ ವಿರೂಪ ಮಾಡಿ ಬರೆಯುವುದು, ಬರೆಯುವ ಕ್ರಮದಲ್ಲಿ ದೋಷಗಳು, ತಲೆಗಟ್ಟನ್ನು ಏರುಪೇರಾಗಿ ಹಾಕುವುದು, ಅಕ್ಷರಗಳನ್ನು ಒಂದು ಕಡೆ ಬಾಗಿಸಿ ಬರೆಯುವುದು, ಅಸ್ಪಷ್ಟವಾಗಿ,

ಸಂಕುಚಿಸಿ ಅಥವಾ ಕೂಡಿಸಿ ಬರೆಯುವುದು, ಒತ್ತುಗಳನ್ನು ಅಸ್ತವ್ಯಸ್ತವಾಗಿ ಹಾಕುವುದು ಮುಂತಾದ ದೋಷಗಳು ಕಂಡುಬರುತ್ತವೆ.

ಇವುಗಳಿಗೆ ಕಾರಣಗಳೆಂದರೆ– ರೇಖಾ ವಿನ್ಯಾಸವನ್ನು ಬರೆಯುವ ಅಭ್ಯಾಸವಿಲ್ಲದಿರುವುದು. ಅಕ್ಷರಗಳ ರೂಪದ ಸ್ಪಷ್ಟ ಕಲ್ಪನೆ ಇಲ್ಲದಿರುವುದು. ಲೇಖನಿ ಹಿಡಿಯುವ ಕ್ರಮ ಗೊತ್ತಿಲ್ಲದೆ ಇರುವದು ಮತ್ತು ಬರೆಯುವ ನಿಯಮ ಅಥವಾ ಕ್ರಮ ಸರಿಯಾಗಿ ತಿಳಿದಿಲ್ಲರುವುದು. ಕಾಪಿ ಪುಸ್ತಕ ಬರೆಯುವ ಅಭ್ಯಾಸ ಮಾಡಿರದೆ ಇಲ್ಲದಿರುವುದು. ಪ್ರಾಥಮಿಕ ಹಂತಗಳಲ್ಲಿ ಸೂಕ್ತ ತರಬೇತಿ ತರಬೇತಿ ಇಲ್ಲದಿರುವುದು ಮುಂತಾದ ಕಾರಣಗಳಿಂದ ಅಕ್ಷರಗಳ ರಚನೆಯ ವಿನ್ಯಾಸದಲ್ಲಿ ದೋಷಗಳಾಗುತ್ತವೆ.

ಇವುಗಳಿಗೆ ಪರಿಹಾರ ಅಭ್ಯಾಸಗಳೆಂದರೆ– ರೇಖಾ ವಿನ್ಯಾಸದ ಸ್ಪಷ್ಟ ಕಲ್ಪನೆ ಮೂಡಿಸಿ ನಿರರ್ಗಳವಾಗಿ ಬರೆಯುವ ಅಭ್ಯಾಸ ಮಾಡಿಸುವುದು. ಅಕ್ಷರಗಳ ಮೂಲ ರೂಪದ ಪರಿಚಯ ಮಾಡಿಕೊಡುವುದು. ಬರೆಯುವ ಕ್ರಮವನ್ನು ಸರಿಯಾಗಿ ಅಭ್ಯಾಸ ಮಾಡಿಸುವುದು. ಮಾದರಿ ಬರಹಗಳನ್ನು ಪರಿಚಯ ಮಾಡಿಸುವುದು. ಕಾಪಿ ಪುಸ್ತಕ ಬರೆಯುವ ಅಭ್ಯಾಸಗಳನ್ನು ಮಾಡಿಸುವುದು. ಒತ್ತಕ್ಷರ, ಸಂಯುಕ್ತಾಕ್ಷರಗಳನ್ನು ಬರೆಯುವ ಅಭ್ಯಾಸಗಳನ್ನು ಮಾಡಿಸಿ ಬರವಣಿಗೆಯ ದೋಷಗಳನ್ನು ಕಡಿಮೆ ಮಾಡುವುದು.

2. ಅಕ್ಷರ, ಪದ ಜೋಡಣೆಯಲ್ಲಿ ಸಂಭವಿಸುವ ದೋಷಗಳು– ಅಕ್ಷರಗಳು, ಪದಗಳಲ್ಲಿ ಕಾಗುಣಿತಗಳು ಹಾಗೂ ಲೇಖನ ಚಿಹ್ನೆಗಳನ್ನು ಅರ್ಥಬದ್ಧವಾಗಿ ಜೋಡಿಸಿದಾಗ ಆ ಬರವಣಿಗೆಯು ಭಾವನೆ ಮತ್ತು ಅರ್ಥವನ್ನು ಸರಿಯಾಗಿ ಸಂವಹನ ಮಾಡಬಲ್ಲದು. ಅಕ್ಷರ ಮತ್ತು ಪದ ಜೋಡಣೆಯಲ್ಲಿ ಏರುಪೇರಾದರೆ, ಕಾಗುಣಿತ ಮತ್ತು ಲೇಖನ ಚಿಹ್ನೆಗಳಲ್ಲಿ ದೋಷವಾದರೆ ಬರಹ ಅರ್ಥ ಕಳೆದುಕೊಳ್ಳುತ್ತದೆ. ಅಕ್ಷರ ಮತ್ತು ಪದಗಳನ್ನು ಮುತ್ತು ಪೋಣಿಸಿದಂತೆ ಸುಸಂಬದ್ಧವಾಗಿ, ಅರ್ಥಬದ್ಧವಾಗಿ ಜೋಡಿಸಿ ಬರೆಯುವುದರಿಂದ ಬರಹ ಸುಂದರವಾಗಿ ಮೂಡಿಬರುತ್ತದೆ. ಇದರಲ್ಲಿ ಕಂಡುಬರುವ ದೋಷಗಳೆಂದರೆ, ಅಕ್ಷರ ಮತ್ತು ಪದಗಳನ್ನು ಸುಸಂಬದ್ಧವಾಗಿ ಜೋಡಿಸದಿರುವುದು, ಅಕ್ಷರಗಳನ್ನು ಒಂದಕ್ಕೊಂದು ಹತ್ತಿಹತ್ತಿಯಾಗಿ ಬರೆಯುವುದು, ಅಕ್ಷರಗಳ ಗಾತ್ರದಲ್ಲಿ ಏರುಪೇರಾಗಿರುವುದು, ಅಕ್ಷರಗಳನ್ನು ಬಿಡಿ ಬಿಡಿಯಾಗಿ ಬರೆಯುವುದು, ವಕ್ರವಾದ ಸಾಲುಗಳಲ್ಲಿ ಬರೆಯುದರಿಂದ ಬರಹದ ಸಹಜತೆ ಮತ್ತು ಸೌಂದರ್ಯ ಕೆಡುತ್ತದೆ.

ಇವುಗಳಿಗೆ ಕಾರಣಗಳೆಂದರೆ– ಅಕ್ಷರ ಜೋಡಣೆಯಲ್ಲಿ ಸೂಕ್ತ ತರಬೇತಿ ಇಲ್ಲದಿರುವುದು. ಪದಗಳ ರಚನೆಯಲ್ಲಿ ಅಭ್ಯಾಸಗಳಿಲ್ಲದಿರುವುದು. ಕಾಪಿ ಪುಸ್ತಕ ಬರೆಯುವ, ವಾಕ್ಯ ರಚನೆಯ ಅಭ್ಯಾಸಗಳಿಲ್ಲದಿರುವುದು. ಆತುರ ಅಥವಾ ತಾತ್ಸಾರ, ಆಸಕ್ತಿ ಇಲ್ಲದೆ ಬರೆಯುವುದು. ಪ್ರತಿದಿನ ಕೈಬರಹದ ಅಭ್ಯಾಸವಿಲ್ಲದಿರುವುದು. ಅಕ್ಷರಗಳ ಪದಗಳ ಜೋಡಣೆಯ ಬಗ್ಗೆ ಸೂಕ್ತ ತಿಳುವಳಿಕೆ ಇಲ್ಲದಿರುವುದು ಕಾರಣಗಳಾಗಿವೆ.

ಇವುಗಳಿಗೆ ಪರಿಹಾರ ಅಭ್ಯಾಸಗಳೆಂದರೆ– ಅಕ್ಷರಗಳನ್ನು ಬರೆಯುವ ಕ್ರಮದಲ್ಲಿ ಅಭ್ಯಾಸಗಳನ್ನು ಮಾಡಿಸುವುದು. ಅಕ್ಷರಗಳನ್ನು ಸುಸಂಬದ್ಧವಾಗಿ ಜೋಡಿಸುವ ಅಭ್ಯಾಸದ ಜೊತೆಗೆ ಪದ ರಚನೆ ಮತ್ತು ವಾಕ್ಯಗಳ ರಚನೆಯ ಅಭ್ಯಾಸಗಳನ್ನು ಮಾಡಿಸುವುದು. ಮಾದರಿ ಕೈಬರಹದ ಪರಿಚಯ ಮಾಡಿಕೊಟ್ಟು

ಕಾಪಿ ಬರೆಯುವಂತೆ ಮಾರ್ಗದರ್ಶನ ಮಾಡುವುದು. ಸ್ಪಷ್ಟ, ದುಂಡಾಗಿ ಬರೆಯುವ ಅಭ್ಯಾಸ ಮಾಡಿಸುವುದು. ನೇರವಾದ ಸಾಲುಗಳಲ್ಲಿ ಬರೆಯುವ ಅಭ್ಯಾಸಗಳನ್ನು ಮಾಡಿಸುವುದು. ಪ್ರಾಥಮಿಕ ಹಂತದಲ್ಲಿಯೇ ಹೆಚ್ಚು ಹೆಚ್ಚು ಬರವಣಿಗೆಯ ತರಬೇತಿ ಮತ್ತು ಅಭ್ಯಾಸ ಮಾಡಿಸುವುದರಿಂದ ದೋಷಗಳು ನಿವಾರಣೆಯಾಗುತ್ತವೆ.

3. **ಕಾಗುಣಿತ ದೋಷಗಳು**–ಅರ್ಥಬದ್ಧ ಕಾಗುಣಿತವಿಲ್ಲದ ಬರಹ ಬರಹವೇ ಅಲ್ಲ. ಮಕ್ಕಳು ಕೈಬರಹದಲ್ಲಿ ಮಾಡುವ ಸಾಮಾನ್ಯ ದೋಷವೆಂದರೆ ಅಸಮರ್ಪಕ ಕಾಗುಣಿತ ಬಳಕೆ. ಕಾಗುಣಿತದ ರೇಖಾವಿನ್ಯಾಸಗಳನ್ನು ಸರಿಯಾಗಿ ಅಳವಡಿಸದೆ ಬರೆಯುವುದು. ತಲೆಗಟ್ಟು, ದೀರ್ಘ, ಕೊಂಬು, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಮುಂತಾದವುಗಳನ್ನು ಸರಿಯಾಗಿ ಸೇರಿಸದೆ ಬರೆಯುವುದು. ಅಲ್ಪಪ್ರಾಣ, ಮಹಾಪ್ರಾಣ, ದೀರ್ಘಾಕ್ಷರ, ಸಂಯುಕ್ತಾಕ್ಷರಗಳನ್ನು ಕ್ರಮವಾಗಿ ಬರೆಯದಿರುವುದು. ಅ, ಹ, ಸ, ಷ, ಳ, ಲ, ನ, ಣ, ಏ ಇತ್ಯಾದಿಗಳನ್ನು ಬರೆಯುವಾಗ ಆಗುವ ದೋಷಗಳು ಕಾಗುಣಿತದ ದೋಷಗಳಾಗಿವೆ.

ಇವುಗಳಿಗೆ ಕಾರಣಳೆಂದರೆ– ಅಸ್ಪಷ್ಟವಾಗಿ ರೇಖೆಗಳನ್ನು ಮೂಡಿಸುವುದರಿಂದ, ರೇಖೆಗಳು ಸರಾಗವಾಗಿ ಹರಿಯದಿರುವಾಗ, ಲೇಖನಿಯನ್ನು ಸರಿಯಾಗಿ ಹಿಡಿಯದಿರುವಾಗ, ರೇಖಾವಿನ್ಯಾಸಗಳನ್ನು ಸರಿಯಾಗಿ ಮೂಡಿಸುವ ಅಭ್ಯಾಸಗಳ ಕೊರತೆಯಿಂದ, ವರ್ಣಗಳ ರಚನಾ ವಿನ್ಯಾಸ ತಿಳಿಯದೆ ಇರುವುದರಿಂದ, ಕಾಗುಣಿತ ಜ್ಞಾನ ಇಲ್ಲದೆ, ಕಾಗುಣಿತದ ಬಗ್ಗೆ ಸರಿಯಾದ ತಿಳುವಳಿಕೆ ಹಾಗೂ ತರಬೇತಿ ಇಲ್ಲದಿರುವುದರಿಂದ, ಶ್ರವಣ ದೋಷಗಳಿಂದ, ಪರಭಾಷೆಯ ಬರವಣಿಗೆಯ ಪ್ರಭಾವದಿಂದ, ಮಾನಸಿಕ ಹೊಂದಾಣಿಕೆಯ ಕೊರತೆಯಿಂದ, ಸರಿಯಾದ ಅಭ್ಯಾಸ ಇಲ್ಲದಿರುವುದರಿಂದ, ಅತುರ, ಬೇಜವಾಬ್ದಾರಿ, ಅಜಾಗರುಕತೆಯಿಂದ ಕಾಗುಣಿತದ ದೋಷಗಳು ಕಂಡುಬರುತ್ತವೆ.

ಇವುಗಳಿಗೆ ಪರಿಹಾರ ಅಭ್ಯಾಸಗಳೆಂದರೆ– ಅಕ್ಷರಗಳ ಸ್ಪಷ್ಟ ರೂಪ ಮತ್ತು ಬರೆಯುವ ಕ್ರಮವನ್ನು ಸರಿಯಾಗಿ ಪರಿಚಯ ಮಾಡುವುದು. ಅಕ್ಷರಗಳಿಗೆ, ತಲೆಗಟ್ಟು, ಕೊಂಬು, ಒತ್ತು ಇತ್ಯಾದಿಗಳ ಚಿಹ್ನೆಗಳನ್ನು ಸರಿಯಾಗಿ ಬರೆಯುವ ಅಭ್ಯಾಸ ಮಾಡಿಸುವುದು. ಕಾಗುಣಿತವಿರುವ ವಾಕ್ಯಗಳನ್ನು ಪದೆ ಪದೆ ಬರೆಯಿಸಿ ಅಭ್ಯಾಸ ಮಾಡಿಸುವುದು. ಕಾಗುಣಿತ ಚಾರ್ಟುಗಳನ್ನು ಪರಿಚಯಿಸುವುದು. ಕಾಗುಣಿತಬದ್ದ ಪದಗಳು, ವಾಕ್ಯಗಳು ಇರುವ ಕಾಪಿ ಪುಸ್ತಕಗಳನ್ನು ಬರೆಸುವುದು.

4. **ಲೇಖನ ಚಿಹ್ನೆಗಳನ್ನು ಅಳವಡಿಸುವ ದೋಷಗಳು**– ವಾಕ್ಯಗಳಿಗೆ ಅನವಶ್ಯಕ ಲೇಖನ ಚಿಹ್ನೆಗಳನ್ನು ಹಾಕುವುದು, ವಿವಿಧ ಚಿಹ್ನೆಗಳ ಬಗೆಗೆ ಸೂಕ್ತ ಜ್ಞಾನವಿಲ್ಲದೆ ಹಾಕುವುದು, ಮಹಾಪ್ರಾಣಕ್ಕೆ ಅಲ್ಪಪ್ರಾಣದ ಒತ್ತು ಕೊಡುವುದು, ಅವಶ್ಯವಿರುವ ಕಡೆಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಹಾಕದಿರುವುದು ಮುಂತಾದ ದೋಷಗಳಿಂದಾಗಿ ಕೈಬರಹದ ಅರ್ಥ ಕೆಡುತ್ತದೆ.

ಇದಕ್ಕೆ ಕಾರಣವೆಂದರೆ– ಲೇಖನ ಚಿಹ್ನೆಗಳ ಬಗೆಗೆ ಸರಿಯಾಗಿ ಪರಿಚಯ ಇಲ್ಲದೆ ವಾಕ್ಯರಚನೆಯ ಬಗೆಗೆ ಅಪೂರ್ಣ ಜ್ಞಾನದಿಂದಾಗಿ, ವಾಚನ ಅಭ್ಯಾಸದ ಕೊರತೆಯಿಂದಾಗಿ, ಕೈಬರಹದ ಅಭ್ಯಾಸಗಳಲ್ಲಿ ಇಂತಹ ದೋಷಗಳು ಮೂಡಿಬರುತ್ತವೆ.

ಇದಕ್ಕೆ ಪರಿಹಾರ ಅಭ್ಯಾಸಗಳೆಂದರೆ–ಅಕ್ಷರಗಳಿಗೆ ಕಾಗುಣಿತ ವಿನ್ಯಾಸಗಳನ್ನು ಜೋಡಿಸುವ ಅಭ್ಯಾಸಗಳನ್ನು ಮಾಡಿಸುವುದು.ವಾಕ್ಯರಚನೆ, ವಾಕ್ಯರಚನೆಯ ಅಭ್ಯಾಸಗಳು, ಲೇಖನ ಚಿಹ್ನೆ ಅಳವಡಿಸಿರುವ ಮಾದರಿ ವಾಕ್ಯಗಳ ಪರಿಚಯ, ಕಾಪಿ ಪುಸ್ತಕ ಬರೆಸುವುದನ್ನು ಮಾಡುವುದು. ಪ್ರಾಥಮಿಕ ಹಂತದಲ್ಲಿ ಬರಹವನ್ನು ಕಲಿಸುವಾಗ ಕನ್ನಡದಲ್ಲಿ ಬಳಸಬಹುದಾದಂತಹ ವಿವಿಧ ಲೇಖನ ಚಿಹ್ನೆಗಳ ರೂಪ, ಅವುಗಳನ್ನು ಬಳಸುವ ಕ್ರಮ, ಆ ಲೇಖನ ಚಿಹ್ನೆಗಳ ವೈಶಿಷ್ಟ್ಯಗಳನ್ನು ಪರಿಚಯ ಮಾಡಿಕೊಡಬೇಕು.

5. **ವಾಕ್ಯರಚನೆ, ವಾಕ್ಯವೃಂದ ರಚನೆಯಲ್ಲಿ ಸಂಭವಿಸುವ ದೋಷಗಳು**– ಅತಿ ಉದ್ದನೆಯ ಅಥವಾ ಅಪೂರ್ಣ ವಾಕ್ಯರಚನೆ, ಸಂಧಿಗ್ದ ವಾಕ್ಯಗಳು, ಅರ್ಥವಾಗದ ವಾಕ್ಯಗಳು, ವ್ಯಾಕರಣ ದೋಷದ ವಾಕ್ಯಗಳು, ಅವಶ್ಯಕ ಲೇಖನ ಚಿಹ್ನೆಗಳನ್ನು ಅಳವಡಿಸದೆ ರಚಿಸುವ ವಾಕ್ಯಗಳು, ಕಾಲ, ಲಿಂಗ, ವಚನಗಳನ್ನು ಸರಿಯಾಗಿ ಬಳಸದೆ ಇರುವುದು, ಅನವಶ್ಯಕ ಪದಗಳನ್ನು ಸೇರಿಸುವುದು, ಪದಗಳನ್ನು ಪುನರಾವರ್ತನೆ ಮಾಡುವುದು ಮುಂತಾದ ದೋಷಗಳಿಂದ ವಾಕ್ಯರಚನೆ ಮಾಡಿದರೆ ಕೈಬರಹಕ್ಕೆ ಸುಸಂಬದ್ಧತೆ ಬರುವುದಿಲ್ಲ. ಹಾಗೆಯೇ ತುಂಬಾ ದೊಡ್ಡ ವಾಕ್ಯವೃಂದ ಬರೆಯುವುದು, ಅನವಶ್ಯಕವಾಗಿ ವಾಕ್ಯಗಳನ್ನು ಪುನರಾವರ್ತಿಸಿ ಬರೆಯುವುದು, ವಾಕ್ಯಗಳು ಪರಸ್ಪರ ಸಂಪರ್ಕ ಕಳೆದುಕೊಂಡಿರುವುದು, ವಾಕ್ಯಗಳು ಆಲೋಚನೆಗಳನ್ನು ಬೆಳೆಸದೆ ಕತ್ತರಿಸುವುದು, ವಾಕ್ಯಗಳ ಮಹತ್ವವನ್ನರಿಯದೆ ಬರೆಯುವುದು ಇಂತಹ ಲೇಖನಗಳು ಬಿಗಿ ಕಳೆದುಕೊಂಡು ವಾಕ್ಯಗಳು ಬರಹದ ಓಗವನ್ನು ತುಂಡು ಮಾಡುತ್ತವೆ.

ಇವುಗಳಿಗೆ ಪರಿಹಾರ ಅಭ್ಯಾಸಗಳು–ವಾಕ್ಯರಚನೆ ಮತ್ತು ವಾಕ್ಯವೃಂದ ರಚನೆಯಲ್ಲಿ ಸೂಕ್ತ ತರಬೇತಿ ಮತ್ತು ಅಭ್ಯಾಸಗಳಿಲ್ಲದೆ ಇಂತಹ ದೋಷಗಳುಂಟಾಗುತ್ತವೆ. ವಾಕ್ಯರಚನೆಯಲ್ಲಿ ತರಬೇತಿ ನೀಡುವುದು, ವಿವಿಧ ವಾಕ್ಯಗಳು, ಹೇಳಿಕೆಗಳು, ನುಡಿಮುತ್ತುಗಳನ್ನು ಬರೆಸುವುದು. ಮುಂತಾದ ಅಭ್ಯಾಸಗಳಿಂದ ಉತ್ತಮ ವಾಕ್ಯರಚನೆ ಮತ್ತು ವಾಕ್ಯವೃಂದ ರಚನೆ ಸಾಮರ್ಥ್ಯ ಬೆಳೆಸಬಹುದು.

6. **ಒಟ್ಟಾರೆ ಕೈಬರಹದಲ್ಲಾಗುವ ದೋಷಗಳು**– ಅಂದರೆ ಮಾರ್ಜಿನ್ ಬಿಡದೆ ಬರೆಯುವುದು, ಶೀರ್ಷಿಕೆ ಹಾಗೂ ಉಪಶೀರ್ಷಿಕೆಗಳನ್ನು ನೀಡದೆ ಬರೆಯುವುದು. ಸುಸ್ಪಷ್ಟತೆ ಮತ್ತು ಸಮರೂಪತೆ ಕಾಯ್ದುಕೊಳ್ಳದೆ ಬರೆಯುವುದು. ಪದಗಳನ್ನು ಕತ್ತರಿಸುವುದು, ವಕ್ರವಾದ ಸಾಲುಗಳು, ಸಾಲುಗಳ ನಡುವೆ ಸೂಕ್ತ ಅಂತರ ಕಾಯ್ದುಕೊಳ್ಳದೆ ಬರೆಯುವುದು. ಬರಹದಲ್ಲಿ ಮಂದತೆ, ಸ್ಥಿರತೆಯಿಲ್ಲದಿರುವುದು. ಅಕ್ಷರಗಳು ಏರುಪೇರಾಗಿರುವುದು ಮತ್ತು ಗಾತ್ರದಲ್ಲಿ ವ್ಯತ್ಯಾಸಗಳಾಗಿರುವುದು ಮುಂತಾದ ದೋಷಗಳು ಕಂಡುಬರುತ್ತವೆ. ಇಂತಹ ದೋಷಗಳಿಂದ ಇಡೀ ಕೈಬರಹ ತನ್ನ ಸೊಬಗನ್ನು ಕಳೆದುಕೊಳ್ಳುತ್ತದೆ. ಇದರಿಂದ ಭಾಷೆಯ ರಚನೆ ಮತ್ತು ವಿಷಯ ನಿರೂಪಣೆಯ ಕ್ರಮದಲ್ಲಿ ದೋಷಗಳಾಗುತ್ತವೆ.

ಪರಿಹಾರ ಅಭ್ಯಾಸಗಳು– ಕೈಬರಹದಲ್ಲಿ ಸೂಕ್ತ ತರಬೇತಿ ಮತ್ತು ಅಭ್ಯಾಸಗಳಿಲ್ಲದೆ ಇಂತಹ ದೋಷಗಳು ಸಂಭವಿಸುತ್ತವೆ. ವಿದ್ಯಾರ್ಥಿಗಳಿಗೆ ಕ್ರಮ ಕ್ರಮವಾಗಿ ವಿವಿಧ ರೀತಿಯ ಕತೆ, ಪ್ರಬಂಧ, ಹೇಳಿಕೆಗಳು, ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಸುವ ಅಭ್ಯಾಸಗಳನ್ನು ಮಾಡಿಸಬೇಕು. ವಿದ್ಯಾರ್ಥಿಗಳಿಗೆ

ಸಹಜವಾಗಿ ದುಂಡಾಗಿ ಬರೆಯುವ ಕೌಶಲಗಳಲ್ಲಿ ತರಬೇತಿ ನೀಡಬೇಕು. ಮಾದರಿ ಕೈಬರಹಗಳನ್ನು ಪರಿಚಯಿಸಿ ಹಂತ ಹಂತವಾಗಿ ಮಕ್ಕಳ ಕೈಬರಹವನ್ನು ಉತ್ತಮಪಡಿಸಬೇಕು.

♦ **ಕನ್ನಡ ಭಾಷಾ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳು:** ಬರವಣಿಗೆ ಸುಂದರವಾಗಿದ್ದರಷ್ಟೇ ಸಾಲದು ಅದು ವ್ಯಾಕರಣಬದ್ಧವಾಗಿ ಅರ್ಥಪೂರ್ಣವಾಗಿರಬೇಕು. ಬರಹದಲ್ಲಿ ಉದ್ದೇಶಿತ ಅರ್ಥ ಮತ್ತು ಭಾವನೆ ಹೊರಹೊಮ್ಮುವಂತೆ ಆ ಬರಹಕ್ಕೆ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಬೇಕು. ಅಗತ್ಯ ಲೇಖನ ಚಿಹ್ನೆಗಳನ್ನು ಅಳವಡಿಸಿಕೊಳ್ಳದೆ ಬರೆಯುವ ಬರಹವು ನಿರ್ದಿಷ್ಟ ಅರ್ಥ ಕೊಡುವಲ್ಲಿ ವಿಫಲವಾಗುತ್ತದೆ. ಲೇಖನ ಚಿಹ್ನೆಗಳು ಬರಹಕ್ಕೆ ಅರ್ಥ, ಭಾವ, ಸಂಯೋಜನೆ, ಉಚ್ಚಾರ, ಧ್ವನಿ, ಏರಿಳಿತ, ನಿರಂತರತೆ ಮತ್ತು ನಿಲುಗಡೆಯ ಕ್ರಮವನ್ನು ತಂದು ಕೊಡುತ್ತವೆ. ಲೇಖನ ಚಿಹ್ನೆಗಳು ಓದುಗನಿಗೆ ಅವಶ್ಯಕ ಸೂಚನೆಗಳಾಗಿದ್ದು, ಲೇಖನ ಚಿಹ್ನೆಗಳನ್ನು ಸರಿಯಾಗಿ ಅಳವಡಿಸಿಕೊಂಡು ಓದುವುದರಿಂದ ಓದುಗಾರಿಕೆ ಅರ್ಥಪೂರ್ಣವಾಗುತ್ತದೆ. ಪದಗಳು ಮತ್ತು ಧ್ವನಿಯ ಏರಿಳಿತ, ನಿಶ್ಚಿತ ಭಾವನೆಯ ಪ್ರಕಟಣೆಗೆ ಲೇಖನ ಚಿಹ್ನೆಗಳನ್ನಳವಡಿಸಿ ಬರೆಯಬೇಕು.

1. **ಪೂರ್ಣ ವಿರಾಮ (.)–** ಒಂದು ಪರಿಪೂರ್ಣ ಅಥವಾ ಸಂಪೂರ್ಣ ಅರ್ಥಕೊಡುವ ವಿಷಯವನ್ನು ಬರೆದ ನಂತರ ಆ ವಾಕ್ಯದ ಕೊನೆಗೆ ಪೂರ್ಣವಿರಾಮವನ್ನು ಹಾಕಬೇಕು. ಪೂರ್ಣ ವಿರಾಮದ ನಂತರ ಹೊಸ ವಾಕ್ಯವನ್ನು ಪ್ರಾರಂಭಿಸಬೇಕು. ಇದೆಲ್ಲ ಪೂರ್ಣಾರ್ಥದಲ್ಲಿ ನಡೆಯುವ ಕಾರ್ಯವಾಗಿರುತ್ತದೆ. ಓದುವಾಗ ಮತ್ತು ಬರೆಯುವಾಗ ಪೂರ್ಣ ವಿರಾಮಗಳನ್ನು ಅನುಸರಿಸಬೇಕು. ಬರಹದಲ್ಲಿ ಸಂಪೂರ್ಣ ಅರ್ಥ ಕೊಡುವ ಪ್ರತಿ ವಾಕ್ಯದ ಕೊನೆಯಲ್ಲಿ ಪೂರ್ಣ ವಿರಾಮ ಹಾಕಬೇಕು.
2. **ಅಲ್ಪ ವಿರಾಮ (,)–** ಸಾಮನ್ಯವಾಗಿ ಬರೆಯುವ ವಾಕ್ಯಗಳು ಅತ್ಯಂತ ದೊಡ್ಡದಾಗಿದ್ದರೆ ಮತ್ತು ಒಂದೇ ವಾಕ್ಯದಲ್ಲಿ ಪ್ರಮುಖ ಉಪಅಂಶಗಳನ್ನು ತಿಳಿಸಬೇಕಾದಾಗ ಪ್ರತಿಯೊಂದು ಉಪಅಂಶವನ್ನು ಬರೆದ ನಂತರ ಅಲ್ಪವಿರಾಮ ಬರೆಯುತ್ತೇವೆ. ಓದುವಾಗ ಅಲ್ಪವಿರಾಮಗಳು ನಿಲುಗಡೆಯ ತಾಣಗಳನ್ನು ಅನುಸರಿಸಿ, ನಿಂತು ಓದುಅವಂತೆ ಸೂಚಿಸುತ್ತವೆ. ವಿಷಯಕ್ಕನುಗುಣವಾಗಿ ಓದುವ ದಿಕ್ಕನ್ನು ಬದಲಾಯಿಸಲು, ಧ್ವನಿ ಏರಿಳಿತ ಅನುಸರಿಸಲು, ಓದುವ ಶೈಲಿಯನ್ನು ಅಳವಡಿಸಿಕೊಳ್ಳಲು ಸೂಚಿಸುತ್ತವೆ. ಓದುವ ವಿಷಯಕ್ಕೆ ಸೂಕ್ತ ಆಯಾಮ ತಂದುಕೊಡುತ್ತವೆ.
3. **ಅರ್ಧ ವಿರಾಮ (;)–** ಓದುವಾಗ ಅರ್ಧನಿಲುಗಡೆಯ ತಾಣಗಳನ್ನು ಅಳವಡಿಸಿ ಓದಲು ಅರ್ಧವಿರಾಮಗಳನ್ನು ಬಳಸಲಾಗುತ್ತದೆ. ದೊಡ್ಡ ವಾಕ್ಯಗಳಲ್ಲಿ ಹಲವು ನಿರ್ದಿಷ್ಟ ಅಂಶಗಳನ್ನು ನಿರಂತರವಾಗಿ ಮುಂದುವರೆದಿದ್ದರೆ, ಅಥವಾ ವಾಕ್ಯಗಳಲ್ಲಿ ಸೇರಿಸಿಕೊಂಡಿದ್ದರೆ, ಪ್ರತಿಯೊಂದು ನಿರ್ದಿಷ್ಟ ಅಂಶದ ನಂತರ ಅರ್ಧವಿರಾಮ ಚಿಹ್ನೆಯನ್ನು ಹಾಕಬೇಕು. ನಂತರ ಓದುವಾಗ ಅರ್ಧವಿರಾಮ ಚಿಹ್ನೆಯನ್ನು ಅನುಸರಿಸಿ ನಿಲ್ಲಿಸಿ ಓದಬೇಕು.
4. **ವಿವರಣಾತ್ಮಕ ಚಿಹ್ನೆ (:)–** ಒಂದು ದೊಡ್ಡ ವಾಕ್ಯದಲ್ಲಿ ಅಥವಾ ವಾಕ್ಯ ವೃಂದದಲ್ಲಿ ಹಲವು ಅಂಶಗಳು ವಿವರಿಸಲ್ಪಡುವಂತೆ ಬರೆಯುವಾಗ ಪ್ರತಿ ಅಂಶ ಬರೆದ ನಂತರ, ಹೇಳಿಕೆಯನ್ನು

ಬರೆಯುವಾಗ ಈ ಚಿಹ್ನೆಯನ್ನು ಹಾಕಲಾಗುತ್ತದೆ. ಓದುಗರ ಗಮನ ಸೆಳೆಯುವ ಒಂದು ತಂತ್ರವನ್ನಾಗಿಯೂ ವಿವರಣಾತ್ಮಕ ಚಿಹ್ನೆಗಳನ್ನು ಹಾಕಲಾಗುತ್ತದೆ.

5. **ಪ್ರಶ್ನಾರ್ಥಕ ಚಿಹ್ನೆ (?)–** ವಾಕ್ಯವು ಪ್ರಶ್ನೆಯ ರೀತಿಯಲ್ಲಿದ್ದರೆ, ಪ್ರಶ್ನಾರ್ಥಕವಾಗಿದ್ದರೆ ಪ್ರಶ್ನಾರ್ಥಕ ಚಿಹ್ನೆಯಿಂದ ಕೊನೆಗೊಳ್ಳುತ್ತದೆ. ಏನು? ಏಕೆ? ಎಲ್ಲಿ? ಹೇಗೆ? ಯಾರು? ಯಾರಿಗೆ? ಯಾವುದು? ಎಲ್ಲಿಂದ? ಮುಂತಾದ ಪದಗಳಿಂದ ಪ್ರಾರಂಭವಾಗುವ ಅಥವಾ ಮುಕ್ತಾಯವಾಗುವ ವಾಕ್ಯಗಳಿಗೆ ಪ್ರಶ್ನಾರ್ಥಕ ಚಿಹ್ನೆಗಳನ್ನು ಹಾಕಲಾಗುತ್ತದೆ.
6. **ಆಶ್ಚರ್ಯ, ಉದ್ಗಾರ ಅಥವಾ ಭಾವಸೂಚಕ ಚಿಹ್ನೆ (!)–**ಮನಸ್ಸಿನಲ್ಲಿ ಉದ್ಭವಿಸಿದ ಆಶ್ಚರ್ಯ, ಸಂತೋಷ ಮತ್ತು ಖೇದ ಇತ್ಯಾದಿಗಳನ್ನು ಸೂಚಿಸಲು ಉದ್ಗಾರವಾಚಕ ಚಿಹ್ನೆಯನ್ನು ಬಳಸಲಾಗುತ್ತದೆ. ಆವೇಶದ, ಉದ್ಗಾರದ, ಆಶ್ಚರ್ಯ ಸೂಚಿಸುವ ಪದಗಳು, ವಾಕ್ಯಗಳು ಮತ್ತು ನುಡಿಗಟ್ಟುಗಳಿಗೆ ಆಶ್ಚರ್ಯ ಸೂಚಕ ಚಿಹ್ನೆಗಳನ್ನು ಹಾಕಲಾಗುತ್ತದೆ. ಪದದ ಅಥವಾ ವಾಕ್ಯದ ಭಾವನೆಯ ತೀವ್ರತೆಯ ಮಟ್ಟವನ್ನು ಸೂಚಿಸಲು ಕೆಲವು ಸಂದರ್ಭಗಳಲ್ಲಿ ಎರಡು ಚಿಹ್ನೆಗಳನ್ನು (!!) ಹಾಕಲಾಗುತ್ತದೆ.
7. **ಉದ್ಧರಣ ಚಿಹ್ನೆಗಳು (“ ”)–** ವಾಕ್ಯದಲ್ಲಿ ,ವಾಕ್ಯವೃಂದದಲ್ಲಿ ಅಥವಾ ಒಂದು ಲೇಖನದಲ್ಲಿ ಕೆಲವು ಮುಖ್ಯ ಪದಗಳನ್ನು, ಹೇಳಿಕೆಗಳನ್ನು ಎತ್ತಿ ತೋರಿಸಲು, ಪ್ರಮುಖವಾಗಿ ಬಿಂಬಿಸಲು ಮತ್ತು ಓದುಗರ ಗಮನವನ್ನು ಸೆಳೆಯಲು ಉದ್ಧರಣ ಚಿಹ್ನೆಗಳನ್ನು ಬಳಸಲಾಗುತ್ತದೆ. ಮಹತ್ವದ ವಿಷಯಗಳಿದ್ದಾಗ, ಪ್ರಮುಖ ವ್ಯಕ್ತಿಗಳ ಹೇಳಿಕೆಗಳನ್ನು ದಾಖಲಿಸುವಾಗ, ಮುಖ್ಯಪದಗಳು, ನುಡಿಗಟ್ಟುಗಳು, ಹೇಳಿಕೆಗಳನ್ನು ವಿಶೇಷ ಗಮನದಿಂದ ಓದಲು ಈ ಚಿಹ್ನೆಗಳು ಸೂಚಿಸುತ್ತವೆ. ಉದ್ಧರಣ ಚಿಹ್ನೆ ಹಾಕಿದ ವಿಷಯವನ್ನು ಮಹತ್ವದ ವಿಷಯವೆಂದು ಪರಿಗಣಿಸಿ, ಆಸಕ್ತಿಯುತವಾಗಿ ಓದುತ್ತೇವೆ ಮತ್ತು ಅದಕ್ಕೆ ವಿಶೇಷ ಸ್ಥಾನವನ್ನು ಕೊಡುತ್ತೇವೆ. ಆದ್ದರಿಂದ ಭಾಷಾ ಅಧ್ಯಯನದಲ್ಲಿ ಉದ್ಧರಣ ಚಿಹ್ನೆಗೆ ತನ್ನದೇ ಆದ ಸ್ಥಾನಮಾನವಿರುತ್ತದೆ.
8. **ಆವರಣ ಚಿಹ್ನೆಗಳು ( ), { }, [ ]–** ಬರವಣಿಗೆಯಲ್ಲಿ ಕೆಲವು ಪೂರಕ ಅರ್ಥ ನೀಡಲು, ವಿರುದ್ಧ ಅರ್ಥ ನೀಡಲು, ವಾಕ್ಯಗಳನ್ನು ಬೆಂಬಲಿಸುವ ಪದಗಳನ್ನು ಬರೆಯಲು, ವಾಕ್ಯಕ್ಕೆ ಸಂಬಂಧವಿರುವ ಅಂಕಿ ಅಂಶಗಳನ್ನು ಬರೆಯಲು, ಆಧಾರಗ್ರಂಥ, ಲೇಖಕರ ಹೆಸರು ಬರೆಯಲು, ಭಾಷಾಂತರ ಪದ ಮತ್ತು ವಾಕ್ಯ ಬರೆಯಲು, ಓದುಗನಿಗೆ ಸೂಚನೆ ನೀಡಲು, ಸಂದರ್ಭವನ್ನು ಸ್ಮರಿಸಲು ಇತ್ಯಾದಿಗಳ ಸಂದರ್ಭಗಳಲ್ಲಿ ಆಯಾ ಪದ, ವಾಕ್ಯಗಳ ಮುಂದೆ ಆವರಣ ಚಿಹ್ನೆಗಳನ್ನು ಹಾಕಿ ಅದರೊಳಗೆ ಬರೆಯಲಾಗುತ್ತದೆ. ಆಯಾ ಪದ ಅಥವಾ ವಾಕ್ಯಕ್ಕೆ ಸಂಬಂಧಿಸಿದ ಆವರಣ ಚಿಹ್ನೆಯೊಳಗಿನ ಬರಹವನ್ನು ಅಲ್ಲಿಯೇ ಬರೆಯಬೇಕು. ಆವರಣಗಳಲ್ಲಿ ಅಲ್ಪಾವರಣ ( ), ಪುಷ್ಪಾವರಣ { }, ಹಾಗೂ ದೀರ್ಘಾವರಣ [ ] ಗಳಿವೆ.
9. **ಸಂಯೋಜಕ ಅಥವಾ ವಿಭಜಕ ಚಿಹ್ನೆ (–)** –ಚಿಕ್ಕ ಪದಗಳನ್ನು ಸಂಯೋಜಿಸಲು ಅಥವಾ ಎರಡು ಅಂಶಗಳಿರುವ ಒಂದು ಪದವನ್ನು ವಿಭಜಿಸಿ ಅರ್ಥ ನೀಡಲು ಹಾಕುವ ಚಿಹ್ನೆಗಳೇ ಸಂಯೋಜಕ ಅಥವಾ ವಿಭಜಕ ಚಿಹ್ನೆಗಳು. ಬರೆಯುವಾಗ ಒಂದು ಸಾಲಿನ ಕೊನೆಯಲ್ಲಿ ಒಂದು ಪದ ಅಪೂರ್ಣವಾಗಿ ಮುಕ್ತಾಯವಾದರೆ ಆ ಸಾಲಿನ ಕೊನೆಯಲ್ಲಿ ಅರ್ಧಪದದ

ನಂತರ ಸಂಯೋಜಕ ಚಿಹ್ನೆಯನ್ನು ಹಾಕಿ ನಂತರದ ಸಾಲಿನಲ್ಲಿ ಉಳಿದರ್ಧ ಪದವನ್ನು ಮುಂದುವರೆಸಿ ಬರೆಯುತ್ತೇವೆ. ಈ ಸಂದರ್ಭದಲ್ಲಿ ಅರ್ಧಪದಕ್ಕೆ ಸಂಯೋಜನಾ ಚಿಹ್ನೆ ಹಾಕುವಾಗ ಸಾಲಿನ ಕೊನೆಯಲ್ಲಿಯೇ ಹಾಕುತ್ತೇವೆ. ಅಥವಾ ನಂತರದ ಸಾಲಿನಲ್ಲಿ ಉಳಿದ ಅರ್ಧ ಪದಕ್ಕೆ ಮೊದಲೇ ಹಾಕಿ ಬರೆಯುತ್ತೇವೆ.

10. **ಅಡ್ಡಗೆರೆಗಳು (––)–** ಸಂಯೋಜಕ ಅಥವಾ ವಿಭಜಕ ಚಿಹ್ನೆಗಳಂತೆಯೇ ಅಡ್ಡಗೆರೆಗಳನ್ನು ಹಾಕಲಾಗುತ್ತದೆ. ಒಂದು ವಾಕ್ಯ ಮುಗಿದು ಆ ಬಗೆಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಬರೆಯುವ ಮುನ್ನ ವಾಕ್ಯದ ಅಥವಾ ಹೇಳಿಕೆಯ ನಂತರ ಅಡ್ಡ ಗೆರೆ ಹಾಕಿ ವಿವಿಧ ಅಂಶಗಳನ್ನು ಬರೆಯಲಾಗುತ್ತದೆ.

11. **ಸಾಲಿನ ಅಡಿಗೆರೆ (__)** –ಒಂದು ವಾಕ್ಯದಲ್ಲಿ ಮುಖ್ಯವಾದ ಪದಕ್ಕೆ ಅಥವಾ ಮುಖ್ಯವಾದ ವಾಕ್ಯಕ್ಕೆ ಅಥವಾ ವಾಕ್ಯಗಳಿಗೆ, ಸಾಲುಗಳಿಗೆ ಹಾಕುವ ಅಡಿಗೆರೆಗಳು ಉದ್ಧರಣ ಚಿಹ್ನೆಗಳ ರೀತಿಯಲ್ಲಿ ಕೆಲಸ ಮಾಡುತ್ತವೆ. ಮುಖ್ಯ ವಿಷಯಗಳಿಗೆ ಒತ್ತು ಕೊಡಲು ಮತ್ತು ಓದುಗರ ಗಮನ ಸೆಳೆಯಲು ಅಡಿಗೆರೆಯನ್ನು ಹಾಕಲಾಗುತ್ತದೆ.

ಮಕ್ಕಳ ಓದು ಮತ್ತು ಬರಹದಲ್ಲಿ ಲೇಖನ ಚಿಹ್ನೆಗಳನ್ನು ಅರ್ಥಬದ್ಧವಾಗಿ ಔಚಿತ್ಯಪೂರ್ಣವಾಗಿ ಪ್ರಯೋಗಿಸುವುದನ್ನು ಕಲಿಸಬೇಕು. ಮಕ್ಕಳು ಓದುವಾಗ, ಬರೆಯುವಾಗ ಅವರು ಮಾಡುವ ತಪ್ಪುಗಳನ್ನು ಗಮನಕ್ಕೆ ತಂದು ಅರ್ಥಬದ್ಧವಾಗಿ ಲೇಖನ ಚಿಹ್ನೆಗಳನ್ನು ಅಳವಡಿಸಿ ಓದುವುದು ಮತ್ತು ಬರೆಯುವುದನ್ನು ಕಲಿಸಬೇಕು. ವಿದ್ಯಾರ್ಥಿಗಳಿಗೆ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯುವ ಅಭ್ಯಾಸಗಳನ್ನು ಮಾಡಿಸಬೇಕು.

ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ।
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ॥
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ।
ಬ್ರಹ್ಮಾನ್ನುಭವಿಯಾಗೊ – ಮಂಕುತಿಮ್ಮ॥

ಅಧ್ಯಾಯ 4: ಭಾಷಾ ಬೋಧನೆಗೆ ಸಿದ್ಧತೆ

4.1 ಭಾಷಾ ಪಾಠ ಯೋಜನೆ: ಅರ್ಥ, ಪ್ರಾಮುಖ್ಯತೆ, ರೂಪುರೇಷೆಗಳು, ಗಮನಿಸಬೇಕಾದ ಅಂಶಗಳು ಹಾಗೂ 5ಇ ಮಾದರಿ ಹಂತಗಳು

4.2 ಭಾಷಾ ಬೋಧನೆಯ ಉದ್ದೇಶಗಳು– ಅರ್ಥ ಮತ್ತು ವಿಧಗಳು; ಸಾಮಾನ್ಯ ಉದ್ದೇಶಗಳು ಮತ್ತು ನಿರ್ಧಿಷ್ಟ ಉದ್ದೇಶಗಳು (ವರ್ತನಾ ರೂಪದಲ್ಲಿ ನಿರ್ಧಿಷ್ಟ ಉದ್ದೇಶಗಳನ್ನು ಬರೆಯುವಿಕೆ)

4.3 ಘಟಕ ಯೋಜನೆ , ಘಟಕ ಪರೀಕ್ಷೆ – ಅರ್ಥ, ಪ್ರಾಮುಖ್ಯತೆಹಾಗೂಹಂತಗಳು

4.4 ಸಂಪನ್ಮೂಲ ಘಟಕ ಯೋಜನೆ – ಅರ್ಥ, ಪ್ರಾಮುಖ್ಯತೆಹಾಗೂಹಂತಗಳು

4.1 ಭಾಷಾ ಪಾಠ ಯೋಜನೆ: ಅರ್ಥ, ಪ್ರಾಮುಖ್ಯತೆ, ರೂಪುರೇಷೆಗಳು, ಗಮನಿಸಬೇಕಾದ ಅಂಶಗಳು ಹಾಗೂ 5ಇ ಮಾದರಿ ಹಂತಗಳು

ಶಿಕ್ಷಣದಲ್ಲಿ ಬೋಧನೆಯು ಅತ್ಯಂತ ಮಹತ್ವದ ಪಾತ್ರವವನ್ನು ವಹಿಸುತ್ತದೆ. ಬೋಧನೆಯಿಂದಲೇ ಮಕ್ಕಳಿಗೆ ವಿಷಯಜ್ಞಾನವುಂಟಾಗುಗುವುದು. ಬೋಧನೆಯಿಂದಲೇ ಉದ್ದೇಶಗಳು ಸಾರ್ಥಕವಾಗುವವು. ಬೋಧನೆಯು ಸಂಕೀರ್ಣ ಕ್ರಿಯೆಯಾಗಿದೆ. ಬೋಧನಾ ವಿಧಾನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಬೋಧಕನು ತನ್ನ ಪಾಠ ಪ್ರವಚನವನ್ನು ಮುಂದುವರೆಸಬೇಕು. ಬೋಧನೆಗೆ ಅತ್ಯಂತ ಸಹಕಾರಿಯಾಗಬಲ್ಲ ಬಹು ಮುಖ್ಯ ಅಂಶವೆಂದರೆ 'ಪಾಠಯೋಜನೆ'. ಒಂದು ವಿಷಯದ ಭಾಗವನ್ನು ಪಾಠರೂಪದಲ್ಲಿ ಮಂಡಿಸುವಾಗ ಅದರ ಮುಖ್ಯಾಂಶಗಳನ್ನು ಅನುಕ್ರಮದಲ್ಲಿ ಜೋಡಿಸಿಕೊಂಡು ಬೊಧನಾ ಸೂಕ್ತ ಉದ್ದೇಶಗಳನ್ನು ಹಾಕಿಕೊಂಡು ಬೋಧನೋಪಕರಣಗಳ ಮೂಲಕ ವಿಷಯನಿರೂಪಣೆ ಮಾಡಬೇಕಾಗುತ್ತದೆ. ಒಂದು ಪಾಠವನ್ನು ಬೋಧಿಸಬೇಕಾದರೆ ಪಾಠಯೋಜನೆಯನ್ನು ಮಾಡಿಕೊಳ್ಳಲೇಬೇಕು.

"ಪಾಠಯೋಜನೆಯು ಕ್ರಮಬದ್ಧವಾಗಿ ರಚಿಸಿ ಬರೆಯಲಾಗಿರುವ ಬೋಧನಾ ರೂಪರೇಷೆಯಾಗಿದ್ದು ಬೋಧನಾ ಉದ್ದೇಶಗಳು, ಬೋಧನಾ ಅಂಶಗಳು, ಪ್ರಶ್ನೆಗಳು, ಪ್ರಯೋಗಗಳು, ವಿದ್ಯಾರ್ಥಿಗಳ ಚಟುವಟಿಕೆಗಳು, ಸಹಾಯಕ ಗ್ರಂಥಗಳು ಮುಂತಾದವುಗಳನ್ನೊಳಗೊಂಡಿರುತ್ತದೆ."

"ಪಾಠಯೋಜನೆಯು ಶಿಕ್ಷಕರ ತರಗತಿಯಲ್ಲಿನ ಮಾನಸಿಕ ಹಾಗೂ ಭಾವನಾತ್ಮಕ ಚಟುವಟಿಕೆಗಳ ಒಂದು ಪಕ್ಷಿನೋಟ ಅಥವಾ ಕಲ್ಪನೆಯಾಗಿದೆ."

"ತರಗತಿಯಲ್ಲಿ ಭಾಷಾ ವಿಷಯದ ಬಗ್ಗೆ ಏನು ಕಲಿಸಬೇಕು? ಹೇಗೆ ಕಲಿಸಬೇಕು? ಸಕಾಲದಲ್ಲಿ ಏನೆಂಥ ಬೋಧನೋಪಕರಣಗಳನ್ನು ಉಪಯೋಗಿಸಬೇಕು? ಮಕ್ಕಳ ಮನೋಮಯಕ್ಕೆ ತಕ್ಕಂತೆ ಮುಮ್ಮುಖವಾಗಿ ಆಲೋಚಿಸಿ, ಚಿಂತಿಸಿ ಕಲಿಕಾ ವಿಷಯಗಳನ್ನು ತಯಾರಿಸಿಕೊಂಡು ಬರುವ ಯೋಜನೆಯೇ ಪಾಠ ಯೋಜನೆ."

"ಪಾಠಯೋಜನೆಯು ಒಂದು ನಿರ್ಧಿಷ್ಟ ತರಗತಿಯ ವಿದ್ಯಾರ್ಥಿಗಳಿಗೆ, ನಿರ್ಧಿಷ್ಟ ಕಾಲಾವಧಿಯಲ್ಲಿ, ಒಂದು ನಿರ್ಧಿಷ್ಟ ವಿಷಯದ ಭಾಗವೊಂದನ್ನು ವಿವಿಧ ಚಟುವಟಿಕೆಗಳೊಂದಿಗೆ ಯೋಜಿಸುವ ಒಂದು ಟಿಪ್ಪಣಿಯಾಗಿದೆ."

ಸಾಮಾನ್ಯವಾಗಿ ಭಾಷಾ ಬೋಧಕರು– ನಮಗೆ ಹತ್ತು, ಹದಿನೈದು, ಇಪ್ಪತ್ತು, ಇಪ್ಪತ್ತೈದು ವರ್ಷದ ಬೋಧನಾ ಅನುಭವವಿದೆ ನಮಗೆ ಪಠಪಟ್ಟಿಯ ಅಗತ್ಯವಿಲ್ಲ. ಬೋಧಿಸುವ ವಿಷಯವೆಲ್ಲಾ ಬಾಯಿಪಾಠವಾಗಿದೆ–ಎಂದು ತಿರಸ್ಕಾರ ಭಾವನೆ ತೋರಿಸುವುದುಂಟು. ಇಂತಹ ಭಾವನೆಯನ್ನು ಇಟ್ಟುಕೊಂಡಿದ್ದಾದರೆ ಅವರಂತಹ ದಡ್ಡಶಿಖಾಮಣಿಗಳು ಯಾರೂ ಇಲ್ಲ.

ಒಮ್ಮೆ ಕನ್ನಡದ ಕಣ್ವ ಎಂದೇ ಹೆಸರಾಗಿರುವ ಬಿ. ಎಂ. ಶ್ರೀಕಂಠಯ್ಯನವರು ತಾವು ಅನುವಾದಿಸಿದ ಇಂಗ್ಲೀಷ್ ಗೀತೆಗಳನ್ನು ಅಂದಿನ ಪಾಠಮಾಡುವುದಕ್ಕೆ ಬಸ್ಸಿನಲ್ಲಿ ಹೋಗುವಾಗ ಓದುತ್ತಿದ್ದರಂತೆ, ಒಬ್ಬಾತ ಸಾರ್ ನೀವು ಈ ಇಂಗ್ಲೀಷ್ ಗೀತೆಗಳನ್ನು ಅನುವಾದಿಸಿದ್ದೀರಿ ಮತ್ತು ಬೋಧನೆಯಲ್ಲಿ ಸಾಕಷ್ಟು ಅನುಭವವಿದೆ. ಮತ್ತೆ ಮತ್ತೆ ಓದುವುದೇಕೆ? ಎಂದು ಕೇಳಿದನಂತೆ, ಆಗ ಬಿ. ಎಂ. ಶ್ರೀಯವರು ಪ್ರಶ್ನಿಸಿದವನ ಮುಖಕ್ಕೆ 'ಬೋಧನೆ ಕೊಡಂಗಿ ಆಟವಲ್ಲಪ್ಪಾ!' ನಾನು ಈಗ ಓದುವ ಸಂದರ್ಭದಲ್ಲಿ ಹೊಸ ಭಾವನೆಗಳು ಮತ್ತು ಭಾವಗಳು ಉಮ್ಮಳಿಸಿಬಹುದು. ಆಗ ಮಕ್ಕಳಿಗೆ ಹೊಸ ಹೊಸ ಅನುಭವಗಳು ತಿಳಿಸಲು ಅನುಕೂಲವಾಗುವುದಿಲ್ಲವೇ ಎಂದು ಹೇಳಿದರಂತೆ, ಪ್ರತಿವರ್ಷದ, ಪ್ರತಿವರ್ಗದ ವಿದ್ಯಾರ್ಥಿಗಳ ಅಭಿರುಚಿ, ಮನೋಬಲ, ಕಲಿಯುವ ಸಾಮರ್ಥ್ಯ, ಕಲಿಯುವ ಆಸಕ್ತಿ ಬೇರೆ ಬೇರೆಯಾಗಿರುತ್ತವೆ. ಅವರ ಕಲಿಕೆಗೆ ಬಳಸಿದ ಬೋಧನಾ ಸಾಧನಗಳೇ ಬೇರೆ ಬೇರೆಯಾಗಿರುತ್ತವೆ. ಬೋಧಕರ ಅನುಭವ ಜ್ಞಾನವೇ ಬೇರೆ ಬೇರೆಯಾಗುತ್ತಾ ಹೋಗುತ್ತದೆ. ಇವೆಲ್ಲದರಿಂದ ಹಳೆಯದನ್ನು ತಳ್ಳಿ ಹೊಸತು ಹೊಸತು ರೂಪಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಪ್ರಾಮಾಣಿಕ, ಪರಿಣಾಮಕಾರಿ ಮತ್ತು ಉತ್ತಮ ಭಾಷಾ ಬೋಧಕನಿಗೆ 'ಪಾಠಪಟ್ಟಿ ಅಥವಾ ಪಾಠಯೋಜನೆ ಉಸಿರ್ದಾಣವಿದ್ದಂತೆ.'

ಪಾಠಯೋಜನೆಯು ಭಾಷಾ ಬೋಧಕನ ಜ್ಞಾನಕೋಶದ ಅಂಗವಾಗಿರಬೇಕು. ಸ್ವಾವಲಂಬನೆಯ ಊರುಗೋಲವಾಗಿರಬೇಕು. ಮಕ್ಕಳಿಗೆ ಸ್ವಯಂ ಮಾರ್ಗದರ್ಶನ ಸೂಚಿಯಾಗಿರಬೇಕು. ಆತ್ಮಸಲಹಾ ಸಂಚಿಕೆಯ ಅನುಸೂಚಿಯಾಗಿರಬೇಕು. ಭಾಷಾಬೋಧಕನ ಸಾಹಿತ್ಯಶಕ್ತಿ, ದಕ್ಷತೆ, ಕೌಶಲ್ಯ, ತಂತ್ರಗಳ ವಿಷಯ ಭಂಡಾರವು ಜ್ಞಾನಾಮೃತವಾಗಿ ಪಾಠಯೋಜನೆಯಲ್ಲಿ ಸಮ್ಮಿಳಿತವಾಗಿರಬೇಕು. ಅದನ್ನು ತರಗತಿಯಲ್ಲಿ ಸಾಂಗವಾಗಿ, ಪ್ರಾಮಾಣಿಕವಾಗಿ ನೆರವೇರಿಸಬೇಕು. ಆಗಮಾತ್ರ ಪಾಠಯೋಜನೆಗೆ ಗೌರವ, ಶಿಕ್ಷಕನಿಗೆ ಗೌರವ. ಹಾಗಾಗಿ ಪಾಠಯೋಜನೆ ಬೋಧನಾ ವೃತ್ತಿಗೆ ಸತ್ವಪೂರ್ಣವಾದ ಆಧಾರ.

ಪಾಠಯೋಜನೆ ತಯಾರಿಸುವುದಕ್ಕಿಂತ ಮೊದಲು ನೆನಪಿಡಬೇಕಾದ ಸಂಗತಿಗಳು:

- ಶಿಕ್ಷಕನಿಗೆ ಕಲಿಸುವ ವಿಷಯದ ಮೇಲೆ ಪ್ರಭುತ್ವವಿರಬೇಕು ಮತ್ತು ತರಬೇತಿಯನ್ನು ಪಡೆದಿರಬೇಕು.
- ಬೋಧಿಸಬೇಕಾದ ವಿಷಯದ ಸ್ಪಷ್ಟ ಕಲ್ಪನೆ ಇರಬೇಕು.
- ಆಯ್ಕೆ ಮಾಡಿಕೊಂಡಿರುವ ಅಥವಾ ಬೋಧಿಸಬೇಕಾಗಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿರಬೇಕು.
- ಪಾಠಯೋಜನೆಯು ಆಕರ್ಷಕ ಚಟುವಟಿಕೆಗಳನ್ನು ಒಳಗೊಂಡಿದ್ದು ವೈವಿಧ್ಯತೆಯಿಂದ ಕೂಡಿರುವಂತೆ ನೋಡಿಕೊಳ್ಳಬೇಕು.

- ಲಭ್ಯವಿರುವ ಕಾಲ, ತರಗತಿಗಳನ್ನು ಆಧರಿಸಿ ಯೋಜನೆ ತಯಾರಿಸಿರಬೇಕು.
- ಮಕ್ಕಳ ಶೈಕ್ಷಣಿಕ ಮಟ್ಟದ ಬಗ್ಗೆ ಸಂಪೂರ್ಣ ಜ್ಞಾನವಿರಬೇಕು. ಅಲ್ಲದೆ ಮಕ್ಕಳ ಮನೋವಿಜ್ಞಾನವನ್ನು ಅಧಯನ ಮಾಡಿರಬೇಕು.
- ಉತ್ತಮ ಪಾಠಬೋಧನೆಗಾಗಿ– ಸಮಂಜಸ ಕಲಿಸುವ ಪದ್ಧತಿಗಳನ್ನು, ತತ್ವಗಳನ್ನು ಶಿಕ್ಷಕನು ತಿಳಿದವನಾಗಿರಬೇಕು.
- ಮಕ್ಕಳ ವಿವಿಧ ಚಟುವಟಿಕೆಗಳನ್ನೂ, ಕುಂದುಕೊರತೆಗಳನ್ನೂ ಅರಿತವನಾಗಿರಬೇಕು.
- ಶಿಕ್ಷಣದ ಉದ್ದೇಶ ಹಾಗೂ ಗುರಿಗಳನ್ನು ಚೆನ್ನಾಗಿ ತಿಳಿದವನಾಗಿರಬೇಕು.
- ಸಂಪೂರ್ಣಪಾಠದ ಜ್ಞಾನ ಅಥವಾ ಮಾಹಿತಿಯನ್ನು ಅರಿತರಿಬೇಕು.

ಉತ್ತಮ ಪಾಠಯೋಜನೆಯ ಗುಣಲಕ್ಷಣಗಳು:

- ಪಾಠದ ಯೋಜನೆಯನ್ನು ಚೊಕ್ಕವಾಗಿ ಬರೆದಿರಬೇಕು.
- ಸಾಮಾನ್ಯ ಹಾಗೂ ನಿರ್ಧಿಷ್ಟ ಗುರಿಗಳನ್ನು ಹೇಳಿರಬೇಕು.
- ಹಿಂದಿನ ಪಾಠಕ್ಕೆ ಇಲ್ಲವೇ ಕಾರ್ಯಕ್ಕೆ ಸಂಬಂಧಿಸಿರಬೇಕು.
- ಸೂಕ್ತ ಬೋಧನಾ ಸಲಕರಣೆಗಳನ್ನು ಆಯ್ಕೆ ಮಾಡಿಕೊಂಡಿರಬೇಕು. ಅವುಗಳನ್ನು ಉಪಯೋಗಿಸುವ ನಿರ್ದಿಷ್ಟ ಕ್ರಮವನ್ನು ಅರಿತಿರಬೇಕು.
- ಮಕ್ಕಳ ಅನುಭವಗಳಿಗೆ ಹಾಗೂ ಚಟುವಟಿಕೆಗಳಿಗೆ ಸಹಸಂಬಂಧವಿರಬೇಕು.
- ಬೋಧಿಸುವ / ಕಲಿಸುವ ವ್ಯವಸ್ಥಿತ ಹಂತಗಳನ್ನು ಒಳಗೊಂಡಿರಬೇಕು ಮತ್ತು ಉತ್ತಮ ಸೂಕ್ತ ಉದಾಹರಣೆಗಳನ್ನು ಒಳಗೊಂಡಿರಬೇಕು.
- ಪಾಠದಲ್ಲಿ ಉಪಯೋಗಿಸುವ ಚಿತ್ರ, ನಕಾಶೆ, ಮಾದರಿ ಮುಂತಾದವುಗಳನ್ನು ಬರೆದಿರಬೇಕು. ಅವುಗಳನ್ನು ಚೆನ್ನಾಗಿ ಪರೀಕ್ಷಿಸಿರಬೇಕು.
- ಪಾಠದ ಸಾರಾಂಶವನ್ನು ಇಲ್ಲವೆ ಅಂಶಗಳನ್ನು ಬರೆದಿರಬೇಕು. ಅದನ್ನು ಮಕ್ಕಳ ಸಹಾಯದಿಂದ ಕಪ್ಪುಹಲಗೆಯ ಮೇಲೆ ಬರೆಯಬೇಕು.
- ಮೌಲ್ಯಮಾಪನದ ಅಭ್ಯಾಸಗಳಿರಬೇಕು ಹಾಗೂ ಗೃಹಪಾಠ / ದತ್ತಕಾರ್ಯವನ್ನು ಒಳಗೊಂಡಿರಬೇಕು.
- ಪಾಠಯೋಜನೆಯ ಹಂತಗಳಿಗೆ ತಕ್ಕಂತೆ ಚಟುವಟಿಕೆಗಳು, ವಿವಿಧ ರೀತಿಯ ಮೌಲ್ಯಮಾಪನ ಅಂಶಗಳನ್ನು ದಾಖಲಿಸಿರಬೇಕು.
- ಪಾಠಯೋಜನೆಯು ವಿದ್ಯಾರ್ಥಿ ಕೇಂದ್ರಿತ, ಚಟುವಟಿಕೆ ಕೇಂದ್ರಿತವಾಗಿದ್ದು ವೈಯಕ್ತಿಕ ಭಿನ್ನತೆಗಳನ್ನು ಗುರುತಿಸಿ ಪೋಷಿಸಲು ಸಹಾಯಕವಾಗಬೇಕು.

- ಪಾಠಯೋಜನೆಯು ನಿರಂತರ ಮೌಲ್ಯಮಾಪನ ತತ್ವದ ಹಿನ್ನೆಲೆಯಲ್ಲಿ ರಚನೆಯಾಗಿದ್ದು ವಿದ್ಯಾರ್ಥಿಗಳ ಕಲಿಕೆಯನ್ನು ನಿರಂತರ ಮೌಲ್ಯಮಾಪನ ಮಾಡುತ್ತಾ ಪೋಷಿಸುವಂತೆ ರಚಿಸಿರಬೇಕು.

ಪಾಠಯೋಜನೆಯ ಪ್ರಾಮುಖ್ಯತೆ:

ಪರಿಣಾಮಕಾರಿ ಹಾಗೂ ಅರ್ಥಬದ್ಧ ಬೋಧನೆಗೆ ಪ್ರಜ್ಞಾಪೂರ್ವಕ ಸಿದ್ಧತೆ, ಯೋಜನೆ ಅತ್ಯಂತ ಮುಖ್ಯ. ಬೋಧನಾ ಚಟುವಟಿಕೆಯಿಂದ ನಿರೀಕ್ಷಿತ ಕಲಿಕೆಯ ಫಲಗಳು ಮೂಡಿಬರಬೇಕಾದರೆ ಬೋಧನೆಯನ್ನು ಅತ್ಯಂತ ಎಚ್ಚರಿಕೆಯಿಂದ ಯೋಜಿಸಿರಬೇಕು. ಪಾಠಬೋಧನೆಯನ್ನು ಯೋಜಿಸದೆ, ನಿರ್ದಿಷ್ಟ ಟಿಪ್ಪಣಿ ತಯಾರಿಸದೆ, ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳದೆ, ಗೊತ್ತುಗುರಿ ಇಲ್ಲದೆ ಬೋಧನೆಗೆ ಇಳಿದರೆ ಪ್ರಯೋಜನವಿಲ್ಲ. ಪಠ್ಯವನ್ನು ಅಚ್ಚುಕಟ್ಟಾಗಿ ಯೋಜಿಸಿ ಪಾಠಯೋಜನೆಯನ್ನು ರಚಿಸಿಕೊಳ್ಳುವುದರಿಂದ ಹೆಚ್ಚು ಅನುಕೂಲಗಳಿವೆ. ಪಾಠಯೋಜನೆ ಅಂದರೆ ಒಂದು ಪಾಠದ ಬೋಧನೆಗೆ ಶಿಕ್ಷಕರು ಮಾಡಿಕೊಂಡಿರಲೇಬೇಕಾದ ಪೂರ್ವಸಿದ್ಧತೆ ಅಥವಾ ಪೂರ್ವತಯಾರಿಯಾಗಿದೆ.

- ಬೋಧನಾ ಉದ್ದೇಶಗಳ ಸಾಧನೆಗೆ ಪೂರಕವಾಗಿ ಬೋಧಿಸಲು ಪಾಠಯೋಜನೆ ಅಗತ್ಯವಾಗಿದೆ.
- ಪಠ್ಯವನ್ನು ಕ್ರಮಬದ್ಧವಾಗಿ ಬೋಧಿಸಲು ಪಾಠಯೋಜನೆ ಬೇಕು. ಏನು? ಎಷ್ಟು? ಹೇಗೆ? ಬೋಧಿಸಬೇಕು. ಯಾವ ಅನುಕ್ರಮದಲ್ಲಿ ವಿಷಯಗಳನ್ನು ಪರಿಚಯಿಸಬೇಕು? ಯಾವ ಯಾವ ಅಂಶಗಳಿಗೆ ಎಷ್ಟೆಷ್ಟು ವ್ಯಾಪ್ತಿ ಮತ್ತು ಎಷ್ಟೆಷ್ಟು ಪ್ರಾಶಸ್ತ್ಯ ಕೊಡಬೇಕು? ಎಂತಹ ಪ್ರಶ್ನೆಗಳನ್ನು ಕೇಳಬೇಕು ಮತ್ತು ಯಾವ ರೀತಿಯಾಗಿ ಕೇಳಬೇಕು? ಎಂತಹ ಕಲಿಕಾ ಅನುಭವಗಳನ್ನು ಒದಗಿಸಬೇಕು? ಕಲಿಕೆಯನ್ನು ಹೇಗೆ ಸ್ಪಷ್ಟಗೊಳಿಸಬೇಕು? ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಹೇಗೆ ಪಾಲ್ಗೊಳ್ಳುವಂತೆ ಮಾಡಬೇಕು? ಕಲಿಕೆಯಲ್ಲಿ ಎದುರಾಗುವ ಸಂಧಿಗ್ಧತೆಗಳು ಯಾವುವು? ಮತ್ತು ಅವುಗಳನ್ನು ಪರಿಹರಿಸುವ ಬಗೆ ಹೇಗೆ? ಕಲಿಕೆಯನ್ನು ಹೇಗೆ ತೀವ್ರಗೊಳಿಸಬೇಕು? ಮಕ್ಕಳಿಗೆ ವಿಷಯ ಮತ್ತು ಭಾಷಾ ಕೌಶಲ್ಯಗಳನ್ನು ಹೇಗೆ ಕಲಿಸಬೇಕು? ಬೋಧನಾ – ಕಲಿಕಾ ಪ್ರಕ್ರಿಯೆಯಲ್ಲಿ ಅಗತ್ಯವೆನಿಸುವ ಈ ಪ್ರಶ್ನೆಗಳಿಗೆ ಪಾಠಯೋಜನೆಯು ಸ್ಪಷ್ಟ ಜ್ಞಾನ ಹಾಗೂ ಮಾರ್ಗದರ್ಶನ ನೀಡುತ್ತದೆ.
- ಪಾಠಯೋಜನೆಯು ಬೋಧನೆಗೆ ಸ್ಪಷ್ಟತೆ, ನಿರ್ಧಿಷ್ಟತೆ ಹಾಗೂ ಕ್ರಮಬದ್ಧತೆಯನ್ನು ಒದಗಿಸುತ್ತದೆ.
- ಪಾಠಬೋಧನೆಗೆ ನಿರಂತರತೆ, ಅನುಕ್ರಮಣಿಕೆ, ವಿಷಯ ಸಂಘಟನೆ ಹಾಗೂ ನಿರ್ಧಿಷ್ಟ ವ್ಯಾಪ್ತಿಯನ್ನು ಒಅದಗಿಸುತ್ತದೆ.
- ಪಠ್ಯವಿಷಯಗಳ ತರ್ಕಬದ್ಧ, ಅರ್ಥಬದ್ಧ ಸಂಘಟನೆಗೆ ಹಾಗೂ ಅವುಗಳನ್ನು ಕ್ರಮಬದ್ಧವಾಗಿ ಪರಿಚಯಿಸಲು ನೆರವಾಗುತ್ತದೆ.
- ಅಂದಿನ ಪಠ್ಯಬೋಧನೆಗೆ ಪೂರ್ಣದೃಷ್ಟಿಯನ್ನು ಒದಗಿಸುತ್ತದೆ.

- ಕಲಿಕೆಯ ಮನೋವೈಜ್ಞಾನಿಕ ನಿಯಮಗಳ ಆಧಾರದಿಂದ ರಚನೆಯಾಗಿದ್ದು ಅರ್ಥಪೂರ್ಣ ಕಲಿಕೆಯನ್ನು ಉತ್ತೇಜಿಸುತ್ತದೆ.
- ಬೋಧನೆಯಲ್ಲಿ ಅನವಶ್ಯಕ ವಿಷಯಗಳು ತಲೆಹಾಕದಂತೆ ಮತ್ತು ಪುನರಾವರ್ತನೆಯನ್ನು ತಡೆಯುತ್ತದೆ.
- ಶಿಕ್ಷಕರು ತಮ್ಮ ಬೋಧನೆಯನ್ನು ಶಿಸ್ತು, ಕ್ರಮಬದ್ಧಗೊಳಿಸಿಕೊಳ್ಳಲು ನೆರವಾಗುತ್ತದೆ ಮತ್ತು ಆತ್ಮವಿಶ್ವಾಸ ಮೂಡಿಸುತ್ತದೆ.
- ನಿರ್ಧಿಷ್ಟ ಅವಧಿಯಲ್ಲಿ ನಿರ್ಧಿಷ್ಟ ವಿಷಯವನ್ನು ಬೋಧಿಸಲು ಹಾಗೂ ಕಾಲದ ಅಪವ್ಯಯವನ್ನು ತಪ್ಪಿಸಲು ನೆರವಾಗುತ್ತದೆ.
- ಪಠ್ಯಾಂಶಗಳನ್ನು ಸಹಸಂಬಂಧ ಮಾಡಿ ವಿವರಿಸಲು ಮತ್ತು ಅನ್ವಯ ಮಾಡಿ ಹೇಳಲು ಸಹಾಯಕವಾಗುತ್ತದೆ.
- ಕಲಿಕೆಯನ್ನು ನಿರಂತರ ಮೌಲ್ಯಮಾಪನ ಮಾಡಲು, ಮೇಲ್ವಿಚಾರಣೆ ಮಾಡಲು ಹಾಗೂ ಶಿಕ್ಷಕರಿಗೆ ತಮ್ಮ ಬೋಧನಾ ಕ್ರಿಯೆಯ ಪರಿಣಾಮಕಾರಿತ್ವವನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ.

❖ **5ಇ ಮಾದರಿ ಹಂತಗಳು:**

ರಷ್ಯಾ ದೇಶದ ಮನೋವಿಜ್ಞಾನಿ ಲೇವಾ ವೈಗೋಟಸ್ಕಿ ಅವರ ಜ್ಞಾನ ಸಂರಚನಾವಾದದ ವಿಚಾರಗಳನ್ನು ಆಧರಿಸಿ 5ಇ ಮಾದರಿಯ ಪಾಠಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಸ್ವಯಂ ಕಲಿಕೆಗೆ ಹಾಗೂ ಕ್ರಿಯಾತ್ಮಕ ಜ್ಞಾನದ ನಿರ್ಮಾಣಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ಶಿಕ್ಷಕರಿಗೆ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಅನುಭವದ ನೆಲೆಯಲ್ಲಿ ಹೊಸ ಜ್ಞಾನವನ್ನು ಸೃಷ್ಟಿಸಿಕೊಳ್ಳಲು ಹಾಗೂ ಅನ್ವೇಷಿಸಲು ನೆರವಾಗಬೇಕು. ಶಿಕ್ಷಕರು ದೀರ್ಘ ಉಪನ್ಯಾಸ ನೀಡುವ ಬದಲು ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವ, ಉತ್ತೇಜಿಸುವ, ಮಾರ್ಗದರ್ಶಿಸುವ ಚಟುವಟಿಕೆಗಳನ್ನು ತರಗತಿಯಲ್ಲಿ ಆಯೋಜಿಸಬೇಕು. ಇದು ಸಂತಸದ ಕಲಿಕೆಗೆ ಹೆಚ್ಚು ಗಮನ ನೀಡುತ್ತದೆ. ಪಾಠವನ್ನು ಯೋಜಿಸುವಾಗ 5ಇ ಹಂತಗಳನ್ನು ಚಾಚೂ ತಪ್ಪದೆ ಅನುಸರಿಸಬೇಕು. ಅವುಗಳೆಂದರೆ– ತೊಡಗಿಸು (Engage), ಅನ್ವೇಷಿಸು/ಶೋಧಿಸು (Explore), ವಿವರಿಸು (Explain), ವಿಸ್ತರಿಸು (Elaborate) ಮತ್ತು ಮೌಲ್ಯಮಾಪಿಸು (Evaluate).

1. **ತೊಡಗಿಸು (Engage):** ದಿನದ ಕಲಿಕೆಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವುದು, ಕುತೂಹಲವನ್ನು ಹೆಚ್ಚಿಸುವುದು, ಗಮನವನ್ನು ಕೇಂದ್ರೀಕರಿಸುವ ಕೆಲಸ ಈ ಹಂತದಲ್ಲಿ ಆಗಬೇಕು. ವಿದ್ಯಾರ್ಥಿಗಳನ್ನು ಕಲಿಕೆಗೆ ಒತ್ತಾಯಿಸುವುದರ ಬದಲಿಗೆ ಅವರಲ್ಲಿ ಕಲಿಯುವ ಆಸಕ್ತಿ ಬರುವಂತಹ ವಾತಾವರಣವನ್ನು ಸೃಷ್ಟಿಸಿ, ವಿವಿಧ ಚಟುವಟಿಕೆಗಳನ್ನು ನೀಡಬೇಕು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ

ಪೂರ್ವಜ್ಞಾನವನ್ನು ಶಿಕ್ಷಕ ಸಮರ್ಥವಾಗಿ ಬಳಸಿಕೊಳ್ಳಬೇಕು. ಇದಕ್ಕಾಗಿ ಕಥೆ, ಉದಾಹರಣೆ, ಹೋಲಿಕೆ, ಪ್ರಶ್ನೆಗಳು, ಪ್ರಚಲಿತ ಅಂಶಗಳು, ಪಾತ್ರಾಭಿನಯ, ಆಟಗಳು, ತಂತ್ರಜ್ಞಾನ ಮುಂತಾದ ಶಾಬ್ದಿಕ ಹಾಗೂ ಅಶಾಬ್ದಿಕ ಸಾಧನ, ತಂತ್ರಗಳನ್ನು ಬಳಸಿಕೊಳ್ಳಬಹುದಾಗಿದೆ. ದಿನದ ಪಾಠದ ಕಲಿಕೆಗೆ ವಿಳನ್ನು ಮಾನಸಿಕವಾಗಿ ಹಾಗೂ ಭೌತಿಕವಾಗಿ ತೊಡಗಿಸುವುದು ಅಥವಾ ಸಿದ್ಧಗೊಳಿಸುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ.

2. ಅನ್ವೇಷಿಸು/ಶೋಧಿಸು (Explore): ಈ ಹಂತದಲ್ಲಿ ಶಿಕ್ಷಕರು ಪಾಠಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ವಿದ್ಯಾರ್ಥಿಗಳ ಮುಂದಿರಿಸಿ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಬೇಕು. ಅವರು ಪರಸ್ಪರ ಚರ್ಚಿಸಿ, ಅವಲೋಕಿಸಿ ತಮ್ಮ ಅನುಭವದ ನೆಲೆಯಲ್ಲಿ ಜ್ಞಾನವನ್ನು ಅನ್ವೇಷಿಸುತ್ತಾರೆ. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲು ಬೇಕಾದ ವಾತಾರವಣವನ್ನು ಶಿಕ್ಷಕರು ನಿರ್ಮಿಸಬೇಕು. ಈ ಸಮಯದಲ್ಲಿ ವಿದ್ಯಾರ್ಥಿಗಳು ಗೊಂದಲಗಳಿಗೆ ಒಳಗಾಗುವುದು ಸಹಜ. ಏಕೆಂದರೆ ಅವರ ಚಿಂತನೆಗಳಲ್ಲಿ, ಅಭಿಪ್ರಾಯಗಳಲ್ಲಿ ಒಮ್ಮತವಿರುವುದಿಲ್ಲ. ಈ ಅವಕಾಶವನ್ನೇ ವಿದ್ಯಾರ್ಥಿಗಳು ಬಳಸಿಕೊಂಡು ತಮ್ಮ ಕಲ್ಪನೆಗಳನ್ನು, ಚಿಂತನೆಗಳನ್ನು, ಅಭಿಪ್ರಾಯಗಳನ್ನು ಸಹಪಾಠಿಗಳೊಂದಿಗೆ ಚರ್ಚಿಸಿ, ತುಲನೆ ಮಾಡಿ ಅಮ್ತಿಮ ತೀರ್ಮಾಣಕ್ಕೆ ಬರಬೇಕು. ಈ ಹಂತದಲ್ಲಿ ಶಿಕ್ಷಕರು ಮಾರ್ಗದರ್ಶಕರಾಗಿ ಇಲ್ಲವೇ ವೀಕ್ಷಕರಾಗಿ ಕೆಲಸ ಮಾಡಬೇಕು.

ಭಾಷಾ ಪಾಠಗಳಲ್ಲಿ ಶಿಕ್ಷಕರು ಮೊದಲು ಆಯ್ದ ಗದ್ಯಭಾಗವನ್ನು ಮಾದರಿಯಾಗಿ ಓದಬೇಕು. ನಂತರ ವಿದ್ಯಾರ್ಥಿಗಳಿಗೆ ಅದೇ ವಿಷಯವನ್ನು ಮೌನವಾಗಿ ಓದಲು ಮಾರ್ಗದರ್ಶನ ಮಾಡಬೇಕು. ವಿದ್ಯಾರ್ಥಿಗಳು ಪಠ್ಯದಲ್ಲಿರುವ ವಿಷಯವನ್ನು ತಮ್ಮ ಅನುಭವಗಳ ನೆಲೆಯಲ್ಲಿ ಗ್ರಹಿಸುತ್ತಾರೆ. ಮೌನ ಓದಿನ ಪೂರ್ವದಲ್ಲಿ ವಿದ್ಯಾರ್ಥಿಗಳ ಗ್ರಹಿಕೆಗೆ ನಿಲುಕದಿರುವ ಪದಗಳು ಗದ್ಯಭಾಗದಲ್ಲಿ ಇದ್ದಲ್ಲಿ ಮಾತ್ರ ಅಂತಹ ಪದಗಳನ್ನು ಪರಿಚಯಿಸಬೇಕು. ಇಲ್ಲದಿದ್ದಲ್ಲಿ ಪದಗಳ ಪರಿಚಯ ಬೇಕಾಗುವುದಿಲ್ಲ. ಏಕೆಂದರೆ ವಿಷಯ ಸಂದರ್ಭದ ಹಿನ್ನೆಲೆಯಲ್ಲಿಯೇ ವಿದ್ಯಾರ್ಥಿಗಳು ಪದಗಳ ಅರ್ಥವನ್ನು ಕಂಡುಕೊಳ್ಳುವುದಕ್ಕೆ ಈ ಹಂತದಲ್ಲಿ ಅವಕಾಶ ನೀಡಬೇಕು.

3. ವಿವರಿಸು (Explain): ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ, ಅಂತಿಮವಾಗಿ ಗ್ರಹಿಸಿ ಕಂಡುಕೊಂಡ ವಿಚಾರಗಳನ್ನು, ಅಭಿಪ್ರಾಯಗಳನ್ನು ತಮ್ಮದೇ ದಾಟಿಯಲ್ಲಿ, ಸ್ವಂತ ಪದಗಳನ್ನು ಬಳಸಿಕೊಂಡು ವಿವರಿಸುವುದಕ್ಕೆ ಮುಕ್ತ ಅವಕಾಶ ಹಾಗೂ ಉತ್ತೇಜನವನ್ನು ನೀಡಬೇಕು. ವಿದ್ಯಾರ್ಥಿ ವಿವರಿಸುವ ಸಂದರ್ಭದಲ್ಲಿ ಇನ್ನುಳಿದ ವಿದ್ಯಾರ್ಥಿಗಳು ಗಮನವಿಟ್ಟು ಆಲಿಸಬೇಕು. ವಿವರಣೆಗೆ ಪೂರಕವಾದ ಆಧಾರಗಳನ್ನು ಹಾಗೂ ಸ್ಪಷ್ಟಣೆಗಳನ್ನು ಆಯಾ ಸಂದರ್ಭದಲ್ಲಿ ಎಲ್ಲರೂ ಕೇಳಬಹುದು ಇಲ್ಲವೇ ಒದಗಿಸಬಹುದು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ವಿಚಾರಗಳಿಗೆ ಪೂರಕವಾಗಿ ನಿಯಮಗಳನ್ನು, ವ್ಯಾಖ್ಯಾನಗಳನ್ನು ಹಾಗೂ ಸ್ಪಷ್ಟನೆಗಳನ್ನು ನೀಡಬಹುದಾಗಿದೆ. ವಿದ್ಯಾರ್ಥಿಗಳ ತಪ್ಪು ಗ್ರಹಿಕೆಗಳನ್ನು ಸರಿಪಡಿಸಬಹುದಾಗಿದೆ. ವಿಷಯವನ್ನು ಅರ್ಥೈಸುವ ಪ್ರಯತ್ನ ಈ ಹಂತದಲ್ಲಿ ಪ್ರಧಾನವಾದುದು. ವಿದ್ಯಾರ್ಥಿಗಳಿಗೆ ಪ್ರಶ್ನೆ, ಹೋಲಿಕೆ, ಉದಾಹರಣೆ, ಪ್ರಾತ್ಯಕ್ಷಿಕೆ ಮುಂತಾದವುಗಳ ಮೂಲಕ ಸೂಕ್ತ ಬೋಧನಾ ವಿಧಾನವನ್ನು ಅನುಸರಿಸಿ ಕಲಿಸಬೇಕು. ವಿದ್ಯಾರ್ಥಿಗಳಲ್ಲಿ ಅಂತರ್ಗತವಾಗಿರುವ ವಿಚಾರಗಳನ್ನು ಹೊರಗೆಳೆಯುವ ಪ್ರಯತ್ನ ಇಲ್ಲಿ ಸಾಗಬೇಕಿದೆ.

4. ವಿಸ್ತರಿಸು (Elaborate): ವಿದ್ಯಾರ್ಥಿಗಳು ತಾವು ಕಂಡುಕೊಂಡ, ಗ್ರಹಿಸಿದ ವಿಚಾರಗಳನ್ನು ಹೊಸ ಸನ್ನಿವೇಶಗಳಿಗೆ ಅನ್ವಯಿಸುವುದಕ್ಕೆ ಪೂರಕ ವಾತಾವರಣವನ್ನು ಈ ಹಂತದಲ್ಲಿ ಸೃಷ್ಟಿಸಬೇಕು. ಹೊಸ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಅವರ ಕಲ್ಪನೆಯನ್ನು ವಿಕಾಸಗೊಳಿಸುವುದು, ಹೊಸ ರೀತಿಯ ಪ್ರಶ್ನೆಗಳನ್ನು ಮಕ್ಕಳು ಕೇಳುವ ಸ್ಥಿತಿಯನ್ನು ನಿರ್ಮಿಸುವ ಕೆಲಸ ಈ ಹಂತದಲ್ಲಿ ಆಗಬೇಕು. ಪಠ್ಯವನ್ನು ಮೀರಿದ ಚಿಂತನೆಗಳು, ಚರ್ಚೆಗಳು ಇಲ್ಲಿ ಆಗಬೇಕು. ಸ್ವಯಂ ಆಲೋಚನೆಯ ಮೂಲಕ ಸಾಗಿ ಸ್ವಪರಿಕಲ್ಪನೆಗಳನ್ನು ನಿರ್ಮಿಸಿಕೊಳ್ಳುತ್ತಾ ವಿಷಯವನ್ನು ವಿಸ್ತರಿಸಿಕೊಳ್ಳುವಂತೆ ಮಾಡುವುದಾಗಿದೆ.

5. ಮೌಲ್ಯಮಾಪಿಸು (Evaluate): ಪಾಠದ ಆರಂಭದಿಂದ ಅಂತ್ಯದವರೆಗೂ ಎಲ್ಲಾ ಹಂತದಲ್ಲೂ ಮೌಲ್ಯಮಾಪನ ಪ್ರಕ್ರಿಯೆ ನಿರಂತರವಾಗಿರಬೇಕು. ವಿದ್ಯಾರ್ಥಿಗಳ ಜ್ಞಾನ, ಚಂತನೆ, ಕೌಶಲ್ಯ, ಅನ್ವಯಿಕತೆ ಹಾಗೂ ಕಲಿಕೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಶಿಕ್ಷಕರು ನಿರಂತರವಾಗಿ ಅವಲೋಕಿಸಬೇಕು, ದಾಖಲಿಸಬೇಕು. ಈ ಸಂಬಂಧ ವಿದ್ಯಾರ್ಥಿಗಳ ಕಲಿಕೆಯನ್ನು ದೃಢಪಡಿಸುವ ಪ್ರಶ್ನೆಗಳನ್ನು ಹಾಗೂ ಚಟುವಟಿಕೆಗಳನ್ನು ಶಿಕ್ಷಕರು ನೀಡಬಹುದಾಗಿದೆ. ಮುಖ್ಯವಾಗಿ ಬೋಧನಾ ಉದ್ದೇಶಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಹಾಗೂ ಯೋಜಿತ ಕಲಿಕಾ ಚಟುವಟಿಕೆಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ, ಅರ್ಥಪೂರ್ಣವಾಗಿವೆ ಎಂಬುದನ್ನು ಮೌಲ್ಯಮಾಪನದ ಹಂತದಲ್ಲಿ ಶಿಕ್ಷಕರು ಸಮಗ್ರವಾಗಿ ಕಂಡುಕೊಳ್ಳುವುದಾಗಬೇಕು.

5ಇ ಮಾದರಿ ಪಾಠಯೋಜನೆ:

ವಿಷಯ: ಕನ್ನಡ

ತರಗತಿ: 8ನೆಯ ತರಗತಿ

ಘಟಕ: ಸಾರ್ಥಕ ಬದುಕಿನ ಸಾಧಕ

ಲೇಖಕರು: ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ

ಸಂಗತಿ: ಮಿರ್ಜಾ ಇಸ್ಮಾಯಿಲ್ ಅವರು ಡಿವಿಜಿ ಅವರ ಸ್ನೇಹಕಾಗಿ ಪರಿತಪಿಸಿದ್ದು

ಪೂರ್ವಜ್ಞಾನ: ಮಾನವ ಬುದ್ಧಿಜೀವಿ, ಬದುಕಿನ ಉದ್ದೇಶ, ಸಾರ್ಥಕ ಬದುಕಿನ ಲಕ್ಷಣಗಳು ಹಾಗೂ ಸಾರ್ಥಕ ಬದುಕನ್ನು ನಡೆಸಿದಂತಹ ಹಲವಾರು ವ್ಯಕ್ತಿಗಳ ಬಗ್ಗೆ ಮಕ್ಕಳು ಈಗಾಗಲೇ ಕೇಳಿ ತಿಳಿದುಕೊಂಡಿದ್ದಾರೆ.

ನಿರ್ಧಿಷ್ಟ ಉದ್ದೇಶಗಳು:

1. ವಿದ್ಯಾರ್ಥಿಗಳು ಮಿರ್ಜಾ ಇಸ್ಮಾಯಿಲ್ ಅವರು ಡಿವಿಜಿ ಅವರ ಸ್ನೇಹಕ್ಕಾಗಿ ಪರಿತಪಿಸಿದ ಸಂಗತಿಯನ್ನು ತಿಳಿಯುವರು
2. ವಿದ್ಯಾರ್ಥಿಗಳು ಡಿವಿಜಿ ಅವರ ವ್ಯಕ್ತಿತ್ವದ ವಿಶೇಷತೆಗಳನ್ನು ವಿವರಿಸುವರು
3. ಸಾರ್ಥಕ ಬದುಕು ಕಟ್ಟಿಕೊಂಡ ಮಹಾನ್ ವ್ಯಕ್ತಿಗಳನ್ನು ಪಟ್ಟಿ ಮಾಡುವರು

ಬೋಧನಾ ಕಲಿಕೋಪಕರಣಗಳು:

- ಡಿವಿಜಿ ಅವರ ಭಾವಚಿತ್ರ
- ಮಿರ್ಜಾ ಇಸ್ಮಾಯಿಲ್ ಅವರ ಭಾವಚಿತ್ರ
- ಡಿವಿಜಿ ಮತು ಮಿರ್ಜಾ ಇಸ್ಮಾಯಿಲ್ ಅವರ ಬದುಕಿನ ಭಿನ್ನತೆಗಳ ಚಿತ್ರಪಟ

5ಇ ಹಂತಗಳು	ಶಿಕ್ಷಕರ ಚಟುವಟಿಕೆಗಳು	ವಿದ್ಯಾರ್ಥಿಗಳ ಚಟುವಟಿಕೆಗಳು	ಕಲಿಕಾ ಫಲ	ಕಲಿಕೋಪ ಕರಣಗಳು	ಮೌಲ್ಯಮಾಪನ	ಕಪ್ಪುಹಲಗೆ ಕಾರ್ಯ
ತೊಡಗಿಸು (5ನಿಮಿಷ)	ಆತ್ಮೀಯ ವಿದ್ಯಾರ್ಥಿಗಳೇ ಕನ್ನಡ ನಾಡು ಅನೇಕ ಪುಣ್ಯಪುರುಷರು, ಮಹಾಮಹಿಮರು, ತ್ಯಾಗ ಜೀವಿಗಳು, ಶ್ರಮಜೀವಿಗಳು, ಆದರ್ಶಪುರುಷರು, ಸಾಹಿತಿಗಳು ಹುಟ್ಟಿಬೆಳೆದ ಪುಣ್ಯಭೂಮಿ. ತಮ್ಮ ತನು, ಮನ, ಧನದಿಂದ ಕಾಯಾ, ವಾಚಾ, ಮನಸಾ ನಿಸ್ವಾರ್ಥ ಸೇವೆಗೈದು ಸಾರ್ಥಕ ಬದುಕನ್ನು ನಡೆಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂಬುದನ್ನು ನೀವು ಈಗಾಗಲೇ ತಿಳಿದುಕೊಂಡಿದ್ದೀರಿ. ಹಾಗಾದರೆ, *ಸಾರ್ಥಕ ಬದುಕು ಎಂದರೇನು?	ವಿದ್ಯಾರ್ಥಿಗಳು ಶಿಕ್ಷಕರು ಮಾತುಗಳನ್ನು ಗಮನವಿಟ್ಟು ಆಲಿಸುವರು.				
	*ಸಾರ್ಥಕ ಬದುಕಿನ ಲಕ್ಷಣಗಳು ಯಾವವು?	*ಜೀವನದಲ್ಲಿ ಸುಖ, ಸಂತೋಷವನ್ನು ಪಡೆಯುವುದಾಗಿದೆ. *ಕಷ್ಟದಲ್ಲಿರುವವರಿಗೆ ನೆರವಾಗುವುದು, ಪರರ ಹಿತಕ್ಕಾಗಿ ಶ್ರಮಿಸುವುದು, ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದಿರುವುದು.		ಪುನಃಸ್ಮರಣೆ	ಪ್ರಶ್ನಿಸುವುದು	
	*ನಿಮಗೆ ಗೊತ್ತಿರುವ ಸಾರ್ಥಕ ಬದುಕು ನಡೆಸಿದವರ ಹೆಸರನ್ನು ಹೇಳಿ.	*ಗಾಂಧೀಜಿ, ಸ್ವಾಮಿ ವಿವೇಕಾನಂದ, ಬುದ್ಧ, ಬಸವಣ್ಣ, ಪರಮಹಂಸರು, ಸರ್ ಎಂ ವಿಶ್ವೇಶ್ವರಯ್ಯ ಮುಂತಾದವರುಗಳು.				
	*ಮಂಕುತಿಮ್ಮನ ಕಗ್ಗ ಬರೆದವರು ಯಾರು?	*ಡಿ. ವಿ. ಜಿ				
	*ಡಿ ವಿ ಜಿ ಅವರನ್ನು ಸಾರ್ಥಕ ಬದುಕಿನ ಸಾಧಕ ಎಂದು ಕರೆಯುತ್ತಾರೆ. ಏಕೆ?	*ವಿದ್ಯಾರ್ಥಿಗಳುಉತ್ತರಿಸಲು ಪ್ರಯತ್ನಿಸುವರು...				
	ಉದ್ದೇಶ ನಿರೂಪಣೆ: ವಿದ್ಯಾರ್ಥಿಗಳೇ ಹಾಗಾದರೆ ಇವತ್ತಿನ ತರಗತಿಯಲ್ಲಿ ಸಾರ್ಥಕ ಬದುಕಿನ ಸಾಧಕರಲ್ಲಿ ಒಬ್ಬರಾದ ಕನ್ನಡದ ಶ್ರೇಷ್ಠ ಕವಿ, ತತ್ವಜ್ಞಾನಿಯಾದ ಡಿ ವಿ ಜಿ ಅವರು ಹೇಗೆ ಸಾರ್ಥಕ ಬದುಕನ್ನು ನಡೆಸಿದರು ಎಂಬುದನ್ನು ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು ಬರೆದ "ಸಾರ್ಥಕ ಬದುಕಿನ ಸಾಧಕ" ಎಂಬ ಪಾಠವನ್ನು ಅಧ್ಯಯನ ಮಾಡೋಣ.					

						"ಸಾರ್ಥಕ ಬದುಕಿನ ಸಾಧಕ"–ಎನ್.ಎಸ್. ಲಕ್ಷ್ಮೀನಾರಾ ಯಣ ಭಟ್ಟ

5ಇ ಹಂತಗಳು	ಶಿಕ್ಷಕರ ಚಟುವಟಿಕೆಗಳು	ವಿದ್ಯಾರ್ಥಿಗಳ ಚಟುವಟಿಕೆಗಳು	ಕಲಿಕಾ ಫಲ	ಕಲಿಕೋಪ ಕರಣಗಳು	ಮೌಲ್ಯ ಮಾಪ ನ	ಕಪ್ಪುಹಲಗೆ ಕಾರ್ಯ
ಅನ್ವೇಷಿಸು (5ನಿಮಿಷ)	ವಿದ್ಯಾರ್ಥಿಗಳಿಗೆ ಹೊಸಪದಗಳ ಅರ್ಥಗಳನ್ನು ಕೊಟ್ಟು, ಅಗತ್ಯ ಸೂಚನೆಗಳನ್ನು ನೀಡಿ, ಆಯ್ದ ಗದ್ಯ ಭಾಗವನ್ನು ಸ್ಪಷ್ಟವಾಗಿ, ಧ್ವನಿಯ ಏರಿಳಿತದೊಂದಿಗೆ, ಭಾವನೆಗಳು ಯತಾರ್ಥಗೊಳ್ಳುವಂತೆ ಓದುವರು ಮಾದರಿ ಓದು: ಡಿವಿಜಿ ಅವರು ತಮ್ಮೊಡನೆ__________ ______________________ ______________________ ––– ಎಂದು ಡಿ ವಿ ಜಿ. ಮೌನ ಓದು: ಪಠ್ಯವಿಷಯದ ವಿಚಾರಗಳನ್ನು, ಭಾವನೆಗಳನ್ನು ಹಾಗೂ ಮೌಲ್ಯಗಳನ್ನು ಅರ್ಥಮಾಡಿಕೊಂಡು ಮೌನವಾಗಿ ಓದುವಂತೆ ಸೂಚನೆಗಳನ್ನು ನೀಡಿ, ತರಗತಿಯನ್ನು ಅವಲೋಕಿಸುವರು.	ಶಿಕ್ಷಕರ ಸೂಚನೆಗಳನುಸಾರ ಪುಸ್ತಕವನ್ನು ತೆರೆದು ಶಿಕ್ಷಕರ ಓದನ್ನು ಅನುಸರಿಸುತ್ತಾರೆ. ಪದಗಳ ಅರ್ಥವನ್ನು ಗ್ರಹಿಸುವರು. ಶಿಕ್ಷಕರ ಮಾರ್ಗದರ್ಶನದಂತೆ ಮೌನವಾಗಿ ಓದಿ ವಿಚಾರಗಳನ್ನು ಗ್ರಹಿಸುವರು.	ಗ್ರಹಿಕೆ	ಮಿರ್ಜಾ ಮತ್ತು ಡಿ ವಿ ಜಿ ಅವರ ಭಾವಚಿತ್ರ		

5ಇ ಹಂತಗಳು	ಶಿಕ್ಷಕರ ಚಟುವಟಿಕೆಗಳು	ವಿದ್ಯಾರ್ಥಿಗಳ ಚಟುವಟಿಕೆಗಳು	ಕಲಿಕಾ ಫಲ	ಕಲಿಕೋಪಕರ ಣಗಳು	ಮೌಲ್ಯಮಾಪನ	ಕಪ್ಪುಹಲಗೆ ಕಾರ್ಯ

ವಿವರಿಸು (20ನಿಮಿಷ)	ಮಕ್ಕಳಿಗೆ ಪುಸ್ತಕವನ್ನು ಮುಚ್ಚಿಡಲು ಸೂಚಿಸುತ್ತಾರೆ. ವಿದ್ಯಾರ್ಥಿಗಳೇ ನೀವು ಇದುವರೆಗೆ ಓದಿದ ಗದ್ಯಭಾಗದಲ್ಲಿ ಯಾವ ಯಾವ ವಿಚಾರಗಳು ಇವೆ? ನಿಮ್ಮದೇ ಮಾತುಗಳಲ್ಲಿ ವಿವರಿಸಿರಿ.	ವಿದ್ಯಾರ್ಥಿಗಳು ತಮ್ಮದೇ ಮಾತುಗಳಲ್ಲಿ ತಾವು ಗ್ರಹಿಸಿದ ವಿಷಯವನ್ನು ವಿವರಿಸುವರು.	ಗ್ರಹಿಕೆ		ಪ್ರಶ್ನಿಸುವಿಕೆ	
	ಡಿ ವಿ ಜಿ ಅವರ ಪೂರ್ಣ ಹೆಸರೇನು?	ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ				
	ಮೈಸೂರನ್ನು ಆಳಿದ ಪ್ರಮುಖ ದಿವಾನರುಗಳು ಯಾರು?	ದಿವಾನ್ ರಂಗಾಚಾರ್ಯಲು, ಸರ್ ಎಂ. ವ್ಹಿ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮುಂತಾದವರು				
	ಶಿಕ್ಷಕರು ಭಾವಚಿತ್ರವನ್ನು ಪ್ರದರ್ಶಿಸುವರು.	ವೀಕ್ಷಿಸುವರು			ಪ್ರಶ್ನಿಸುವಿಕೆ	
	ಡಿ ವಿ ಜಿ ಹಾಗೂ ಮಿರ್ಜಾ ಇಸ್ಮಾಯಿಲ್ ಅವರ ನಡುವಿನ ಸ್ನೇಹ ಸಂಬಂಧದ ಘಟನೆಯನ್ನು ವಿವರಿಸುವರು.	ಆಲಿಸುವರು				
	ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರು ಡಿ ವಿ ಜಿ ಅವರ ಬಗ್ಗೆ ಏಕೆ ಕಳವಳಗೊಂಡಿದ್ದರು?	ಡಿ ವಿ ಜಿ ಅವರು ಮಾತು ನಿಲ್ಲಿಸಿದ್ದರಿಂದ ಸ್ನೇಹ ತಪ್ಪಿತೆಂದು.				
	ಮಿರ್ಜಾ ಇಸ್ಮಾಯಿಲ್ ಅವರು ಡಿ ವಿ ಜಿ ಅವರ ಸ್ನೇಹ ಕೈತಪ್ಪಿದಾಗ ತಮ್ಮ ಆಪ್ತರೊಡನೆ ಏನೆಂದು ಹೇಳಿಕೊಂಡಿದ್ದರು?	ನನ್ನದೂ ಏನೂ ತಪ್ಪಿಲ್ಲವೆಂದು ಹೇಳಿಕೊಂಡಿದ್ದರು.				
	ಪರಮೋಚ್ಚ ಪದವನ್ನು ಬಿಡಿಸಿ ಬರೆಯಿರಿ.	ಪರಮ+ಉಚ್ಚ				
	ಮಿರ್ಜಾ ಅವರ ಕಾಲಕ್ಕೆ ಡಿ ವಿ ಜಿ ಅವರು ಏನೆಂದು ಗುರುತಿಸಲ್ಪಟ್ಟಿದ್ದರು?	ದೊಡ್ಡ ಮೇಧಾವಿ ಬುದ್ಧಿವಂತ ಎಂದು.				**ಪರಮ+ಉಚ್ಚ= ಪರಮೋಚ್ಚ ಇದು ಗುಣಸಂಧಿ**

5ಇ ಹಂತಗಳು	**ಶಿಕ್ಷಕರ ಚಟುವಟಿಕೆಗಳು**	**ವಿದ್ಯಾರ್ಥಿಗಳ ಚಟುವಟಿಕೆಗಳು**	**ಕಲಿಕಾ ಫಲ**	**ಕಲಿಕೋಪಕರಣಗಳು**	**ಮೌಲ್ಯಮಾಪನ**	**ಕಪ್ಪುಹಲಗೆ ಕಾರ್ಯ**
ವಿಸ್ತರಿಸು (5ನಿಮಿಷ)	(ಪಠ್ಯದಲ್ಲಿರುವ ಚಿಂತನೆಗಳು, ವಿಚಾರಗಳು, ತತ್ವಗಳು, ಈ ಹಿಂದೆ ಗ್ರಹಿಸಿದ ಚಿಂತನೆಗಳನ್ನು ವಿಚಾರಗಳನ್ನು ಹೊಸ ಸನ್ನಿವೇಶಗಳಿಗೆ ಅನ್ವಯವಾಗುವಂತೆ ಪೂರಕ ವಾತಾವರಣ ಸೃಷ್ಟಿಸುವುದು.)	ಆಲಿಸುವರು				
	*ಡಿ ವಿ ಜಿ ಯವರಂತೆ ಆದರ್ಶ ವ್ಯಕ್ತಿತ್ವ ಹೊಂದಿದ ಸಾಧಕರ ಹೆಸರುಗಳನ್ನು ಪಟ್ಟಿ ಮಾಡಿ	*ಸ್ವಾಮಿ ವಿವೇಕಾನಂದರು, ಬಸವಣ್ಣ, ಬುದ್ಧ, ಅಂಬೇಡ್ಕರ್, ಗಾಂಧೀಜಿ ಮುಂತಾದವರು.			ಚರ್ಚೆ	
	*ಮಿರ್ಜಾ ಇಸ್ಮಾಯಿಲ್					

	ಅವರು ಡಿವಿಜಿ ಅವರ ಸ್ನೇಹಕ್ಕಾಗಿ ಹಾತೊರೆದ ಪ್ರಸಂಗದಿಂದ ತಿಳಿದುಕೊಂಡ ವಿಚಾರಗಳೇನು? *ಡಿವಿಜಿ ಅವರಂತಹ ವ್ಯಕ್ತಿತ್ವ ನಮಗೆ ಏಕೆ ಬೇಕು?	*ಒಳ್ಳೆಯ ಗುಣಗಳು, ಪಾಂಡಿತ್ಯ, ಪ್ರೇಮಗುಣವಿದ್ದರೆ ಎಲ್ಲೆಡೆ ಗೌರವ ಸಿಗುತ್ತದೆ ಎಂಬ ವಿಚಾರಳು. *ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ಬೇಕು.				

5ಇ ಹಂತಗಳು	ಶಿಕ್ಷಕರ ಚಟುವಟಿಕೆಗಳು	ವಿದ್ಯಾರ್ಥಿಗಳ ಚಟುವಟಿಕೆಗಳು	ಕಲಿಕಾ ಫಲ	ಕಲಿಕೋಪಕ ರಣಗಳು	ಮೌಲ್ಯಮಾಪನ	ಕಪ್ಪುಹಲಗೆ ಕಾರ್ಯ
ಮೌಲ್ಯಮಾಪನ (5ನಿಮಿಷ)	1.ಸಾರ್ಥಕ ಬದುಕಿನ ಸಾಧಕ ಪಾಠದ ಲೇಖಕರು ಯಾರು? 2.ಸಾರ್ಥಕ ಬದುಕನ್ನು ಕಂಡುಕೊಂಡವರು ಯಾರು? 3.ಡಿವಿಜಿ ಅವರ ವ್ಯಕ್ತಿತ್ವದ ವಿಶೇಷತೆಗಳೇನು? ಬಿಟ್ಟಸ್ಥಳ ತುಂಬಿರಿ: 1.ಮುಳಬಾಗಿಲು ಜಿಲ್ಲೆಗೆ ಸೇರಿದೆ. 2.ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು 3.ಡಿವಿಜಿ ಅವರ ಪ್ರಸಿದ್ಧ ಕೃತಿ	ಉತ್ತರಿಸುವರು ಉತ್ತರಿಸುವರು	ಪುನಃಸ್ಮರಣೆ			"ಸಾರ್ಥಕ ಬದುಕಿನ ಸಾಧಕ ಪಾಠದ ಲೇಖಕರು ಎನ್. ಎಸ್. ಲಕ್ಷ್ಮೀನಾರಯಣಭಟ್ಟ. ಸಾರ್ಥಕ ಬದುಕನ್ನು ಕಂಡುಕೊಂಡವರು ಡಿವಿಜಿ ಅವರು. ಡಿವಿಜಿಯರು ಸರಳ, ಸತ್ವಶಾಲಿ ವ್ಯಕ್ತಿತ್ವವನ್ನು ಹೊಂದಿದ್ದರು. ಶೀಲವಂತರು, ವಿವೇಕ ಸಂಪನ್ನರು, ಸ್ವಯಂ ಅರ್ಜಿತ ಪಾಂಡಿತ್ಯ ಹೊಂದಿದವರಾಗಿದ್ದರು." 1.ಕೋಲಾರ 2.ಮಿರ್ಜಾ ಇಸ್ಮಾಯಿಲ್ 3.ಮಂಕುತಿಮ್ಮನ ಕಗ್ಗ

ಮನೆಗೆಲಸ: ಮಿರ್ಜಾ ಇಸ್ಮಾಯಿಲ್ ಅವರು ಡಿವಿಜಿ ಅವರ ಸ್ನೇಹಕ್ಕಾಗಿ ಯಾವ ರೀತಿಯಾಗಿ ಹಾತೊರೆದರು ಎಂಬುದನ್ನು ಬರೆದುಕೊಂಡು ಬನ್ನಿರಿ.

4.2 ಭಾಷಾ ಬೋಧನೆಯ ಉದ್ದೇಶಗಳು– ಅರ್ಥ ಮತ್ತು ವಿಧಗಳು; ಸಾಮಾನ್ಯ ಉದ್ದೇಶಗಳು ಮತ್ತು ನಿರ್ಧಿಷ್ಟ ಉದ್ದೇಶಗಳು (ವರ್ತನಾ ರೂಪದಲ್ಲಿ ನಿರ್ಧಿಷ್ಟ ಉದ್ದೇಶಗಳನ್ನು ಬರೆಯುವಿಕೆ)

ಅರ್ಥ: ಒಂದು ಭಾಷೆಯನ್ನು ಬೋಧಿಸುವಲ್ಲಿ ಹಲವಾರು ಗುರಿ–ಉದ್ದೇಶಗಳನ್ನು ಹೊಂದಿರಲಾಗಿರುತ್ತದೆ. ಅದರಲ್ಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಭಾಷೆಯನ್ನು ಬೋಧಿಸಲು ಮಹತ್ವಪೂರ್ಣವಾದ ಗುರಿ–ಉದ್ದೇಶಗಳನ್ನು ಹಾಕಿಕೊಂಡಿರಲಾಗಿರುತ್ತದೆ. ಭಾಷೆಯ ಬೋಧನೆಯು ತನ್ನದೇ ಆದ ಉದ್ದೇಶಗಳನ್ನು ಹೊಂದಿದ್ದು ಅದನ್ನು ಈಡೇರಿಸಿಕೊಳ್ಳಲು ಶೈಕ್ಷಣಿಕ ಸಾಲಿನುದ್ದಕ್ಕೂ ನಿರಂತರವಾಗಿ ಹಲವಾರು ಪಠ್ಯ–ಪಠ್ಯೇತರ ಚಟುವಟಿಕೆಗಳ ಮೂಲಕ ಪಾಠಪ್ರವಚನದೊಂದಿಗೆ ಸಾಗುತ್ತಿರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಓದು, ಬರಹ, ಪರೀಕ್ಷೆಗಳಲ್ಲಿ ಉತ್ತರಗಳನ್ನು ಬರೆಯಲಷ್ಟೇ ಭಾಷೆ ಸೀಮಿತವಾಗಿರುದಿಲ್ಲ. ಕಲಿಯುವ ವಿದ್ಯಾರ್ಥಿಗಳ ಜ್ಞಾನ, ತಿಳುವಳಿಕೆ, ಕೌಶಲಗಳು, ಸಾಹಿತ್ಯ, ಸಂಸ್ಕೃತಿ, ಸೃಜನಶೀಲ ಚಿಂತನೆ ಮತ್ತು ಜೀವನ ಮೌಲ್ಯಗಳನ್ನು ಭಾಷೆಯ ಮೂಲಕ ಬೆಳೆಸಲಾಗುತ್ತದೆ. ಭಾಷೆಯನ್ನು ಶಿಕ್ಷಣದಲ್ಲಿ ಕೇವಲ ಕಲಿಕಲಿಸುವುದಕಷ್ಟೇ ಬಳಸದೆ, ವಿದ್ಯಾರ್ಥಿಗಳ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸದ ಆಶಯದೊಂದಿಗೆ ಭಾಷೆಯನ್ನು ಕಲಿಸಬೇಕಾಗುತ್ತದೆ. ಅದಕ್ಕಾಗಿ ಭಾಷೆಯು ಸಾಮಾನ್ಯ ಉದ್ದೇಶಗಳು ಮತ್ತು ನಿರ್ಧಿಷ್ಟ ಉದ್ದೇಶಗಳನ್ನು ಒಳಗೊಂಡಿದೆ.

➢ **ಸಾಮಾನ್ಯ ಉದ್ದೇಶಗಳು:**

- ಮಕ್ಕಳಲ್ಲಿ ಆಲಿಸುವ, ಗ್ರಹಿಸುವ ಮತ್ತು ವೇಗವಾಗಿ ಓದುವ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
- ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದು.
- ಜ್ಞಾನಾರ್ಜನೆ, ಸಾಹಿತ್ಯಾಭಿರುಚಿ, ಅಂತರ್ ದೃಷ್ಟಿಗಾಗಿ ಮತ್ತು ಆನಂದಕ್ಕಾಗಿ ಮಕ್ಕಳು ಸ್ವತಂತ್ರವಾಗಿ ಓದಲು ಸಮರ್ಥರಾಗುವಂತೆ ಮಾಡುವುದು.
- ವಾಕ್ಯಬಂಧಗಳನ್ನು ಅರ್ಥಮಾಡಿಕೊಂಡು, ಪದಸಂಪತ್ತನ್ನು ವೃದ್ಧಿಸಿಕೊಂಡು ಮತ್ತು ಉಚ್ಚಾರಣೆಯನ್ನು ಸ್ಪಷ್ಟಗೊಳಿಸಿಕೊಂಡು ಭಾಷೆಯನ್ನು ದೋಷರಹಿತವಾಗಿ, ನಿಖರವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಸೌಂದರ್ಯಪ್ರಜ್ಞೆ, ಸ್ವಂತಿಕೆ, ಕಲ್ಪನೆ ಮತ್ತು ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದು.
- ನಾಡು–ನುಡಿ, ಸಾಹಿತ್ಯ, ಸಂಸ್ಕೃತಿಯ ಬಗೆಗೆ ಆತ್ಮೀಯತೆ ಅಭಿಮಾನಗಳನ್ನು ಬೆಳೆಸುವುದು.
- ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವಂತೆ ಜೀವನ ಮೌಲ್ಯಗಳನ್ನು, ಕರ್ತವ್ಯ ಪ್ರಜ್ಞೆಯನ್ನು, ರಸಭಾವಗಳ ಉದಾತ್ತತೆ ಮೂಡುವಂತೆ ಮಾಡುವುದು.
- ಮಾತೃಭಾಷೆಯಲ್ಲಿನ ಕವಿಗಳ ಪರಿಚಯ ಮಾಡಿಕೊಟ್ಟು ಅವರ ಬರಹ ಮತ್ತು ಬದುಕು ಹೇಗಿತ್ತು ಎಂಬುದರ ಕುರಿತು ತಿಳಿಸಿಕೊಟ್ಟು ಅಭಿಮಾನ ಮೂಡುವಂತೆ ಮಾಡುವುದು.

- ಸಾಹಿತ್ಯದ ವಿವಿಧ ಕಾಲಘಟ್ಟಗಳನ್ನು, ಪ್ರಕಾರಗಳನ್ನು ಹಾಗೂ ವ್ಯಾಕರಣವನ್ನು ಪರಿಚಯ ಮಾಡಿಕೊಟ್ಟು ಅವುಗಗಳಲ್ಲಿ ಆಸಕ್ತಿ ಮೂಡುವಂತೆ ಮಾಡುವುದು.
- ಸಮಾನತೆ, ರಾಷ್ಟ್ರೀಯ ಪ್ರಜ್ಞೆ, ಜಾತ್ಯಾತೀತತೆ, ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.
- ಪರಿಸರ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ, ವೈಜ್ಞಾನಿಕ ಮನೋಭಾವಗಳನ್ನು ಸಾಹಿತ್ಯದ ಮೂಲಕ ಮಕ್ಕಳಿಗೆ ಪರಿಚಯ ಮಾಡಿಕೊಡುವುದು.
- ಸಮಸ್ಯೆಗಳನ್ನು ಕುರಿತು ಚಿಂತನೆ ಮಾಡಿ ಕಾರಣ ಹುಡುಕುವ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದು.
- ಗದ್ಯ ಮತ್ತು ಪದ್ಯಗಳಲ್ಲಿ ಬರುವ ಸಾಮಾಜಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವುದು.
- ಸುಸಂಬದ್ಧ, ವ್ಯಾಕರಬದ್ಧ, ವಾಕ್ಯರಚನೆಯೊಂದಿಗೆ ಲಿಖಿತ ಮತ್ತು ಮೌಖಿಕ ಕೌಶಲ್ಯಗಳಲ್ಲಿ ಸಾಮರ್ಥ್ಯ ಬೆಳೆಸುವುದು.
- ವಿವಿಧ ಉದ್ದೇಶಗಳ ಸಾಧನೆಗಾಗಿ ಓದು ಮತ್ತು ಬರಹ ಕೌಶಲಗಳಲ್ಲಿ ಸಾಮರ್ಥ್ಯ ಬೆಳೆಸುವುದು ಮತ್ತು ಇವುಗಳ ಅರ್ಥಪೂರ್ಣ ಬಳಕೆಯ ಅಭಿರುಚಿ ಬೆಳೆಸುವುದು.
- ಭಾಷೆಯ ಮೂಲಕ ಸ್ವತಂತ್ರ ಯೋಚನೆ, ಸುಸಂಬದ್ಧ ಅಭಿವ್ಯಕ್ತಿ ಮತ್ತು ಅಧ್ಯಯನ ಕೌಶಲಗಳಲ್ಲಿ ಸಾಮರ್ಥ್ಯ ಬೆಳೆಸುವುದು.
- ಸಾಹಿತ್ಯಾಧ್ಯಯನದಲ್ಲಿ ಆಸಕ್ತಿ ಮೂಡಿಸಿ ಸಾಹಿತ್ಯಾಭಿರುಚಿ ಬೆಳೆಸಿ ಅವರನ್ನು ಸಾಹಿತಿಗಳನ್ನಾಗಿ ತಯಾರಿಸುವಲ್ಲಿ ವೇದಿಕೆ ನಿರ್ಮಿಸಿಕೊಡುವುದು.

ಭಾಷಾ ಬೋಧನೆಯ ಈ ಉದ್ದೇಶಗಳ ಸಾಧನೆಯು ಒಂದು ದಿನದಲ್ಲಿ ಅಥವಾ ಒಂದು ಶೈಕ್ಷಣಿಕ ವರ್ಷದ ಅವಧಿಯಲ್ಲಿ ಒಂದು ಕಾರ್ಯಕ್ರಮದಿಂದ ಅಥವಾ ಒಂದು ಪಠ್ಯಪುಸ್ತಕದ ಬೋಧನೆಯಿಂದ ಆಗುವ ಕಾರ್ಯವಲ್ಲ. ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ಬೆಳೆಸಲು ಕೇವಲ ಪಠ್ಯ ಮತ್ತು ಉಪಪಠ್ಯಪುಸ್ತಕಗಳ ಬೋಧನೆಯಷ್ಟೇ ಸಾಕಾಗುವುದಿಲ್ಲ. ಭಾಷಾ ಪ್ರಯೋಗಕ್ಕೆ ಸಹಾಕವಾಗುವಂತಹ ಅಭ್ಯಾಸಗಳು, ಸಾಹಿತ್ಯ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಪರಿಚಯಿಸಬೇಕು. ಈ ದಿಸೆಯಲ್ಲಿ ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯು ಉಪಪಠ್ಯಪುಸ್ತಕಗಳ ಬೋಧನೆಗೆ ಬದಲಾಗಿ ಪ್ರಬಂಧ, ಪತ್ರಲೇಖನ, ಮಾತನಾಡುವ ಕೌಶಲ ಬೆಳೆಸಲು ಸಹಾಯಕವಾಗುವ ಬೋಧನಾ ವಿಷಯಗಳನ್ನು ನಿರ್ಧರಿಸಿ ಅನುಷ್ಠಾನಗೊಳಿಸಬೇಕು. ಅಲ್ಲದೆ ಭಾಷಾ ಶಿಕ್ಷಕರು ಸಹ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು.

➢ **ನಿರ್ಧಿಷ್ಟ ಉದ್ದೇಶಗಳು:**ಸಾಮಾನ್ಯ ಉದ್ದೇಶಗಳು ದೀರ್ಘಕಾಲಿಕವಾಗಿ ವ್ಯಾಪಕ ಸ್ವರೂಪದಲ್ಲಿದ್ದರೆ ನಿರ್ಧಿಷ್ಟ ಉದ್ದೇಶಗಳು ನಿರ್ಧಿಷ್ಟ ಕೌಶಲ್ಯಗಳ ಸಾಧನೆಗೆ ಸಂಬಂಧಿಸಿದ್ದು ಅಲ್ಪಕಾಲಿಕವಾಗಿರುತ್ತವೆ. ಸಾಮಾನ್ಯ ಉದ್ದೇಶಗಳ ಸಾಧನೆಗೆ ಪೂರಕವಾಗುವಂತೆ ನಿರ್ಧಷ್ಟ ಉದ್ದೇಶಗಳು ಇರುತ್ತವೆ. ಈ

ಉದ್ದೇಶಗಳು ಕೆಲವೇ ಕಲಿಕಾ ಅನುಭವಗಳ ಮೂಲಕ ಸ್ವಲ್ಪ ಸಮಯದಲ್ಲಿ ಸಾಧಿಸುವಂತಿರುತ್ತವೆ. ಗುರಿಗಳನ್ನು ಸಾಧಿಸಲು ನೆರವಾಗುವಂತಹ ನಿರ್ದಿಷ್ಟ ಉದ್ದೇಶಗಳು ಪ್ರತಿದಿನದ ಪಠ್ಯವಿಷಯಗಳ ಬೋಧನೆ ಹಾಗೂ ಚಟುವಟಿಕೆಗಳ ಮೂಲಕ ಸಾಧಿಸಲ್ಪಡುತ್ತವೆ.

ಗುರಿಗಳು/ಉದ್ದೇಶಗಳು	**ವರ್ತನಾ ರೂಪ**	**ಉದಾಹರಣೆಗಳು**
ಜ್ಞಾನ	• ಪುನಃಸ್ಮರಿಸುವರು/ ನೆನಪಿಗೆ ತಂದುಕೊಳ್ಳುವರು • ಗುರುತಿಸುವರು	• ಬಿಟ್ಟಸ್ಥಳ ತುಂಬಿರಿ ರೀತಿಯ ಪ್ರಶ್ನೆಗಳ ಮೂಲಕ ಈ ಸ್ಪಷ್ಟೀಕರಣವನ್ನು ಮೌಲ್ಯಮಾಪನ ಮಾಡುವುದು. • ಸೂಕ್ತ/ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡುವುದು. • ವಸ್ತು: ಅರ್ಥಗಳ ಸಂಬಂಧ • ಅಲಂಕಾರ, ಛಂದಸ್ಸು, ನುಡಿಗಟ್ಟು, ಭಾಷಾ ಮಾದರಿ ಶೈಲಿ • ವ್ಯಾಕರಣಾಂಶಗಳ ವಿವರಣೆ ಸೂತ್ರಗಳು • ಬರವಣಿಗೆಯ ನಿಯಮಗಳು • ಪಠ್ಯಾಂಶಗಳು–ಲೇಖಕರು, ವಿಷಯ, ಘಟನೆ, ವಿಚಾರಗಳು, ಭಾವಗಳು. • ವ್ಯಾಕರಣದ ವಿಷಯಗಳು (ನಾಮಪದ, ಕ್ರಿಯಾಪದ, ಸರ್ವನಾಮ, ಲಿಂಗ, ಕಾಲ, ಕ್ರಿಯಾಪದಗಳು, ಪದಗಳ ಸ್ಥಾನ)

ಗುರಿಗಳು/ ಉದ್ದೇಶಗಳು	**ವರ್ತನಾ ರೂಪ**	**ಉದಾಹರಣೆಗಳು**
ತಿಳುವಳಿಕೆ / ಗ್ರಹಿಕೆ	• ಅನುವಾದ ಮಾಡುವರು • ದೋಷಗಳನ್ನು ಕಂಡು ಹಿಡಿಯುವುದು • ಸಂಬಂಧವನ್ನು ಗುರುತಿಸಿ ಹೋಲಿಸುವುದು • ವ್ಯಾಖ್ಯಾನಿಸುವುದು • ಹೋಲಿಸುವುದು • ವಿವರಿಸುವುದು • ಸರಿಯಾದುದನ್ನು ಆಯ್ದುಕೊಳ್ಳುವುದು • ಹೇಳುತ್ತಾನೆ • ಉಪಯೋಗಿಸುತ್ತಾನೆ	• ಸರಿ ತಪ್ಪು ಗುರುತಿಸಿ ಎಂಬಂತಹ ಪ್ರಶ್ನೆಗಳು • ವಿದ್ಯಾರ್ಥಿ ನಕ್ಷೆ, ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ವಿಷಯವನ್ನು ವ್ಯಾಖ್ಯಾನಿಸುವುದು • ಪ್ರಬಂಧ ರೂಪದ ಪ್ರಶ್ನೆಗಳ ಮೂಲಕ • ಅರ್ಥ, ಪಠ್ಯಾಂಶದ ತತ್ವ, ವಿರುದ್ಧಾರ್ಥ, ಸಮಾನಾರ್ಥ.

ಗುರಿಗಳು / ಉದ್ದೇಶಗಳು	**ವರ್ತನಾ ರೂಪ**	**ಉದಾಹರಣೆಗಳು**
ಅನ್ವಯ	• ವಿದ್ಯಾರ್ಥಿ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾನೆ. • ಪ್ರಾಕಲ್ಪನೆಯನ್ನು ರೂಪಿಸುವುದು • ಪುನರುಚ್ಚರಿಸು • ವಿವರಿಸು	• ಲಯ, ವಚನ, ಅಲಂಕಾರ • ತನ್ನದೆ ಆದ ಸ್ವಂತಿಕೆಯೊಂದಿಗೆ ವಿವರಿಸು

	• ಅನುಕರಣೆ ಮಾಡು • ಅಭಿನಯಿಸುತ್ತಾನೆ • ವ್ಯಾಖ್ಯಾನಿಸುತ್ತಾನೆ	• ಉಚ್ಚಾರಣೆ, ಧ್ವನಿ ವ್ಯತ್ಯಾಸ, ವಾಕ್ಯದ ಶೈಲಿಯನ್ನು ಕಂಠಪಾಠ ಮಾಡುವುದು.(ರಾಗ, ತಾಳ, ಲಯದೊಂದಿಗೆ ಹಾಡುವುದು) • ಭಾಷಣ, ಹಾವಭಾವ • ಕೊಟ್ಟ ವಾಕ್ಯಗಳ ಮೇಲೆ

ಗುರಿಗಳು / ಉದ್ದೇಶಗಳು	**ವರ್ತನಾ ರೂಪ**	**ಉದಾಹರಣೆಗಳು**
ಕೌಶಲ್ಯ	• ಬರೆಯುತ್ತಾನೆ • ಪ್ರತಿ ಮಾಡುತ್ತಾನೆ • ಉಕ್ತ ಲೇಖನ • ಪ್ರಯೋಗಿಸುತ್ತಾನೆ	• ಕಲ್ಪನೆ, ವಿವರಣೆ, ವ್ಯಾಖ್ಯಾನುಗಳು, ಕತೆಗಳು, ಪತ್ರಗಳು, ನಿಬಂಧಗಳು– ತಪ್ಪಿಲ್ಲದ ನುಡಿಗಟ್ಟಿನಿಂದ ಕೂಡಿದ ಭಾಷೆಯಲ್ಲಿ, ಸೂಕ್ತಿಗಳು ಅಲಂಕಾರಿಕವಾಗಿ, ಸೂಕ್ತವೇಗದಲ್ಲಿ, ಸ್ಪಷ್ಟ ಅಕ್ಷರಗಳಲ್ಲಿ, ಚೊಕ್ಕವಾಗಿ, ಸುಂದರವಾಗಿ. • ಅಕ್ಷರ, ಪದ, ವಾಕ್ಯ, ವಾಕ್ಯಸಂಬಂಧ, ಸೂಕ್ತವಾದ ನಿಯಮ ಅನುಸರಿಸಿ, ಅಕ್ಷರಗಳ ಗಾತ್ರ, ಪದಗಳ ನಡುವಿನ ಅಂತರ. • ಸರಿಯಾದ ಕಾಗುಣಿತದೊಡನೆ, ವಿರಾಮ ಚಿಹ್ನೆಗಳೊಂದಿಗೆ, ಸರಿಯಾದ ಭಾಷೆಯಲ್ಲಿ ಸ್ಪಷ್ಟವಾಗಿ,

	• ಘೋಷಿಸುತ್ತಾನೆ	• ವಿವಿಧ ರೀತಿಯ ವಾಕ್ಯಗಳನ್ನು ಸರಿಯಾದ ಪದಗಳನ್ನು, ಪದಪುಂಜಗಳನ್ನು • ತಕ್ಕ ನುಡಿಗಟ್ಟು, ತಕ್ಕ ರೂಪ, ಶೈಲಿಯೊಂದಿಗೆ

ಗುರಿಗಳು / ಉದ್ದೇಶಗಳು	ವರ್ತನಾ ರೂಪ	ಉದಾಹರಣೆಗಳು
ಮೆಚ್ಚುಗೆ / ಪ್ರಶಂಸೆ	• ಮೆಚ್ಚಿ ಆನಂದಿಸು •ತನ್ನ ಭಾವನೆಗಳನ್ನು ಹಂಚಿಕೊಳ್ಳು • ಗುರುತಿಸು • ತನ್ನ ಮೆಚ್ಚುಗೆ ಅಭಿವ್ಯಕ್ತಗೊಳಿಸು	• ಪದಗಳ ಲಯವಿನ್ಯಾಸದಲ್ಲಿ, ಪದ್ಯಗಳನ್ನು ಹಾಡುತ್ತಾನೆ, ಅಲಂಕಾರ ಛಂದಸ್ಸು ವೈವಿಧ್ಯತೆಯಲ್ಲಿ • ರೂಪಕಗಳು, ಅಲಂಕಾರಗಳು, ಪ್ರತೀಕಗಳು, ಪದ ಚಿತ್ರಗಳು • ಅನಿಸಿಕೆ, ಭಾವನೆ, ವಿಚಾರ, ಕಲ್ಪನೆ, ಅಭಿವ್ಯಕ್ತಗೊಳಿಸುವ ನಿಲುವು

4.3 ಘಟಕ ಯೋಜನೆ , ಘಟಕ ಪರೀಕ್ಷೆ – ಅರ್ಥ, ಪ್ರಾಮುಖ್ಯತೆ ಹಾಗೂ ಹಂತಗಳು

ಘಟಕ ಯೋಜನೆ: ಜೀವನದೊಂದಿಗೆ ಶಿಕ್ಷಣವೂ ಸಹ ನಿಂತ ನೀರಲ್ಲ. ದಿನನಿತ್ಯ ಪರಿವರ್ತನಾಶೀಲವಾದದ್ದು. ಹೊಸ ಶಿಕ್ಷಕರು, ಶಿಕ್ಷಣ ತಜ್ಞರು ಬಂದಂತೆ ಬೋಧನೆಯಲ್ಲಿಯೂ ಬದಲಾವಣೆಗಳಾಗುತ್ತಾ ಸಾಗುತ್ತದೆ. ಸಾಂಪ್ರದಾಯಿಕವಾಗಿ ಹರ್ಬರ್ಟನ ಪಂಚಸೋಪಾನಗಳನ್ನು ಅನುಸರಿಸಿ ಬೋಧನೆಯನ್ನು ಮಾಡಲಾಗುತ್ತಿತ್ತು. ಈಗ ಶಿಕ್ಷಣ ತಜ್ಞರು ಹೊಸ ದಿಕ್ಕಿನತ್ತ ಮುಖಮಾಡಿ

ಹೊಸ ವಿಧಾನಗಳನ್ನು ಬಳಸತೊಡಗಿದ್ದಾರೆ. ಅದರಲ್ಲಿ 5ಇ ಮೊದಲಿನದಾಗಿದೆ. ಈ ವಿಧಾನದ ಮೂಲಕ ಒಂದು ಪಾಠಯೋಜನೆಯನ್ನು ಸಿದ್ಧಗೊಳಿಸಿ ಇಡೀ ಘಟಕವನ್ನು ಬೋಧಿಸಲಾಗುತ್ತಿದೆ.

ಬೋಧನೆ-ಕಲಿಕೆಯಲ್ಲಿ ನಿರಂತರತೆಯನ್ನುಂಟು ಮಾಡಲು ಘಟಕ ಯೋಜನೆಯನ್ನು ರೂಪಿಸಲಾಯಿತು. ಘಟಕ ಯೋಜನೆಯು ಕಲಿತ ವಿಷಯ, ಕಲಿಯುತ್ತಿರುವ ವಿಷಯ ಮತ್ತು ಭವಿಷ್ಯತ್ತಿನಲ್ಲಿ ಕಲಿಯಬೇಕಾದ ವಿಷಯಕ್ಕೆ ಸಂಬಂಧವನ್ನು ಕಲ್ಪಿಸಿ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು ಬರುತ್ತದೆ. ಈ ದೃಷ್ಟಿಯಿಂದ ಬೋಧನೆ ಕಲಿಕೆಯಲ್ಲಿ ಘಟಕ ಯೋಜನೆಗೆ ತನ್ನದೇ ಆದ ಸ್ಥಾನವಿರುತ್ತದೆ. ಘಟಕ ಯೋಜನೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಅನೇಕ ತಜ್ಞರು ತಮ್ಮದೇ ಆದ ವ್ಯಾಖ್ಯೆಗಳನ್ನು ನೀಡಿದ್ದಾರೆ.

'ಘಟಕ' ಎಂದರೆ ಸಾಮನ್ಯವಾಗಿ ನಾವು ಚಿಕ್ಕ, ಸಣ್ಣ ಎಂದು ಹೇಳುವುದುಂಟು. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಇದಕ್ಕೆ ಕೊಟ್ಟ ಅರ್ಥವೇ ಬೇರೆ. "ಒಂದು ಗೊತ್ತಾದ ಅವಧಿಯಲ್ಲಿ ಬೋಧಿಸಲು ಅನುಕೂಲವಾಗುವ ಮತ್ತು ಸಂಬಂಧಿಸಿದ ವಿಷಯಗಳಿಂದ ಕೂಡಿದ ಪಠ್ಯವಸ್ತುವಿನ ಒಂದು ತುಣುಕನ್ನು **ಘಟಕ**ವೆಂದು ಕರೆದಿದ್ದಾರೆ."

"ವಿದ್ಯಾರ್ಥಿಗಳ ಉದ್ದೇಶ ಸಾಧಿಸಲು, ಅವರಿಗೆ ಶೈಕ್ಷಣಿಕ ಅನುಭವ ಒದಗಿಸಿ ತನ್ಮೂಲಕ ಅವರ ವರ್ತನೆಯಲ್ಲಿ ಯೋಗ್ಯ ಬದಲಾವಣೆಯನ್ನು ತರಲು ಘಟಕವು ಒಂದಕ್ಕೊಂದು ಸಂಬಂಧವಿರುವ ಅರ್ಥಪೂರ್ಣವಾದ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ."

ಸ್ಯಾಮಫರ್ಡ ಅವರ ಪ್ರಕಾರ "ಘಟಕ ಯೋಜನೆ ಎಂದರೆ ವಿದ್ಯಾರ್ಥಿಗಳ ಅಗತ್ಯತೆ ಆಸಕ್ತಿಗನುಗುಣವಾಗಿ ಎಚ್ಚರಿಕೆಯಿಂದ ಆಯ್ದು ಪ್ರತ್ಯೇಕಿಸಿದ ವಸ್ತುವಿಷಯದ ಭಾಗದ ರೂಪುರೇಷೆ."

ಜಾನಸನ್ ಅವರ ಪ್ರಕಾರ "ಘಟಕ ಯೋಜನೆಯು ವಿವಿಧ ಅನುಭವಗಳ ಸಂಗಮವಾಗಿದ್ದು, ಪ್ರತಿಯೊಂದು ಘಟಕವು ಒಂದು ವಿಷಯ ಅಥವಾ ತತ್ವವನ್ನು ಒಳಗೊಂದಿರುತ್ತದೆ."

ಸಿ. **ವ್ಹಿ. ಗುಡ್** ಅವರ ಪ್ರಕಾರ "ಒಂದು ಸಮಸ್ಯೆ ಅಥವಾ ಉದ್ದೇಶಕ್ಕೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳನ್ನು, ಅನುಭವಗಳನ್ನು ಮತ್ತು ವಿಧಾನಗಳನ್ನು ಸಂಘಟಿಸಿ ಎಲ್ಲರೂ ಒಗ್ಗೂಡಿಕೊಂಡು ಬೆಳೆಸುವುದಾಗಿದೆ."

ಶಿಕ್ಷಣ ನಿಘಂಟಿನ ಪ್ರಕಾರ "ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗಳ ಗುಂಪು ಒಬ್ಬರಿಗೊಬ್ಬರು ಸಹಕರಿಸಿ ಸಿದ್ಧಪಡಿಸಿದ ಒಂದು ವಿಷಯದ ಮುಖ್ಯ ಸಾರದ ಇಲ್ಲವೇ ಸಮಸ್ಯೆಯ ಅಥವಾ ಉದ್ದೇಶದ ಸುತ್ತಲೂ ಹೆಣೆಯಲ್ಪಟ್ಟಿರುವ ಅನೇಕ ಚಟುವಟಿಕೆಗಳ ಅನುಭವದ ಮತ್ತು ಕಲಿಕಾ ಪ್ರಕಾರಗಳ ಸಂಘಟನಾ ಯೋಜನೆಯೇ ಘಟಕ ಯೋಜನೆ."

ಘಟಕ ಯೋಜನೆಯು ಕಲಿಕೆಗೆ ಅವಶ್ಯಕವಿರುವ ಒಂದಕ್ಕೊಂದು ಸಂಬಂಧವಿರುವ ವಿಷಯಗಳನ್ನು ಹೊಂದಿ, ತರಗತಿಯ ನೈಜ ಕಾರ್ಯಾಚರಣೆಗೆ ಅನುಕೂಲಕಾರಿಯಾಗಿರುತ್ತದೆ. ಈ ರೀತಿಯಾಗಿ ಘಟಕ ಯೋಜನೆಯು ವಿದ್ಯಾರ್ಥಿಗಳ ಬೋಧನೆಗಾಗಿ ವಿಷಯ ವಸ್ತು ಮತ್ತು ಬೋಧನಾ ಪದ್ಧತಿಗಳನ್ನು ಹೊಂದಿರುತ್ತದೆ.

➢ **ಘಟಕ ಯೋಜನೆಯ ರಚನೆ:** ಕನ್ನಡ ಭಾಷಾ ಬೋಧಕ ಬೋಧನೆಗೆಂದು ಭಾಷೆಯ ಯಾವುದೇ ಪಾಠವನ್ನು ತೆಗೆದುಕೊಂಡರೂ, ಆತ ಮೊದಲು ಆ ಪಾಠದ ಘಟಕ ಯೋಜನೆಯನ್ನು ರಚಿಸಬೇಕಾಗುತ್ತದೆ. ಘಟಕ ಯೋಜನೆಯು ಅನೇಕ ಹಂತಗಳನ್ನು ಒಳಗೊಂದಿರುತ್ತದೆ. ಅವುಗಳೆಂದರೆ–

1. **ಪ್ರಾಸ್ತಾವಿಕ ಅಂಶಗಳು–** ಸಾಮಾನ್ಯವಾಗಿ ಪ್ರಾಸ್ತಾವಿಕ ಅಂಶಗಳಲ್ಲಿ ಬರುವ ವಿಷಯಗಳೆಂದರೆ ಪಾಠದ ಹೆಸರು, ವಿಷಯ, ತರಗತಿ, ಘಟಕ ಯೋಜನೆಯನ್ನು ಬೋಧಿಸಲು ಬೇಕಾದ ಅವಧಿಗಳು (ಪಾಠಕ್ಕೆ ಯೋಗ್ಯವಾಗುವ ಪೀಠಿಕೆ ಅಥವಾ ಅಭಿಪ್ರೇರಣೆಯನ್ನು) ಒಳಗೊಂಡಿರುತ್ತದೆ.

2. **ಘಟಕದ ಬಾಹ್ಯರೇಷೆ–** ಈ ಹಂತವು ಘಟಕದ ಬಾಹ್ಯರೇಷೆ, ಸಮಸ್ಯೆಗಳು, ಚಟುವಟಿಕೆಗಳು ಮುಂತಾದವುಗಳನ್ನು ಒಳಗೊಂಡು ಪ್ರಧಾನ ಬೋಧನಾ ಅಂಶಗಳು, ಉಪಪ್ರಧಾನ ಬೋಧನಾ ಅಂಶಗಳು, ಚಟುವಟಿಕೆಗಳು, ವಿಷಯದ ಸಾಮಾನ್ಯೀಕರಣ ಮುಂತಾದವುಗಳನ್ನು ಪಾಠದ ಪರಿಕಲ್ಪನೆಗೆ ಸಂಬಂಧಿಸಿದಂತೆ ವಿವರಿಸಲಾಗಿರುತ್ತದೆ.

3. **ಬೋಧನಾ ಗುರಿಗಳು–** ಬೋಧನಾ ಗುರಿಗಳನ್ನು ಪ್ರಮುಖವಾಗಿ ಎರಡು ಹಂತಗಳಲ್ಲಿ ವಿಂಗಡಿಸಲಾಗಿರುತ್ತದೆ. ಅವು, (1) ಸಾಮಾನ್ಯ ಗುರಿಗಳು. (2) ನಿರ್ದಿಷ್ಟ ಗುರಿಗಳು. ಈ ಎಲ್ಲ ಗುರಿಗಳನ್ನು ಜ್ಞಾನ, ತಿಳುವಳಿಕೆ, ಕೌಶಲ್ಯ, ಅನ್ವಯ, ಮನೋಭಾವ, ಅಭಿರುಚಿ, ಮೆಚ್ಚುಗೆ ಮುಂತಾದವುಗಳಿಗೆ ಸಂಬಂಧಿಸಿದಂತೆ ರೂಪಿಸಲಾಗಿರುತ್ತದೆ.

4. **ಚಟುವಟಿಕೆಗಳು–** ಘಟಕ ಯೋಜನೆಯಲ್ಲಿ ಬರುವ ಎಲ್ಲ ಚಟುವಟಿಕೆಗಳನ್ನು ಮೂರು ಭಾಗಗಳಲ್ಲಿ ಈ ಕೆಳಗಿನಂತೆ ವರ್ಗೀಕರಿಸಲಾಗಿರುತ್ತದೆ.

ಅ)ಪ್ರಾರಂಭಿಕ ಚಟುವಟಿಕೆಗಳು– ಇವು ವಿದ್ಯಾರ್ಥಿಗಳ ಬಗೆಗೆ ನಿರ್ಧರಿಸುವುದಾಗಿದೆ/ಸಂಬಂಧಿಸಿರುತ್ತವೆ. ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ, ಮತ್ತು ಸಾಮರ್ಥ್ಯಗಳನ್ನು ಪ್ರಸ್ತುತ ಹೊಸ ಘಟಕಕ್ಕೆ ಸಂಬಂಧಿಕರಿಸುವುದಾಗಿರುತ್ತದೆ. ಹಾಗೂ ವಿದ್ಯಾರ್ಥಿಗಳು ಪ್ರಸ್ತುತ ಪಾಠವನ್ನು ಆಸಕ್ತಿಯುತವಾಗಿ ಕಲಿಯಲು ಮನವೊಲಿಸುವುದಾಗಿರುತ್ತದೆ. ಮಕ್ಕಳ ಆಸಕ್ತಿಯನ್ನು ಕೆರಳಿಸುವ ಚಟುವಟಿಕೆಗಳಿಂದೊಡಗೂಡಿರುತ್ತದೆ. ಪಾಠದ ಪೀಠಿಕೆಯೇ ಪಾಠದ ಪ್ರಾರಂಭಿಕ ಚಟುವಟಿಕೆಗಳ ರೂಪದಲ್ಲಿ ಇರುವುದನ್ನು ನಾವು ಕಾಣಬಹುದು.

ಬ)ವಿಕಾಸಾತ್ಮಕ ಚಟುವಟಿಕೆಗಳು– ಈ ಚಟುವಟಿಕೆಗಳು ಪಾಠದ ಬೆಳವಣಿಗೆಯ ಹಂತದ ಚಟುವಟಿಕೆಗಳಾಗಿರುತ್ತವೆ. ಪಾಠಬೋಧನೆಯ ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಶಿಕ್ಷಕರು ಈ ಗುರಿಗಳನ್ನು ರಚಿಸಿರುತ್ತಾರೆ. ಈ ಹಂತವು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಪಾಠದ ವಿಷಯಾಂಶ, ಭಾಷಾಂಶಗಳು ಮತ್ತು ವ್ಯಾಕರಣಾಂಶ ಮೊದಲಾದವನ್ನು ಒಳಗೊಂಡಿರುತ್ತದೆ. ಈ ಎಲ್ಲ ವಿಷಯಗಳ ಸಮರ್ಪಕ ಬೋಧನೆಗಾಗಿ ಶಿಕ್ಷಕರು ಒಂದು ಚೌಕಟ್ಟನ್ನು ರೂಪಿಸಿರುತ್ತಾರೆ.

ವಿಕಾಸಾತ್ಮಕ ಚಟುವಟಿಕೆಗಳು

ಅ ಸಂ	ವಿಷಯ ವಸ್ತು	ಚಟುವಟಿಕೆಗಳು (ಶಿಕ್ಷಕರು ಮತ್ತು ವಿದ್ಯಾರ್ಥಿಗಳು)	ಬೋಧಿಸಲು ಬೇಕಾಗುವ ಅವಧಿಗಳು	ಬೋಧಿಸಲು ಬೇಕಾಗುವ ಸಾಮಗ್ರಿಗಳು ಅಥವಾ ಸಂಪನ್ಮೂಲಗಳು
1	2	3	4	5
	ವಿಷಯ ವಸ್ತು ಭಾಷಾಂಶಗಳು ವ್ಯಾಕರಣಾಂಶಗಳು			

ಕ)ಮುಕ್ತಾಯ ಹಂತದ ಚಟುವಟಿಕೆಗಳು– ಈ ಹಂತವು ಒಂದು ರೀತಿಯಲ್ಲಿ ಪುನರಾವಲೋಕನ ಹಂತ. ಇಲ್ಲಿ ಬರುವ ಎಲ್ಲ ಚಟುವಟಿಕೆಗಳು ಪಾಠದ ಪ್ರಮುಖ ಅಂಶಗಳನ್ನು ಪರೀಷ್ಕರಿಸಲು ಎತ್ತಿ ಹೇಳಲು ಮತ್ತು ಕ್ರೋಢೀಕರಣ ಮಾಡಲು ಅನುಕೂಲವಾಗುತ್ತವೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮುಕ್ತಾಯ ಹಂತದ ಚಟುವಟಿಕೆಗಳಲ್ಲಿ ಭಾಗವಹಿಸುವರು. ಬೋಧಿಸಿದ ಪಾಠದ ಸಮಗ್ರ ಚಿತ್ರಣ ಈ ಹಂತದಲ್ಲಿ ಪಾಠ ವೀಕ್ಷಕರಿಗೆ ಗೋಚರವಾಗುತ್ತದೆ.

5. **ಬೋಧನೋಪಕರಣಗಳು**–ಕನ್ನಡ ಭಾಷಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಾಠ ಅರ್ಥವಾಗುವಂತೆ ಬೋಧಿಸಲು ವಿವಿಧ ಬೋಧನೋಪಕರಣಗಳನ್ನು ಬಳಸುವರು. ತಾವು ಪಾಠ ಬೋಧನೆಗೆ ಉಪಯೋಗಿಸುವ ಎಲ್ಲ ಬೋಧನಾ ಉಪಕರಣಗಳ ಪಟ್ಟಿಯನ್ನು ಶಿಕ್ಷಕರು ಇಲ್ಲಿ ಕೊಡಬೇಕಾಗುತ್ತದೆ.

6. **ಇತರ ವಿಷಯಗಳೊಂದಿಗೆ ಸಂಬಂಧೀಕರಣ–** ಕನ್ನಡ ಪಾಠದ ವಿಷಯವನ್ನು ಸಾಧ್ಯವಾದಷ್ಟು ಶಾಲೆಯ ಇತರ ವಿಷಯಗಳೊಂದಿಗೆ ಸಂಬಂಧೀಕರಿಸಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಹೆಚ್ಚು ಅರ್ಥವಾಗುತ್ತದೆ ಅಥವಾ ಪರಿಣಾಮಕಾರಿಯಾಗುತ್ತದೆ.

7. **ಮೌಲ್ಯಮಾಪನ–** ಘಟಕ ಯೋಜನೆಯು ಘಟಕ ಪರೀಕ್ಷಣಗಳನ್ನು ಒಳಗೊಂಡಿರುತ್ತದೆ. ಕನ್ನಡ ಭಾಷಾ ಶಿಕ್ಷಕರು ಪ್ರತಿಯೊಂದು ಪಾಠಕ್ಕೂ ಘಟಕ ಪರೀಕ್ಷಣಗಳನ್ನು ರಚಿಸಲೇಬೇಕು. ವಿದ್ಯಾರ್ಥಿಗಳ ಸಾಧನೆಯ ಹಾಗೂ ಶಿಕ್ಷಕರ ಭೊಧನೆಯ ಪರಿಣಾಮಕಾರಿತ್ವದ ಮೌಲ್ಯಮಾನಕ್ಕಾಗಿ ಶಿಕ್ಷಕರು ನೀಲನಕ್ಷೆಯನ್ನು ರಚಿಸಿ ಅದಕ್ಕನುಗುಣವಾಗಿ ಪರೀಕ್ಷೆಯ ಓರೆಗಳನ್ನು ರಚಿಸಿ ಅಪೇಕ್ಷಿತ ಉತ್ತರಗಳನ್ನು ಬರೆಯಬೇಕಾಗುತ್ತದೆ. ಬೋಧನಾ ಉದ್ದೇಶಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದು ಮೌಲ್ಯಮಾಪನದಿಂದ ತಿಳಿದುಬರುತ್ತವೆ. ಮೌಲ್ಯಮಾಪನವು ಘಟಕ ಯೋಜನೆಯ ಅವಿಭಾಜ್ಯ ಅಂಗವಾಗಿದೆ.

8. **ಗ್ರಂಥಾವಲೋಕನ**–ಒಂದು ಪಾಠದ ಘಟಕ ಯೋಜನೆಯಲ್ಲಿ ಶಿಕ್ಷಕರು ಅನೇಕ ಗ್ರಂಥಗಳನ್ನು ಅವಲೋಕನ ಮಾಡಿರುತ್ತಾರೆ ಮತ್ತು ಮಾಡಿರಲೇಬೇಕು. ಆ ಗ್ರಂಥಗಳ ಸಹಾಯದಿಂದ ಘಟಕ

ಯೋಜನೆಯನ್ನು ಸಿದ್ಧಪಡಿಸಿರುತ್ತಾರೆ. ಕನ್ನಡ ಭಾಷಾ ಶಿಕ್ಷಕರು ಘಟಕದ ಬೋಧನೆ ಮತ್ತು ಕಲಿಕೆಗೆ ಅನುಕೂಲವಾಗುವ ಗ್ರಂಥಗಳನ್ನು ಇಲ್ಲಿ ಬರೆಯಲಾಗಿರುತ್ತದೆ.

➢ **ಘಟಕ ಯೋಜನೆಯ ಮಹತ್ವ:** ಭಾಷಾ ಬೋಧಕರು ಘಟಕ ಯೋಜನೆಯನ್ನು ಸುವ್ಯವಸ್ಥಿತವಾಗಿ ರಚಿಸಿ ಅನುಷ್ಠಾನಗೊಳಿಸಿದಲ್ಲಿ ಅದರ ಬೋಧನಾ ಉದ್ದೇಶಗಳಾದ ಜ್ಞಾನ, ತಿಳುವಳಿಕೆ, ಕೌಶಲ್ಯ, ಅಭಿರುಚಿ ಮತ್ತು ಅನ್ವಯ ಮುಂತಾದವುಗಳು ಹೆಚ್ಚು ಫಲಕಾರಿಯಾಗುತ್ತವೆ. ಘಟಕ ಯೋಜನೆಯಿಂದ ದೊರೆಯುವ ಲಾಭಗಳನ್ನು ಈ ಕೆಳಗಿನಂತೆ ನೋಡಬಹುದು,

- ಘಟಕ ಯೋಜನೆಯು ಘಟಕದ ಮೂಲಭೂತ ವಿಷಯಗಳಿಗೆ ರಚನೆಯನ್ನು ಒದಗಿಸಿ ತನ್ಮೂಲಕ ತರಗತಿಯ ಚಟುವಟಿಕೆಗಳನ್ನು ಸಂಘಟಿಸಲು ಸಹಾಯ ಮಾಡುತ್ತದೆ.
- ಘಟಕ ಯೋಜನೆಯು ಶಿಕ್ಷಕರಿಗೆ ಘಟಕದ ಎಲ್ಲ ಮೂಲಭೂತ ಪರಿಕಲ್ಪನೆಗಳನ್ನು ಒಗ್ಗೂಡಿಸಲು ಸಹಾಯ ಮಾಡುತ್ತದೆ ಮತ್ತು ಸಂಬಂಧಿಸಿದ ಆ ವಿಷಯಗಳನ್ನು ಬೋಧನಾ ಅನುಭವಗಳನ್ನಾಗಿ ಒದಗಿಸುತ್ತದೆ.
- ವಿಷಯ ಬೋಧನೆಯ ಎಲ್ಲ ಕ್ಷೇತ್ರಗಳನ್ನು ಅಥವಾ ಆಯಾಮಗಳನ್ನು ಯುಕ್ತ ರೀತಿಯಿಂದ ಹೊಂದಾಣಿಕೆ ಮಾಡಲು ಎಲ್ಲ ರೀತಿಯ ಸದವಕಾಶಗಳನ್ನು ಶಿಕ್ಷಕರಿಗೆ ಒದಗಿಸುತ್ತದೆ.
- ಶಿಕ್ಷಕರು ಸಾಂಪ್ರದಾಯಿಕವಾಗಿ ಕೇವಲ ಪಠ್ಯಪುಸ್ತಕಗಳನ್ನೇ ಸಂಪೂರ್ಣವಾಗಿ ಅವಲಂಬಿಸಿ ಬೋಧಿಸುವುದನ್ನು ತಪ್ಪಿಸುತ್ತದೆ.
- ಘಟಕ ಯೋಜನೆಯು ವಿಷಯವಸ್ತು, ಕಲಿಕಾ ಅನುಭಗಳು ಮತ್ತು ಆ ಕಲಿಕಾ ಅನುಭಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿರುವುದರಿಂದ ಕಲಿಕೆಯು ಹೆಚ್ಚು ಸುವ್ಯವಸ್ಥಿತವಾಗಿ ಭದ್ರಗೊಳ್ಳುತ್ತದೆ.
- ಘಟಕ ಯೋಜನೆಯಲ್ಲಿ ಬೋಧನೆ ಮತ್ತು ಕಲಿಕೆಯು ನಿರಂತರವಾಗಿ ಜರುಗುತ್ತದೆ.
- ಘಟಕ ಯೋಜನೆಯಲ್ಲಿ ಚಟುವಟಿಕೆಗಳಿಗೆ ಹೆಚ್ಚು ಅವಕಾಶವಿರುವುದರಿಂದ ಇದು ಸದಾ ಚಟುವಟಿಕೆಯಿಂದ ಆಸಕ್ತಿದಾಯಕವಾಗಿರುತ್ತದೆ.
- ಘಟಕ ಯೋಜನೆಯಿಂದ ಸೂಕ್ತವಾದ ಸಮಂಜಸವಾದ ಅನುಭವಗಳು ದೊರೆಯುತ್ತವೆ.
- ಘಟಕ ಯೋಜನೆಯು ಮನೋವೈಜ್ಞಾನಿಕ ತಳಹದಿಯ ಮೇಲೆ ರಚನೆಯಾಗಿರುವುದರಿಂದ ವಿದ್ಯಾರ್ಥಿಗಳ ಆಸಕ್ತಿ ಅಭಿರುಚಿಗಳನ್ನು ಕೆರಳಿಸಿ ಅರಳುವಂತೆ ಮಾಡುತ್ತದೆ.
- ಬೋಧನೆಯು ನಿರಂತರವಾಗಿದ್ದು ಪರಿಣಾಮಕಾರಿತ್ವಕ್ಕೆ ಘಟಕ ಯೋಜನೆಯು ಪೂರಕವಾಗಿದೆ.
- ಬೋಧನೆಯ ಪರಿಣಾಮಕಾರಿತನ ತಿಳಿಯುವುದರೊಂದಿಗೆ ವಿಫಲತೆಯನ್ನು ಗುರುತಿಸಬಹುದು ಹಾಗೂ ಪರಿಹಾರಗಳನ್ನು ಆಗಿಂದಾಗಲೇ ಕಂಡುಕೊಳ್ಳಬಹುದು.
- ಇಡೀ ಘಟಕದ ಪರಿಣಾಮಕಾರಿ ಯಶಸ್ಸು ಉತ್ತಮ ಘಟಕ ಯೋಜನೆಯ ಮೇಲೆ ನಿಂತಿದೆ.

➤ **ಪಾಠಯೋಜನೆ ಮತ್ತು ಘಟಕ ಯೋಜನೆಯಲ್ಲಿನ ವ್ಯತ್ಯಾಸಗಳು:**

ಪಾಠ ಯೋಜನೆ	**ಘಟಕ ಯೋಜನೆ**
ಪಾಠ ಯೋಜನೆಯು ಕೇವಲ ಒಂದು ಬೋಧನಾ ಅವಧಿಗೆ ಸೀಮಿತವಾಗಿರುತ್ತದೆ.	ಘಟಕ ಯೋಜನೆಯು ಇಡೀ ಘಟಕದ ಬೋಧನೆಯ ಎಲ್ಲ ಅವಧಿಗಳಿಗೆ ಸೀಮಿತವಾಗಿರುತ್ತದೆ. ಅಂದರೆ ಒಂದಕ್ಕಿಂತ ಹೆಚ್ಚು ಅವಧಿಗಳನ್ನು ಒಳಗೊಂಡಿರುತ್ತದೆ.
ವಿದ್ಯಾರ್ಥಿಗಳಿಗೆ ಸಂಪೂರ್ಣ ಪಾಠದ ಸಮಗ್ರ ಚಿತ್ರಣ ದೊರೆಯುವುದಿಲ್ಲ.	ವಿದ್ಯಾರ್ಥಿಗಳಿಗೆ ಒಂದು ಘಟಕದ ಸಂಪೂರ್ಣ ಚಿತ್ರಣ ದೊರೆಯುತ್ತದೆ.
ಪಾಠದ ಕೆಲವು ಪರಿಕಲ್ಪನೆಗಳನ್ನು ಮಾತ್ರ ಒಳಗೊಂದಿರುತ್ತದೆ.	ಘಟಕದ ಎಲ್ಲ ಪರಿಕಲ್ಪನೆಗಳನ್ನು ಒಳಗೊಂಡು ಸಮಗ್ರವಾಗಿರುತ್ತದೆ.
ಬೋಧನೆ ಮತ್ತು ಕಲಿಕೆಗಾಗಿ ಕೇವಲ 40/45 ನಿಮಿಷಗಳು ಇರುವುದರಿಂದ ಹೆಚ್ಚಿನ ಚಟುವಟಿಕೆಗೆ ಅವಕಾಶವಿಲ್ಲ.	ಬೋಧನೆ ಮತ್ತು ಕಲಿಕೆಗಾಗಿ ಹೆಚ್ಚಿನ ಅವಧಿಗಳು ಇರುವುದರಿಂದ ಹೆಚ್ಚು ಚಟುವಟಿಗಳಿಗೆ ಅವಕಾಶವಿದೆ.
'ಮಾಡಿಕಲಿ' ಎಂಬ ತತ್ವವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಹೆಚ್ಚಿನ ಅವಧಿ ಇರುವುದಿಲ್ಲ.	ವಿದ್ಯಾರ್ಥಿಗಳು ಘಟಕ ಯೋಜನೆಯಲ್ಲಿ 'ಮಾಡಿಕಲಿ' ಎಂಬ ತತ್ವವನ್ನಾಧರಿಸಿ ಕಲಿಯುವರು.
ಒಂದು ಪಾಠದಿಂದ ವಿದ್ಯಾರ್ಥಿಗಳ ಕಲಿಕೆ ಸಂಪೂರ್ಣವಾಗುವುದಿಲ್ಲ.	ಒಂದು ಘಟಕದ ಅಧ್ಯಯನದಿಂದ ಆ ಪಾಠದ ವಿಷಯದ ಸಂಪೂರ್ಣ ಕಲಿಕೆಯಾಗುತ್ತದೆ.
ಇದರಿಂದ ಎಲ್ಲ ಭಾಷಾ ಕೌಶಲ್ಯಗಳು ಬೆಳೆಯಲಾರವು.	ಇದರಿಂದ ಎಲ್ಲ ಭಾಷಾ ಕೌಶಲ್ಯಗಳನ್ನು ಬೆಳೆಸಲು ಸಾಧ್ಯವಿದೆ.
ಇದು ಸಂಕ್ಷಿಪ್ತವಾದುದಾಗಿದೆ.	ಇದು ಸುದೀರ್ಘವಾದುದಾಗಿದೆ.
ಇದು ಒಂದು ಕ್ರಿಯಾಯೋಜನೆಯಾಗಿದೆ.	ಇದು ಎಲ್ಲ ಚಟುವಟಿಕೆಗಳ ಸಂಘಟನೆಯಾಗಿದೆ.
ಪಾಠಯೋಜನೆಯ ಸಹಾಯದಿಂದ ಘಟಕ ಯೋಜನೆಯನ್ನು ತಯಾರಿಸಲು ಸಾಧ್ಯವಿಲ್ಲ.	ಆದರೆ ಘಟಕ ಯೋಜನೆಯ ಸಹಾಯದಿಂದ ಪಾಠ ಯೋಜನೆಯನ್ನು ತಯಾರಿಸಬಹುದು.

❖ **ಘಟಕ ಪರೀಕ್ಷೆ:** ಘಟಕ ಪರೀಕ್ಷೆ ಎಂದರೆ ನಿಶ್ಚಿತ ಘಟಕವನ್ನು ಬೋಧಿಸಿದ ನಂತರ ಆ ಘಟಕದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ತಿಳಿಯಲು ಆಯಾ ಘಟಕದ ಎಲ್ಲಾ ಅಂಶಗಳ ಮೇಲೆ ರಚಿತವಾದ ಪರೀಕ್ಷೆಯೇ ಘಟಕ ಪರೀಕ್ಷೆ. ಒಂದು ಪೂರ್ಣ ಘಟಕದ ಮೇಲೆ ವಿದ್ಯಾರ್ಥಿಯು ಏನನ್ನು ಕಲಿತಿದ್ದಾನೆ? ಎಷ್ಟರ ಮಟ್ಟಿಗೆ ಕಲಿತಿದ್ದಾನೆ? ಬೋಧನಾ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿವೆ ಎಂಬುದನ್ನು ತಿಳಿದುಕೊಳ್ಳಲು ನಡೆಸುವ ಪರೀಕ್ಷೆಯೇ ಘಟಕ ಪರೀಕ್ಷೆ. ಈ ಮೂಲಕ ಶಿಕ್ಷಕರು ತಮ್ಮ ಬೋಧನಾ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ತಿಳಿದು ತಮ್ಮ ಬೋಧನಾ ಸಾಮರ್ಥ್ಯವನ್ನು ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ ಬಾದಲಾವಣೆಗಳನ್ನು ಮಾಡಿಕೊಳ್ಳಲು ಸಹಾಯಕವಾಗಿದೆ.

ಘಟಕ ಪರೀಕ್ಷೆಯು ಘಟಕದ ಎಲ್ಲ ಅಂಶಗಳನ್ನು ವ್ಯಾಪಕವಾಗಿ ಒಳಗೊಂಡು ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯಲು ಅತ್ಯಂತ ಅನುಕೂಲಕಾರಿಯಾಗಿರುತ್ತದೆ. ಈ ಘಟಕ ಪರೀಕ್ಷೆಯ ಮೂಲಕವೇ ವಿದ್ಯಾರ್ಥಿಗಳು ತಮ್ಮ ಸಾಧನೆಯನ್ನು ತಿಳಿದು, ಸುಧಾರಿಸಿಕೊಳ್ಳಲು ಪ್ರಯತ್ನಿಸುವರು. ಶಿಕ್ಷಕರು ಸಹ ವಿದ್ಯಾರ್ಥಿಗಳ ಸಾಧನೆಯನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುವರು. ಘಟಕ ಪರೀಕ್ಷೆಯು ಪ್ರಬಂಧ, ಸಂಕ್ಷಿಪ್ತ ಮತ್ತು ವಸ್ತುನಿಷ್ಟ ರೂಪದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಇದರಿಂದ ಘಟಕದ ಎಲ್ಲ ವಿಷಯಗಳ ಮೇಲೆ ಪ್ರಶ್ನೆಗಳನ್ನು ರಚಿಸಲು ಸಹಾಯಕವಾಗುತ್ತದೆ.

ಸ್ಯಾಮ್ ಪೋರ್ಡ್–"ಘಟಕ ಪರೀಕ್ಷೆಯು ವಿದ್ಯಾರ್ಥಿಗಳ ಅಗತ್ಯತೆಗಳಿಗೆ ಅನುಗುಣವಾಗಿ ಆಯ್ದು ಪ್ರತ್ಯೇಕಿಸಿದ ವಿಷಯದ ಒಂದು ಭಾಗವಾಗಿದೆ."

ಅನುಸೂಯಾ ಪರಗಿ–"ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ನಿಕಟ ಸಂಬಂಧವಿರುವ ಕೆಲವು ಪಠ್ಯಗಳು ಪೂರ್ಣ ಅರ್ಥಕೊಡುವ ಒಂದು ಪಠ್ಯಭಾಗ ಅಥವಾ ಅಧ್ಯಯನವೇ ಘಟಕ. ಈ ಘಟಕದ ಬಗ್ಗೆ ಕೈಗೊಳ್ಳುವ ಕಿರು ಪರೀಕ್ಷೆಯೇ ಘಟಕ ಪರೀಕ್ಷೆ."

ಬಾಸಿಂಗ್–"ಘಟಕ ಪರೀಕ್ಷಣವು ಒಂದು ವ್ಯಾಪಕವಾದ ಹಾಗೂ ಸಂಬಂಧಿತವಾದ ಅರ್ಥವತ್ತಾದ ಚಟುವಟಿಕೆಗಳನ್ನು ಒಳಗೊಂಡಿದ್ದು ವಿದ್ಯಾರ್ಥಿಗಳ ವಿಶೇಷವಾದ ಶೈಕ್ಷಣಿಕ ಅನುಭವಗಳನ್ನು ಹಾಗೂ ವರ್ತನೆಯ ಬದಲಾವಣೆಗಳನ್ನು ಅಳೆಯುವುದಾಗಿದೆ."

➢ **ಘಟಕ ಪರೀಕ್ಷೆಯ ಮಹತ್ವ:**

- ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ನಿರಂತರವಾಗಿ ಮತ್ತು ವ್ಯಾಪಕವಾಗಿ ಮೌಲ್ಯಮಾಪನ ಮಾಡಲು ಅವಶ್ಯಕವಾಗಿದೆ.
- ವಿಷಯದ ಪರಿಣಾಮಕಾರಿಯಾದ ಬೋಧನೆಗಾಗಿ ಶಿಕ್ಷಕರು ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು.
- ಘಟಕದ ಉದ್ದೇಶಗಳ ಸಾಧನೆಯನ್ನು ಮೌಲ್ಯಮಾಪನ ಮಾಡಲು ಅವಶ್ಯಕವಾಗಿದೆ.

- ಶಿಕ್ಷಕರು ಬೋಧನಾ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು, ಬೋಧನಾ ವಿಧಾನದಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳಲು ಮತ್ತು ಮೌಲ್ಯಮಾಪನ ಪದ್ಧತಿಯಲ್ಲಿ ಮಾರ್ಪಾಟು ತರಲು ಅವಶ್ಯಕವಾಗಿದೆ.
- ವಿದ್ಯಾರ್ಥಿಗಳಲ್ಲಿ ಸ್ವಯಂ ಶಿಸ್ತನ್ನು ಬೆಳೆಸಲು ಮತ್ತು ತರಗತಿಯ ಉತ್ತಮ ನಿರ್ವಹಣೆಗೆ ಸಹಾಯಕವಾಗಿದೆ.
- ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯವನ್ನು ದೂರಮಾಡಿ ಶೈಕ್ಷಣಿಕ ಸಾಧನೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮಾರ್ಗದರ್ಶನ ಮಾಡುತ್ತದೆ.
- ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಚಾಲನಾ ವಲಯಗಳ ಉದ್ದೇಶಗಳನ್ನು ಮೌಲ್ಯಮಾಪನ ಮಾಡಲು ಅವಶ್ಯಕವಾಗಿದೆ.
- ಪ್ರತಿ ಘಟಕದ ನಂತರ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ, ಕಲಿಕಾ ಅನುಭವಗಳನ್ನು ತಿಳಿಯಲು ಮತ್ತು ಅವುಗಳಿಗೆ ತಕ್ಕಂತೆ ನಿರ್ದೇಶನ ಹಾಗೂ ಮಾರ್ಗದರ್ಶನ ಮಾಡಲು ಅವಶ್ಯಕವಾಗಿದೆ.
- ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅರಿತುಕೊಂಡು ಪರಿಹಾರ ಬೋಧನೆ ಮಾಡಲು ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ತಕ್ಕಂತೆ ವರ್ಗೀಕರಣ ಮಾಡಲು ಸಹಾಯಕವಾಗಿದೆ.
- ಘಟಕ ಪರೀಕ್ಷೆಯು ಘಟಕದ ಉತ್ತಮ ಯೋಜನೆ, ಉತ್ತಮ ಬೋಧನೆ, ಉತ್ತಮ ಕಲಿಕೆ, ಉತ್ತಮ ಪರೀಕ್ಷೆ ಮತ್ತು ಉತ್ತಮ ಮೌಲ್ಯಮಾಪನಕ್ಕೆ ಸಹಾಯಕವಾಗಿದೆ.

➢ **ಘಟಕ ಪರೀಕ್ಷೆಯ ರಚನೆ ಮತ್ತು ನಿರ್ವಹಣೆಯ ಹಂತಗಳು:**

ಹಂತ 1– ಘಟಕದ ಆಯ್ಕೆ:ಒಂದು ನಿರ್ಧಿಷ್ಟ ಪಠ್ಯ ವಿಷಯದ ಬಗ್ಗೆ ನಿಕಟ ಸಂಬಂಧವಿರುವ ಪೂರ್ಣ ಅರ್ಥಕೊಡುವ ಒಂದು ಘಟಕವನ್ನು ಬೋಧಿಸಿದ ನಂತರ ಆ ಘಟಕವನ್ನು ಘಟಕ ಪರೀಕ್ಷೆಗಾಗಿ ಆಯ್ಕೆ ಮಾಡಿಕೊಳ್ಳುವುದು.

ಹಂತ 2– ಘಟಕದ ವಿಶ್ಲೇಷಣೆ: ಘಟಕ ಪರೀಕ್ಷೆಗೆ ಪ್ರಶ್ನೆಪತ್ರಿಕೆ ರಚಿಸಲು ಆಯ್ಕೆ ಮಾಡಿಕೊಂಡಿರುವ ಘಟಕವನ್ನು 4 ರಿಂದ 5 ಉಪಘಟಕಗಳಾಗಿ ವಿಭಾಗಿಸಿಕೊಳ್ಳಬೇಕು. ಪ್ರತಿಯೊಂದು ಉಪ ಘಟಕದಲ್ಲಿ ಮುಖ್ಯ ಬೋಧನಾಂಶಗಳು, ಪರಿಕಲ್ಪನೆಗಳು, ಭಾಷಾಂಶಗಳು, ವಿಶೇಷ ಹೇಳಿಕೆಗಳನ್ನು ಗುರುತಿಸಿಕೊಳ್ಳಬೇಕು. ಗುರುತಿಸಿಕೊಂಡ ಮುಖ್ಯಾಂಶಗಳು ಆ ಘಟಕದ ಮುಖ್ಯ ವಿಷಯಗಳಾಗಿರುತ್ತವೆ. ಇವುಗಳೇ ಮುಖ್ಯವಾದ ಭಾಷಾ ಅಂಶಗಳಾಗಿರುತ್ತವೆ. ಈ ಎಲ್ಲ ಮುಖ್ಯಾಂಶಗಳ ಬಗ್ಗೆ ನಿರ್ಧಿಷ್ಟ ಪ್ರಶ್ನೆಗಳನ್ನು ರಚಿಸಬೇಕು.

ಹಂತ 3– ಘಟಕ ಪರೀಕ್ಷೆಯ ರೂಪರೇಷೆಯನ್ನು ತಯಾರಿಸುವುದು: ಈ ಹಂತದಲ್ಲಿ ಘಟಕ ಪರೀಕ್ಷೆಯ ವಿವಿಧ ಉದ್ದೇಶಗಳಿಗೆ ಅನುಗುಣವಾಗಿ ಪ್ರಶ್ನೆ ಪತ್ರಿಕೆಯು ಹೊಂದಿರಬೇಕಾದ ವಿಷಯಗಳು, ಉದ್ದೇಶಗಳು, ಪ್ರಶ್ನೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವಿಧ ಕೋಷ್ಟಕಗಳನ್ನು ರಚಿಸಿಕೊಳ್ಳಬೇಕು.

- ಉದ್ದೇಶ ಆಧಾರಿತ ಕೋಷ್ಟಕ– ಇದರಲ್ಲಿ ಯಾವ ಯಾವ ಉದ್ದೇಶಗಳಿಗೆ ಆ ಘಟಕದಲ್ಲಿ ಎಷ್ಟೆಷ್ಟು ಪ್ರಮಾಣದ ತೂಕವನ್ನು ಕೊಡಬೇಕೆಂಬುದನ್ನು ನಿರ್ಧರಿಸಿ ಬರೆಯಬೇಕು.
- ವಿಷಯ ಆಧಾರಿತ ಕೋಷ್ಟಕ– ಆಯ್ಕೆ ಮಾಡಿರುವ ಅಧ್ಯಾಯದ ವಿವಿಧ ಉಪಘಟಕಗಳಿಗೆ ಎಷ್ಟೆಷ್ಟು ಅಂಕಗಳನುಉ ನೀಡಬೇಕೆಂದು ನಿರ್ಧರಿಸಿ ವಿಷಯ ಆಧಾರಿತ ಕೋಷ್ಟಕವನ್ನು ರಚಿಸಬೇಕು.
- ಪ್ರಶ್ನೆಗಳ ಆಧಾರಿತ ಕೋಷ್ಟಕ– ಒಂದು ಘಟಕದ ಪ್ರಶ್ನೆಪತ್ರಿಕೆಯು ಒಳಗೊಳ್ಳಬೇಕಾದ ವಸ್ತುನಿಷ್ಟ, ಲಘು, ಮತ್ತು ಪ್ರಬಂಧ ಮಾದರಿಯ ಪ್ರಶ್ನೆಗಳು ಎಷ್ಟೆಷ್ಟು ಪ್ರಮಾಣದಲ್ಲಿರಬೇಕೆಂಬುದರ ಬಗ್ಗೆ ಕೋಷ್ಟಕವನ್ನು ತಯಾರಿಸಿಕೊಳ್ಳಬೇಕು.
- ಪ್ರಶ್ನೆಗಳ ಆಯ್ಕೆ– ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳ ಆಯ್ಕೆಗೆ ಅವಕಾಶ ಇರುವಂತೆ ನೋಡಿಕೊಳ್ಳಬೇಕು. ಆಂತರಿಕ ಆಯ್ಕೆಗೆ ಅವಕಾಶ ಕೊಡಬೇಕು.
- ಪ್ರಶ್ನೆಪತ್ರಿಕೆಯಲ್ಲಿ ವಿಭಾಗಗಳ ನಿರ್ಧಾರ– ಪ್ರಶ್ನೆಪತ್ರಿಕೆಯಲ್ಲಿ 2–3 ವಿಭಾಗಳನ್ನು ಮಾಡುವುದು ಸೂಕ್ತ ಮತ್ತು ಅವುಗಳಿಗೆ ಪ್ರಶ್ನೆಗಳನ್ನು, ಅಂಕಗಳನ್ನು ನಿರ್ಧರಿಸಿರಬೇಕು.
- ಪ್ರಶ್ನೆಪತ್ರಿಕೆಯಲ್ಲಿ ಕಠಿಣತೆಯ ಮಟ್ಟವನ್ನು ನಿರ್ಧರಿಸುವುದು– ಸಾಮಾನ್ಯವಾಗಿ ಕಠಿಣ ಪ್ರಶ್ನೆಗಳು, ಸಾಮಾನ್ಯ ಮಟ್ಟದ ಪ್ರಶ್ನೆಗಳು ಹಾಗೂ ಸುಲಭವಾದ ಪ್ರಶ್ನೆಗಳನ್ನು ಕ್ರಮವಾಗಿ ಶೇಕಡಾ 20, 50, 30 ರ ಪ್ರಮಾಣದಲ್ಲಿ ರಚಿಸಬೇಕು.

ಹಂತ 4– ನೀಲನಕ್ಷೆ ತಯಾರಿಕೆ:ಒಂದು ಪ್ರಶ್ನೆಪತ್ರಿಕೆಯ ರಚನೆಗೆ ಪೂರ್ವಭಾವಿಯಾಗಿ ರಚಿಸಿಕೊಳ್ಳುವ ಪ್ರಶ್ನೆಪತ್ರಿಕೆಯ ರೂಪುರೇಷೆಯ ಕ್ರಿಯಾ ಯೋಜನೆಯೆ ನೀಲನಕ್ಷೆ. ಒಂದು ಘಟಕದ ಮೌಲ್ಯಮಾಪನದ ಬಗ್ಗೆ ರಚಿಸಬೇಕಾದ ಪ್ರಶ್ನೆಪತ್ರಿಕೆಯ ರಚನಾ ವಿವರಗಳ ರೂಪುರೇಷೆಯೇ ನೀಲನಕ್ಷೆ. ಇದು ಪ್ರಶ್ನೆ ಪತ್ರಿಕೆಗೆ ಮಾರ್ಗಸೂಚಿಯಾಗಿರುತ್ತದೆ. ಪ್ರಶ್ನೆಪತ್ರಿಕೆಯಲ್ಲಿ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ಉಪಘಟಕಗಳಲ್ಲಿ ನಿರ್ಧಿಷ್ಟ ಸಂಖ್ಯೆಯ ಮತ್ತು ನಿರ್ಧಿಷ್ಟ ರೀತಿಯ ಪ್ರಶ್ನೆಗಳು ಮತ್ತು ಅವುಗಳಿಗೆ ನಿರ್ಧಿಷ್ಟ ಅಂಕಗಳನ್ನು ನಿರ್ಧರಿಸಲು ನೆರವಾಗುವಂತೆ ನೀಲನಕ್ಷೆಯನ್ನು ರಚನೆ ಮಾಡಲಾಗುತ್ತದೆ.

ನೀಲನಕ್ಷೆಯ ಅನುಕೂಲಗಳು:

- ಉದ್ದೇಶಗಳಿಗೆ ಆಧಾರವಾಗಿ ಪ್ರಶ್ನೆಪತ್ರಿಕೆಯನ್ನು ರಚಿಸಲು ಮಾರ್ಗದರ್ಶನ ಮಾಡುತ್ತದೆ.
- ಮೌಲ್ಯಮಾಪನ ಮಾಡಬೇಕಾದ ಘಟಕದ ಎಲ್ಲ ಅಂಶಗಳು ಪ್ರಶ್ನೆಪತ್ರಿಕೆಯಲ್ಲಿ ಪ್ರತಿಬಿಂಬಿತವಾಗಲು ಸಹಾಯಕವಾಗುತ್ತದೆ.
- ಪ್ರಶ್ನೆಪತ್ರಿಕೆಯಲ್ಲಿನ ರಚನೆಯ ಗೊಂದಲವನ್ನು ನಿವಾರಿಸುತ್ತದೆ.
- ವಿವಿಧ ರೀತಿಯ ಪ್ರಶ್ನೆಗಳು ನಿರ್ದಿಷ್ಟ ಪ್ರಮಾಣದಲ್ಲಿ ಪ್ರತಿಬಿಂಬಿತವಾಗುವಂತೆ ನೋಡಿಕೊಳ್ಳಲು ನೆರವಾಗುತ್ತದೆ.

- ಪ್ರಶ್ನೆಗಳು ಪುನರಾವರ್ತನೆಯಾಗುವುದು ಮತ್ತು ಕೆಲವು ಉಪಘಟಕಗಳಲ್ಲಿ ಪ್ರಶ್ನೆಗಳನ್ನು ಬಿಟ್ಟು ಹೋಗುವುದನ್ನು ತಡೆಯಬಹುದು.
- ವಿವಿಧ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸಲು ನೆರವಾಗುತ್ತದೆ.
- ಐಚ್ಛಿಕ ಪ್ರಶ್ನೆಗಳನ್ನು ಹಾಕುವಾಗ ಸೂಕ್ತವಾದ ಹೇಳಿಕೆಯನ್ನು ಬಳಸುವುದರ ಮೂಲಕ ಜಾಗರೂಕತೆಯಿಂದ ಕೇಳಬೇಕು.

- **ಉದ್ದೇಶ ಆಧಾರಿತ ಅಂಕಗಳ ಶೇಕಡಾವಾರು ಹಂಚಿಕೆ:**

ಕ್ರ. ಸಂ	ಉದ್ದೇಶಗಳು	ಪ್ರಮಾಣ / %	ಪ್ರಶ್ನೆಗಳು
1	ಜ್ಞಾನ	35%	6
2	ತಿಳುವಳಿಕೆ	35%	7
3	ಕೌಶಲ್ಯ	10%	1
4	ಅನ್ವಯ	20%	2
	ಒಟ್ಟು	100	16

- **ಪ್ರಶ್ನೆಗಳ ಆಧಾರಿತ ಶೇಕಡಾವಾರು ಹಂಚಿಕೆ:**

ಕ್ರ. ಸಂ	ಪ್ರಶ್ನೆಗಳ ಮಾದರಿ	ಪ್ರಮಾಣ	ಅಂಕಗಳು	ಪ್ರತಿಶತ
1	ಪ್ರಬಂಧ ಪ್ರಶ್ನೆಗಳು	1	5	20
2	ಲಘು ಪ್ರಶ್ನೆಗಳು	5	10	40
3	ವಸ್ತುನಿಷ್ಠ ಪ್ರಶ್ನೆಗಳು	10	10	40
	ಒಟ್ಟು	16	25	100

- **ವಿಷಯ ಆಧಾರಿತ ಶೇಕಡಾವಾರು ಹಂಚಿಕೆ:**

ಕ್ರ. ಸಂ	ಉಪಘಟಕಗಳು	ಪ್ರಶ್ನೆಗಳು	ಅಂಕಗಳು	ಪ್ರತಿಶತ
1	ಉಪಘಟಕ–1	4	5	20
2	ಉಪಘಟಕ–2	7	12	48
3	ಉಪಘಟಕ–3	5	8	35
	ಒಟ್ಟು	16	25	100

- **ಕ್ಲಿಷ್ಟತೆಯ ಮಟ್ಟ ಆಧಾರಿತ ಶೇಕಡಾವಾರು ಹಂಚಿಕೆ:**

ಕ್ರ. ಸಂ	ಕ್ಲಿಷ್ಟತಾಮಟ್ಟ	ಅಂಕಗಳು	ಪ್ರತಿಶತ
1	ಸಾಧಾರಣ ಪ್ರಶ್ನೆಗಳು	7	28
2	ಸರಳ ಪ್ರಶ್ನೆಗಳು	13	52
3	ಕ್ಲಿಷ್ಟಕರ ಪ್ರಶ್ನೆಗಳು	5	20

	ಒಟ್ಟು	25	100

- **ನೀಲ ನಕಾಶೆ:**

ಕ್ರ. ಸಂ	ಉದ್ದೇಶಗಳು/ ಘಟಕಗಳು	ಜ್ಞಾನ			ತಿಳುವಳಿಕೆ			ಕೌಶಲ್ಯ			ಅನ್ವಯ			ಒಟ್ಟು
		ಪ್ರ	ಲ	ವ	ಪ್ರ	ಲ	ವ	ಪ್ರ	ಲ	ವ	ಪ್ರ	ಲ	ವ	
1	ಉಪಘಟಕ–1		1(2)	3(3)										4(5)
2	ಉಪಘಟಕ–2				1(5)		4(4)			1(1)		1(2)		7(12)
3	ಉಪಘಟಕ–3			2(2)		2(4)						1(2)		5(8)
	ಒಟ್ಟು		1(2)	5(5)	1(5)	2(4)	4(4)			1(1)		2(4)		
	ಒಟ್ಟು	6(7)			7(13)			1(1)			2(4)			16(25)

ಹಂತ 5– ಪ್ರಶ್ನೆಗಳನ್ನು ರಚಿಸುವುದು ಮತ್ತು ಪರೀಕ್ಷಿಸುವುದು:ನೀಲನಕ್ಷೆಯ ಆಧಾರದಂತೆ ವಿವಿಧ ರೀತಿಯ ಉದ್ದೇಶಗಳಿಗೆ ಅನುಗುಣವಾಗಿ ಉತ್ತಮ ಪ್ರಶ್ನೆಯ ಗುಣಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸಬೇಕು. ಘಟಕಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಭಂಡಾರ ಇದ್ದರೆ ಅದರ ಸಹಾಯದಿಂದ ಪ್ರಶ್ನೆಗಳನ್ನು ಆಯ್ಕೆಮಾಡಿಕೊಳ್ಳಬಹುದು. ಮುಖ್ಯವಾಗಿ ರಚಿಸಿದ ಪ್ರಶ್ನೆಗಳನ್ನು ಮತ್ತೊಮ್ಮೆ ಓದಿ ಪ್ರಶ್ನೆಗಳಲ್ಲಿರಬಹುದಾದ ವ್ಯಾಕರಣ ದೋಷ, ರಚನಾ ದೋಷ ಅಥವಾ ಪ್ರಶ್ನೆಗಳ ಪುನರಾವರ್ತನೆ ಆಗಿದ್ದರೆ ತಿದ್ದಿ ಸರಿಪಡಿಸಬೇಕು.

ಹಂತ 6– ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಜೋಡಿಸುವುದು: ನೀಲನಕ್ಷೆಯ ಆಧಾರಾದಿಂದ ರಚಿಸಿದ ಪ್ರಶ್ನೆಗಳನ್ನು ಪರೀಕ್ಷಿಸಿದ ನಂತರ ಪ್ರಶ್ನೆಗಳನ್ನು ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಅನುಕ್ರಮಣಿಕೆಯಂತೆ ಸುಲಭದಿಂದ ಕಠಿಣತೆಯೆಡೆಗೆ ಜೋಡಿಸಬೇಕು. ಮೊದಲು ವಸ್ತುನಿಷ್ಟ, ನಂತರ ಕಿರು ಉತ್ತರ ತದನಂತರ ಪ್ರಬಂಧ ಮಾದರಿ ಪ್ರಶ್ನೆಗಳನ್ನು ಜೋಡಿಸಿ ಪ್ರತಿಯೊಂದು ವಿಭಾಗಗಳಿಗೂ ಅವಶ್ಯಕ ಸೂಚನೆ ನಿರ್ದೇಶನಗಳನ್ನು ಕೊಡಬೇಕು.

ಹಂತ 7– ಮಾದರಿ ಉತ್ತರ ಹಾಗೂ ಅಂಕಗಳ ಸೂಚಿಯನ್ನು ತಯಾರಿಸುವುದು: ವಿವಿಧ ಪ್ರಶ್ನೆಗಳಿಗೆ ನಿರ್ಧಿಷ್ಟವಾದ ಅಪೇಕ್ಷಿತ ಉತ್ತರಗಳನ್ನು ಸಂಕ್ಷಿಪ್ತ ಅಂಶಗಳ ರೀತಿಯಲ್ಲಿ ತಯಾರಿಸಬೇಕು. ಮತ್ತು ವಿಭಾಗಗಳಿಗೆ ಅಂಕಗಳನ್ನು ಸೂಚಿಸಬೇಕು.

ಹಂತ 8– ಪ್ರಶ್ನಾವಾರು ವಿಶ್ಲೇಷಣೆ:ಪ್ರಶ್ನೆ ಪತ್ರಿಕೆಯಲ್ಲಿರುವ ಎಲ್ಲ ಪ್ರಶ್ನೆಗಳನ್ನು ಅವುಗಳ ಉದ್ದೇಶ, ಪ್ರಶ್ನೆಯ ವಿಧ, ಅಂಕಗಳು, ಉತ್ತರಿಸಲು ಬೇಕಾಗುವ ಕಾಲ, ಕಠಿಣತೆಯ ಮಟ್ಟ ಇತ್ಯಾದಿಗಳ ಕುರಿತಂತೆ ಪ್ರಶ್ನೆಗಳ ವಿಶ್ಲೇಷಣೆ ಮಾಡಬೇಕು. ಇದರಿಂದ ಪ್ರಶ್ನೆಪತ್ರಿಕೆಯಲ್ಲಿ ಇನ್ನೂ ಉಳಿದಿರಬಹುದಾದ ದೋಷಗಳು ತಿಳಿಯುತ್ತವೆ ಮತ್ತು ಪ್ರಶ್ನೆಗಳು ಪುನರಾವರ್ತನೆಯಾಗಿರುವ ಬಗ್ಗೆ ತಿಳಿಯುತ್ತದೆ. ಪ್ರಶ್ನೆಪತ್ರಿಕೆ ನೀಲನಕ್ಷೆ ಆಧಾರದಿಂದ ರಚಿತವಾಗಿದೆಯಾ ಎಂಬುದನ್ನು ತಾಳೆ ನೋಡಲು ಅನುಕೂಲವಾಗುತ್ತದೆ.

ಹಂತ 9– ಘಟಕ ಪರೀಕ್ಷೆಯ ನಿರ್ವಹಣೆ:ಉತ್ತಮವಾಗಿ ತಯಾರಿಸಿ, ಎಚ್ಚರಿಕೆಯಿಂದ ಪರಿಶೀಲಿಸಿದ ಪ್ರಶ್ನೆಪತ್ರಿಕೆಯನ್ನು ಅಗತ್ಯವಿರುವಷ್ಟು ಪ್ರತಿಗಳನ್ನಾಗಿ ತಯಾರಿಸಿ, ನಿರ್ದಿಷ್ಟ ತರಗತಿಯ ವಿದ್ಯಾರ್ಥಿಗಳಿಗೆ ನಿರ್ವಹಣೆ ಮಾಡಬೇಕು. ಪ್ರಶ್ನೆ ಪತ್ರಿಕೆಯು ಒಟ್ಟು 16 ಪ್ರಶ್ನೆಗಳು, 25 ಅಂಕಗಳನ್ನೊಳಗೊಂಡಿದ್ದು 40–45 ನಿಮಿಷಗಳ ಒಂದು ಅವಧಿಗೆ ಕಿರು ಪರೀಕ್ಷೆಯನ್ನು ನೀಡಬೇಕು.

ಹಂತ 10– ಘಟಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ: ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ನಿರ್ಧಿಷ್ಟ ಅಂಕಗಳಿಗೆ ಅನುಗುಣವಾಗಿ ಮಾದರಿ ಉತ್ತರ ಪತ್ರಿಕೆಯ ಆಧಾರದಿಂದ ಮೌಲ್ಯಮಾಪನ ಮಾಡಿ ವೈಯಕ್ತಿಕವಾಗಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಕಚ್ಚಾ ಅಂಕಗಳ ಗುಂಪಾಗಿ ಜೋಡಿಸಿಕೊಳ್ಳಬೇಕು.

ಹಂತ 11– ಸಾಂಖಿಕ ವಿಶ್ಲೇಷಣೆ ಮತ್ತು ನಿರೂಪಣೆ: ತರಗತಿಯ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳಿಗೆ ಆವೃತ್ತಿ ವಿತರಣಾ ಪಟ್ಟಿಯನ್ನು ರಚಿಸಿ, ಸುಲಭ ಸಂಖ್ಯಾಶಾಸ್ತ್ರದ ಸಹಾಯದೊಂದಿಗೆ ಅವಶ್ಯಕ ಸಾಂಖಿಕ ವಿಶ್ಲೇಷಣೆಯನ್ನು ಮಾಡಿ ಇಡೀ ತರಗತಿಯ ಫಲಿತಾಂಶವನ್ನು ಹಿಸ್ಟೋಗ್ರಾಮ್ ಮತ್ತು ಆವೃತ್ತಿ ಬಹುಭುಜಾಕೃತಿಗಳ ಮೂಲಕ ನಿರೂಪಿಸಬೇಕು.

ಹಂತ 12– ಪ್ರಶ್ನಾವಾರು ವಿಶ್ಲೇಷಣೆ:ಪ್ರಶ್ನೆ ಪತ್ರಿಕೆಯ ಕಠಿಣತೆಯ ಮಟ್ಟ ತಿಳಿಯಲು ಸಾಂಖಿಕ ವಿಶ್ಲೇಷಣೆ ಮತ್ತು ನಿರೂಪಣೆಯ ನಂತರ ವಿದ್ಯಾರ್ಥಿಗಳ ಸಾಧನೆ, ಸಾಮರ್ಥ್ಯ, ಮತ್ತು ದೌರ್ಬಲ್ಯಗಳನ್ನು ತಿಳಿಯುವ ಸಲುವಾಗಿ ಪ್ರಶ್ನಾವಾರು ವಿಶ್ಲೇಷಣೆ ಮಾಡಬೇಕು. ಇಲ್ಲಿ ಪ್ರತಿ ಪ್ರಶ್ನೆಯ ಕಠಿಣತೆಯ ಮಟ್ಟವನ್ನು ಆ ಪ್ರಶ್ನೆಗೆ ವಿದ್ಯಾರ್ಥಿಗಳು ಹೇಗೆ ಉತ್ತರಿಸಿದ್ದಾರೆ ಎಂಬುದನ್ನು ತಿಳಿಯಲಾಗುತ್ತದೆ. ಪ್ರಶ್ನಾವಾರು ವಿಶ್ಲೇಷಣೆಯು ಪ್ರಶ್ನೆ ಪತ್ರಿಕೆಯನ್ನು ಆದರ್ಶೀಕೃತ ಮಾಡಲು ಸಹಾಯಕವಾಗುತ್ತದೆ.

ಹಂತ 13– ಪರಿಹಾರ ಬೋಧನೆ: ಪ್ರಶ್ನಾವಾರು ವಿಶ್ಲೇಷಣೆಯಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ವ್ಯಕ್ತಿಗತವಾಗಿ ವಿದ್ಯಾರ್ಥಿಗಳ ಸಾಧನೆಯ ಪ್ರಮಾಣ ಹಾಗೂ ದೌರ್ಬಲ್ಯಗಳನ್ನು ಗುರುತಿಸಿ ಸಾಧನೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯನ್ನು ಕೈಗೊಳ್ಳಬೇಕು.

4.4 ಸಂಪನ್ಮೂಲ ಘಟಕ ಯೋಜನೆ – ಅರ್ಥ, ಪ್ರಾಮುಖ್ಯತೆಹಾಗೂಹಂತಗಳು:

ಸೂಕ್ತವಾದ ಪೂರ್ವಸಿದ್ಧತೆಯೊಂದಿಗೆ ಶಿಕ್ಷಕರು ಮೊದಲೇ ಪಾಠ ಯೋಜನೆ ಅಥವಾ ಘಟಕ ಯೋಜನೆಯನ್ನು ಸಿದ್ಧಪಡಿಸಿಕೊಂಡೇ ಬೋಧನಾ ಕಾರ್ಯದಲ್ಲಿ ತೊಡಬೇಕಾಗುತ್ತದೆ. ಪ್ರತಿದಿನ 5–6 ಕಲಿಕಾವಧಿಗಳ ಪಾಠ ಬೋಧನೆ ಮಾಡಲೇಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿದಿನವೂ ತಾವು ಬೋಧಿಸಬೇಕಾದ ಪಾಠಗಳ ಸಂಗ್ರಹಣಾ ಕಾರ್ಯಕ್ಕೂ ಸಂಗ್ರಹಿಸಿದ ವಿಷಯಗಳನ್ನು ವಿಭಜಿಸಿ, ಸುವ್ಯವಸ್ಥಿತವಾಗಿ ಜೋಡಿಸುವುದಕ್ಕೆ ಸಾಕಷ್ಟು ಕಾಲಾವಕಾಶ ಅವರಿಗೆ ದೊರಕುವುದಿಲ್ಲ. ಅಲ್ಲದೆ ಅನೇಕ ಬೋಧನಾ ವಿಷಯಗಳ ಹಿನ್ನೆಲೆಯಾಗಲೀ, ಉದ್ದೇಶಗಳಾಗಲೀ, ಕಾರ್ಯಚಟುವಟಿಕೆಗಳಾಗಲೀ ತರಗತಿಯಲ್ಲಿ ಬೋಧನೆ ಮಾಡಬೇಕಾದ ಎಲ್ಲವೂ ಶಿಕ್ಷಕರ ಹತೋಟಿಯಲ್ಲಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಸಂಪನ್ಮೂಲ ಘಟಕ ಯೋಜನೆಯು ನೆರವಿಗೆ ಬರುತ್ತದೆ.

ಒಂದು ಪಾಠದ ವಿಷಯ ಬೋಧನೆಗಾಗಿ ಸಹಾಯಕವಾಗುವ ಚಟುವಟಿಕೆಗಳು ಮತ್ತು ಸಂಪನ್ಮೂಲಗಳನ್ನು ಕಾರ್ಯಾತ್ಮಕವಾಗಿ ಸಂಘಟಿಸಿ ಸುಸಂಬದ್ಧವಾಗಿ ಅಳವಡಿಸುವುದೇ ಸಂಪನ್ಮೂಲ ಘಟಕ. ಶಿಕ್ಷಕರು ತಮ್ಮ ತರಗತಿಯ ಬೋಧನೆಯ ಯೋಜನೆಗಾಗಿ ಇದನ್ನು ಉಪಯೋಗಿಸುವರು.

ಒಂದು ತರಗತಿಯ ಪಾಠದ ವಿಷಯಕ್ಕೆ ಸಂಬಂಧಿಸಿದಂತೆ, ತರಗತಿಯ ಮಟ್ಟಕ್ಕೆ ಸರಿಹೊಂದುವ ರೀತಿಯಲ್ಲಿ ಕಲಿಸಬೇಕಾದ ಅಂಶಗಳು, ಕೈಗೊಳ್ಳಬೇಕಾದ ಚಟುವಟಿಕೆಗಳು, ಅನುಸರಿಸಬೇಕಾದ ಕ್ರಮ,

ಬಳಸಬೇಕಾದ ಆಧಾರಾಂಶಗಳು ಮತ್ತು ಅವುಗಳನ್ನು ಸಂಗ್ರಹಿಸಲು ಓದಬೇಕಾದ ಪುಸ್ತಕ ಮುಂತಾದವುಗಳನ್ನು ಕುರಿತು ಶಿಕ್ಷಕರು ಮಾಡಿಕೊಂಡಿರುವ ಸಮಗ್ರ ಸಿದ್ಧತೆಯ ಸಂಗ್ರಹವೇ ಸಂಪನ್ಮೂಲ ಘಟಕ ಯೋಜನೆಯಾಗಿದೆ.

ಅಲ್ಬರ್ಟ್ ಅವರ ಪ್ರಕಾರ "ಶಿಕ್ಷಕರು ಬೋಧನೆಗಾಗಿ ವಿಷಯವನ್ನು ಯೋಚಿಸಿ, ಬೆಳೆಸಿ, ಸಮೀಕ್ಷೆ ಮಾಡಿ, ಸಂಘಟಿಸಿ, ವಿಶ್ಲೇಷಣೆ ಮತ್ತು ಮೌಲ್ಯಮಾಪನ ಮಾಡಲು ಸಹಾಯಕವಾಗುವಂತೆ ತಯಾರಿಸಿದ ಯೋಜನೆಯೇ ಸಂಪನ್ಮೂಲ ಘಟಕ ಯೋಜನೆಯಾಗಿದೆ."

ಸಿ. **ವ್ಹಿ. ಗುಡ್** ಅವರ ಪ್ರಕಾರ "ಸಂಪನ್ಮೂಲ ಘಟಕವು ಒಂದು ಘಟಕದ ಸುತ್ತಲೂ ಜೋಡಿಸಲ್ಪಟ್ಟ ಬೋಧನಾ–ಕಲಿಕಾ ಚಟುವಟಿಕೆಗಳು, ವಿಧಾನಗಳು, ಸಾಮಗ್ರಿಗಳು ಮತ್ತು ಉಲ್ಲೇಖಗಳ ವ್ಯಾಪಕವಾದ ಸಂಗ್ರಹವಾಗಿದೆ. ಅಧ್ಯಾಪಕರಿಗೆ ತಮ್ಮ ತರಗತಿಗಳಲ್ಲಿ ಚಟುವಟಿಕೆಗಳನ್ನು ಯೋಜಿಸಲು, ಬೆಳವಣಿಗೆ ಮಾಡಲು, ಮೌಲ್ಯಮಾಪನ ಮಾಡಲು ಸಹಾಯಕವಾಗಿದೆ."

ಡಾ. ಎನ್. ಎಸ್. ವೀರಪ್ಪ ಅವರ ಪ್ರಕಾರ "ಯಾವುದಾದರೂ ದರ್ಜೆಯಲ್ಲಿ ಕಲಿಯಬೇಕಾದ ಪಾಠ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ತರಗತಿಗೆ ಸರಿಹೋಗುವಂತೆ ಕಲಿಯಬೇಕಾದ ಅಂಶಗಳು, ಆಚರಿಸಬೇಕಾದ ಚಟುವಟಿಕೆಗಳು, ಅನುಸರಿಸಬೇಕಾದ ಕ್ರಮ, ಬಳಸಬೇಕಾದ ಆಧಾರಾಂಶಗಳು ಅವನ್ನು ಸಂಗ್ರಹಿಸಲು ಓದಬೇಕಾದ ಪುಸ್ತಕ ಇವುಗಳನ್ನೆಲ್ಲ ಆಸಕ್ತಿಯಿಂದ ಅಧ್ಯಾಪಕರು ಮಾಡಿಕೊಂಡಿರುವ ಸಮಗ್ರ ಸಿದ್ಧತೆಯ ಸಂಗ್ರಹವೇ ಸಂಪನ್ಮೂಲ ಘಟಕ ಯೋಜನೆ."

ಒಟ್ಟಾರೆಯಾಗಿ ಸಂಪನ್ಮೂಲ ಘಟಕವೆಂದರೆ ಒಂದು ಘಟಕಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಒಳಗೊಂಡಿದ್ದು ಸಾಮಗ್ರಿಗಳು, ಸಂಪನ್ಮೂಲಗಳು, ಯೋಜನಾ ಚಟುವಟಿಕೆಗಳು, ಆಧಾರ ಗ್ರಂಥಗಳನ್ನು ಹೊಂದಿದ ಕಣಜವಾಗಿದೆ. ಈ ಕಣಜದ ಸಹಾಯದಿಂದ ಶಿಕ್ಷಕರು ಬೋಧಿಸುವ ಪಾಠದ ಯೋಜನೆ ಮಾಡಿ, ಬೋಧಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡುವರು.

ಗುಣಲಕ್ಷಣಗಳು:

- ಸಂಪನ್ಮೂಲ ಘಟಕ ಯೋಜನೆಯು ಘಟಕದ ಗಣಿ ಅಥವಾ ಕಣಜವಾಗಿದೆ.
- ಇದು ಬೋಧನೆಗೆ ಸಹಾಯಕವಾಗುವ ವಿಶ್ವಕೋಶವಾಗಿದೆ.
- ಒಂದು ನಿರ್ಧಿಷ್ಟ ಘಟಕದ ಸಮಗ್ರ ಭಾಗವಾಗಿದೆ.
- ಸಾಮನ್ಯವಾಗಿ ಇದನ್ನು ಅನುಭವಿ ಶಿಕ್ಷಕರು, ವಿಷಯ ತಜ್ಞರು ಕೂಡಿ ರಚಿಸಿರುತ್ತಾರೆ.
- ಸಮಗ್ರ ಬೋಧನಾ ಸಾಮಗ್ರಿ ಮತ್ತು ಮೌಲ್ಯಮಾಪನ ಸಾಧನಗಳನ್ನು ಒಳಗೊಂಡಿರುತ್ತದೆ.
- ಪರಿಣಾಮಕಾರಿ ಬೋಧನೆಯನ್ನು ಪ್ರಚೋದಿಸುತ್ತದೆ.
- ವಿಷಯ ವಸ್ತುವನ್ನು ಮನೋವೈಜ್ಞಾನಿಕವಾಗಿ ಸಂಘಟಿಸಲಾಗಿರುತ್ತದೆ.
- ಇದು ಸೂಕ್ತ ಮತ್ತು ಉತ್ತಮವಾದ ಬೋಧನಾ–ಕಲಿಕಾ ಚಟುವಟಿಕೆಗಳ ಆಗರವಾಗಿದೆ.

- ಅತ್ಯುತ್ತಮ ಹಾಗೂ ವೈವಿಧ್ಯಮಯ ಬೋಧನಾ ಪದ್ಧತಿಗಳನ್ನು ಮತ್ತು ತಂತ್ರಗಳನ್ನು ಹೊಂದಿರುತ್ತದೆ.
- ಹೊಸತನದಿಂದ ಕೂಡಿದ್ದು ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದೆ.

ಉದ್ದೇಶಗಳು:

- ಉತ್ತಮ ಬೋಧನೆಗಾಗಿ– ಬೋಧನಾ ವಿಷಯ ವಸ್ತುವನ್ನು ತಾರ್ಕಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ಸಂಘಟಿಸಿ ವ್ಯವಸ್ಥೆಗೊಳಿಸುವುದು.
- ಶಿಕ್ಷಕರ ಜ್ಞಾನಾಭಿವೃದ್ಧಿಯನ್ನು ಮಾಡಿ ಅವರ ಬೋಧನಾ ಸಾಮರ್ಥ್ಯವನ್ನು ಇಮ್ಮಡಿಗೊಳಿಸುವುದು.
- ಘಟಕಗಳಲ್ಲಿ ಬರುವ ಉಪಘಟಕಗಳಲ್ಲಿ ಸಹಸಂಬಂಧವನ್ನು ಕಲ್ಪಿಸುವುದು.
- ಇಡೀ ಘಟಕದ ವಿಷಯವನ್ನು ಅದರ ಭಾಗಗಳೊಂದಿಗೆ ಪರಿಚಯಿಸುವುದು.
- ಉತ್ತಮ ಬೋಧನೆಗಾಗಿ ವಿಷಯ ವಸ್ತು, ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯಮಾಪನ ಸಾಧನಗಳನ್ನು ವ್ಯವಸ್ಥೆಗೊಳಿಸಲು ಶಿಕ್ಷಕರಿಗೆ ಸಹಾಯ ಮಾಡುವುದು.
- ಮಕ್ಕಳ ಕಲಿಕೆಯನ್ನು ವಿಕಾಸಗೊಳಿಸುವುದು.
- ಶಿಕ್ಷಕ ವಿದ್ಯಾರ್ಥಿಗಳಿಬ್ಬರಲ್ಲಿಯೂ ಜ್ಞಾನ, ತಿಳುವಳಿಕೆ, ಕೌಶಲ್ಯ, ಸಾಮರ್ಥ್ಯವನ್ನು ಬೆಳೆಸುವುದು.
- ಸಾಮಾನ್ಯ ಶಿಕ್ಷಕರನ್ನು ಸಹ ಸಂಪನ್ಮೂಲ ಶಿಕ್ಷಕರನ್ನಾಗಿ ಮಾಡುವುದು.

ವಿವಿಧ ಹಂತಗಳು:ಸಂಪನ್ಮೂಲ ಘಟಕವನ್ನು ರಚಿಸುವಾಗ ಈ ಕೆಳಗಿನ ಹಂತಗಳನ್ನು ಅನುಸರಿಸಬೇಕಾಗುತ್ತದೆ. ಅವುಗಳೆಂದರೆ,

1. **ಘಟಕದ ಶೀರ್ಷಿಕೆ–** ಇಲ್ಲಿ ಘಟಕದ ಹೆಸರು, ಮಹತ್ವ ಹಾಗೂ ಉದ್ದೇಶಗಳನ್ನು ನಿರೂಪಿಸಲಾಗಿರುತ್ತದೆ.
2. **ಪೀಠಿಕೆ–** ಘಟಕದ ಕುರಿತಾದ ಪೂರ್ವಜ್ಞಾನದ ಮಾಹಿತಿ, ಆರಂಭಿಕ ಮಾಹಿತಿ, ವಿಶೇಷ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.
3. **ಬೋಧನಾ ಉದ್ದೇಶಗಳು–** ಜ್ಞಾನ, ತಿಳುವಳಿಕೆ, ಕೌಶಲ್ಯ, ಮನೋಭಾವ, ಅನ್ವಯ, ಮೆಚ್ಚುಗೆ ಮುಂತಾದ ಬೋಧನಾ ಉದ್ದೇಶಗಳಿಗೆ ಸಂಬಂಧಿಸಿದಂತೆ ವರ್ತನಾ ರೂಪದ ಬದಲಾವಣೆಗಳನ್ನು ಬರೆಯುವುದು.
4. **ಪರಿಕಲ್ಪನೆಗಳು ಮತ್ತು ಸಾಮಾನ್ಯೀಕರಣ–** ಮಕ್ಕಳ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಸಂಪನ್ಮೂಲ ಘಟಕದ ಪ್ರಮುಖ ಪರಿಕಲ್ಪನೆಗಳನ್ನು ರಚಿಸಿ ಸಾಮಾನ್ಯೀಕರಣ ಮಾಡಬೇಕಾಗುತ್ತದೆ. ವಿಷಯದ ಸಾಮಾನ್ಯೀಕರಣವು ವಿಷಯದ ಪರಿಕಲ್ಪನೆಯನ್ನು ಒಳಗೊಂಡಿರುತ್ತದೆ.

5. **ವಿಷಯಕ್ಕನುಗುಣವಾಗಿ ಘಟಕವನ್ನು ವಿಶ್ಲೇಷಿಸುವುದು–** ಕನ್ನಡ ಭಾಷಾ ಬೋಧನೆಯಲ್ಲಿ ಬೋಧಿಸಬೇಕಾದ ಎಲ್ಲ ವಿಷಯವನ್ನು ಅಥವಾ ಅಂಶಗಳನ್ನು ವಿಶ್ಲೇಷಿಸಿ ವಿವರವಾಗಿ ಬರೆಯಲಾಗಿರುತ್ತದೆ. ವಿಶ್ಲೇಷಿಸಿದ ಎಲ್ಲ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗುತ್ತದೆ.
6. **ಬೋಧನೋಪಕರಣಗಳು–** ಘಟಕದ ತಿಳುವಳಿಕೆಗೆ ಪೂರಕವಾದ ಎಲ್ಲ ತೆರನಾದ ದೃಕ್–ಶ್ರವಣ ಬೋಧನೋಪಕರಣಗಳ ಮಾಹಿತಿಯನ್ನು ಇದು ಒಳಗೊಂಡಿರುತ್ತದೆ. ನಿರ್ಧಿಷ್ಟ ಘಟಕದ ಬೋಧನೆಗೆ ಬೇಕಾಗುವ ಎಲ್ಲ ಪಾಠೋಪಕರಣಗಳ ಪಟ್ಟಿಯನ್ನು ನೀಡಲಾಗಿರುತ್ತದೆ.
7. **ಕಲಿಕಾ ಚಟುವಟಿಕೆಗಳು–** ಈ ಹಂತವು ಸಂಪನ್ಮೂಲ ಘಟಕ ಯೋಜನೆಯ ಕೇಂದ್ರ ಭಾಗವಾಗಿದ್ದು ಒಂದೊಂದು ಬೋಧನಾ ಉದ್ದೇಶಗಳ ಸಾಧನೆಗೆ ಶಿಕ್ಷಕರು ಹಾಕಿಕೊಂಡಿರುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಪ್ರಾಸ್ತಾವಿಕ ಚಟುವಟಿಕೆಗಳು, ಪಾಠದ ಬೆಳವಣಿಗೆಯ ಚಟುವಟಿಕೆಗಳು, ಮುಕ್ತಾಯ ಹಂತದ ಚಟುವಟಿಕೆಗಳು, ದತ್ತಕಾರ್ಯದ ಚಟುವಟಿಕೆಗಳು ಹೀಗೆ ವಿವಿಧ ಚಟುವಟಿಕೆಗಳನ್ನು ಒಳಗೊಂಡ ಹಂತ ಇದಾಗಿದೆ.
8. **ಮೌಲ್ಯಮಾಪನ–** ಘಟಕ ಹಾಗೂ ಘಟಕದ ವಿವಿಧ ಉಪಘಟಕಗಳ ಬೋಧನೋದ್ದೇಶಗಳ ಸಾಧನೆ ಎಷ್ಟರ ಮಟ್ಟಿಗೆ ಆಗಿದೆ, ಅಂದರೆ ವಿದ್ಯಾರ್ಥಿಗಳ ಕಲಿಕೆ ಯಾವ ಮಟ್ಟದಲ್ಲಿ ಪರಿಣಾಮಕಾರಿಯಾಗಿದೆ ಎಂಬುದನ್ನು ತಿಳಿಯುವ ಹಂತ ಇದಾಗಿದೆ.
9. **ಅನುಸರಣಾ ಚಟುವಟಿಕೆಗಳು–** ಕಲಿತ ವಿಷಯಗಳನ್ನು ನಿಜ ಜೀವನದಲ್ಲಿ ಅನ್ವಯಿಸಿದಾಗ ಮಾತ್ರ ಆ ವಿಷಯಗಳ ಮೌಲ್ಯ ಹೆಚ್ಚಾಗುತ್ತದೆ. ಆದ್ದರಿಂದ ಶಿಕ್ಷಕರು ಪ್ರತಿಯೊಂದು ಸಂಪನ್ಮೂಲ ಘಟಕದ ಕೊನೆಗೆ ವಿದ್ಯಾರ್ಥಿಗಳು ಅನುಸರಿಸಬೇಕಾದ ಅಥವಾ ನಿರ್ವಹಿಸಬೇಕಾದ ಕೆಲವು ಚಟುವಟಿಕೆಗಳನ್ನು ನೀಡಬೇಕು.
10. **ಆಧಾರ ಗ್ರಂಥಗಳು–** ಸಂಪನ್ಮೂಲ ಘಟಕ ಯೋಜನೆಯನ್ನು ತಯಾರಿಸುವಲ್ಲಿ ಉಪಯೋಗಿಸಿದ ಎಲ್ಲ ಆಕರ ಗ್ರಂಥಗಳ ಪಟ್ಟಿಯನ್ನು ಇಲ್ಲಿ ಒದಗಿಸಲಾಗಿರುತ್ತದೆ.

ಮಹತ್ವ:

- ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಸಂಪದ್ಭರಿತಗೊಳಿಸುತ್ತದೆ.
- ವಿದ್ಯಾರ್ಥಿಗಳ ಆಸಕ್ತಿ ಮತ್ತು ಅವಶ್ಯಕತೆಗಳನ್ನು ಗುರುತಿಸುತ್ತದೆ.
- ಘಟಕದ ಕುರಿತು ಹೆಚ್ಚಿನ ಮಾಹಿತಿಯನ್ನು ಒಳಗೊಂದಿರುವುದರಿಂದ ಸಂಪೂರ್ಣ ಮಾಹಿತಿ ಒಂದೇ ಯೋಜನೆಯಲ್ಲಿ ದೊರೆಯುತ್ತದೆ.
- ಕಲಿಕಾ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅಭಿಪ್ರೇರಣೆಯನ್ನು ಒದಗಿಸುತ್ತದೆ.
- ಶಿಕ್ಷಕರ ಪಾಠ ಕಾರ್ಯಗಳು ನಿರ್ಧಿಷ್ಟವಾಗಿ ಸಾಗಲು ಉತ್ತಮ ಮಾರ್ಗದರ್ಶನ ಮಾಡುತ್ತದೆ.
- ವಿದ್ಯಾರ್ಥಿಗಳು ಭಾಷಾ ಕೌಶಲ್ಯಗಳನ್ನು ಕಲಿಯಲು ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತದೆ.

- ವಿವಿಧ ಕಲಿಕಾ ಸಾಮಗ್ರಿಗಳನ್ನು ಬಳಸುವಲ್ಲಿ ವಿದ್ಯಾರ್ಥಿಗಳನ್ನು ಸಶಕ್ತರನ್ನಾಗಿಸುತ್ತದೆ.
- ಒಂದು ಯಶಸ್ವಿ ಪಾಠಬೋಧನೆ ಮತ್ತು ಕಲಿಕೆಗೆ ಸಹಾಯಕವಾಗುವ ಎಲ್ಲ ಸಾಮಗ್ರಿಗಳು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇಲ್ಲಿ ಲಭ್ಯವಾಗುವುದರಿಂದ ಇದನ್ನು 'ವಿಶ್ವಕೋಶ' ಎಂದು ಕರೆಯಬಹುದು.
- ಬೋಧನೆಯು ಸುವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ಸಾಗುವುದರಿಂದ ಶಿಕ್ಷಕರಲ್ಲಿ ದಕ್ಷತೆ ಹೆಚ್ಚಾಗಿ ಆತ್ಮವಿಶ್ವಾಸ ಮೂಡುತ್ತದೆ.
- ಬೋಧನೆಯ ಗುಣಮಟ್ಟವನ್ನು ವೃದ್ಧಿಸಲು ಸಹಾಯಕವಾಗುತ್ತದೆ.
- ಬೋಧನಾ ಪ್ರಕ್ರಿಯೆ ಶಿಕ್ಷಕರ ಹಿಡಿತದಲ್ಲಿರುತ್ತದೆ.
- ಉತ್ತಮ ಬೋಧನೆಗೆ ಬೇಕಾಗುವ ವೈವಿಧ್ಯಮಯ ಬೋಧನಾ ತಂತ್ರಗಳು, ಬೋಧನಾ ಸಾಮಗ್ರಿಗಳು ಹಾಗೂ ಮೌಲ್ಯಮಾಪನದ ನವೀನ ವಿಧಾನಗಳನ್ನು ಒಳಗೊಂಡು ವಿಶಾಲ ವ್ಯಾಪ್ತಿಯನ್ನು ಹೊಂದಿದೆ.

ಸಂಪನ್ಮೂಲ ಘಟಕವನ್ನು ತಯಾರಿಸುವ ವಿಧಾನ:

1. ಘಟಕದ ಅರ್ಥ ಮತ್ತು ಮಹತ್ವ;
2. ಮಾಹಿತಿ; ಹೆಸರು, ತರಗತಿ, ವಿಷಯ, ಸಂಪನ್ಮೂಲ ಘಟಕ
3. ಸಂಪನ್ಮೂಲ ಘಟಕದ ಮಹತ್ವ;
4. ನಿರ್ಧಿಷ್ಟ ಉದ್ದೇಶಗಳು; ಜ್ಞಾನ, ತಿಳುವಳಿಕೆ, ಅನ್ವಯ, ಕೌಶಲ್ಯ, ಆಸಕ್ತಿ, ಮನೋಭಾವ, ಮೆಚ್ಚುಗೆಗೆ ಸಂಬಂಧಿಸಿದಂತೆ ಬರೆಯುವುದು.
5. ಪ್ರಮುಖ ಪರಿಕಲ್ಪನೆಗಳು;
6. ಪರಿಕಲ್ಪನೆಗಳ ವಿಶ್ಲೇಷಣೆ;
7. ಕಲಿಕಾ ಚಟುವಟಿಕೆಗಳು; ಆರಂಭಿಕ, ಬೆಳವಣಿಗೆ ಮತ್ತು ಮುಕ್ತಾಯ ಹಂತದ ಚಟುವಟಿಕೆಗಳು.
8. ಮೌಲ್ಯಮಾಪನ; ಪ್ರಬಂಧ ಮಾದರಿ, ಸಂಕ್ಷಿಪ್ತ ಮಾದರಿ ಮತ್ತು ವಸ್ತುನಿಷ್ಠ ಮಾದರಿ.
9. ಬೋಧನೋಪಕರಣಗಳ ಪಟ್ಟಿ;
10. ಸೂಚಿತ ಚಟುವಟಿಕೆಗಳು;
11. ಆಧಾರ ಗ್ರಂಥಗಳು:

ಬುದ್ಧಿಮಾತಿದು ನಿನಗೆ; ಸಿದ್ಧನಿರು ಸಕಲಕ್ಕಮ್।
ಎದ್ದು ಕುಣಿಯಲಿ ಕರ್ಮ; ದೈವ ನಿದ್ರಿಸಲಿ॥
ಅದ್ಭುತಗಳರಿದಲ್ಲ; ಭವ್ಯಕ್ಕೆ ಹದ್ದಿಲ್ಲ।
ಸಿದ್ಧನಾಗೆಲ್ಲಕಂ – ಮಂಕುತಿಮ್ಮ॥

ಅಧಾರ ಗ್ರಂಥಗಳು:

1. ಅನಸೂಯಾ ವಿ ಪರಗಿ 'ಮಾತೃಭಾಷೆ ಕನ್ನಡ' ವಿವೇಕ ಪ್ರಕಾಶನ ಚಿಕ್ಕಬಳ್ಳಾಪುರ 2014
2. ಡಾ. ಸಂಗಮೇಶ ಸವದತ್ತಿಮಠ 'ಕನ್ನಡ ಭಾಷಾ ವ್ಯಾಸಂಗ' ರೂಪರಶ್ಮಿ ಪ್ರಕಾಶನ ಧಾರವಾಡ 1975
3. ಡಾ. ಎಲ್ ಬಿ ಪಟ್ಟೇದ 'ಸಿರಿಗನ್ನಡ ನುಡಿ ಬೋಧನೆ' ವಿದ್ಯಾನಿಧಿ ಪ್ರಕಾಶನ ಗದಗ 2007–08
4. ಡಾ. ಎನ್. ಬಿ. ಕೊಂಗವಾಡ 'ಶಾಲವಿಷಯ ಮತ್ತು ಬೋಧನಾಶಾಸ್ತ್ರದ ತಿಳುವಳಿಕೆ–ಭಾಷೆ' ವಿದ್ಯಾನಿಧಿ ಪ್ರಕಾಶನ ಗದಗ 2016–17
5. ಬಿ ಆರ್ ರಾಮಚಂದ್ರಯ್ಯ ಮತ್ತು ಡಾ. ಬಸವರಾಜು ಪಿ 'ಮಾತೃಭಾಷಾ ಬೋಧನಾ ಶಾಸ್ತ್ರ–ಕನ್ನಡ' ವಿಸ್ಮಯ ಪ್ರಕಾಶನ ಮೈಸೂರು 2023
6. ಡಾ. ಪ್ರೀತಿ ಪಿ ಭಾಂಡಾರಕರ 'ಭಾಷಾಶಾಸ್ತ್ರ ಮತ್ತು ಭಾಷಾ ಬೋಧನಾ ಶಾಸ್ತ್ರ ಹಾಗೂ ವಿಷಯಾಂತರ್ಗತವಾಗಿ ಭಾಷೆ' ವಿಸ್ಮಯ ಪ್ರಕಾಶನ ಮೈಸೂರು 2022–23
7. ಶ್ರೀ ಬಿ ಡಿ ಕರಜಗಿ ಮತ್ತು ಡಾ. ರಾಮಚಂದ್ರ ಜಂತಲಿ'ಸುಬೋಧ ಕನ್ನಡ ಭಾಷಾ ಬೋಧನೆ' ಭಾರತ ಪ್ರಕಾಶನ ಧಾರವಾಡ 1998
8. ಡಾ. ಬಸವರಾಜ ಎಂ. ಎಚ್ ಮತ್ತು ಡಾ ಆರ್. ಎಂ. ಬಂಟನೂರ 'ಬೋಧನಾಶಾಸ್ತ್ರದ ತಿಳುವಳಿಕೆ ಮತ್ತು ಶಿಸ್ತು–ಭಾಷೆ' ಜ್ಞಾನಧಾರೆ ಪ್ರಕಾಶನ ಗದಗ 2022
9. ಡಾ. ಆರ್. ಓಬಳೇಶಘಟ್ಟಿ 'ಭಾಷೆ ಮತ್ತು ಕನ್ನಡ ಭಾಷಾ ಬೋಧನೆ' ವಿದ್ಯಾನಿಧಿ ಪ್ರಕಾಶನ ಗದಗ 2005

ಆಶಯ ನುಡಿ

ಶ್ರೀ ಎನ್. ಡಿ. ಚಿನ್ನಪ್ಪಗೌಡರು, ಶಿಕ್ಷಣ ಮತ್ತು ಸಾಹಿತ್ಯದ ಎರಡು ಕ್ಷೇತ್ರಗಳಲ್ಲಿ ತಮ್ಮ ವಿಶಿಷ್ಟ ಛಾಪನ್ನು ಮೂಡಿಸಿದವರು. ಶಿಕ್ಷಕರಾಗಿ, ಸಂಶೋಧಕರಾಗಿ ಮತ್ತು ಕವಿಯಾಗಿ ಅವರು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಅಪಾರ. "ಪಯಣ", "ಮತ್ತೆ ಪಯಣ", "ಲವ್ ಯೂ ಚಿನ್ನ" ಮತ್ತು "ನಡೆ ನಿನಗಾಗಿ" ಎಂಬ ನಾಲ್ಕು ಕವನ ಸಂಕಲನಗಳ ಮೂಲಕ ಓದುಗರ ಮನಸ್ಸನ್ನು ತಲುಪಿದ್ದಾರೆ. ಇದೀಗ ಅವರು "ಬೋಧನಾ ಶಾಸ್ತ್ರದ ಶಿಸ್ತು ಮತ್ತು ತಿಳುವಳಿಕೆ: ಭಾಷೆ ಕನ್ನಡ" ಎಂಬ ತಮ್ಮ ಮೊದಲ ಬೋಧನಾ ಶಾಸ್ತ್ರದ ಕೃತಿಯನ್ನು ಬಿಡುಗಡೆ ಮಾಡುತ್ತಿದ್ದಾರೆ.

ಈ ಕೃತಿಯು ಕನ್ನಡ ಭಾಷಾ ಶಿಕ್ಷಣದ ವಿವಿಧ ಅಂಶಗಳನ್ನು ಒಳಗೊಂಡಿದೆ. ಬೋಧನಾ ವಿಧಾನಗಳು, ಬೋಧನಾ ತಂತ್ರಗಳು, ಮೌಲ್ಯಮಾಪನ ಮತ್ತು ಭಾಷಾ ಕಲಿಕೆಯ ವಿವಿಧ ಆಯಾಮಗಳ ಬಗ್ಗೆ ಇದು ಸಮಗ್ರ ಮಾಹಿತಿಯನ್ನು ನೀಡುತ್ತದೆ. ಕನ್ನಡ ಭಾಷಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಈ ಕೃತಿಯು ಅತ್ಯಂತ ಉಪಯುಕ್ತವಾಗಿದೆ.

ಶ್ರೀ ಎನ್. ಡಿ. ಚಿನ್ನಪ್ಪಗೌಡರು ತಮ್ಮ ಶೈಕ್ಷಣಿಕ ಹಿನ್ನೆಲೆ, ಸಂಶೋಧನಾ ಮನೋಭಾವ ಮತ್ತು ಬೋಧನಾ ಅನುಭವದ ಆಧಾರದ ಮೇಲೆ ಈ ಕೃತಿಯನ್ನು ರಚಿಸಿದ್ದಾರೆ. ಸರಳ ಮತ್ತು ಸುಂದರವಾದ ಭಾಷೆಯಲ್ಲಿ ಅವರು ಕನ್ನಡ ಭಾಷಾ ಶಿಕ್ಷಣದ ವಿವಿಧ ವಿಷಯಗಳನ್ನು ವಿವರಿಸಿದ್ದಾರೆ. ಈ ಕೃತಿಯು ಕನ್ನಡ ಭಾಷಾ ಶಿಕ್ಷಣದ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ.

ಕನ್ನಡ ಭಾಷಾ ಶಿಕ್ಷಣಕ್ಕೆ ಈ ಕೃತಿಯು ಒಂದು ಮಹತ್ವದ ಕೊಡುಗೆಯಾಗಿದೆ. ಈ ಕೃತಿಯು ಕನ್ನಡ ಭಾಷಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಒಂದು ಮಾರ್ಗದರ್ಶಿಯಾಗಿದೆ. ಈ ಕೃತಿಯು ಕನ್ನಡ ಭಾಷಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಶ್ರೀ ಎನ್. ಡಿ. ಚಿನ್ನಪ್ಪಗೌಡರ ಈ ಪ್ರಯತ್ನವು ಕನ್ನಡ ಭಾಷಾ ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಮೈಲಿಗಲ್ಲನ್ನು ಸ್ಥಾಪಿಸುತ್ತದೆ. ಅವರ ಮುಂದಿನ ಶೈಕ್ಷಣಿಕ ಮತ್ತು ಸಾಹಿತ್ಯಕ ಪಯಣವು ಇನ್ನಷ್ಟು ಎತ್ತರಕ್ಕೆ ಸಾಗಲಿ ಎಂದು ಹಾರೈಸುತ್ತೇನೆ.

ಗುರುಸ್ವಾಮಿ ಹಿರೇಮಠ

ಹಿರಿಯ ಸಹಾಯಕ ನಿರ್ದೇಶಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು